PEER - REVIEWED JOURNAL
ISSN: 2320-9941
ಸಂಪುಟ - 9, ಸಂಚಿಕೆ- 4
VOLUME: 09, ISSUE: 04

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಭಾಗ - ೨
PART - 2



ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
literature, culture - Research Quarterly Peer - Reviewed journal
ISSN: **2320–9941**

ಪ್ರತಿಸ್ಪಂದ

ಕೊಡು–ಕೊಳ್ಳುವಿಕೆಯ ಸಂಕರ

PRATHISPANDA

An Exchange of creative Impulse

ಭಾಗ – 02, PART - 2

ಸಂಪುಟ: 09, ಸಂಚಿಕೆ 04, ಡಿಸೆಂಬರ್ 2025

VOLUME: 09, ISSUE: 04, DECEMBER 2025

ಗೌರವ ಸಂಪಾದಕರು

ಕೆ. ಆರ್. ಬಸವರಾಜು

ಸಂಪಾದಕರು

ಡಾ. ಸರಸ್ವತಿ ಕೆ. ಬಿ.

ಪ್ರಕಟಣೆ :

ಪ್ರತಿಸ್ಪಂದ ಸಾಹಿತ್ಯ, ಸಂಸ್ಕೃತಿ – ಸಂಶೋಧನಾ ತ್ರೈಮಾಸಿಕ ಪತ್ರಿಕೆ
ತೋಟದ ಮನೆ ನಂ 107(25)
ಕಂಚಾಘಟ್ಟ ಹೊಸ ಬಡಾವಣೆ
ತಿಪಟೂರು 572201
e-mail: prathispanda@gmail.com
website : https://prathispandha.wordpress.com/

ತಜ್ಞ ಪರಿಶೀಲನ ಸಮಿತಿ
PEER REVIEW COMMITTEE

ಡಾ. ಸರಸ್ವತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ
ಬಿ.ಎಂ.ಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಹುಳಿಯಾರು – ಕೆಂಕೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Saraswati K. B
Associate Professor, English Department
BMS Govt. First Grade College, Huliyar - Kenkere
Tumkur District, Karnataka

ಡಾ. ಎಂ. ರಂಗಸ್ವಾಮಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮದ್ರಾಸ್ ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡು

Dr. M. Rangaswamy
Assistant Professor,
Kannada Department
University Of Madras,
Chenni, Tamil Nadu

ಡಾ. ಜ್ಯೋತಿ ಕೆ. ಬಿ.
ಸಹ ಪ್ರಾಧ್ಯಾಪಕರು, ಇಂಗ್ಲಿಷ್ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
ತುಮಕೂರು ಜಿಲ್ಲೆ, ಕರ್ನಾಟಕ

Dr. Jyoti K. B.
Associate Professor, English Department
Govt. First Grade College, Koratagere,
Tumkur District, Karnataka

ಡಾ. ಗೋವಿಂದರಾಯ ಎಂ.
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಧುಗಿರಿ
ತುಮಕೂರು ಜಿಲ್ಲೆ, ಕರ್ನಾಟಕ

Dr. Govindaraya M.
Associate Professor
Kannada Department
Govt. First Grade College, Madhugiri
Tumkur District, Karnataka

ಅನಿತ ಕೆ. ವಿ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮೌಂಟ್ ಕಾರ್ಮಲ್ ಕಾಲೇಜು ಸ್ವಾಯತ್ತ, ವಸಂತನಗರ
ಬೆಂಗಳೂರು, ಕರ್ನಾಟಕ

Anitha K. V.
Assistant Professor, Kannada Department
Mount Carmel College Autonomous, Vasanthnagar
Bengaluru, Karnataka

ಡಾ. ರವಿಶಂಕರ್ ಎ. ಕೆ.
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯ
ಕೆ. ನಾರಾಯಣಪುರ
ಬೆಂಗಳೂರು, ಕರ್ನಾಟಕ

Dr. Ravishankar A. K.
Assistant Professor, Kannada Department
Kristu Jayanti Deemed to be University,
K. Narayanapura
Bengaluru, Karnataka

ಸಿದ್ಧರಾಮಯ್ಯ ಡಿ. ಎಂ
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಬಾಡೇನಹಳ್ಳಿ, ಗುಬ್ಬಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Siddaramaiah D. M
Graduate Primary Teacher
Government Higher Primary School
Baadenahalli, Gubbi Taluk,
Tumkur District, Karnataka

ಪ್ರೊ. ರಾಮು ಟಿ. ಡಿ.
ಪದವೀಧರ ಪ್ರಾಥಮಿಕ ಶಿಕ್ಷಕ
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಕಾತ್ರಿಕೆಹಾಲ್, ಚಿಕ್ಕನಾಯಕನಹಳ್ಳಿ ತಾಲ್ಲೂಕು
ತುಮಕೂರು ಜಿಲ್ಲೆ, ಕರ್ನಾಟಕ

Ramu T. D
Graduate Primary Teacher
Government Higher Primary School
Kathrikehal, C N Halli Taluk
Tumkur District, Karnataka

ಕಾನೂನು ಸಲಹೆಗಾರರು
ಪೃಥ್ವಿ ಸೂರಿ
ಲೇಖಕರು ಹಾಗೂ ವಕೀಲರು

ಸಂಪಾದಕೀಯ...

ಕಾಳನುಯದಿ ಬಿತ್ತೆ ಸಂಜೆಗದು ಪೈರಹುದೆ
ಪಾಲುಂಟು ಕಾಲಂಗೆ ನಮ್ಮ ಕೃಷಿಗಳಲಿ ।
ವೇಳೆ ಗಡು ಮರೆತಾತುರದಿನ್ ಅಡುಗೆ ಪಕ್ವಹುದೆ
ತಾಳುಮೆಯೆ ಪರಿಪಾಕ – ಮಂಕುತಿಮ್ಮ ॥

ಸವಾಲುಗಳನ್ನು ಎದುರಿಸಿ ಮೇಲೇಳುವ ಶಕ್ತಿ ಅಥವಾ Resilience ಗುಣವು ಅಸಾಧಾರಣವಾದದ್ದು. ವಸಾಹತು ಪರಿಭಾಷೆಯಲ್ಲಿ ಈ ಸ್ವಭಾವವು ದಾಸ್ಯವೆಂದು ಭಾವಿಸಲ್ಪಡುತ್ತದೆ. ಜೀವನದ ಅಪರಿಮಿತ ಶಕ್ತಿಯನ್ನು ಎದುರಾಗುವ ಪ್ರಯತ್ನದ ಕಾರಣದಿಂದಲೇ ತನ್ನ ಜೀವ ಸೆಲೆಯನ್ನು ಜಾಗೃತವಾಗಿಡುವ ಹೆಮ್ಮಿಂಗ್ ವೇ ಯ ಮುದುಕನ ರೂಪಕ ಅನನ್ಯವಾದದ್ದು.

ಎಂತಹ ಕಠಿಣ ಪರಿಸ್ಥಿತಿಯಲ್ಲೂ ಏಳುವ ಸಮಸ್ಥಿತಿಗಳಿಸುವ ಪ್ರಕ್ರಿಯೆಗೆ ಕೆಲವು ಪೂರ್ವ ನಿಯಮಗಳಿರುತ್ತವೆ. Integrity, ತೀವ್ರಮೌನ, disinterestedness ಕೀಟ್ಸ್ ಕವಿ ಹೇಳುವ Negative Capability ಇಂತಹವು.

ಬದುಕಿನ ಬಗ್ಗೆ ನಾವು ಕಟ್ಟಿಕೊಳ್ಳುವ ಭ್ರಮೆಗಳು ನಿರಸನಗೊಂಡಾಗ, ತ್ರಿವ್ರವಾದ ಭಾವೋದ್ವೇಗಗಳು, ಹತ್ತಿರದವರನ್ನು ಕಳೆದುಕೊಂಡಾಗ ಆಗುವ ನೋವು, ಬದುಕುವ ಅಸ್ತಿತ್ವವನ್ನೇ ಅಲುಗಾಡಿಸುವ ಬಡತನ, ಯುದ್ಧಗಳು ಬರಗಾಲ, ರೋಗ ರುಜಿನ, ಯಾತನೆಗಳು ಮನುಷ್ಯರಲ್ಲಿ ಸಹಜವಾಗಿ Resilience ಗುಣವನ್ನು ಹೆಚ್ಚಿಸುತ್ತವೆ.

ಇಂದಿನ ಯುವ ಸಮೂಹವು ಇಂತಹ ಯಾವುದೇ ನೈಜ ದುರಂತಗಳು ಉಂಟುಮಾಡುವ ನೋವಿಗಿಂತ ಕಲ್ಪನೆಯಲ್ಲೇ ಕಾಡುವ ಭಯ, ಗೀಳು, ಅತಿಯಾದ ನಿರೀಕ್ಷೆ ಸ್ವಾರ್ಥದಿಂದ ಬರುವ ಹಠ, ಎಲ್ಲರನ್ನೂ, ಎಲ್ಲದನ್ನೂ ಒಳಗೊಳ್ಳದೇ ಇರುವ ಕಾರಣದಿಂದ ನೋವು ಅನುಭವಿಸುತ್ತಿದ್ದಾರೆ. ಇದು ಅಸಹಜ ಯಶಸ್ಸಿಗೆ ಅಡ್ಡದಾರಿಗಳನ್ನು

ಹುಡುಕುವ ಸಾಮರ್ಥ್ಯವಿಲ್ಲದಿದ್ದರೂ ಯಶಸ್ವಿ ಎಂದು ತೋರಿಸುವ ಕಾರಣದಿಂದ ದಿಕ್ಕು ತಪ್ಪುತ್ತಿದ್ದಾರೆ.

ನೋಡುವ, ಒಳನೋಟ ನೀಡುವ ಕಣ್ಣು ಕಳೆದುಕೊಂಡು ಅಂದರಾಗುವ ಮುನ್ನ ಎಚ್ಚೆತ್ತುಕೊಳ್ಳುವುದು ಅನಿವಾರ್ಯವಾಗಿದೆ. ಇಂತಹ ಪ್ರಜ್ಞಾವಿಹೀನ ಸ್ಥಿತಿ ಸಂಶೋಧನೆಗಳಿಗೆ ಮಾರಕವಾಗಿದೆ.

– ಡಾ. ಸರಸ್ವತಿ ಕೆ. ಬಿ

(ಈ ಪತ್ರಿಕೆಯಲ್ಲಿ ಪ್ರಕಟವಾದ ಎಲ್ಲಾ ಅಭಿಪ್ರಾಯಗಳು, ಆಯಾ ಲೇಖಕರ ಸಂಶೋಧನೆ, ಅಧ್ಯಯನಗಳಾಗಿರುತ್ತವೆ. ಆದ್ದರಿಂದ ಲೇಖನದ ಹಕ್ಕನ್ನು ಆಯಾ ಲೇಖಕರು ಹೊಂದಿರುತ್ತಾರೆ. ಪ್ರಕಟಣೆಯ ಹಕ್ಕನ್ನು ಪತ್ರಿಕೆಗೆ ನೀಡಿರುತ್ತಾರೆ.)

ISSN : 2320-9941
Linking ISSN (ISSN-L): 2320-9941
Key-title: Prathispandha
Title proper: Prathispandha.
Country: India
Medium: Print
Last modification date: 01/09/2014
Type of record: Confirmed
ISSN Center responsible of the record: ISSN National Centre for India

For all potential issues concerning this bibliographic record (missing or wrong data etc.), please contact the ISSN National Centre mentioned above by clicking on the link.

ಪರಿವಿಡಿ INDEX

1. ವಚನ ಸಾಹಿತ್ಯದಲ್ಲಿ ಧೂಪದ ಗೊಗ್ಗವ್ವೆ ಅವರ ಅನುಭಾವ

   ಶ್ರೀಮತಿ ಲಕ್ಷ್ಮೀ ಕೃಷ್ಣಾ ಮೋರೆ,

   ಡಾ. ನಾರಾಯಣ ಬಿ. ಪವಾರ **1–9**

2. ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿನ ಮಹಿಳಾ ಪಾತ್ರಗಳ ವಿಶ್ಲೇಷಣೆ

   ಡಾ. ಪೂರ್ಣಿಮಾ ಎಸ್ **10–30**

3. ಬಸವಣ್ಣನವರ ವಚನಗಳಲ್ಲಿ ಸಾಹಿತ್ಯ ಕ್ರಾಂತಿ ಒಂದು ಅವಲೋಕನ

   ಕೆ.ಎನ್.ನಂದೀಶ **31–38**

4. ತೇಜಸ್ವಿಯವರ ಅಣ್ಣನ ನೆನಪು ಒಂದು ವಿಶ್ಲೇಷಣೆ

   ಡಾ. ಮಂಜುಳ ಜಿ **39–49**

5. ಜಯಂತ ಕಾಯ್ಕಿಣಿಯವರ ಚಾರ್ಮಿನಾರ್ ಕಥೆಯಲ್ಲಿ ಪ್ರಾದೇಶಿಕ ಅಸ್ಮಿತೆಗಳ ಅನಾವರಣೆ

   ಶ್ರೀ. ಮಾರುತಿ **50–57**

6. ಲಲಿತ ಕಲೆಗಳ ಕಲಾತ್ಮಕತೆ

   ಡಾ. ಶಿವಕುಮಾರ್ ಜಿ. ಎನ್. **58–66**

7. 'ಇಡಿದಿರು ನನ್ನ ನಿನ್ನ ಸಿಂಹಾಸನದ ಮೇಲೆ' ಕವಿತೆಯಲ್ಲಿ ಕೌಟುಂಬಿಕ ಮೌಲ್ಯದ ನಿರ್ವಹಣೆಯ ವಿಶ್ಲೇಷಣೆ

   ಡಾ. ಜಿ. ಬಿ. ಮಹೇಶ್ವರಿ **67–72**

8. ಕರಾವಳಿಯ ಮೊಗವೀರರು ಮತ್ತು ಗುರುಪರಂಪರೆ

   ರಾಮು **73–83**

9. ಕಿತ್ತೂರು ಇತಿಹಾಸ ಶೋಧಕ: ತಲ್ಲೂರು ರಾಯನಗೌಡ

   ಡಾ. ರಾಜಶೇಖರ ಬಿರಾದಾರ **84–91**

10. ಬಯಲುಸೀಮೆಗೆ ಕಾಯಕ ಸಂಸ್ಕೃತಿ ಸಾರಿದ: ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ

    ಡಾ. ಪ್ರಹ್ಲಾದ ಡಿ. ಎಂ. **92–103**

11. ಪರ್ಷಿಯನ್ ಮತ್ತು ಅರಬಿ ಮಹಾಭಾರತ: ಭಾಷಾಂತರ ಪರಂಪರೆ ಮತ್ತು ಸಾಹಿತ್ಯಿಕ ಅನುಸಂಧಾನ

    ಡಾ. ಸೈಯದ್ ಮುಯಿನ್ **104–115**

12. ತುಘಲಕ್ ಮತ್ತು ಕಾಲಿಗುಲ ನಾಟಕಗಳ ತೌಲನಿಕ ವಸ್ತು ವಿವೇಚನೆ

ವಿಜಯಲಕ್ಷ್ಮಿ ಡಿ. **116–122**

13. ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ದಲಿತ ಸಂವೇದನೆ

ಡಾ. ಪೂರ್ಣಿಮಾ ನಾಗನಾಥರಾವ **123–127**

ವಚನ ಸಾಹಿತ್ಯದಲ್ಲಿ ಧೂಪದ ಗೊಗ್ಗವ್ವೆ ಅವರ ಅನುಭಾವ

1
ಶ್ರೀಮತಿ ಲಕ್ಷ್ಮೀ ಕೃಷ್ಣಾ ಮೋರೆ
ಕನ್ನಡ ಸಹಾಯಕ ಪ್ರಾಧ್ಯಾಪಕರು ಹಾಗೂ ಸಂಶೋಧನಾರ್ಥಿ
ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ

1
ಮಾರ್ಗದರ್ಶಕರು
ಡಾ. ನಾರಾಯಣ ಬಿ. ಪವಾರ
ಸಹ ಪ್ರಾಧ್ಯಾಪಕರು
ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ,ವಿಜಯಪುರ

ಹನ್ನೆರಡನೆಯ ಶತಮಾನದಲ್ಲಿ ವಚನ ಚಳುವಳಿ ಭಾರತೀಯ ಸಮಾಜದಲ್ಲಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ವಲಯಗಳಲ್ಲಿ ವಿಪ್ಲವವನ್ನೇ ಉಂಟುಮಾಡಿತು. ಅಲ್ಲಿಯವರೆಗೆ ದೇಶದಲ್ಲಿ ರೂಢಮೂಲವಾಗಿದ್ದ ಜಾತಿಬೇಧ, ಗಂಡು ಹೆಣ್ಣಿನ ಅಸಮಾನತೆಗಳ ವಿಷಯದಲ್ಲಿ ಕ್ರಾಂತಿಯೇ ಉಂಟಾಯಿತು. ಆ ಸಮಯದಲ್ಲಿ ದಲಿತರಿಗೆ ಹಾಗೂ ಸ್ತ್ರೀಯರಿಗೆ ಆತ್ಮವಿಶ್ವಾಸ ಉಂಟಾಗಿ ಅವರಿಗೆ ಬಾಯಿ ಬಂದದ್ದು ಇಡೀ ದೇಶದ ಚರಿತ್ರೆಯಲ್ಲಿಯೇ ಅಚ್ಚಳಿಯದ ಸಂಗತಿ. ಇಡೀ ವಿಶ್ವಸಾಹಿತ್ಯದಲ್ಲಿ ವಚನ ಸಾಹಿತ್ಯ ಕನ್ನಡನಾಡಿನ ಅಸ್ಮಿತೆಯಾಗಿದೆ. ಪ್ರಪಂಚದ ಯಾವ ಮೂಲೆಯಲ್ಲಿಯೂ ಇಂಥಹ ಸಾಹಿತ್ಯದ ರಚನೆ ಈ ಮೊದಲು ಆಗಿರಲಿಲ್ಲ. ಬಸವಾದಿ ಶರಣರು ವಚನ ಸಾಹಿತ್ಯ ರಚಿಸಿ ವಿಶ್ವ ಸಾಹಿತ್ಯಕ್ಕೆ ಬಹುದೊಡ್ಡ ಕೊಡುಗೆಯನ್ನು ನೀಡಿದರು. ಹನ್ನೆರಡನೆಯ

ಶತಮಾಮಾನದಲ್ಲಿ ಇಡೀ ವಿಶ್ವಕ್ಕೆ ಮಾದರಿಯಾಗಬಲ್ಲ ಅನುಭವ ಮಂಟಪ ಸ್ಥಾಪಿಸಿದರು. ಈ ಮೂಲಕ ಸಾಮಾಜೋಧಾರ್ಮಿಕ ಸ್ಥಿತ್ಯಂತರಕ್ಕಾಗಿ, ಅಂತರಂಗ ಬಹಿರಂಗಗಳ ಶುದ್ಧೀಕರಣಕ್ಕಾಗಿ ಹಾಗೂ ಸಮಾಜದ ಉನ್ನತಿಯೊಂದಿಗೆ ಮಾನವನ ಆತ್ಮೋನ್ನತಿಯ ಕಲ್ಯಾಣಕ್ಕಾಗಿ ಅವರು ರೂಪಿಸದ ಸಾಂಸಕೃತಿಕ ಪರಂಪರೆ ತುಂಬಾ ಮಹತ್ವಪೂರ್ಣವಾಗಿದೆ. ಅನುಭವ ಮಂಟಪವು 12ನೇ ಶತಮಾನದಲ್ಲಿ ಸ್ಥಾಪನೆಗೊಂಡ ಒಂದು ವಿಶೇಷ ಸಂಘಟನೆಯಾಗಿದೆ. ಇದು ವ್ಯಷ್ಟಿ ಹಾಗೂ ಸಮಷ್ಟಿಯ ವಿಕಾಸದ ಸಂಕೇತವಾಗಿದೆ. ಆತ್ಮೋನ್ನತಿಯ ಮುಖ್ಯ ಆಶಯವನ್ನು ಹೊಂದಿರುವ ಮಹತ್ವದ ಸಂಸ್ಥೆಯಾಗಿದೆ. ಸರ್ವರನ್ನು ಏಕೀಕರಣಗೊಳಿಸಲು ಹುಟ್ಟಿದ ಇಂದಿನ ಪ್ರಜಾಪ್ರಭುತ್ವದ ಮೂಲಸೆಲೆಯಾಗಿದೆ. ಇದರ ಹೆಸರನ್ನು ಕೇಳಿ ವಿದ್ವಾಂಸರು, ದಾರ್ಶನಿಕರು, ಅನುಭಾವಿಗಳು, ಸಾಧು–ಸಂತರು, ಶರಣ–ಶರಣೆಯರು ಇದರ ಮೂಲನೆಲೆಯಾಗಿರುವ ಕಲ್ಯಾಣದತ್ತ ದೇಶದ ವಿವಿಧ ಮೂಲೆಗಳಿಂದ ಶರಣರೆಲ್ಲ ಒಂದಡೆ ಸೇರಿ ಚಿಂತನ ಮಂಥನ ನಡೆಸಿ ಸಮಾನತೆಯ, ಸೌಹಾರ್ದತೆಯ ಹಾಗೂ ಭಾವೈಕ್ಯತೆಯ ಮಂತ್ರವನ್ನು ಸಾರಿದರು. ಚೋಳದೇಶದಿಂದ ಮಾದಾರಚೆನ್ನಯ್ಯ, ಮಾಳವದಿಂದ ಡೋಹರ ಕಕ್ಕಯ್ಯ, ಕಾಶ್ಮೀರದಿಂದ ಮೋಳಿಗೆಯ ಮಾರಯ್ಯ, ಸೌರಾಷ್ಟ್ರದಿಂದ ಆದಯ್ಯ, ಮಲೆನಾಡಿನಿಂದ ಮೇದಾರ ಕೇತಯ್ಯ ಹೀಗೆ ಅನೇಕ ಶರಣರು ಒಂದುಗೂಡಿದರು. ಅವರೆಲ್ಲರಿಗೂ ಬಸವಣ್ಣನವರು ನೇತಾರರಾದರು. ಅವರು ಸಮಾಜದ ಎಲ್ಲಸ್ತರದ ಜೀವಿಗಳ ಏಳಿಗೆಗಾಗಿ ಹಗಲಿರಳೂ ಶ್ರಮಿಸಿದರು. ದೇಶದ ಏಳಿಗೆ ನೀತಿರುವದೇ ಶ್ರಮಿಕವರ್ಗದವರಿಂದ ಎಂಬುದನ್ನು ಗುರುತಿಸಿದರು. ಅಂತಹ ವರ್ಗಕ್ಕೆ ಸಮಾಜದ ಗೌರವಾದರಗಳನ್ನು ಒದಗಿಸುವ ನಿಟ್ಟಿನಲಿತನು–ಮನ–ಧನಪೂರ್ವಕವಾಗಿ ತಮ್ಮನ್ನೆ ತಾವು ಸಮರ್ಪಿಸಿಕೊಂಡರು.

ಹನ್ನೆರಡನೆಯ ಶತಮಾನದ ಬಹುಮುಖ್ಯ ಸಾಮಾಜಿಕ ಸಂಚಲನ ಮೂಡಿಸಿದ ವಿಚಾರವೆಂದರೆ ಶತಶತಮಾನಗಳಿಂದಲೂ ನಿರ್ದಿಷ್ಟ ನೆಲೆಯಿಲ್ಲದೇ ನಲುಗಿ ಹೋಗಿದ್ದ ಸ್ತ್ರೀ ಅಭಿವ್ಯಕ್ತಿ ಸ್ವಾತಂತ್ರ್ಯ ಪಡೆದದ್ದು. ದೇವರ ದಾಸಿಮಯ್ಯನಿಂದಲೇ ಲಿಂಗಬೇಧ ನಿರಾಕರಣೆ ಪ್ರಾರಂಭವಾಯಿತು. ಇದು ನಿಜಕ್ಕೂ ಕ್ರಾಂತಿಯುಗವಾಗಿದೆ. 'ನಡುವೆ ಸುಳಿವಾತ್ಮ ಗಂಡೂ ಅಲ್ಲ ಹೆಣ್ಣೂ' ಅಲ್ಲ ಎಂದು ಹೇಳಿರುವುದು ಅಂದು ಸ್ತ್ರೀ–ಪುರುಷರಿಗೆ ನೀಡಿರುವ ಸಮಾನ ಅವಕಾಶಗಳ ಮಾದರಿಯಾಗಿದೆ. ಆತ್ಮನ ಅಸ್ತಿತ್ವಕ್ಕೆ ಲಿಂಗಬೇಧವಿಲ್ಲ ಎಂದು ವಚನಕಾರರು ಅಧಿಕೃತವಾಗಿ ಹೇಳಿದ್ದು ಜಗತ್ತಿನಲ್ಲಿಯೇ ಮೊಟ್ಟಮೊದಲಿಗೆ ಎಂದು ಗುರುತಿಸಲಾಗಿದೆ. ವಿವಿಧ ವರ್ಗದ ಮಹಿಳೆಯರು ಅಂದು

ಅನುಭವ ಮಂಟಪದಲ್ಲಿ ಶರಣರೊಂದಿಗೆ ಗಹನವಾದ ಚಿಂತನೆಗಳನ್ನು ಸೈದ್ಧಾಂತಿಕ ನೆಲೆಯಲ್ಲಲಿ ಮಾಡಿದರು. ಅಂತಹ ಮಹಿಳೆಯರಲ್ಲಿ ಮುಖ್ಯವಾಗಿ ಅಕ್ಕಮಹಾದೇವಿ, ಆಯ್ದಕ್ಕಿಲಕ್ಕಮ್ಮ, ಮುಕ್ತಾಯಕ್ಕ, ಅಮುಗೆರಾಯಮ್ಮ, ಹಡಪದ ಲಿಂಗಮ್ಮ, ಕಾಳವ್ವೆ ನೀಲಮ್ಮ ಹಾಗೂ ಧೂಪದ ಗೊಗ್ಗವ್ವೆ ಮುಂತಾದವರು.

ಕೇರಳದ ಅವಲೂರು ಗ್ರಾಮದಲ್ಲಿ ಜನಿಸಿದ ಗೊಗ್ಗವ್ವೆಗೆ ಬಸವಕಲ್ಯಾಣದಲ್ಲಿದ್ದ ಶಿವಶರಣರ ವಿಶ್ವ ಮನುಕುಲ ಚಳುವಳಿಯ ಸುದ್ದಿ ತಲುಪಿ ಅದರಿಂದ ಪ್ರೇರಿತಳಾಗಿ ತಾನು ಆ ಕ್ರಾಂತಿಯಲ್ಲಿ ಸಕ್ರಿಯವಾಗಿ ತೊಡಗಿ ತನ್ನ ಕೊಡುಗೆಯನ್ನು ನೀಡಬೇಕೆಂದು ಹಾತೊರೆದು ಕಲ್ಯಾಣಕ್ಕೆ ಧಾವಿಸಿದಳು. ಕೊನೆಯ ಹಂತದಲ್ಲಿ ಕಲ್ಯಾಣಕ್ರಾಂತಿಯ ತರುವಾಯ ಶಿವಶರಣರೆಲ್ಲ ಚದುರಿಹೋದ ಸಂದರ್ಭದಲ್ಲಿ ಗೊಗ್ಗವ್ವೆಯೂ ಕೂಡ ಕಲ್ಯಾಣದಿಂದ ಹೊರಟು ಬೀದರ ಜಿಲ್ಲೆ, ಅವರಾದ ತಾಲೂಕಿನ ಮಹಾಗಾವಂಗ ಗ್ರಾಮಕ್ಕೆ ಬಂದು ನೆಲೆಯೂರಿ ತನ್ನ ಕೊನೆಗಾಲವನ್ನು ಅಲ್ಲಿಯೇ ಕಳೆದಳು ಹೀಗೆ ಕಲ್ಯಾಣದಿಂದ ಬಂದ ಗೊಗ್ಗವ್ವೆಗೆ ಮಹಾಗಾಂವನ ಮಾಲಿಗೌಡರ ಮನೆತನವೂ ಆಶ್ರಯ ನೀಡಿದ್ದು,ಅವಳ ಕಾಯಕ ದಾಸೋಹಗಳಿಗೆಲ್ಲ ಅವರು ವ್ಯವಸ್ಥೆ ಮಾಡಿದರು. ಇಂದಿಗೂ ಈ ಮನೆತನದ ಆರಾಧ್ಯ ದೇವತೆ ಗೊಗ್ಗವ್ವೆ ಆಗಿದ್ದಾಳೆ. ಇವತ್ತು ಆ ಗ್ರಾಮದ ಅಧಿದೇವತೆಯಾಗಿ ಪೂಜಿಸಲ್ಪಡುತ್ತಿದ್ದಾಳೆ. ಅಲ್ಲಿಯೂ ಕೂಡಾ ಗೊಗ್ಗವ್ವೆ ನಿರಂತವಾಗಿ ಧೂಪದ ಕಾಯಕ ನಡೆಸಿಕೊಂಡು ಬಂದ ಫಲವಾಗಿ ಆ ಊರಿಗೆ ಧೂಪದ ಮಹಾಗಾಂವ ಎಂಬ ಹೆಸರಿದೆ. ಈ ಊರಿನಲ್ಲಿ ಪ್ರಾಚೀನ ದೇವಾಲಯವೊಂದಿದೆ ಅದು ಮಹಾದೇವನ ಗುಡಿ. ಈ ಗುಡಿಯನ್ನು ಶಿವನಾಥನ ಗುಡಿ. ಇದೇ ಗುಡಿಯಲ್ಲಿ ಗೊಗ್ಗವ್ವೆ ಧೂಪದ ಕಾಯಕ ಮಾಡುತ್ತಿದ್ದಳು. ನಾಸ್ತಿನಾಥನ ಹೆಸರು ಕಾಲಾಂತರದಲ್ಲಿ ಶಿವನಾಥ ಆಗಿರಬಹುದು.

ಇನ್ನೂ ಒಂದು ವಿಶೇಷವೆಂದರೆ ಜನಪದ ಆಚರಣೆಗಳಲ್ಲಿ ಗುಳ್ಳವ್ವನ ಮುಂದೆ ಗೊಗ್ಗವ್ವೆಯ ಮೂರ್ತಿ ಇಡುತ್ತಾರೆ. ಜನಪದದ ಈ ಆಚರಣೆಗೂ ಗೊಗ್ಗವ್ವೆಯ ಜೀವನಕ್ಕೂ ಏನುಸಂಬಂಧ ಎಂಬುದರ ಬಗ್ಗೆ ಸಂಶೋಧನೆಯಾಗಬೇಕು. ನಾಸ್ತಿನಾಥ ಎಂಬ ಅವಳ ವಚನಾಂಕಿತಕ್ಕೂ ನಾಥಪಂಥಕ್ಕೂ ಏನಾದರೂ ಸಂಬಂಧ ಇರಬಹುದು ಎನ್ನಲಾಗಿದೆ.

ಶಿವಶರಣೆಯರಲ್ಲಿ ಎರಡು ರೀತಿಯ ಶರಣೆಯರಿದ್ದಾರೆ. ಕೆಲವರು ಮದುವೆಯಾಗಿ ಶಿವನನ್ನು ಪೂಜಿಸಿದವರು ಇನ್ನೂ ಕೆಲವರು ಮದುವೆಯಾಗದೇ ಶಿವನೇ ತಮ್ಮ ಪತಿ ಎಂದು ನಂಬಿ ಪೂಜಿಸುವರು. ಗೊಗ್ಗವ್ವೆ ಎರಡನೇ

ಸಂಪ್ರದಾಯದವಳು. ಇದೇ ರೀತಿ ಬೋಂತಾದೇವಿ, ಸತ್ಯಕ್ಕ ಕೂಡಾ ಇದ್ದಾರೆ.

ಬಣ್ಣ, ಭಾಷೆ, ಕುಲ, ಜಾತಿ ಲಿಂಗ, ಸ್ಥಾನ, ಉದ್ಯೋಗ ಮುಂತಾದ ಬೇಧಗಳನ್ನು ಕಿತ್ತೊಗೆದು ಪರಸ್ಪರ ಮನುಷ್ಯರೆಲ್ಲರೂ ಒಂದೇ ಎಂಬ ಭಾವ ಮೂಡಿಬಂದಿದ್ದು ಅಷ್ಟೇ ಅಲ್ಲ ಸಹಪಂಕ್ತಿ ಭೋಜನ, ಲಗ್ನಸಂಬಂಧಿ ಕಾಯಕ, ಶಿವಾನುಭವ ಎಲ್ಲದರಲ್ಲೂ ಭಿನ್ನಭಾವವಿಲ್ಲದೇ ಸರ್ವರೂ ಏಕೀಕರಣಗೊಂಡಿದ್ದು ಅನುಭವ ಮಂಟಪದ ಆವರಣದಲ್ಲಿ ಎಂದೂ ಹೇಳಬಹುದು. ಅಲ್ಲಿ ಅನೇಕ ವಚನಕಾರರು ವಚನಕಾರ್ತಿಯರು ತಮ್ಮ ಆಧ್ಯಾತ್ಮ ಮತ್ತು ಅನುಭಾವದ ಮೂಲಕ ಹೊಸ ಯುಗಕ್ಕೆ ನಾಂದಿ ಹಾಡಿದರು. ಭಾರತೀಯ ಸಂಸ್ಕೃತಿಯ ಮರುನಿರ್ಮಾಣ ಮಾಡುವಲ್ಲಿ ದಿಟ್ಟ ಹೆಜ್ಜೆ ಹಾಕಿದರು. ಪಾರಾಯಣ ಸಂಸ್ಕೃತಿಯ ವಿರುದ್ಧ ಕಹಳೆಯನ್ನೇ ಊದಿದರು. ವೇದಕಾಲದಿಂದಲೂ ಸಾಗಿಬಂದ ಕರ್ಮಠತನ ತೊಡೆದು ಹಾಕಿ, ಡಾಂಬಿಕರ ಸೋಗುಲಾಡಿತನವನ್ನು ಬಯಲು ಮಾಡಿ, ತಮ್ಮ ವಚನಗಳ ವಸ್ತುವನ್ನಾಗಿ ಮಾಡಿ ಸಮಾಜದಲ್ಲಿದ್ದ ಅನಿಷ್ಟಗಳನ್ನು, ಶೋಷಣೆಗಳನ್ನು, ಗೊಡ್ಡು ಸಂಪ್ರದಾಯಗಳನ್ನು ದೂರಿಕರಿಸಿ ಅನ್ಯಾಯದ ಅಮಲನ್ನು ಇಳಿಸಿದ ಮಹಾಶಿವಶರಣೆ ಶಿವಶರಣೆಯರು ಎಂದೆಂದಿಗೂ ಅಮರಪ್ರಾಯರು.

ಜನಸಾಮಾನ್ಯರ ಒಳಿತನ್ನು ಬಯಸುವ ಅವರ ಹೃದವಂತಿಕೆ ಅನನ್ಯವಾದದ್ದು. ಸಮಾಜದ ವಿಮರ್ಶೆ ಮಾಡುವದಲ್ಲದೇ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಅವರ ಪರಿಶುದ್ಧ ಬಾಳು ಎಂದೆಂದಿಗೂ ಆದರ್ಶಪ್ರಾಯವಾದದ್ದು.

ಒಂದು ಸಮಾಜದ ರಚನೆ ಎಷ್ಟು ಸರಳವಾಗಿರುವುದೋ ಅಷ್ಟೇ ಅಲ್ಲಿ ಸಮಾನತೆಯು ಇರುತ್ತದೆ. ಬಸವಾದಿ ಶರಣರಕ್ಕಿಂತಲೂ ಮೊದಲು ನಮ್ಮ ಸಮಾಜದಲ್ಲಿ ಮಹಿಳೆಗೆ ಇರುವ ಸ್ಥಾನಮಾನಗಳ ಪರಿಚಯ ನಮಗೆ ಗೊತ್ತಿದೆ. ಯಾವ ಸ್ತ್ರೀ ಕೇವಲ ಭೋಗದ ವಸ್ತು ಎಂಬ ಸೀಮಿತ ಪರಿಕಲ್ಪನೆಯ ಅಡಿಯಲ್ಲಿ ಜೀವಿಸುತ್ತಿದ್ದಳೋ ಅದನ್ನು ಹುಸಿಯಾಗಿಸಿ ಇಡೀ ಮಹಿಳಾ ಪ್ರಪಂಚಕ್ಕೆ ಹೊಸ ಆಯಾಮ ತಂದುಕೊಟ್ಟವರು ಬಸವಾದಿ ಶರಣರು ಹೆಣ್ಣನ್ನು ಸಾಕ್ಷಾತ್ ದೇವರೆಂದು ಸಾಧಿಸಿ ತೋರಿದರು ಈ ಶರಣರು ಅವರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ತುಂಬಾ ಮುಖ್ಯವಾಗಿತ್ತು. ಶತಮಾನಗಳಿಂದ ಸಾಹಿತ್ಯ ರಚನೆ ಕೇವಲ ಪುರುಷರ ಸ್ವತ್ತಾಗಿತ್ತು. ಮಹಿಳೆಯೂ ಈ ಸಮಾನ ವೇದಿಕೆಯ ಮೇಲೆ ನಿಲ್ಲಬಲ್ಲಳು ಎಂಬುದನ್ನು ಅನೇಕ ಶರಣೆಯರು ಜಗತ್ತಿಗೆ ತೋರಿಸಿಕೊಟ್ಟರು. ಅಂತಹ ಮಹಾಶರಣೆಯರಲ್ಲಿ ಧೂಪದ ಗೊಗ್ಗವ್ವೆಯೂ ಕೂಡ ಒಬ್ಬಳು. ಶಿವಭಕ್ತರಿಗೆ ಧೂಪ ಅರ್ಪಿಸುವ ಕಾಯಕ ಅವಳದು. ಈ

ಮಹಾತಾಯಿಗೆ ಸಂಬಂಧಿಸಿದ ವಿವರಗಳು ನಮಗೆ ಭೈರವೇಶ್ವರ ಕಾವ್ಯದಿಂದ ಗುರುರಾಜ ಚಾರಿತ್ರದಿಂದ, ಸ್ವಲ್ಪಮಟ್ಟಿಗೆ ದೊರೆಯುತ್ತವೆ. ಆಕೆಯ ಸ್ಥಳ ಕೇರಳದ ಅವಲೂರು. ಅಲ್ಲಿಯ ಶೈವ ದಂಪತಿಗಳ ಏಕಮಾತ್ರ ಪುತ್ರಿ. ಗೊಗ್ಗೇಶ್ವರ. ಇವರ ಮನೆದೇವರಾದ ಕಾರಣ ಮಗಳಿಗೆ ಗೊಗ್ಗವ್ವೆ ಎಂದು ನಾಮಕರಣ ಮಾಡಲಾಯಿತು. ಗೊಗ್ಗೆಶ್ವರನ ಅನನ್ಯ ಭಕ್ತೆ. ಅವಳು ಮದುವೆ ವಯಸ್ಸಿಗೆ ಬಂದಾಗ ರೂಢಿಯಂತೆ ತಂದೆ ತಾಯಿ ಮದುವೆಯ ಪ್ರಸ್ತಾಪ ಮಾಡುತ್ತಾರೆ. ಆದರೆ ಮಗಳು ಗೊಗ್ಗೇಶ್ವರನ ಗುಡಿಯಲ್ಲಿ ಅಡಗಿಕೊಂಡಿರುತ್ತಾಳೆ. ಮದುವೆಗೆ ಇಷ್ಟವಿಲ್ಲದ ಮಗಳನ್ನು ತಂದೆತಾಯಿ ಮಗಳೋ ಲಿಂಗಪೂಜೆ ಮಾಡಿಕೊಂಡು ನಮ್ಮೊಂದಿಗೆ ಇರು ಎಂದು ಹೇಳುತ್ತಾರೆ. ಆದರೆ ಗೊಗ್ಗವ್ವೆ ನನಗೆ ಲಿಂಗಪೂಜೆ ತಿಳಿಯದು ದೇವನಿಗೆ ಧೂಪ ಅರ್ಪಿಸುತ್ತೇನೆ ಎಂದು ಹೇಳುತ್ತಾಳೆ. ಆದ್ದರಿಂದಲೇ ಅವಳಿಗೆ ಧೂಪದ ಗೊಗ್ಗವ್ವೆ ಎಂಬ ಹೆಸರು ಬರುತ್ತದೆ. ಒಂದು ದಂತಕಥೆಯ ಪ್ರಕಾರ ಶಿವನು ಈ ಭಕ್ತಳ ಮನವನ್ನು ಒರೆದು ನೋಡಲು ಇಚ್ಚಿಸಿದನು. ಅವಳು ಶಿವನಿಗೆ ಧೂಪವನ್ನು ಅರ್ಪಿಸಿ ಗುಡಿಯಿಂದ ಮನೆಗೆ ವಾಪಸ್ಸು ಬರುವಾಗ ಶಿವನು ಸುಂದರವಾದ ಯುವಕನ ವೇಷ ಹೊತ್ತು ಕೈಯಲ್ಲಿ ಹರಿತವಾದ ಕತ್ತಿ ಹಿಡಿದು ಇವಳ ಮುಂದೆ ಬಂದು ನನ್ನನ್ನು ಮದುವೆಯಾಗು, ಇಲ್ಲದಿದ್ದರೆ ನಿನ್ನನ್ನು ಕತ್ತರಿಸಿ ಬಿಡುತ್ತೇನೆ. ಎಂದು ಹೆದರಿಸುತ್ತಾನೆ. ಇದು ಸಾಧ್ಯವಿಲ್ಲವೆಂದು ಗೊಗ್ಗವ್ವೆ ನುಡಿದು ಸುಮ್ಮನಾಗುತ್ತಾಳೆ. ಆ ವೇಷಧಾರಿ ಅಮ್ಮ ಕತ್ತನ್ನು ಕತ್ತರಿಸಲೆಂದು ಕತ್ತಿಯನ್ನು ಮೇಲೆತ್ತಿ ಹೊಡೆಯುವಾಗ ಆಕೆ ಶಿವಧ್ಯಾನವನ್ನು ಮಾಡುತ್ತಾಳೆ. ಶಿವನು ಆಕೆಯ ಪರಿಶುದ್ಧ ಭಾವಕ್ಕೆ ಮೆಚ್ಚಿ ಏನು ಬೇಕೆಂದು ಕೇಳುತ್ತಾನೆ. “ಗುರುವಿನಿಂದ ಉಪದೇಶ ಪಡೆದು ಶರಣಪಥದಲ್ಲಿ ನಡೆಯುವಂತೆ ಅನುಗ್ರಹಿಸು” ಎಂದು ಕೇಳಿದಳು. ಆಗ ಶಿವನು ತಾನೇ ಗುರುವಾಗಿ ಬಂದು ಉಪದೇಶ ನೀಡುತ್ತಾನೆ.

ಒಂದು ಸಲ ಕೂಡಲೂರು ದೇಶಿ ಚೇರಮರಾಯ ಕೈಲಾಸದ ದಾರಿ ಹುಡುಕುತ್ತ ಹೊರಟಾಗ ಅವನಿಗೂ ದೂಪದ ಹೊಗೆಯ ಮೂಲಕ ದಾರಿ ತೋರಿಸುತ್ತಾಳೆ. ಹೀಗೆ ನಿಷ್ಠೆಯಿಂದ ಕಾಯಕ ಮಾಡುತ್ತ ತನ್ನ ಇಷ್ಟಲಿಂಗದಲ್ಲಿ ಐಕ್ಯಳಾದವಳು. ಇದನ್ನು ಸಿದ್ಧನಂಜೇಶನು ಸಂಕ್ಷಿಪ್ತವಾಗಿ

“ಭವರಹಿತೆ ಧೂಪದಾ ಗೊಗ್ಗವ್ವೆಯೆಂಬಾಕೆ
ಶಿವನಿಗೆ ದೂಪವ ನೀಡಿ
ಕೈಲಾಸ ಪಥವನುಂ ಶಿವಭಕ್ತರಿಗೆ ತೋರಿ
ಶಂಕರನ ಕೃಪೆ ಪಡೆದಳ್”

ಎಂದು ಹೇಳುತ್ತಾಳೆ. ನಾಸ್ತಿನಾಥ ಎಂಬ ಅಂಕಿತದಲ್ಲಿ ಆಕೆಯ ಆರು ವಚನಗಳು ದೊರೆತಿವೆ.

ಸ್ತ್ರೀವಾದ ಚರ್ಚೆ ತೀವ್ರವಾಗಿರುವ ಈ ದಿನಗಳಲ್ಲಿ ಗೊಗ್ಗವ್ವೆಯ ವಚನಗಳು ತುಂಬಾ ಪ್ರಸ್ತುತವಾಗಿವೆ.

"ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯ ಜ್ಞಾನ
ಹೆಣ್ಣೋ ಗಂಡೋ ನಾಸ್ತಿನಾಥಾ?"

ಈ ವಚನದಲ್ಲಿ ಲಿಂಗಬೇಧ ನೀತಿಯ ಸ್ಪಷ್ಟ ನಿರಾಕರಣೆ ಇದೆ. ಈ ವಚನ ದಾಸಿಮಯ್ಯನ ವಚನವನ್ನು ನೆನಪಿಗೆ ತರುತ್ತದೆ. ಹೆಣ್ಣು-ಗಂಡು ಎಂಬ ಬೇಧವಿರುವದು ದೈಹಿಕ ಬೆಳವಣಿಗೆಯಲ್ಲಿ ಇರುವದೇ ಹೊರತು ಇಬ್ಬರಲ್ಲೂ ಇರುವ ಜ್ಞಾನ ಮತ್ತು ಮನಸ್ಸಿಗಲ್ಲ ಎಂಬ ಸತ್ಯವನ್ನು ಶರಣರು ಸ್ಪಷ್ಟಪಡಿಸಿದರು. ದೇಹದ ರಾಚನಿಕ ವ್ಯತ್ಯಾಸ ಬಾಹ್ಯದಲ್ಲಿ ಕಾಣುವದು. ಆದರೆ ಜ್ಞಾನ ಆಂತರಿಕ ವಿಷಯ ಕಣ್ಣಿಗೆ ಕಾಣುವಂತದ್ದಲ್ಲ. ಕೇವಲ ಬಾಹ್ಯರಚನೆಯನ್ನು ಕಂಡು ಹೆಣ್ಣು-ಗಂಡು ಎಂಬ ಹುಟ್ಟಿದ್ದು ವಿಪರ್ಯಾಸ ಎಂದು ಗೊಗ್ಗವ್ವೆ ಹೇಳುತ್ತಾಳೆ.

ಗೊಗ್ಗವ್ವೆಯ ಇನ್ನೊಂದು ವಚನ

"ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು".

ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ ನಾಸ್ತಿನಾಥನು ಪರಿಪೂರ್ಣನೆಂಬೆ"

ಲೋಕ ರೂಢಿಯಪ್ರಕಾರ ಗಂಡು ಯಾವುದಾದರೂ ಹೆಣ್ಣನ್ನು ನಿಶ್ಚಿತಾರ್ಥ ಮಾಡಿಕೊಂಡರೆ ಅದು ಅವನ ಒಡವೆಯಾಗುತ್ತದೆ. ಇವನ್ನು ಲೋಕ ಒಪ್ಪಿಕೊಂಡಿದೆ. ಗಂಡು ಮೋಹಿಸಿ ಹೆಣ್ಣನ್ನು ಒಂದು ಒಡವೆ ಎಂದು ತಿಳಿಯುವುದಾದರೆ ಅದೇ ನೀತಿಯನ್ನು ಹೆಣ್ಣಿಗೂ ಏಕೆ ಅನ್ವಯಿಸಬಾರದೆಂದು ಕೇಳುತ್ತಾಳೆ. ಒಂದು ವೇಳೆ ಒಂದು ಹೆಣ್ಣು ಗಂಡನ್ನು ಮೋಹಿಸಿದರೆ ಆತ ಅವಳ ಒಡವೆಯಾಗುತ್ತಾನೆಯೆ? ಎಂಬ ಪ್ರಶ್ನೆ ಇಡುತ್ತಾಳೆ. ಇದು ಅಂದಿನ ಹೆಣ್ಣಿನ ಶೋಚನೀಯ ಸ್ಥಿತಿಯನ್ನು

ತಿಳಿಸುತ್ತದೆ. ಇದು ಸ್ತ್ರೀ ಸಮಾನತೆಯ ಗಟ್ಟಿಧ್ವನಿಯಾಗಿದೆ. ಗೊಗ್ಗವ್ವೆ ನಮಗೆ ಇಲ್ಲಿ ಪ್ರಥಮ ಸ್ತ್ರೀವಾದಿಯಾಗಿ ಕಾಣುತ್ತಾಳೆ. ಈ ಎರಡರ ದ್ವಂದ್ವವನ್ನು ಕಳೆದುಕೊಂಡು ಸುಖಿ ತಾನಾದಾಗ ನಾಸ್ತಿನಾಥನು ಪರಿಪೂರ್ಣನಾಗುತ್ತಾನೆ ಎಂದು ಹೇಳುತ್ತಾಳೆ. ಇಲ್ಲಿ ಎರಡನ್ನು ಅಳಿದರ ದ್ವೈತದಿಂದ ಅದ್ವೈತದ ಕಡೆಗೆ ಇರುವ ಪಯಣ ಈ ವಚನ ಕೇವಲ ಹೆಣ್ಣು ಗಂಡಿನ ಸಮಾನತೆಯನ್ನು ಮಾತನಾಡದೇ ಅದರಾಚೆಗಿನ ಏಕತ್ವವನ್ನು ಧ್ವನಿಸುತ್ತದೆ.

ಗಂಡು ಹೆಚ್ಚು, ಹೆಣ್ಣು ಕಡಿಮೆ ಅದು ಅವನ ಸ್ವತ್ತು ಎಂದು ವಾದಿಸುವದು ಯಜಮಾನ ಸಂಸ್ಕೃತಿಯ ಹೇಳಿತ್ತದೆ. ಗಂಡಿಗಿಂತ ಹೆಣ್ಣೇನು ಕಡಿಮೆ? ಅವನೇಕೆ ಅವಳ ಸ್ವತ್ತಾಗಬಾರದು ಎಂದು ಹೇಳುವುದು ಸ್ತ್ರೀವಾದದ ಪ್ರಾರಂಭದ ಹಂತ. ಆದರೆ ಗೊಗ್ಗವ್ವೆ ಕೇವಲ ಸ್ತ್ರೀವಾದಿಯಾಗದೇ ಇದಕ್ಕಿಂತಲೂ ಉನ್ನತ ಭಾವ ತಾಳುತ್ತಾಳೆ ಅದೇ ಆಕೆಯ ಅನುಭಾವ "ಉಭಯವನಳಿದ ಸುಖಿಯಾಗುವದು" ಆಗ ಮಾತ್ರ ವ್ಯಕ್ತಿ ಪರಿಪೂರ್ಣನಾಗಲು ಸಾಧ್ಯ ಉಭಯವೆಂದರೆ ಗಂಡು–ಹೆಣ್ಣು, ಗುರು–ಶಿಷ್ಯ, ಆತ್ಮ–ಪರಮಾತ್ಮ, ಸತಿ–ಪತಿ ಈ ಎಲ್ಲ ಭಾವಗಳು ಲೌಕಿಕವಾದರೆ ಇವುಗಳನ್ನು ಮೀರಿ ಅಂದರೆ ಅಹಂಭಾವವನ್ನಳಿದು ಸಮಾನತೆಯ ಕಲ್ಪನೆ ಮೂಡಿದಾಗ ವ್ಯಕ್ತಿ ಶಕ್ತಿಯಾಗುತ್ತಾನೆ. ನರನು ಹರನಾಗುತ್ತಾನೆ.

ಗೊಗ್ಗವ್ವೆಯ ವಚನಗಳು ಸರಳವಾದರೂ ಬಿಗಿಯಾದ ಬಂಧದಿಂದ ಕೂಡಿವೆ.

"ಅನಲಕೊಂಡ ಭೋಗಕ್ಕೆ
ಪರಿಪ್ರಕಾರವುಂಟೆ?
ಶರಧಿಕೊಂಡ ಸಾಹರಕ್ಕೆ ಕುರುಹಿನ ತಲೆಯೆ
ಲಿಂಗ ಮುಟ್ಟಿದ ಅಂಗಕ್ಕೆ ಮತ್ತೆ ಪುಣ್ಯವುಂಟೆ ಹುಸಿ ನಾಸ್ತಿನಾಥ"

ಎಂಬ ವಚನದಲ್ಲಿ ಶಿವನೊಡನೆ ಬೆರೆತ ಜೀವ ತನ್ನ ಅಸ್ತಿತ್ವವನ್ನು ಗುಣವೈಶಿಷ್ಟ್ಯವನ್ನು ಕಳೆದುಕೊಳ್ಳುವ ಪರಿಯನ್ನು ವ್ಯಕ್ತಪಡಿಸುವುದು. ಕ್ರಿಯೆ, ಜ್ಞಾನ, ಲಿಂಗದ ಸಾಮರಸ್ಯ ಇವು ಲೌಕಿಕವನ್ನು ಮೀರಿ ಅಲೌಕಿಕದಲ್ಲಿ ನಿಂತವು. ಲಿಂಗಮುಟ್ಟಿದ ಅಂಗ ಪುಣ್ಯಪಾಪಗಳ ಸೀಮೆಯನ್ನು ದಾಟಿ ನಿಲ್ಲಬೇಕು ಎಂಬ ತಾತ್ಪರ್ಯ ಈ ವಚನದಲ್ಲಿದೆ. ಆ ನೇಮ ಆಚರಣೆಗಳು ಅಂತರಂಗದ ಸಾಕ್ಷಾತ್ಕಾರಕ್ಕೆ ಪೂರಕಗೊಂಡ ಸಾಧನವಾಬೇಕು. ಚರಿತ್ರೆಯಲ್ಲಿ ಕಂಡುಬರುವ ಗೊಗ್ಗವ್ವೆಯ ಪವಾಡ ಕಥೆಗಳನ್ನೆಲ್ಲ ನಾವು ವಾಸ್ತವಿಕ ದೃಷ್ಟಿಯಿಂದ ನೋಡಬೇಕು. ತನ್ನ ಶಿವಭಕ್ತಿ ಧ್ಯಾನದ ಮಾರ್ಗವಾಗಿ ಅರ್ಪಿಸುವ ಹೇಗೆ ನೇರವಾಗಿ ಮೇಲೇರುವಂತೆ ಈ ಆತ್ಮ ಶಿವನನ್ನು ಸೇರಿ ಒಂದಾಗಬೇಕು ಎಂಬ

ಶಿವಾನುಭವ ದೃಷ್ಟಿ ಅವಳಲ್ಲಿದೆ.

“ಭಕ್ತರು ಜಂಗಮದಲ್ಲಿ ಕಟ್ಟಿ ಹೊರಲೇಕೆ?
ಧೂಪದ ಹೊಗೆ ಎತ್ತ ಹೋದಡೂ ಸರಿ
ಇದು ಸತ್ಯವೆಂದೆ ನಾಸ್ತಿನಾಥ”

ಇವು ಭಯ, ಭಕ್ತಿ, ನಿಷ್ಠಿ ಏಕಾಗ್ರತೆಯಿಂದ ಕೂಡಿದ ಸಾಲುಗಳು. ಇವೆಲ್ಲವುಗಳಿಂದ ಪರಮಾತ್ಮನಿಗೆ ಅರ್ಪಿಸುವ ಧೂಪ ಎತ್ತ ಹೋದರೂ ಅದು ಪರಮಾತ್ಮನತ್ತಲೇ ಎಂಬುದು ಶಿವನ ದರ್ಶನ ಮಾಡಿಸಿದಂತೆ ಏಕಾಗ್ರತೆ ನೇರವಾಗಿ ಶಿವನನ್ನು ತಲುಪುತ್ತದೆ ಎಂಬ ಧ್ವನಿ ಇಲ್ಲಿದೆ. ಧೂಪದ ಹೊಗೆ ಎತ್ತ ಹೋದರೂ ಶಿವನೇ ನಿನ್ನತ್ತಲೇ ಎಂಬ ದೃಢ ನಂಬಿಕೆಯೇ ಸತ್ಯಶುದ್ಧವಾದ ಕಾಯಕ ತತ್ವ. ಪ್ರತಿಯೊಂದು ಅಣುಅಣುವಿನಲ್ಲೂ ಪರಮಾತ್ಮನ ಅಂಶವಿದೆ. ಆತ್ಮನ ಪರಿಶುದ್ಧತೆಯೇ ಪರಮಾತ್ಮನನ್ನೂ ಬೆರೆಯುವ ಮಾರ್ಗ ಎಂಬದು ಇಲ್ಲಿ ಸೂಚ್ಯವಾಗಿದೆ.

“ಮಾರುತನಲ್ಲಿ ಬೆರೆದ ಗಂಧದಂತೆ
ಸುರತದಲ್ಲಿ ಬೆರೆದ ಸುಖದಂತೆ
ಮಚ್ಚಿದಲ್ಲಿ ಕೊಡುವ ಉಚಿತದಂತೆ
ಭಕ್ತರಿಗೆ ಹಾದಿ ಎಂದೆ ನಾಸ್ತಿನಾಥ”

ಈ ವಚನದಲ್ಲಿ ಆತ್ಮ ಪರಮಾತ್ಮಗಳ ಸಾಮರಸ್ಯದ ಕುರಿತು ಹೇಳುತ್ತಾಳೆ. ಈ ವಚನದ ಅನುಭವ ಬಹುದೊಡ್ಡದು. ಗಂಧ ಗಾಳಿಯಲ್ಲಿ ಬೆರೆತಾಗ ಹೇಗೆ ಅದರ ಸುಗಂಧ ಹೆಚ್ಚುವದೋ ಹಾಗೇ ಗಂಡು ಹೆಣ್ಣಿನೊಡಗೂಡಿದಾಗಲೇ ಸುರತ ಸುಖದ ಅನುಭವವಾಗುತ್ತದೆ ಎಂದು ಲೌಕಿಕ ಉದಾಹರಣೆಗಳನ್ನು ನೀಡುತ್ತಾ ಗೊಗ್ಗವ್ವೆ ತನ್ನ ಅನುಭಾವವನ್ನು ವ್ಯಕ್ತಪಡಿಸುತ್ತಾಳೆ.

ಒಟ್ಟಿನಲ್ಲಿ ಇಡೀ ವಿಶ್ವಸಾಹಿತ್ಯವನ್ನು ಗಮನಿಸಿದಾಗ ವಚನಸಾಹಿತ್ಯದ ಕೊಡುಗೆ ಅನನ್ಯವಾಗಿದೆ. ಅದರಲ್ಲಿ ಅಂದಿನ ವಚನಕಾರ್ತಿಯರ ಚಿಂತನೆಗಳ ಸಾರಾಂಶವೆಂದರೆ ಸಂಸಾರದಲ್ಲಿದ್ದುಕೊಂಡೆ ಸಮಾಜದ ಮುಖ್ಯವಾಹಿನಿಯಲ್ಲಿ ಸ್ತ್ರೀ ಕೂಡಾ ಬದುಕಬಲ್ಲಳು ಎಂಬ ಸತ್ಯವನ್ನು ಅವರು ಅರಿಕೆ ಮಾಡಿಕೊಟ್ಟರು. ಅರಿಷಡ್ವರ್ಗಗಳ ನಿಯಂತ್ರಣ,ಕಾಯಕ–ದಾಸೋಹ ತತ್ವ ,ಸತ್ಯ–ಅಹಿಂಸೆ, ಸಾಂಪ್ರದಾಯಿಕ ಆಚರಣೆ–ಮೌಢ್ಯತೆಗಳ ಖಂಡನೆ ಹಾಗೂ ಯಜಮಾನ ಸಂಸ್ಕೃತಿಯ ನಿರಾಕರಣೆ ಮಾಡುವದರ ಜೊತೆಗೆ ಆಧುನಿಕ ಸ್ತ್ರೀವಾದದ ಎಲ್ಲ ಆಶಯಗಳನ್ನು ಅವರು ಅನುಭವಮಂಟಪದ ವೇದಿಕೆಯ ಮುಖಾಂತರ ಆಗಲೇ ಜಗತ್ತಿಗೆ ಪರಚಯಿಸಿದ ಹೆಮ್ಮೆಯು

ಸ್ತ್ರೀವಾದಿಗಳು.ಅಷ್ಟೇ ಅಲ್ಲದೇ ಇನ್ನೂ ಒಂದು ಸತ್ಯವನ್ನು ಮರೆಯುವ ಹಾಗಿಲ್ಲ.ಅದೇನೆಂದರೆ ಪ್ರಾಚೀನ ಕಾಲದಿದಲೂ ಅವಜ್ಞೆಗೊಳಗಾದ ಸ್ತ್ರೀ ಅದು ಹೇಗೆ ತಾನೇ ಹನ್ನೆರಡನೇ ಶತಮಾನದಲ್ಲಿ ಮುಖ್ಯವಾಹಿನಿಗೆ ಬರಲು ಸಾಧ್ಯವಾಯಿತು? ಎಂಬ ಪ್ರಶ್ನೆ.ಹೌದು ಅದು ಸಾಧ್ಯವಾದದ್ದು ಅವರಿಗೆ ಬೆಂಬಲವಾಗಿ ನಿಂತ ಬಸವಾದಿ ಶರಣರಿಂದ. ಬೇಧರಹಿತ ಸರ್ವಸಮಾನ ಸಮಾಜಕಟ್ಟಬಯಸಿದ ಶರಣರು ಧರ್ಮಾಚರಣೆಗೆ ಮಹಿಳೆ ತೊಡಕಾಗಿದ್ದಾಳೆ ಎಂಬ ಚಾತುರ್ವರ್ಣ ನೀತಿಯನ್ನು ಖಂಡಿಸಿದರು. ಧಾರ್ಮಿಕ,ಸಾಮಾಜಿಕ,ಆರ್ಥಿಕ,ಆಧ್ಯಾತ್ಮಿಕ ಹಾಗೂ ಅನುಭಾವಿಕ ಹೀಗೆ ಎಲ್ಲ ನೆಲೆಗಳಲ್ಲಿಯೂ ಮಹಿಳೆ ಮಹಿಳೆಯ ಅಗತ್ಯತೆಯನ್ನು ಅವರು ಗುರುತಿಸದರು.

ಗ್ರಂಥ ಋಣ :

1. ಕಲಬುರ್ಗಿ ಎಂ. ಎಂ(ಸಂ); ಬಸವಯುಗದ ವಚನ ಮಹಾಸಂಪುಟ; ಕನ್ನಡ ಪುಸ್ತಕ ಪ್ರಾಧಿಕಾರ; 2016; ಬೆಂಗಳೂರು.
2. ನಾರಾಯಣ. ಪಿ. ವಿ; ವಚನ ಸಮಸ್ತ; 2017; ಸ್ವಪ್ನ ಬುಕ್ ಹೌಸ್; ಬೆಂಗಳೂರು.
3. ಚಿದಾನಂದ ಮೂರ್ತಿ. ಎಂ; ವಚನ ಸಾಹಿತ್ಯ; 2010; ಸ್ವಪ್ನ ಬುಕ್ ಹೌಸ್; ಬೆಂಗಳೂರು.
4. ಗೋವಿಂದ ಗಿರಡ್ಡಿ; ವಚನ ವಿನ್ಯಾಸ; 2011; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
5. ಶ್ರೀನಿವಾಸಮೂರ್ತಿ ಎಂ.ಆರ್; ವಚನ ಧರ್ಮಸಾರ; 2009 ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
6. ಸಿದ್ಧಲಿಂಗಯ್ಯ ಜಿ.ಎಸ್; ವಚನ ಸಾಹಿತ್ಯ ಒಂದು ಹಕ್ಕಿನೋಟ; 2012; ಬೆಂಗಳೂರು.

***

ಶ್ರೀರಾಮಾಯಣ ದರ್ಶನಂ ಮಹಾಕಾವ್ಯದಲ್ಲಿನ ಮಹಿಳಾ ಪಾತ್ರಗಳ ವಿಶ್ಲೇಷಣೆ

1
ಡಾ. ಪೂರ್ಣಿಮಾ ಎಸ್.
ಕನ್ನಡ ಸಹಪ್ರಾಧ್ಯಾಪಕಿ, ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್, ಕೆಂಗೇರಿ ಉಪನಗರ, ಬೆಂಗಳೂರು–560060.
poornimasmuniraju@gmail.com

ಮಹಾಕವಿ ಕುವೆಂಪುರವರು ಒಂದೊಂದು ದಿನದಲ್ಲಿ ಒಂದೊಂದು ನಾಟಕವನ್ನು ರಚಿಸುವ ಸಾಮರ್ಥ್ಯವಿದ್ದವರು. ವಿವಾಹ ಪೂರ್ವದಲ್ಲಿಯೇ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಸೃಜಿಸಲು ಪ್ರಾರಂಭಿಸಿ 'ಭರತವಾತ ಸಂಚಿಕೆ' ಬರೆಯುವಾಗ ವಿವಾಹವಾಗಿ ಮಧುಚಂದ್ರದ ಮತ್ತಿನಲ್ಲಿ "ಜೇನಾಗುವ ಬಾ, ಬಾ ನಲ್ಲೆ ಮಧುಚಂದ್ರಕೆ" ಇತ್ಯಾದಿ ಸುಮಧುರ ಕವನಸಂಕಲಗಳು ಹೆಚ್ಚು ರಚನೆಗೊಂಡು ಅನಂತರ 1936 ರಿಂದ 1946ರವರೆಗೂ ಶ್ರೀ ರಾಮಾಯಣ ದರ್ಶನಂ ಕಾವ್ಯರಚನೆ ಮುಂದುವರಿಸಿದ್ದಾರೆ.

"ಪಾಪಿಗುದ್ಧಾರಮಿಹುದ್ವೂಹ ರಚನೆಯೊಳ್" ಎಂಬ ದರ್ಶನ ಧ್ವನಿ ಕಾವ್ಯದುದ್ದಕ್ಕೂ ಪ್ರತಿಧ್ವನಿಯಾಗಿ ಮಿಳಿತಗೊಂಡಿದೆ. ಮನುಜಮತ–ವಿಶ್ವಪಥ–ಸರ್ವೋದಯ ಮೊದಲಾದ ಪರಿಕಲ್ಪನೆಗಳನ್ನು ಜೀರ್ಣಿಸಿಕೊಂಡಿರುವ

ಪರಿಪೂರ್ಣದೃಷ್ಟಿಯ ಈ ಮಹಾಕಾವ್ಯ ಭಾರತೀಯ ಸಂಸ್ಕೃತಿಗೆ ತಿಲಕಪ್ರಾಯವೆನಿಸುವ ಸಾರ್ವಕಾಲಿಕ ಅನನ್ಯ ಕೃತಿಯಾಗಿದೆ.

ದಶರಥ– ಕೌಸಲ್ಯೆರಿಬ್ಬರೂ ಶ್ರೀರಾಮನ ಯುವರಾಜ್ಯಾಭಿಷೇಕದಲ್ಲಿ ಆಸಕ್ತರ. ಕೈಕೆಯಿ–ಮಂಥರೆ ಭರತನ ಹಿತಾಸಕ್ತಿಗಳ ರಕ್ಷಣೆಯಲ್ಲಿ ಅನುರಕ್ತರು. ದುಡುಕು, ಶೀಘ್ರಕೋಪ, ತೀವ್ರ ಭಾವುಕತೆ ಮತ್ತು ಉಗ್ರ ಭ್ರಾತೃನಿಷ್ಠೆಯ ಲಕ್ಷ್ಮಣ; ಅಣ್ಣ ರಾಮನ ಸಮಯಪ್ರಜ್ಞೆ, ಸಂಯಮ, ದೂರದೃಷ್ಟಿ, ತಾರತಮ್ಯ ವಿವೇಕಜ್ಞಾನ, ಸ್ವಾರ್ಥತ್ಯಾಗ ಮತ್ತು ಲೋಕಕಲ್ಯಾಣಗಳ ಬೆಳಂದಿಗಳಲ್ಲಿ ಮಿಂದು ತನ್ನ ಸಿಡುಕುತನವನ್ನು ಮಾಗಿಸಿಕೊಳ್ಳುತ್ತಾನೆ. ಸೀತೆಯನ್ನು ಮೋಸದಿಂದ ಅಪಹರಿಸಿದ ರಾವಣನ ಕುರಿತು ಅತೀವ ಕೋಪಾವೇಶಗಳಿದ್ದರೂ ರಾಮನು ಸಂಯಮದಿಂದ ವರ್ತಿಸುತ್ತಾನೆ. ಪತಿಯೊಂದಿಗೆ ಕಾಡಿಗೆ ಹೊರಟ ಸೀತೆ; ಜರ್ಝರಿತ ಮನಸ್ಕರಾದ ಅತ್ತೆ–ಮಾವಂದಿರಿಗೆ ತನ್ನಿಂದಲೂ ಮತ್ತಷ್ಟು ದುಃಖ ಪ್ರಾಪ್ತವಾಗಬಾರದೆಂದು ಅಲ್ಲಿಯೇ ಉಳಿದು ಅವರೆಲ್ಲರ ಯೋಗಕ್ಷೇಮಕ್ಕಾಗಿ ತಪೋನಿರತಳಾದವಳು ಊರ್ಮಿಳೆ. ಪರಸ್ಪರರ ಸುಖ–ಸಂತೋಷ–ನೆಮ್ಮದಿಗಾಗಿ ಸದಾ ಕಾತರರು. ಸೀತೆಯ ಪರಮೋದ್ದೇಶ ರಾಮಮಂಗಲ, ಮಂಡೋದರಿಯ ಪರಮೋದ್ದೇಶ ರಾವಣ ಕ್ಷೇಮ. ವಿಭೀಷಣನ ಮಗಳಾದ ಅನಲೆಗೆ ದೊಡ್ಡಪ್ಪನೆಂದರೆ ವಾತ್ಸಲ್ಯ, ಅಪ್ಪನ ಬಗ್ಗೆ ಮಮತೆ. ವಿಭೀಷಣನು ಅಣ್ಣನೊಡನೆ ಸಂಘರ್ಷ ಮಾಡಿ ರಾಮನೆಡೆಗೆ ತೆರಳಿದಾಗ ಅನಲೆ ಅಂತಃಪುರದಲ್ಲೇ ಉಳಿಯುತ್ತಾಳೆ. ಯಾವ ನಿರ್ಬಂಧಗಳಿಲ್ಲದ ಎಲ್ಲರ ಪ್ರೀತಿ–ವಿಶ್ವಾಸಗಳಿಗೆ ಬದ್ಧಳಾದ ಸುವರ್ಣಸೇತುವೆ ಅನಲೆಗೆ ಸೀತೆಯ ಬಗ್ಗೆ ಪೂಜ್ಯಭಾವ. ವಿಭೀಷಣನಿಗೂ ಅಣ್ಣನೆಂದರೆ ತುಂಬಾ ಗೌರವಾದರ ತಾಯ್ನಾಡಿನ ಕುರಿತ ಅಪಾರ ಪ್ರೇಮದೊಂದಿಗೆ ರಾಮನ ಪ್ರಜ್ಞಾತೀತದ ಬಗೆಗೆ ಒಲವು. 'ಕಾಮಾತುರಾಣಾಂ ನ ಭಯಂ ನ ಲಜ್ಜಾ' ಎಂಬಂತೆ ಸೀತೆಯ ಬಗೆಗಿನ ಕಾಮ–ಮೋಹಗಳು ಜ್ಞಾನಿಯೂ, ಪ್ರತಿಭಾವಂತನೂ ಆದ ರಾವಣನನ್ನು ಅಧೋಗತಿಗೆಳೆಯುತ್ತದೆ. ಆದರೆ ರಾವಣನಿಗೂ ತನ್ನ ತಪ್ಪು ಗೊತ್ತಾಗಿಯೇ ಅಪ್ರಜ್ಞಾಪೂರ್ವಕವಾಗಿಯಾದರೂ ಸೀತೆಯ ಮಡಿಲಲ್ಲಿ ಅಳುತ್ತಾ ರಾವಣತ್ವವನ್ನು ಅದುಮಿಟ್ಟು ರಾಮತ್ವಕ್ಕೆ ಶರಣಾಗುತ್ತಾನೆ.

ಪ್ರಮುಖ ಪದಗಳು

ಶ್ರೀ ರಾಮಾಯಣ ದರ್ಶನಂ, ಶಬರಿ, ಮಂಥರೆ, ಕೌಸಲ್ಯೆ, ತಾರೆ, ಸೀತೆ, ಅನಲೆ, ಚಂದ್ರನಖಿ, ತ್ರಿಜಟೆ, ಧಾನ್ಯಮಾಲಿನಿ

ಕುವೆಂಪು ಹೇಳುವಂತೆ "ಜಗದೊಳಗೆ ಒಂದು ರಾಮಾಯಣವಲ್ಲ; ವಾಲ್ಮೀಕಿ ಒಬ್ಬನೆ ಕವಿಯಲ್ಲ; ಜಗದೊಳಗೆ ಎನಿತೊ ರಾಮಾಯಣಂಗಳ ಒಲವು, ಕನ್ನಡಿಗರೆಲ್ಲರಿಗೂ ತಿಳಿದಿರುವ ವಿಷಯ. ಆದರೆ ಈ ಎನಿತು ರಾಮಾಯಣಂಗಳಲ್ಲಿ ಇಲ್ಲದಂತಹ ಹೆಣ್ಣಿನ ಸೂಕ್ಷ್ಮಾತಿ ಸೂಕ್ಷ್ಮವಾದ ಸ್ತರಗಳನ್ನ ಶೋಧಿಸುವ ಕೃತಿಯಾಗಿ ನಮಗೆ ರಾಮಾಯಣ ದರ್ಶನಂ ಮುಖ್ಯವಾಗುತ್ತದೆ. ಸ್ತ್ರೀ ಪಾತ್ರಗಳನ್ನು ನೋಡುವ ಸಂದರ್ಭದಲ್ಲಿ ಕುವೆಂಪುರವರು ಒಂದು ಹುಡುಕಾಟವನ್ನು ನಡೆಸುತ್ತಾರೆ. ಆ ಹುಟುಕಾಟ ಹೆಣ್ಣಿನ ಶಕ್ತಿಯ ಕೇಂದ್ರ ಯಾವುದಾಗಿದ್ದರೆ ಇಡೀ ಪ್ರಪಂಚವನ್ನು ಸಲಹುವ ತನ್ನ ಸುತ್ತಲಿರುವ ಲೋಕವೊಂದು ಅತ್ಯಂತ ಅಸಮತೋಲನದಲ್ಲಿ ಇದ್ದಾಗಲೂ ಕೂಡ ಅದನ್ನು ಧರಿಸುವಂತ 'ಧೀ ಶಕ್ತಿ' ಹೆಣ್ಣಿನೊಳಗೆಲ್ಲಿದೆ ಎಂದು ಹುಡುಕುವ ಸಂದರ್ಭದಲ್ಲಿ ತಿಳಿಯುವ ಒಂದು ಪ್ರಮುಖ ಅಂಶವೆಂದರೆ "ಹೆಣ್ಣಿನ ತಾಯ್ತನ".

ಮಹಿಳಾ ಪಾತ್ರಗಳ ವಿಶ್ಲೇಷಣೆ

ಶಬರಿ:

ರಾಮನಿಗಾಗಿ ಕಾಯುವ ಶಬರಿ ತಾಯ್ತನಕ್ಕೆ ಕೊಡುವ ವಿಸ್ತಾರವಾದ ಅಂಶವನ್ನು ಗಮನಿಸಿ; ತಾಯಿ ಅನ್ನುವುದು ಮನೋಧರ್ಮದ ಸ್ಥಿತಿಯದು. ತಾಯಿತನವನ್ನು ಶಬರಿ ತಾಯಿತನ, ಮಂಥರೆಯ ತಾಯಿತನ, ತಾರೆಯ ತಾಯಿತನ ಹಲವು ತಾಯಿತನಗಳ ನೆಲೆಗಳಿಲ್ಲಿ ತೆರೆದುಕೊಳ್ಳುತ್ತಾ ಸಾಗುತ್ತವೆ.

ಮಂಥರೆ:

ಮಂಥರೆಯನ್ನು ಕೇಕೆಯ ರಾಜ ತಂದಾಗ ಅದೊಂದು ದಸ್ಯು ಕೂಸು; ಅತ್ಯಂತ ವಿಕಾರವಾದ ಮಗು; ವಿಕೃತಿಯಾಗಿ ಕಾಣುವಂತ ಮಗು. ಆ ಗೂನುಬೆನ್ನಿನ ಕುರೂಪಿಯಾದವಳಿಗೆ 'ಮಂಥರೆ' ಎಂದು ಹೆಸರನ್ನ ಕೊಟ್ಟಿತಂತೆ ಅರಮನೆ. ಹೇಗೆಂದರೆ "ಮುಖಕ್ಕೆ ಕೆಸರನ್ನೆರಚುವ ಹಾಗೆ ಆದರೆ ಪ್ರೇಮದ ತೀವ್ರವಾದ ಕೊರತೆಯಲ್ಲಿ ಬಾಳುವ ಮಂಥರೆಗೆ ಅದನ್ನು ತುಂಬಿಕೊಟ್ಟ ಕೇಕೆಯ ರಾಜ ತನ್ನ ಮಗಳು ಕೈಕೆಯನ್ನು ನೋಡಿಕೊಳ್ಳುವ ಕೆಲಸವನ್ನು ಮಂಥರೆಗೆ ವಹಿಸಿದ್ದನ್ನು ಕುವೆಂಪು ಪ್ರಕಾರ ತನ್ನಲ್ಲಿ ಇಲ್ಲದ ಚೆಲುವನ್ನ ಕೈಕೆಯಲ್ಲಿ ನೋಡುತ್ತಾ ನೋಡುತ್ತ ಆ ಮಗು ಹೇಗೆ ಬೆಳೆತೆಂದರೆ. "ಹಾಲ್ಗಡಲಿನಲ್ಲಿ ಓಡಾಡುವ ಇದ್ದಿಲಿನ ಚೂರಿನಂತೆ" ಮುಂದೆ ಕೊಸಲಕ್ಕೆ ಬಂದಂತ ಮಂಥರೆಯನ್ನ ಕುವೆಂಪುರವರು ಕೊಡುವ ಆ ಪ್ರತಿಮೆಯನ್ನ ಗಮನಿಸಿ; "ಕಬ್ಬಿಣದ ಕೆಲಸ ಮಾಡುವ ಕಮ್ಮಾರನ ಸುತ್ತಿಗೆಯ ಏಟು ತಿನ್ನುವ ಕಲ್ಲು ಚಪ್ಪಡಿಯ ಹಾಗೆ" ಕೊಸಲದಲ್ಲಿ ಬದುಕಿದ್ದಳು ಮಂಥರೆ. ಯಾವುದೊ ಕಬ್ಬಿಣ ಅಣಿಯಾಗಬೇಕಿದೆ,

ಯಾವುದೊ ಮೆತ್ತಗಾಗಬೇಕಿದೆ, ಯಾವುದೊ ಸರಿಯಾಗಬೇಕಿದೆ. ಆದರೆ ಏಟು ತಿನ್ನುವುದು ಮಾತ್ರ ಆ ಕೆಳಗಿನ ಚಪ್ಪಡಿ. ಯಾವುದೊ ಹೆಣ್ಣು ಮಗಳಿಗೆ ಯಾರನ್ನೊ ಬೈಯಬೇಕಿದೆ ಎಲ್ಲದಕ್ಕೂ ಮಂಥರೆಯೊಂದು ಉಪಮೆ. ಆ ಘಟನೆ ನಮಗೆಲ್ಲರಿಗೂ ತಿಳಿದಿರುವಂತಹದು. "ಪುಟ್ಟರಾಮ ಆ ಚಂದ್ರನಿಗಾಗಿ ಹಠ ಮಾಡುತ್ತಾನೆ. ಅಳುತ್ತಾನೆ. ಯಾರಿಗೂ ಸಮಾಧಾನ ಮಾಡಲು ತಿಳಿಯದಿದ್ದಾಗ; ತನ್ನ ಮಡಿಲಲ್ಲಿರುವ ಮುಕುರವನ್ನು ತೆಗೆದು ಕೈಕೆಗಿತ್ತು ಚಂದ್ರನನ್ನ ತೊರಿಸಲು ಪಿಸುಮಾತಿನಲ್ಲಿ ಹೇಳುತ್ತಾಳೆ ಮಂಥರೆ. ನಂತರ ನಲಿಯುತ್ತಿದ್ದ ರಾಮನನ್ನು ಮುದ್ದಿನಿಂದ 'ಬಾ ಮಗು' ಎಂದು ಅಪ್ಪಿಕೊಳ್ಳಲು ಹೋದಾಗ ಕೌಸಲ್ಯ ಚಿ: ಸರಿ ಆಚೆಗೆ ಅಂದಾಗ ಎಡೆ ತುಳಿದ ಸರ್ಪಿಣಿಯಂತಾದಳು ಮಂಥರೆ. ಈ ಪುಟ್ಟ ಘಟನೆ ಮುಂದಿನ ಯಾವುದೋ ಘಟನೆಗೆ ಶ್ರೀಕಾರವನ್ನ ಬರೆತಿದೆಯೆನೋ ಅನ್ನುವಂತೆ, ಭರತನನ್ನು ಮಂಥರೆ ಹೇಗೆ ಸಾಕುತ್ತಾಳೆಂದರೆ. "ಹಡೆದ ತಾಯಿಯೂ ನಾಚುವ ಹಾಗೆ" ಕೈಕೆಗೆ ಭರತ ಗೊತ್ತಿರುವುದಕ್ಕಿಂತ ಹೆಚ್ಚು ಗೊತ್ತು ಭರತನ ಬಗ್ಗೆ ಮಂಥರೆಗೆ ಗೊತ್ತು. ಆ ಪ್ರೇಮ ವಾಹಿನಿಯಲ್ಲಿ ಭರತ ತೇಲಾಡುತ್ತಾನೆ. ಆ ಕಾರಣಕ್ಕಾಗಿಯೇ ಹಿಡೀ ಮುಂದಿನ ಘಟನೆಗೆ ಬೀಜ ರೂಪವಾದಂತಹ ಒಂದು ಸಂಗತಿ ಮಂಥರೆಯಿಂದ ನಡೆಯಿತೆಂಬುದು ನಮ್ಮೆಲ್ಲರಿಗೂ ಗೊತ್ತು ಆದರೆ ಗಮನಾರ್ಹ ಸಂಗತಿಯೆಂದರೆ ದಶರಥ ಮಾಡಿದ್ದು ಸರಿನಾ? ಎಂಬ ಪ್ರಶ್ನೆಯನ್ನು ಕುವೆಂಪು ಎತ್ತಿದ್ದಾರೆ. ಏನೆಂದರೆ ಒಂದು ದಿನ ಮಂಥರೆ ಮಲಗಿದ್ದಾಗ ಕನಸಿನಲ್ಲಿ ಕೈಕೆ ವಿಧವೆಯೋಪಾದಿಯಲ್ಲಿ ಬೀದಿಬೀದಿ ಅಲೆಯುತ್ತಿರುವಂತೆ ಕನಸ್ಸಾಗುತ್ತೆ ಆ ಕನಸಿನಿಂದ "ಅಯ್ಯೋ ಕಂದಾ" ಎಂದು ಮಂಥರೆ ಕಣ್ತೆರೆದಾಗ ಹೊರಗೆ ಮಂಗಳ ವಾದ್ಯಗಳ ಶಬ್ದ ಕೇಳಿಸಿ ರಾಮನಿಗೆ ಪಟ್ಟಾಭಿಶೇಕದ ಸುದ್ದಿ ತಿಳಿಯುತ್ತೆ. ಆಗಿದ್ದರೆ ಶ್ರೀರಾಮನ ಪಟ್ಟಾಭಿಶೇಕವನ್ನು ನಿರ್ಣಯ ಮಾಡುವ ದಶರಥ ಅಂತ:ಪುರದ ಹೆಣ್ಣುಮಕ್ಕಳನ್ನೇಕೆ ತನ್ನ ನಂಬಿಕೆ ತೆಗೆದುಕೊಂಡಿಲ್ಲ. ಏಕೆನ್ನು ವಿಷಯವೇ ಗೊತ್ತಿಲ್ಲ. ರಾಜ್ಯಕ್ಕೇಲ್ಲಾ ತಿಳಿದ ಮೇಲೆ ವಿಷಯ ಏಕೆ ಗೊತ್ತಾಗುತ್ತೆ. ಒಂದೊಮ್ಮೆ ದಶರಥ ಈ ಸಮಸ್ಯೆಯನ್ನ ಮೊದಲೆ ಪರಿಹರಿಸದಿದ್ದರೆ ರಾಮಾಯಣದ ಮುಂದಿನ ಘಟನೆಗಳು ನಡೆಯುತ್ತಿದ್ದವೆ? ಅನ್ನುವಂತ ಪ್ರಶ್ನೆ. ಏಕೆಂದರೆ "ಒಂದೇ ಗೊಂಚಲ ಹೂಗಳಂತೆ ಬದುಕಿದ್ದರು ನಾಲ್ವರು ಸಹೋದರರು" ಅನ್ನುವಾಗ ಇದು ಸರಿ. ಆದರೆ ಭರತ, ಲಕ್ಷ್ಮಣ, ಶತ್ರುಘ್ನರು ಯಾರಾದರೂ ತಮ್ಮ ಹಕ್ಕೊತ್ತಾಯದ ಮಾತುಗಳನ್ನು ಎತ್ತಿದ್ದರೆ ಆಗ ಪಿತೃಪ್ರಧಾನ ವ್ಯವಸ್ಥೆ ಅದನ್ನು ಹೇಗೆ ಬಗೆಹರಿಸಬೇಕಾಗುತ್ತೆ. ಮಂಥರೆ ಈ ಪ್ರಶ್ನೆಯನ್ನ ಎತ್ತುತ್ತಾಳೆ ಕೈಕೆಯನ್ನು ತಿದ್ದುತ್ತಾಳೆ. "ಮಕ್ಕಳು ನಾಲ್ವರು ನನಗೆ" ಎನ್ನುವ

ಕೈಕೆ ಭರತನೇನು? ರಾಮನೇನು? ಎಂದು ಕೈಕೆ ಹೇಳಿದರೂ ಕೂಡ ಅದನ್ನ ಮತ್ತೆ ಮತ್ತೆ, ತಿದ್ದುವ ತನ್ನ ಆ ಮಾತೃತ್ವದ ಪ್ರೇಮಕ್ಕೆ ಒಂದು ಉಪಾದಿಯನ್ನ ರೂಪಿಸಿಕೊಳ್ಳಲಿಕ್ಕೆ ಮಂಥರೆ ಹೊರಡುತ್ತಾಳೆ, ಆದರೆ ಮಂಥರೆಯ ಈ ದೂಷಣೆ ಕೊನೆಗೆ ದಶರಥನ ಸಾವಾದ ಮೇಲೆ ಮಂಥರೆ ಏನಾದಳು? ಮಂಥರೆ ಆಸ್ಥಾನದಿಂದ ಕಾಡು ಹಾದಿ ಹಿಡಿದು ಹೋಗಿ ಬಿಡ್ತಾಳೆ. ಅಲ್ಲೆಲ್ಲೊ ಕಂಡ ಕಾಡ್ಗಿಚ್ಚನ್ನ "ಮಗನೇ ಭರತಾ" ಅಂತ ಹೋಗಿ ಅಪ್ಪಿ ಆ ಕಾಡ್ಗಿಚ್ಚಿನಲ್ಲಿ ಬೆಂದು ಹೋಗ್ತಾಳಂತೆ "ಸುಟ್ಟುರಿದ ಚಿಟ್ಟೆಯ ಹಾಗೆ". ಆದರೆ ಇವು ಪಾತ್ರಗಳಲ್ಲ ಪ್ರಜ್ಞಾಸೇತುಗಳ ಹಾಗೆ. ಏಕಿವು ಪ್ರಜ್ಞಾಸೇತುಗಳೆಂದರೆ ಹಿಡೀ ರಾಮಾಯಣ ದರ್ಶನಂನ ಕಟ್ಟಕಡೆಗೆ; ಕೊನೆಗೆ ಬಂದರೆ; ಇನ್ನೂ ರಾಮ ಲಕ್ಷ್ಮಣರು ಆಗಮಿಸಿಲ್ಲ ಅಂತ ನೋವನ್ನನುಭವಿಸುತ್ತಿರುವ ಭರತ ಚಿತೆಯನ್ನ ಸಿದ್ಧಪಡಿಸಿ ತನ್ನನ್ನ ಹತ್ಯೆ ಮಾಡಿಕೊಳ್ಳಲು ಮಾಡಬೇಕೆನ್ನುವಷ್ಟರಲ್ಲಿ ಆಕಾಶ ಮಾರ್ಗದಿಂದ ಒಂದು ದನಿ ಕೇಳುತ್ತದೆ. ಒಂದು ಅದ್ಭುತವಾದ ಸುಂದರ ಸ್ತ್ರೀ ಕಾಣುತ್ತಾಳೆ. "ನಿಲ್ಲು ಭರತ ನಿನ್ನಣ್ಣ ಬರುವನಿದ್ದಾನೆ ದುಡುಕಬೇಡ ಎಂದಾಗ; ಭರತ ಕೇಳ್ತಾನೆ, ಯಾರು ನೀನು? ಅದಕ್ಕೆ ಮಂಥರೆ ನಿನ್ನನ್ನು ತಡೆಯುವ ನಾನು ಯಾರು ಗೊತ್ತಾಗೊಲ್ವೆ? ನಾನು 'ಮಂಥರೆ'. ನೀನು ಮಂಥರೆಯೇ? ಸುಳ್ಳು ಹೇಳ್ತಾ ಇದ್ದಿಯಾ ಎಂದು ಭರತನೆಂದಾಗ "ಇಲ್ಲ ಕಂದ ನಾನೇ ಮಂಥರೆ" ಆ ವಿಕೃತಿಯನ್ನ ಕಳೆದುಕೊಂಡ ನಾನೇ ಬರೀ ಬೆಳಕಾದ ಮಂಥರೆ" ಇದು ಕುವೆಂಪು ಕೊಡುವ ತಾಯ್ತನದ ಅದ್ಭುತವಾದ ರೂಪಕ. ಹೊರಗಿನ ಬಾಹ್ಯ ವಿಕೃತಿಗಳೆಲ್ಲಾ ಕಳೆದು ಬೆಳಕಿನ ಚಿಲುಮೆ ಆಗುವ ಮಂಥರೆ ಭರತನ ಆತ್ಮದಲ್ಲಿ ಭರತನ ಪ್ರಜ್ಞೆಯೊಳಗೆ ಬೆರೆತು ಹೋಗಿದ್ದಾಳೆ. ಭರತನಿಗೆ ತಾಯಿ ಎಂದರೆ 'ಕೈಕೆ' ಎಷ್ಟೊ, ಮಂಥರೆಯೂ ಅಷ್ಟೆ. ಮುಂದಿನ ಲೋಕಕ್ಕೂ ಕೂಡ ತಾಯಿ ಎಂದರೆ ಕೌಸಲ್ಯ, ಕೈಕೆ, ಸುಮಿತ್ರೆಯರೆಷ್ಟೊ ಅದಕ್ಕೂ ಹೆಚ್ಚು ಮಂಥರೆ ಅನ್ನುವುದನ್ನ ರಾಮಾಯಣ ದರ್ಶನಂ ಕಾವ್ಯ ನಿರೂಪಿಸುತ್ತದೆ.

ಕೌಸಲ್ಯೆ:

ಕೌಸಲ್ಯೆಗೆ ರಾಮನೆಂದರೆ ಅದೆಂಥ ಹಿಗ್ಗು. ಶಿಶುವಾಗಿದ್ದ ರಾಮ; ಇನ್ನೂ ನಗು ಅಳುಗಳನ್ನ ಕಲಿಯದಿರುವ ಮಗುವನ್ನು ಮುದ್ದಿಸಿ, ಮುದ್ದಿಸಿ ನಗು ಕಲಿಸಿದವಳಂತೆ ಕೌಸಲ್ಯೆ. ರಾಮನನ್ನ ಕೌಸಲ್ಯೆ ಸಾಕಿದ್ದು ಹಾಗೆ. ಗುರುಗಳ ಹಿಂದೆ ರಾಮ ಹೊರಡ್ತಾನೆನ್ನುವಾಗ ನೋವಾಗುತ್ತೆ ಅವಳಿಗೆ. ವನವಾಸಕ್ಕೆ ರಾಮ ಹೊರಟಾಗ ದಿಕ್ಕೆಡುತ್ತಾಳೆ ಕೌಸಲ್ಯೆ. ಆದರೆ ಭರತ ಬಂದಾಗ ಅಪ್ಪಿಕೊಳ್ಳುತ್ತಾಳೆ. "ಬಾ ಮಗನೆ ಕತ್ತಲು ತುಂಬಿದ ಕಾವಳಕ್ಕೆ ದೀಪದ ಹಾಗೆ ಬಂದಿದ್ದೀಯಾ. ನಿನ್ನನ್ನು ನೋಡ್ತಾ

ನೋಡ್ತಾ ವಲ್ಕಲವನ್ನು ಉಟ್ಟು ಹೋದಂಥ ಆ ಮಕ್ಕಳನ್ನ ನಿನ್ನನ್ನು ನೋಡಿ ಮರೆತಿನಿ ಮಗನೆ" ಎನ್ನುತ್ತಾ ಕೌಸಲ್ಯೆ ಭರತನಿಗೆ ಹೇಳುತ್ತಾಳೆ; ಲಜ್ಜೆಗೆಡದಿರು ನಿನ್ನ ತಾಯಿಯು ಬಗ್ಗೆ; ಅವಳು ಕೇವಲ ನಿಮಿತ್ತ ಮಾತ್ರಳು. ಇದು ಕೌಸಲ್ಯೆಯ ತಾಯಿತನ ಕೈಕೆಯಿಂದ ಇಷ್ಟೆಲ್ಲಾ ಅವಘಡಗಳು ಘಟಿಸಿತು ಎಂಬ ಮಾತು ಕೌಸಲ್ಯೆಯಲ್ಲಿ ಬರುವುದಿಲ್ಲ ಎಂಬುದು ನಿಜವಾದ ತಾಯಿತನದ ವಿಸ್ತರಣೆ ಎಂಬುದನ್ನು ಗಮನಿಸಬೇಕು.

ತಾರೆ:

ಕದನ ನಡೆದು ಹೋಯಿತು ಮುಗಿದು ಹೋಯಿತು ಎಲ್ಲವು ಮುಗಿದ ಮೇಲೆ ರಾಮನಿಗೆ ಗೊತ್ತಾಗುತ್ತೆ. ರಾಮನಿಗೆ "ನಾನು ತಪ್ಪು ಮಾಡಿದೆ" ವಾಲಿ ಬದಲಾಗಿದ್ದ ಸುಗ್ರೀವನಿಂದ ಹೊತೋಯ್ದು ರುಮೆಯನ್ನೆ ತನ್ನ ಮಗಳಂತೆ ನೋಡಿಕೊಂಡಿದ್ದ. ಯುದ್ಧಾ ನಂತರ ರುಮೆಯನ್ನ ಸುಗ್ಗೀವನಿಗೆ ಕಾಣಿಕೆ ಕೊಡಬೇಕೆಂದುಕೊಂಡಿದ್ದೆ ಮರೆಯಲ್ಲಿ ನಿಂತು ಬಾಣ ಪ್ರಯೋಗಿಸಿದೆಯೆಲ್ಲಾ? ಎಂದು ರಾಮನನ್ನು ವಾಲಿ ಕೇಳುತ್ತಾನೆ. ತಾರೆಗೆ ಗೊತ್ತಿತ್ತು ವಾಲಿ ಎಂತವನು ಎನ್ನುವುದು; ರುಮೆಯನ್ನ ನಾವು ಹೇಗೆ ನೋಡಿಕೊಂಡಿದ್ದೇವೆ ಎನ್ನುವುದು ಇದೆಲ್ಲಾ ಗೊತ್ತಿದ್ದು ಕೂಡ ವಾಲಿ ಮರಣ ಹೊಂದಿದ್ದಾಗ ತಾರೆ ಎದುರಿನಲ್ಲಿ ವಾಲಿ "ದಶರಥಾತ್ಮಜನಾದ ಶ್ರೀರಾಮ ಕಣ್ಣೀರು ಹಾಕುತ್ತಾ ತಪ್ಪನ್ನ ಒಪ್ಪಿಕೊಳ್ಳುವಾಗ ವಾಲಿ ದೊಡವನು ನೀನು ದಶರಥಾತ್ಮಜ. ಕೇಳಿದ್ದೆ, ನಿನ್ನ ಬಗ್ಗೆ; ಆದರೆ ಸೋತು ಕಣ್ಮುಚ್ಚುವವನ ಎದುರು ತಪ್ಪನ್ನ ಒಪ್ಪಿಕೊಳ್ಳುತ್ತಿದ್ದೇಯಲ್ಲಪ್ಪ ಎಷ್ಟು ದೊಡ್ಡವನು ನೀನು". ತಾರೆ ಚಿತೆ ಪ್ರವೇಶ ಮಾಡುವಾಗ ಬರುವ ಪುಟ್ಟ ಭಾಗದಲ್ಲಿ "ತಾರೆ ಎಲ್ಲವನ್ನು ಸಮಜಾಯಿಸುತ್ತಾಳೆ. ತನ್ನ ಮಗನನ್ನು ರುಮೆಯ ಕೈಗೆ ಒಪ್ಪಿಸುತ್ತಾಳೆ. ರಾಮನಿಗೆ ಸಮಾಧಾನ ಮಾಡುವಂತೆ "ವಿಧಿ ಲಿಖಿತವಿದು ಶ್ರೀರಾಮ ನಿನ್ನ ತಪಲ್ಲ" ಎನ್ನುವ ತಾರೆಯ ಮಾತಿನಲ್ಲಿ ಅದೆಂಥ ದೊಡ್ಡ ಎತ್ತರವಿರಬೇಕು. ಮುಂದೆ ಹೇಳುತ್ತಾಳೆ ಅಪಹೃತಳಾದ ಸೀತೆಯನ್ನ ಮರಳಿ ತನ್ನಿ ಅದೀಗ ನಡೆಯಬೇಕಿರುವುದು; ನಡೆದು ಹೋದದಕ್ಕೆ ಕಂಬನಿಯನ್ನ ಹರಿಸುವುದರಲ್ಲಿ ಅರ್ಥವಿಲ್ಲ ಎಂದು ಬಹಳ ನಿಸೂರಾಗಿ ಅತ್ಯಂತ ಸಮಾಧಾನದಿಂದ ಚಿತೆಯನ್ನ ಪ್ರವೇಶ ಮಾಡುವಂತ ತಾರೆಯ ಪಾತ್ರ ತಾಯಿತನದ ಒಂದು ಅಸಾದೃಶ್ಯವಾದ ನಿರೂಪಣೆಯಾಗಿದೆ.

ಹೀಗೆ ಇಡೀ ಹೆಣ್ಣಿನ ಶಕ್ತಿ ಸಂಚಯನದ ಮೂಲ ಯಾವುದೆಂದರೆ ಅವಳ ತಾಯಿತನದ ವಿಸ್ತರಣೆ ಅವಳ ತಾಯಿತನದ ಆಗಾಧತೆ. ಗುರುಭ್ಯೋಮವನ್ನು ಆವರಿಸಿಕೊಳ್ಳಬಹುದಾದ ಮಹತ್‌ಶಕ್ತಿಯನ್ನ ಹೆಣ್ಣು ಪಡೆಯಬಲ್ಲಳು ಅವಳ

ಜೈವಿಕತೆಯೂ ಅದಕ್ಕೆ ಪೂರಕವಾಗಿರುತ್ತೆ ಎನ್ನುವುದನ್ನು ಕುವೆಂಪು ಶೋಧಿಸತ್ತಾರೆ.

ನಾರೀವಾದಿ ವಿಶ್ಲೇಷಣೆ

ಸೀತೆ:

ಹಿಡಿ ರಾಮಾಯಣ ದರ್ಶನಂ ಲಂಕೆಯಿಂದ ಅಯೋಧ್ಯಗೆ ಬಂದು ನಿಲ್ಲುತ್ತೆ. 'ಸಾಕು ಲಂಕೆ ಸಾಕು ಶಂಕೆ' ಎಂದು ಮುಕ್ತಾಯ ಆಗುತ್ತೆ. ಆದರೆ ಶಂಕೆಯ ಮತ್ತೊಂದು ರಾಮಾಯಣ ಮುಂದುವರೆಯಲಿದೆ. ಸೀತೆಯ ತಾಕತ್ತನ್ನು ಗಮನಿಸಬೇಕು ಹಿಡೀ ಆ ಪಾತ್ರದ ಬೆಳವಣಿಗೆ ಇದೆಯಲ್ಲ ಅಣುರೇಣು ತೃಣಕಾಷ್ಠಗಳನ್ನು ಆವರಿಸಿಕೊಳ್ಳುತ್ತಾ ಹೋಗುವ ಪಾತ್ರ. ತುಂಬಾ ಎಳೆಯ ಮಗು, ಮುಗ್ಧ ಮಗುವಾದ ಸೀತೆ "ಇವನೇ ಈ ಶಿವಧನಸ್ಸನ್ನ ಮುರಿಯಲಿ" ಎಂಬುದು. ಪರಿತಾಪವೆಂದರೆ ರಾಮ ಶಿವಧನಸ್ಸಿನತ್ತಿರ ಬಂದಾಗ ಸೀತೆ ಶಿವನನ್ನು 'ಶಿವನೇ ನೀನಿರುವುದು ನಿಜವಾದರೆ ಆ ಹಳೆಯ ಧನಸ್ಸು ಮುರಿದು ಬೀಳಲಿ' ಎಂಬುದು ರಾಮನನ್ನು ವರಿಸಬೇಕೆಂಬುದು ಸೀತೆಯ ಆಸೆ, ಸೀತೆಯ ಕನಸ್ಸು, ಸೀತೆಯ ನಿರೀಕ್ಷೆ ಅದು ಕೈಗೂಡುತ್ತೆ. ಆದರೆ ಕೈಗೂಡಿದ ಮೇಲಿನ ಕಥನ ಇದೆಯಲ್ಲ ಅದು ಬಹಳ ಅದ್ಭುತ ರಾವಣನಿಂದ ಸೀತೆ ಅಪಹೃತಳಾಗಿದ್ದಾಳೆ. ಸೀತೆ ಈಗ ಅಶೋಕವನದಲ್ಲಿದ್ದಾಳೆ. ಅಶೋಕವನದಲ್ಲಿ ಇರುವ ಸೀತೆಯ ಬಳಿಗೆ ಧ್ಯಾನಮಾಲಿನಿಯ ಜೊತೆ ರಾವಣ ಬರುತ್ತಾನೆ. ಧ್ಯಾನಮಾಲಿನಿ ರಾವಣನ ಪ್ರೇಯಸಿ–ಪತ್ನಿ, ರಾವಣ ಇನ್ನೊಬ್ಬನ ಮಡದಿ ಆದವಳನ್ನು ಕರೆದುತಂದಿದ್ದಾನೆ. ಲೋಕದ ಕಣ್ಣಿಗೆ ಅವಳು ಸುಖವಾಗಿದ್ದಾಳೆ. ಧ್ಯಾನಮಾಲಿನಿಯನ್ನು ಉದಾಹರಣೆಯಾಗಿಟ್ಟುಕೊಂಡು ರಾವಣ ತನ್ನ ಬಗ್ಗೆ, ತನ್ನ ತೇಜಸ್ಸಿನ ಬಗ್ಗೆ, ತನ್ನ ಪೌರುಷದ ಬಗ್ಗೆ ವಿಪರಿತವಾದ ಅಹಂಕಾರದಿಂದ ಧ್ಯಾನಮಾಲಿನಿ ಮನಸೋತಿರುವುದನ್ನು ಹೇಳುತ್ತಾನೆ. ಅದನ್ನ ಸೀತೆ "ದಶಗ್ರೀವ ಮರಗುವೆ ನಿನಗಾಗಿ; ತಾಯಿ ತನ್ನ ಕೇಡಾಡಿ ಕಂದಂಗೆ ಮರುಗುವ ಹಾಗೆ" ಎಂದು ಹೇಳುತ್ತಾಳೆ. ರಾವಣ ಬಂದಾಗೊಮ್ಮೆ ಅವನನ್ನ ನೋಡಿ ಮುಖ ತಿರುಗಿಸಿದವಳು; ಮರುಕ್ಷಣ ಅವನ ಮುಖಕ್ಕೆ ಮುಖಕೊಟ್ಟು; ದಿಟ್ಟಿಗೆ ದಿಟ್ಟಿನೆಟ್ಟು, ಕಣ್ಣಿಗೆ ಕಣ್ಣು ಬೆರೆಸು ಹೇಳುತ್ತಾಳೆ "ದಶಗ್ರೀವ ಮರಗುವೆ ನಿನಗಾಗಿ; ತಾಯಿ ತನ್ನ ಕೇಡಾಡಿ ಕಂದಂಗೆ ಮರುಗುವ ಹಾಗೆ" ಎನ್ನುವಾಗ ಸೀತೆ ದೊಡ್ಡವಳಾಗಿಬಿಡ್ತಾಳೆ. ರಾವಣನ ಮಗಳ ವಯಸ್ಸಿನಲ್ಲಿರಬಹುದಾದ ಸೀತೆ ರಾವಣನ ತಾಯಿಯಾಗುವ ಚಲನೆಯದು ಅದ್ಭುತವಾದ ಚಲನೆ ಬಹಳ ದೊಡ್ಡ ಚಲನೆ ಹಾಗೂ ಸೀತೆಯ ತಾಕತ್ತು. "ಹಿರಿಯನು ನೀನು; ಹಿರಿಯನಾಗಿ ಬಾಳು" ಲಂಕೆಯನ್ನು ಆಹುತಿ ಕೊಡಬೇಡ ರಾವಣ' ಎಂಬ ಇದೇ ಭಾವನೆ ಅವಳಿಗೆ ಕೊನೆಯವರೆಗೂ ರಾವಣನ ಬಗ್ಗೆ

ಇರುತ್ತೆ. ಹಾಗಾಗಿ ರಾವಣನ ಮರಣದ ಸುದ್ಧಿಗೆ ಸೀತೆ ಸಂಭ್ರಮಿಸಲಾರಳು ಸೀತೆಗೆ ಸಂಭ್ರಮವಿಲ್ಲ. ಅಷ್ಟೇಅಲ್ಲ 'ದಶಾನನ ಸ್ವಪ್ನ ಸಿದ್ಧಿಯಲ್ಲಿ' ರಾವಣನಿಗೆ ಕನಸಾಗುತ್ತೆ. ರಾವಣ ಒಳಗೊಳಗೆ ತಳಮಳಗೊಳ್ಳುತ್ತಾನೆ. ಆತಂಕಗೊಳ್ಳುತ್ತಾನೆ. ಕನಸ್ಸು ಕಾಣುತ್ತಾನೆ. ಮಂಡೋದರಿಯತ್ತಿರ ರಾವಣ ಹೇಳುತ್ತಾ "ಭಾಮೆ ಕನಸ್ಸಾಯಿತು ನನಗೆ; ಯುದ್ಧ ನಡೆಯುತ್ತಿದೆ; ಯುದ್ಧಕ್ಕೆ ರಾವಣ ಹೊರಡಬೇಕೆಂನ್ನುವಷ್ಟರಲ್ಲಿ, ನಾನು ಮತ್ತು ಸೋದರ ಕುಂಭಕರ್ಣ ಇಬ್ಬರೂ ಪುಟ್ಟ ಮಕ್ಕಳಾಗಿಬಿಟ್ಟಿದ್ದೀವಿ; ಯಾವುದೊ ಒಂದು ಋಷ್ಯಾಶ್ರಮ. ವೈದೇಹಿಯ ತೊಡಯೊಳಗೆ ಅವಳಿ ಕಂದರ್ಕಳಾಗಿ ಆಡುರ್ತಿಪೆವು ನಾವು. ಅಳುತ್ತಿದ್ದೇವೆ ನಾವು" ಎಂದಾಗ ಮಂಡೋದರಿ ಓಡಿ ಬಂದು ರಾವಣನ ತಲೆಯೊರೆಸಿ, ಮೈಯನ್ನ ನೇವರಿಸಿ ನೀಡು ಕುಡಿಸಿ ಹೇಳುತ್ತಾಳೆ. ನಿಮ್ಮೊಳಗೆ ಬದಲಾವಣೆ ಆಗ್ತಿದೆಯಲ್ಲಾ ಅದರ ಸಂಕೇತವದು. ನೀವು ಚಿಂತೆಮಾಡಬೇಡಿ ಎನ್ನುತ್ತಾಳೆ. ರಾವಣನಿಗೆ ಸೀತೆಯೂ ತಾಯಿ, ಮಂಡೋದರೆಯೂ ತಾಯಿ. ತಾಯಿತನ ವಿಸ್ತಾರವಾದ ಬಹು ನೆಲೆಗಳಿದವಲ್ಲ ಆ ಬಹುನೆಲೆಗಳನ್ನ ಇಷ್ಟೊಂದು ದಟ್ಟವಾದ ರೀತಿಯಲ್ಲಿ ಕಟ್ಟಿಕೊಟ್ಟಂಥ ಕಾವ್ಯಗಳು ತುಂಬಾ ತುಂಬಾ ಕಡಿಮೆಯೆನಿಸುತ್ತದೆ. "ನಾವು ಎಲ್ಲೊ ತಪ್ಪು ಮಾಡಿದ್ದೇವೆ. ಕುವೆಂಪು ಅವರ ಕಾವ್ಯವಷ್ಟೆ ಇಟ್ಟುಕೊಂಡು ಕುವೆಂಪು ಅವರೊಂದಿಗೆ ಗೃಹ ತಪಸ್ವಿನಿಯನ್ನು ಬರೆದವರು ನೀವು ಎಂದು ವಾಗ್ವಾದಿಸಿದ್ದೆವು ಆದರೆ ಗೃಹ ತಪಸ್ವಿನಿಯೊಂದೆ ಕುವೆಂಪುರವರ ಅಭಿಪ್ರಾಯವಲ್ಲ ಅವರು ಇಡೀ ಹೆಣ್ಣು ಲೋಕದ ಆ ಸಂವೇದನಾ ಶೀಲತೆಯನ್ನ ಕಟ್ಟಿಕೊಡಬಲ್ಲಂಥ ಆ ಸಾಮರ್ಥ್ಯ ಕುವೆಂಪುರವರಲ್ಲಿ ಬಹಳ ಬಹಳ ದೊಡ್ಡದಾಗಿತ್ತೆನಿಸುತ್ತದೆ" ಎನ್ನುತ್ತಾರೆ ಡಾ.ವಿನಯಾ ಒಕ್ಕುಂದ.

ಹೆಣ್ಣಿನ ನೆಲೆಯಿಂದ ರಾಮಾಯಣ ದರ್ಶನಂ ಅಭೂತಪೂರ್ವವಾದ ಮತ್ತು ಮುಖಾಮುಖಿ ಆಗುವ ಮತ್ತೊಂದು ಎಂದೂ ಬಗೆಹರಿಸಿಕೊಳ್ಳಲಿಕ್ಕೆ ಸಾಧ್ಯವೇ ಆಗದ ಪ್ರಮೇಯ ಎಂದರೆ ಪಾತಿವೃತ್ಯ, ಹದಿಬದೆಯ ಧರ್ಮ. ಹದಿಬದೆಯ ಧರ್ಮ ಕೇಳಿ ಕೇಳಿ ಸಾಕಾಗಿದೆ. ಕುವೆಂಪು ಅದನ್ನು ಮತ್ತೆ ಮತ್ತೆ ಉಜ್ಜಿ ಉಜ್ಜಿ ತೆಗೆತಾ ಹೊಗ್ತಾರೆ. ಆ ಹದಿಬದೆಯ ಧರ್ಮವನ್ನು ನಿಷ್ಕರ್ಷೆ ಮಾಡುವುದಕ್ಕೆ ಎರಡು ಕನ್ನಡಿಗಳಿವೆ. ಒಂದು ರಾವಣ. ಎರಡು ರಾಮ. ವಿಚಿತ್ರ ರಾವಣ ಗೆಲ್ಲುತ್ತಾನೆ ಸೋತು ಗೆಲ್ಲುತ್ತಾನೆ ತಪ್ಪು ಮಾಡಿ ಗೆಲ್ಲುತ್ತಾನೆ. ರಾಮ ಗೆದ್ದೆನೆಂದು ಭಾವಸಿ ಸಂಪೂರ್ಣವಾಗಿ ಸೊಲುತ್ತಾನೆ. ಇದರ ಆರಂಭ ನೋಡುವುದಾದರೆ ಮಾರೀಚನ ಬಳಿ ರಾವಣನ ಮಾತು; ಮಿಥಿಲೆ ಶಿವಧನಸ್ಸನ್ನ ಮುರಿಯಲು ಹೋಗಿ ರಾವಣ ಸೋತು ಬಂದಿದ್ದಾನೆ. ಅಪಮಾನಿತನಾಗಿ ಬಂದಿದ್ದಾನೆ. ಸಣ್ಣ ಪುಟ್ಟ ಅಪಮಾನಗಳನ್ನು ಸಹಿಸಿಕೊಳ್ಳಲು ಸಹ ಶಕ್ತಿಯೇ ಇಲ್ಲದ

ಗಂಡುಗರ್ವ. ಅಪಮಾನಿತನಾಗಿ ಸೀತೆಯನ್ನು ಪಡೆಯಲೇಬೇಕೆಂಬ ನೆವದಿಂದ ಶೂರ್ಪನಖಿಯನ್ನ ಕಳಿಸಿ ಲಕ್ಷ್ಮಣನ ಬಾಣದಿಂದ ಚಂದ್ರನಖಿಯ ಮುಖ ಕೆತ್ತಿಹೋಗಿದ್ದೆ ನೆಪವಾಗುತ್ತೆ. ಆ ನೆಪವನ್ನು ಪೂರೈಸಿಕೊಳ್ಳುವುದಕ್ಕೆ ರಾವಣ ಹೋಗಬೇಕು.

ಮಾರಿಚನನ್ನು ರಾವಣ ಕೇಳಲು ಕಾರಣ ಮಾರಿಚನ ತಾಯಿ 'ತಾಟಕಿ'ಯನ್ನು ರಾಮ ವಧೆ ಮಾಡಿದ್ದಾನೆ. ರಾಮಾಯಣ ದರ್ಶನಂನ ಆರಂಭದಲ್ಲಿ ಬರುವ ಶಿಲಾತಪಸ್ವಿನಿಯ ಭಾಗದಲ್ಲಿ ರಾಮನಿನ್ನೂ ಮುಂದಿನ ಎಲ್ಲಾ ಘನಕಾರ್ಯಗಳಿಗೆ ಉದ್ಯುಕ್ತನಾಗುವ ಮೊದಲು ಅವನ ಬದುಕಿನಲ್ಲಿ ಅಯೋಚಿತವೆನ್ನುವಂತೆ ಎರಡು ಘಟನೆಗಳು ನಡೆಯುತ್ತವೆ. ಒಂದು ಗುರು ಹೇಳಿದ್ದನ್ನು ಕೇಳಿ ತಾಟಕಿಯನ್ನು ವಧಿಸುವುದು. ತಾಟಕಿ ವಧೆಗೆ ರಾಮನಿಗಿದ್ದ ಕಾರಣಗಳೇನು? ಎಂಬ ಅಸ್ಪಷ್ಟತೆ ಕೊನೆಯವರೆಗೂ ಕಾಡುತ್ತೆ. ಹೆಣ್ಣು ಹತ್ಯೆಯನ್ನು, ಸ್ತ್ರೀ ಹತ್ಯೆಯನ್ನ ರಾಮ ಮಾಡಬಹುದೇ? ಧರ್ಮ ಒಪ್ಪುತ್ತದೆಯೇ? ಏಕೆಂದರೆ ಯುದ್ಧ ಸಂದರ್ಭದಲ್ಲಿ ತಾಟಕಿಯ ಪಿಶಾಚಿ ಊಂಕರಿಸಿ ಹೇಳುತ್ತಾಳೆ. "ಗುರುವಿನಾಜ್ಞೆಗೆ ಹೆಣ್ಣು ಕೊಂದವನಿಗೆ ಗೆಲುವಿಲ್ಲ; ಗುರುವಿನಾಜ್ಞೆಗೆ ಹೆಣ್ಣು ಕೊಂದವನಿಗೆ ಗೆಲುವಿಲ್ಲ" ಎಂದಾಗ ಲಕ್ಷ್ಮಣ ಕಂಗಾಲಾಗುತ್ತಾನೆ. ರಾಮನಾಗ ಲಕ್ಷ್ಮಣನಿಗೆ ಹೆದರದಿರು ಸೌಮಿತ್ರಿ ಪಿಶಾಚಿಯ ಮಾತದು. ಆದರೆ ಅದು ಪಿಶಾಚಿಯಲ್ಲ. ರಾಮನೊಳಗಿನ ಅರಿವು ರಾಮ ಕಂಗಾಲಾಗುತ್ತಾ ತಪ್ಪು ಮಾಡಿದನೆ? ನಾನು. ಹಿಡೀ ದರ್ಶನಂನಲ್ಲಿ ಬಹಳ ಅದ್ಭುತವಾದ ಸಂರಚನೆ ಎಂದರೆ ಆರಂಭವನ್ನು ಮತ್ತೊಂದು ಇನ್ನೊಂದು ಸಂದರ್ಭಗಳನ್ನು ಎದುರೆದುರಿಗೆ ಹಿಡುತ್ತಾ ಹೋಗುತ್ತದೆ.

ಅಹಲ್ಯೋದ್ಧಾರ: ಕಲ್ಲು ಕರಗಿ ಬೆಣ್ಣೆಯಾಗಿ, ನೀರಾಗಿ, ಸ್ತ್ರೀಮೂರ್ತಿಯಾಗಿ ಎದ್ದು ನಿಂತಾಗ ಮರಳಿ ತನ್ನ ತಾಯನ್ನೆ ಕಂಡಹಾಗೆ ರಾಮ ನಮಿಸಬಲ್ಲ. ರಾಮನೊಳಗಿರುವ ಎರಡು ಸ್ತ್ರೀ ಕೈಗಳು 1) ತಾಟಕಿಯ ವಧೆ 2) ಅಹಲ್ಯೋದ್ಧಾರ:–

ಈ ಸ್ಥಿತಿ ಮುಂದೆ ಪಾತಿವೃತ್ಯದ ಅಗ್ನಿ ದಿವ್ಯವನು ಗಮನಿಸಿ ರಾಮನನ್ನು ನೋಡುವುದಾದರೆ ಅಹಲ್ಯೆ, ಊರ್ಮಿಳೆ, ತಾರೆ, ಸೀತೆ, ಕೌಸಲ್ಯೆ ಎಲ್ಲರೂ ಕೂಡ ಪಾತಿವೃತ್ಯದ ಒಂದೊಂದು ನಿಕಷ್ಟ/ಮಾದರಿ. ಆದರೆ ರಾವಣನಿಗೆ ಮಂಡೋದರಿ ಇದ್ದಾಳೆ. ಆದರೆ ಮಂಡೋದರಿಯ ಮೂಲಕ ಹದಿಬಧಿಯ ಧರ್ಮವನ್ನು ಕಲಿಯಲಾರ ಅವನು. ರಾವಣ ಒಂದು ಸಂದರ್ಭದಲ್ಲಿ ಮಾರೀಚನ ಬಳಿ "ನೀನು ಬಂಗಾರದ ಜಿಂಕೆಯಾಗು ಎಂದು ಕೇಳುವಾಗ" ರಾವಣ ಹೇಳುವ ಮಾತೆಂದು "ಹುಟ್ಟುವಾಗಲೇ ನನ್ನ ರಕ್ತಕ್ಕೆ ಹೆಣ್ಣೊಡಲ ಸಂಘದ ಆಸೆ ಅಂಟಿ ಬಂದಿದೆ. ಪಾತಿವ್ರತ್ಯವನ್ನು ನಂಬಿ

ನನ್ನ ಹರೆಯವನ್ನು ನಾನು ಹಾಳು ಮಾಡಿಕೊಂಡಿದ್ದೇನೆ. ಆದರೆ ನಂತರ ನನಗೆ ತಿಳಿದಿದ್ದೇನೆಂದರೆ; ನನ್ನನ್ನು ಮೋಹಿಸಿ, ಬಯಸಿ ಬಂದ ಹೆಣ್ಣುಗಳಿಗೆ ಕೊರತೆಯೇ ಇಲ್ಲ ಮಾರಿಚ, ನನ್ನ ಮೈಸಿರಿಗೆ, ನನ್ನ ಐಸಿರಿಗೆ ನನ್ನ ಯಶೋ ವೈಭವಕ್ಕೆ, ನನ್ನ ರಸಿಕತೆಗೆ, ನನ್ನ ಸತ್ವಕ್ಕೆ, ನನ್ನ ವೀರಕ್ಕೆ/ವೀರ್ಯಕ್ಕೆ ಮಿಗಿತಾಯವೇ ಇಲ್ಲದ ಹೆಣ್ಣುಗಳು ನನ್ನ ಕಾಲ ಕೆಳಗಿದ್ದಾರೆ. ಯಾವ ಪತಿವ್ರತೆಯನ್ನು ನಾನು ನೋಡಿಲ್ಲ. 'ಹದಿಬದೆ ಎಂಬುದೊಂದು ಹಸಿಸುಳ್ಳು' ಇದು ರಾವಣನ ವಾದ. ಈ ವಾದವನ್ನು ಮಾಡುತ್ತಿರುವ ರಾವಣ ಕೈಕಸಿಯಂತ ಪತಿವ್ರತೆಯ ಮಗ; ಈ ವಾದವನ್ನು ಮಂಡಿಸುತ್ತಿರುವ ರಾವಣ ಮಂಡೋದರಿಯಂತ ಪತಿವ್ರತೆಯ ಪತಿ" ಮತ್ತೊಂದು ಸಂದರ್ಭದ ಮಂಡೋದರಿ ಮತ್ತು ರಾವಣನ ಪರಸ್ಪರ ಚರ್ಚೆಯಲ್ಲಿ "ಸೀತೆಯನ್ನ ಎಳೆದು ತಂದಿದ್ದೇನೆ. ನಿನಗೆ ಮತ್ತೊಬ್ಬ ದಾಸಿಯಾಗಿ" ಎಂದು ರಾವಣ ಹೇಳಿದಾಗ ಕಂಗಾಲಾದ ಮಂಡೋದರಿಗೆ "ಎಂತಿದ್ದರೂ ಎನ್ನ ಬಲ್ಒಲ್ಮೆಯ ಭಾಮೆ ನೀನು" ಎಂದ ಮಂಡೋದರಿಯನ್ನ ಸಮಾಧಾನ ಪಡಿಸಿದಾಗ "ಅದು ಎಂತಿಪ್ಪುದೋ" ಎನ್ನುತ್ತಾಳೆ. ಎಂದಿನಿಂದ ಕೇಳುತ್ತಿದ್ದೇನೆ ಈ ಸುಳ್ಳನ್ನ. ಎಂದೂ ರಾವಣ ಬದಲಾಗಲಾರ ಹದಿಬದೆ ಎಂಬಳ್ ಇರ್ಪಳೆ ಹಸಿಸುಳ್ಳು ಎಂದು ರಾವಣನೆಂದಾಗ ತೋರುತ್ತಿದ್ದೆ ನಿನಗೆ ಜಗದೊಳಗೆ ಮತ್ತೊಬ್ಬ ರಾವಣನಿದ್ದು ಅವನು ನನ್ನನ್ನು ಅಪಹರಿಸಿದ್ದರೆ ನಿನಗೆ ನಾನು ತೋರಿಸುತ್ತಿದ್ದೆ. ಹದಿಬದೆ ಎಂದರೆ ಏನು ಎನ್ನುವುದನ್ನ ರಾವಣ; ಮಿಥಲೇಶನ ಮಗಳು ತೋರಬಲ್ಲಳು ನಿನಗೆ. ಹದಿಬದೆಯ ಧರ್ಮದ ಶಕ್ತಿಯೇನು ಎನ್ನುವುದನ್ನ ಎಂದಾದ ತಡಬಡಿಸಿ ರಾವಣ "ನಿನ್ನ ನಲ್ಮೆ ಗೆಲ್ಗೆ ನಾ ಸೊಲ್ಗೆ ಸೈಪು ಬಾಳ್ಗೆ" ಬದುಕಿಗೆ ಒಳಿತಾಗುತ್ತೆ. ಆಯಿತು ನೋಡೋಣ ನೀನು ಗೆದ್ದರೆ ನನಗೂ ಸಂತೋಷ ಎಂದು ಜರಿದುಕೊಳ್ಳುವ, ಜಾರಿಕೊಳ್ಳುವ ಪ್ರಯತ್ನವನ್ನು ರಾವಣ ಮಾಡ್ತಾನೆ ಎನ್ನುವುದು. ಈ ಹದಿಬದೆಯ ಧರ್ಮದ ವ್ಯಾಖ್ಯಾನವೆಂದರೆ ಕೇವಲ ಘಟನೆಯಾಗಿ ಕುವೆಂಪು ಅವರಿಗೆ ಅರಿವಾಗಿಲ್ಲ. ನಮ್ಮ ಸಮಾಜದೊಳಗೆ ಬೇರು ಬಿಟ್ಟಿರುವ ಒಂದು ಅಮೂರ್ತವಾದ ಕಲ್ಪನೆಯನ್ನು ವಿವರಿಸಿಕೊಳ್ಳುವುದನ್ನ ಕುವೆಂಪು ಹಿಂದಿನಿಂದಲೇ ಮುಖಾಮುಖಿಯಾಗಿಸಿದ್ದಾರೆ ಎನ್ನಿಸುತ್ತದೆ.

ರಾವಣನಿಗೆ ವೇದವತಿಯ ಘಟನೆ ನೆನಪಿದೆ. ವೇದವತಿ ಬ್ರಾಹ್ಮಣ ಕನ್ಯೆ; ರಾವಣ ಎಳೆದು ತಂದಾಗ ಎಲ್ಲಿ ರಾವಣ ತನ್ನನ್ನು ಬಲತ್ಕರಿಸಬಹುದೋ ಎಂದು ತಿಳಿದು ಅಗ್ನಿದಿವ್ಯಕ್ಕೆ ಆಹುತಿಯಾಗಿ ಸಾಯುತ್ತಾಳೆ. ವೇದವತಿ ಸತ್ತಾಗ ರಾವಣ ಮರುಗುತ್ತಾ; ಗೊತ್ತಿಲ್ಲ ಅವಳಿಗೆ ನಾನೆಂದು ಬಲತ್ಕರಿಸಲಾರೆನೆಂದು. ರಾವಣನ ಬಹಳ

ಅದ್ಭುತವಾದ ಈ ಸ್ಥಿತಿ. "ಎಳೆದು ತರುತ್ತೇನೆ, ಮಣಿಸುತ್ತೇನೆ ಅವರಾಗಿ ಅವರೇ ಒಪ್ಪಿಕೊಳ್ಳುವಂತೆ ಮಾಡುತ್ತೇನೆ. ಅದು ಅವನ ಗಂಡು ಗರ್ವದ ವಿಜಯ. ಆದರೆ ಎಂದಿಗೂ ನಾನು ಬಲತ್ಕರಿಸಲಾರೆ ಎಂಬ ರಾವಣನ ಮಾತನ್ನು ಮತ್ತೆ ಮತ್ತೆ ರಾಮಾಯಣದೊಳಗೆ ಕೇಳಿಸಿ ಕೊಳ್ಳುತ್ತೇವೆ. ಆದರೆ ಕೇವಲ ಮಂಡೋದರಿ, ಸೀತೆ ಮಾತ್ರವಲ್ಲ ಧಾನ್ಯಮಾಲಿನಿಯೂ ಸಹ ರಾಮನಿಗೆ ಒಡ್ಡುವ ಸವಾಲು ಬಹಳ ದೊಡ್ಡದು. ಈ ಸಂದರ್ಭಕ್ಕೆ ಒಳಗೊಂಡಹಾಗೆ ಯುದ್ಧ ನಡೆದಿದೆ; ಧಾನ್ಯಮಾಲಿನಿಯ ಮಗ 'ಅತಿಕಾಯ' ಯುದ್ಧಕ್ಕೆ ಹೊರಟಿದ್ದಾನೆ. ಹೊರಟ ಮಗನನ್ನ ಮರಳಿ ಕರಿಯುತ್ತಾ ರಾವಣ/ಲಂಕೇಶ; ಅತಿಕಾಯನಿಗೆ ನೀನು ವೀರನಾಗಿ ಹೋರಾಡು ಅದಕ್ಕೆ ನಾನು ಎಂದೂ ಅಡ್ಡಿಪಡಿಸಲಾರೆ ಮಗನೆ, ಆದರೆ ಯುದ್ಧ ಭೂಮಿಯಲ್ಲಿ ನಿನಗಾಗಿ ಉಸಿರು ಹಿಡಿದಿರುವ ನಿನ್ನ ತಾಯಿ ಧಾನ್ಯಮಾಲಿನಿ ಇದ್ದಾಳೆ ಎಂಬುದನ್ನ ಮರೆಯದಿರು ಎಂಬ ಮಾತನ್ನ ಯಾರಿಗೂ ಹೇಳದಿದ್ದ ರಾವಣ ಧಾನ್ಯಮಾಲಿನಿಯ ಮಗ ಅತಿಕಾಯನಿಗೆ ಮಾತ್ರ ಹೇಳುತ್ತಾನೆ. ಆ ಕಡೆ ಅತಿಕಾಯನ ನೆನಪಿನಲ್ಲಿ ಧಾನ್ಯಮಾಲಿನಿಯ ಚರಿತ್ರೆ ಬಿಚ್ಚಿಕೊಳ್ಳುತ್ತೆ. "ತುಂಬಾ ಪಟ್ಟ ಮಗುವಾಗಿದ್ದಾಗ; ಮತ್ತೆ ಮತ್ತೆ ತನ್ನ ತಾಯಿ ಅನುಭವಿಸುವ ಹಿಂಸೆಯನ್ನು ನೋಡಿದ್ದ, ವ್ಯಂಗ್ಯವನ್ನು ಅವನು ಅನುಭವಿಸಿದ್ದ ಯಾರದೋ ಹೆಂಡತಿಯನ್ನ ತಂದಿದ್ದಾನೆ ಎನ್ನುವ ಸತ್ಯ ಅತಿಕಾಯ ಪುಟ್ಟಮಗುವಾಗಿದ್ದಾಗಲೇ ಗೊತ್ತಿತ್ತು.

ಇವನು ತನ್ನ ತಂದೆ ಹೌದು ಆದರೆ ತನ್ನ ತಾಯಿಯ ನಿಜವಾದ ಗಂಡನಲ್ಲ ಎಂಬುದು. ಒಮ್ಮೆ ಅತಿಕಾಯ ಪುಟ್ಟನಿರುವಾಗ ತಾಯಿಯನ್ನ ಕೇಳಿದಾಗ; ಧಾನ್ಯಮಾಲಿನಿ ಉಸಿರು ನಿಂತುಹೋದ ಹಾಗೆ ಮಗುವನ್ನ ಗಟ್ಟಿಯಾಗಿ ತಬ್ಬಿ ಅವನ ಕೊರಳ ಮೇಲೆ ಕೊರಳಿಟ್ಟು ಧಾರಕಾರವಾಗಿ ಅತ್ತುಬಿಡುತ್ತಾಳೆ. ಆ ಕ್ಷಣ ಅತಿಕಾಯ ನಿರ್ಧಾರ ಮಾಡುತ್ತಾನೆ. ಬದುಕಿರುವಷ್ಟು ಕಾಲ ತಾಯಿಯನ್ನ ಪ್ರೀತಿಸುತ್ತೇನೆ ಮತ್ತು ಗೌರವಿಸುತ್ತೇನೆಂದು. ಹಾಗಾಗಿ ಅತಿಕಾಯ ತುಂಬಾ ಪ್ರೀತಿಸುವ ತಾಯಿ ಧಾನ್ಯಮಾಲಿನಿ ಅವಳು. ಅತಿಕಾಯ ಯುದ್ಧಕ್ಕೆ ಹೊರಡುವ ನಿರ್ಧಾರದ ಮೂಲಕ "ಅಮ್ಮ ಬಿಡುಗಡೆ ಬೇಕು. ನಿನ್ನ ಕಣ್ಣೀರಿಗೂ ನನ್ನ ಅಪಮಾನಕ್ಕೂ; ನಮ್ಮಿಬ್ಬರಿಗೂ ಬಿಡುಗಡೆ ಬೇಕು. ಈ ಬಿಡುಗಡೆಗೆ ಯುದ್ಧವೊಂದು ನೆಪ ನನ್ನ ಮರಣ ನಿನ್ನ ಬಿಡುಗಡೆ". ಸರಿ ಅತಿಕಾಯ ಮರಣ ಹೊಂದಿದ್ದಾನೆ. ಧಾನ್ಯಮಾಲಿನಿ ಹಾಸಿಗೆ ಹಿಡಿದಿರುವಾಗ ರಾವಣ ಓಡಿಬಂದ. ರಾವಣ ಅವಳ ಹಾಸಿಗೆಯ ಮೇಲೆ ಕುಳಿತು ಅವಳ ತಲೆಯನ್ನ ನೇವರಿಸುವಾಗ ಅವಳು ಪ್ರಜ್ಞೆಯಲಿಲ್ಲದೆ; ಅವಳು ಬಿಟ್ಟು ಬಂದ ತೊರೆದು ಬಂದ

ಆ ತನ್ನ ಗಂಡ ಜೊತೆ ಅಪ್ರಜ್ಞಾವಸ್ಥೆಯಲ್ಲಿ ಮಾತಾಡ್ತಾ ಇದ್ದಾಳೆ. "ಮಯ್ಯನಲ್ಲದೆ ಮನವನಿತ್ತೆನೆ ನಾನು ರಕ್ಕಸಗೆ; ಮನವನಲ್ಲದೆ ತನುವ ನೋಡುವನೇನು? ಜಗದೀಶ್ವರ" ದೇವರು ದೇಹ ನೋಡುವುದಿಲ್ಲ ಮನಸ್ಸನ್ನು ನೋಡ್ತಾನೆ. ನಾನು ಈ ರಾಕ್ಷಸನಿಗೆ ದೇಹವನ್ನ ಸಮರ್ಪಿಸಿರಬಹುದು ಆದರೆ ಮನಸ್ಸನ್ನಲ್ಲ. ಎಂಬುದಲ್ಲದೆ ಸೀತೆಯನ್ನ ರಾವಣ ಎಳೆದು ತಂದಿದಾನೆ; ಅವಳನ್ನು ಮುಟ್ಟಿದ್ದಾನೆ. ಆದರೆ ಸೀತೆ ಪತಿತೆಯಾಗುತ್ತಾಳೆಯೇ?. ಬಹಳ ಮುಖ್ಯವಾದ ಪ್ರಶ್ನೆಯಿದು. ಜನಪದ ಕಾವ್ಯದ ಪತಿವ್ರತೆ ನೀಲಾವತಿ ಲಾವಣಿಗೆ ಪೂರಕವಾಗಿದೆ.

ಆ ಲಾವಣಿಯಲ್ಲಿ ಲೀಲಾವತಿ ಎಂಬ ಸಾಮಾನ್ಯ ಹೆಣ್ಣುಮಗಳು. ಅವಳ ಮನೆಗೊಬ್ಬ ಭಿಕ್ಷುಕ ಬಂದಿದ್ದಾನೆ. ಆ ಭಿಕ್ಷುಕನ ಕಣ್ಣಿಗೆ ಕಸ ಬಿದ್ದಿದೆ. ಅವಳು ಅವನ ಕಣ್ಣನ್ನು ಊಬುತ್ತಾಳೆ. ಅವಳ ಕುಂಕುಮ ಅವನ ಹಣೆಗೆ ಹತ್ತಿದೆ. ಅತ್ತೆ ಬಂದು ತಕ್ಷಣ ಇವಳು ಕುಲಟೆಯಾಗಿದ್ದಾಳೆಂಬ ನಿರ್ಧಾರ. ಅವಳನ್ನು ಎಳೆದು ಮನೆಯಿಂದ ಹೊರಗೆ ಹಾಕಿದಾಗ ಲೀಲಾವತಿ ಒಂದು ರೀತಿ ಉಡ ಕಚ್ಚಿದ ಹಾಗೆ ಬಾಗಿಲಿಗೆ ಕಚ್ಚಿಕೊಂಡು ನಾನು ಇಲ್ಲೆ ಸಾಯ್ತಿನಿ ನಾನು ತಪ್ಪು ಮಾಡಿಲ್ಲ ನಾನು ಹೊರಗೆ ಹೋಗುವುದಿಲ್ಲ". ಏಳು, ಎಂಟು, ಒಂಬತ್ತು ದಿನವಾದರೂ ಅನ್ನ ನೀರಿಲ್ಲದೆ ಇರುವಾಗ ಶಿವನಿಗೆ ದು:ಖವಾಗಿ ಅವಳ ಸತ್ಯವನ್ನು ಜಗತ್ತಿಗೆ ತೋರಿಸಲು ರಾಜ್ಯದ ರಾಜನ ಮಗಳ ದಿಬ್ಬಣದಲ್ಲಿ 'ವರ' ರಾಜ್ಯದೊಳಗೆ ಪ್ರವೇಶಿಸುವಾಗ ರಾಜ್ಯದ ಹೆಬ್ಬಾಗಿಲು ಹಾಕಿದೆ. ಆನೆ ಕಟ್ಟಿ, ಕುದುರೆ ಕಟ್ಟಿ ಏನೆಲ್ಲಾ ಮಾಡಿದರೂ ಕೋಟೆ ಬಾಗಿಲು ತೆಗೆಯುತ್ತಿಲ್ಲ. ಕೊನೆಗೆ ಪುರೋಹಿತರ ಹೇಳಿಕೆಯಂತೆ ಪತಿವ್ರತೆಯ ಕೈ ನೀರಿನಿಂದ ತೆಗೆಯುತ್ತೆ. ಸರಿ ರಾಜ ಬಂದು ರಾಣಿಗೆ ಹೇಳುತ್ತಾ ನಿನ್ನ ಕೈ ನೀರಿಂದ ತೆಗಿಯಿಬಾ ಎಂದಾಗ ಅವಳು ಕೇಳುತ್ತಾಳೆ: "ಏಳು ದೊರೆಯೆ ಪತಿವ್ರತೆ ಎಂದರೆ ಯಾರು? ಮತ್ತು ಹೇಗಿರಬೇಕು. ನನಗೆ ಗೊತ್ತಿಲ್ಲ. ನಾನು ಬಾಲ್ಯದಲ್ಲಿ ಆಟವಾಡುವಾಗ ಯಾವ್ಯಾದೋ ಗಂಡುಮಕ್ಕಳ ಜೊತೆ ಆಟ ಆಡಿದ್ದೀನಿ. ನನಗೆ ಅನಾರೋಗ್ಯವಾದ ರಾಜ ವೈದ್ಯರು ಬಂದು ನನ್ನ ದೇಹವನ್ನು ಚಿಕಿತ್ಸೆ ಮಾಡಿದ್ದಾರೆ. ನಾನು ಹೋಗಿ ಕೋಟೆ ಬಾಗಿಲಿಗೆ ನೀರಾಕಿ ಅದು ತೆಗೆಯದೆ ಹೋದರೆ ನಿನಗೆ ತಾನೆ ಅವಮಾನ. ಕೊನೆಗೆ ಇದೇ ನಡೆಯುತ್ತೆ. ಮಂತ್ರಿಯ ಹೆಂಡತಿ ಎಲ್ಲರೂ ಇದೇ ಉತ್ತರಿಸ್ತಾರೆ. ಕಟ್ಟಕಡೆಗೆ ಲೀಲಾವತಿಯ ಕೈ ನೀರಿಂದ ಕೋಟೆ ಬಾಗಿಲು ತೆಗೆಯುತ್ತೆ. ಅವಳು 'ಪತಿವ್ರತಾ ಲೀಲಾವತಿ' ಎಂದು ಜನ ಒಪ್ಕೊತ್ತಾರೆ ಎನ್ನುವುದು. ಇದರಿಂದ ಪಾತಿವ್ರತ್ಯವನ್ನು ವಿವರಿಸಿಕೊಳ್ಳುವ ಅರ್ಥೈಸಿಕೊಳ್ಳುವ ನಮ್ಮನ್ನು ಪರಿಕಲ್ಪನೆಗಳು ಎಷ್ಟೊಂದು ಪೇಲವವಾಗಿವೆ ಅವಗಳಿಂದ

ಹೆಣ್ಣಿನ ನೆಲೆಗಳೆಂದು ಪ್ರವೇಶ ಮಾಡಿದರೆ ಅದು ಹೇಗೆ ಒಂದು ಸತ್ತ ದುರ್ಬಲ ಬಂದಳಿಕೆ ರೀತಿ ಕಾಣಿಸುತ್ತಾ ಹೋಗುತ್ತದೆ ಎನ್ನುವ ಅಂಶವನ್ನು ಕುವೆಂಪು ಅವರ ಈ ಕಾವ್ಯದಲ್ಲಿ ಮತ್ತೆ ಮತ್ತೆ ನಿಕಷಕ್ಕೊಡ್ಡುತ್ತಾ ಮತ್ತೆ ಮತ್ತೆ ಇರುವಂತಹ ಆ ಹೆಣ್ತನದ ಸೊಬಗನ್ನ ಮತ್ತು ಆ ಶಕ್ತಿಯನ್ನ ಮತ್ತೆ ಮತ್ತೆ ಎದುರಿಗೆಡುವಂಥ ಹಲವು ಪಾತ್ರಗಳು ಇದ್ದಾವೆ.

ಮಂಡೋದರಿಯ ಸಂದರ್ಭವನ್ನು ನೋಡಿದ್ದೇವೆ. ಸೀತೆಯ ಸಂದರ್ಭವನ್ನ ನೋಡ್ತೀವಿ. ಹಾಗೆಯೆ ಲಂಕಾಲಕ್ಷ್ಮಿಯ ಬಳಿಗೆ ರಾವಣ ಬಂದು ಬೇಡಿಕೊಳ್ಳುತ್ತಾ ಕೊನೆಯ ಹಂತದಲ್ಲೂ ತನ್ನನ್ನು ತಾನು ತನ್ನೊಳಗಿನ ಕಾಮವನ್ನ ಗೆದ್ದೆನೆಂದು ಎಷ್ಟೇ ನಿರ್ಧಾರ ಮಾಡಿದರೂ ರಾವಣಾಧೀಶ ಮತ್ತೆ ಮತ್ತೆ ಸೊಲ್ತಾನೆ. ಕೊನೆಗೂ ಅವನ ಬೇಡಿಕೆಯೆಂದರೆ "ಸೀತೆ ನನ್ನ ವಶವಾಗಲಿ; ರಾಮನು ಸೋಲಲಿ ಎಂದು ಕೇಳಿದಾಗ ತಥಾಸ್ತು" ಎನ್ನುತ್ತಾಳೆ ಲಂಕಾಲಕ್ಷ್ಮಿ. "ತಾಯಿ, ನೀಂ ನಿಜಂ ಎರಡೂ ಸಲ್ಗೆ? ಎಂದು ಕೇಳುತ್ತಾನೆ. ಸಲ್ಗುಂ ಮುಂದಿನ ಬಾಳ್ಗೆ ಈಗಲ್ಲ, ಈಗಲೆ ಅಂತ ನೀಕೇಳಲೂ ಇಲ್ಲ. ಮುಂದೆ ಸೀತೆ ನಿನ್ನನ್ನು ಒಲಿಯುತ್ತಾಳೆ, ಮುದ್ದಿಸುತ್ತಾಳೆ, ಎದೆಗವುಚಿಕೊಳ್ಳುತ್ತಾಳೆ, ಲಲ್ಲೆಯಾಡಿಸುತ್ತಾಳೆ. ಅದರದು ಮುಂದಿನ ಬಾಳ್ಗೆ ಲವಕುಶರಾಗಿ ಸೀತೆಯ ತೊಡೆಯ ಮೇಲೆ. ಆದರೆ ಈ ಸ್ಥಿತಿಯನ್ನ ಗಮನಿಸಿದರೆ ಹೆಣ್ಣಿನ ನಿಜವಾದ ಶೋಧ ಹೆಣ್ಣಿನ ನಿಜವಾದ ಶೋಧನೆ ಏನು? ಹೆಣ್ಣು ಅಂದರೆ ಯಾರು? ನಿಜಕ್ಕೂ ಯಾರು? ಈ ಪ್ರಶ್ನೆಯನ್ನು ಕೂಡ / ಹೆಣ್ಣಿಗೆ ಏನು ಬೇಕು, ಇಂದಿನ ಸ್ತ್ರೀವಾದದಲ್ಲೂ ಕೂಡ ಬಹಳ ರೋಷವಾಗಿ ಕೇಳಿಕೊಳ್ಳುವ ಪ್ರಶ್ನೆ ಕೂಡ, ಹೆಣ್ಣಿಗೆ ನಿಜಕ್ಕೂ ಏನು ಬೇಕು? ಎನ್ನುವ ಸಲುವಾಗಿಯೇ ಕುವೆಂಪು ಚಂದ್ರನಖಿಯ ಪಾತ್ರವನ್ನು ಪರಿಷ್ಕರಿಸಿ ಇಡುತ್ತಾರಾ? ಎಂದೆನಿಸುತ್ತದೆ.

ಚಂದ್ರನಖಿ:

ಆರಂಭದಲ್ಲಿ ರಾಮ ಲಕ್ಷ್ಮಣರನ್ನ ಕಡುಮೋಹದಿಂದ ಮೋಹಿಸಿದಳು. ಅಣ್ಣ ರಾವಣನತ್ತಿರ ಹೇಳುತ್ತಾ ಮೊದಲು ನೀನು ಸೀತೆಯನ್ನ ನಿನ್ನ ವಶಪಡಿಸಿಕೊ ಆಮೇಲೆ ಅವರನ್ನ ನನ್ನ ಸೇವೆಗೆ ಕಳಿಸಿಬಿಡು ಎನ್ನುವ ಚಂದ್ರನಖಿ ಕೊನೆಯಲ್ಲಿ ಯುದ್ಧದ ಪ್ರಾರಂಭದ ಮೊದಲು ಅಣ್ಣನತ್ತಿರ ತಪ್ಪಾಯಿತು. ತಪ್ಪಾಗಿದೆ ನನ್ನಿಂದ ನನ್ನ ಭಾವನೆಗಳು ಬದಲಾಗಿವೆ. "ಸೀತೆಯನ್ನ ನೋಡುತ್ತಾ ನೋಡುತ್ತಾ ನನ್ನೊಳಗಿನ ತಿಳಿವು ಸಂಚಯಿಸಿದೆ. ದಯವಿಟ್ಟು ನನ್ನಿಂದಲೇ ಹಚ್ಚಿದ ಕಿಚ್ಚನ್ನ ನಾನೇ ನಂದಿಸಲು ಅವಕಾಶ ಕೊಡು ಎನ್ನುತ್ತಾಳೆ. ಏನು ಮತಾಡುತ್ತೀದ್ದೀಯ ಎಂದು ರಾವಣನೆಂದಾಗ

ಚಂದ್ರನಖಿ, ಬಹಳ ಸುಲಭ ನಾನು ಹೋಗಿ ಸೀತೆಯನ್ನ ಒಪ್ಪಿಸುತ್ತೇನೆ ರಾಮನಿಗೆ ಎಂದಾಗ ನಿನಗೆ ಗೊತ್ತಿಲ್ಲ ರಾಜಕಾರಣ ಹೇಡಿ ಎಂದು ಹಂಗಿಸುತ್ತಾರೆ ನಮ್ಮನ್ನ ಎಂದು ರಾವಣ ಹೇಳುತ್ತಾನೆ. ಹಾಗಿದ್ದರೆ ಏನು ಮಾಡ್ತೀಯಾ ಎಂದು ಚಂದ್ರನಖಿ ಕೇಳುತ್ತಾಳೆ. 'ಗೆಲ್ಲುತ್ತೇನೆ ರಾಮಲಕ್ಷ್ಮಣರನ್ನ; ಕಾಣಿಕೆಯಾಗಿ ರಾಮನಿಗೆ ಒಪ್ಪಿಸುತ್ತೇನೆ ಸೀತೆಯನ್ನು' ರಾವಣ ಯುದ್ಧದ ಕೊನೆ ಕೊನೆಗೆ ಬಂದ ಹಾಗೆ ಕುಂಭಕರ್ಣನ ಮರಣಾನಂತರದ ಒಳಗೆ ಇಂಥದೊಂದು ಅದ್ಭುತ ತೀರ್ಮಾನವನ್ನ ಮಾಡಿ ಚಂದ್ರನಖಿಗೆ ಹೇಳುತ್ತಾ ಹೇಳಬೇಡ ಇದನ್ನ ಯಾರಿಗೂ ಎಂದು ಹೇಳಿದವನೆ, ಮತ್ತೆ ನೀವು ಸುಮ್ಮನೆ ಇರುತ್ತೀರಾ? ನೀವೆಲ್ಲಾ ಒಂದೇ. ನೋಡಿ ಎಲ್ಲಿಯ ರಾಮಾಯಣ ದರ್ಶನಂ, ಎಲ್ಲಿಯ ತ್ರೇತಾಯುಗ, ಎಲ್ಲಿಯ ನಮ್ಮ ಬದುಕು. ಹಿಡೀ ಕಾಲವನ್ನ ಮೀರಿ ಬಿಡುವ ಕಾಲವನ್ನ ಕೂಡಿಬಿಡುವ ಆ ತೂಗೂಯ್ಯಾಲೆ ಇದೆಯಲ್ಲ; ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ತೂಗಬಲ್ಲ ತೂಗೂಯ್ಯಾಲೆನ್ನ ನಾವಿಲ್ಲಿ ನೋಡುತ್ತೇವೆ. ಇಲ್ಲಿ ಬರುವ ಪಾತ್ರಗಳು ನಮ್ಮ ಬದುಕಿನ ಸಹಜ ಪಾತ್ರಗಳಾಗ್ತಲೆ ಆ ಮಹೋನ್ನತ ಸ್ಥಿತಿಯನ್ನು ಕೂಡ ದರ್ಶಿಸೋದೆ ರಾಮಾಯಣ ದರ್ಶನಂನ ದೊಡ್ಡ ಗುಣವೆನ್ನಿಸುತ್ತದೆ. ಅಷ್ಟೇ ಅಲ್ಲ ಮಂಡೋದರಿಗೂ ರಾವಣ ಬಹಳ ಸ್ಪಷ್ಟವಾಗಿ ಹೇಳುತ್ತಾನೆ. ಆದರೆ ಮಂಡೋದರಿ ಕೇಳ್ತಾಳೆ. ವೈರಿಗೆ ಇದು ಗೊತ್ತಿಲ್ಲವೆಂದರೆ ಗೊತ್ತಾಗುವುದು ಬೇಡ ಎನ್ನುತ್ತಾನೆ. ಗೊತ್ತಾಗುವುದು ಬೇಡ ಎನ್ನುವುದು ಒಂದು ಕಥೆಯಾದರೆ ಗೊತ್ತು ಮಾಡಿಕೊಳ್ಳುವ ಗುಣವೊಂದು ವೈರದಲ್ಲಿ ಇರುವುದಿಲ್ಲ ಎನ್ನುವುದನ್ನು ವಾಲಿ ಮತ್ತು ರಾವಣ ಇಬ್ಬರ ಸಂದರ್ಭದಲ್ಲೂ ಕಾಣಬಹುದು. ಶ್ರೀರಾಮಚಂದ್ರನಂಥ ಶ್ರೀರಾಮನ ದುಡುಕುಗಳಿಗೆ ಕನ್ನಡಿಯನ್ನು ಹಿಡಿತಾ ಹೋಗುತ್ತೆ ರಾಮಾಯಣ ದರ್ಶನಂ ಇಲ್ಲಿ ರಾಮನ್ನ ಎಲ್ಲಾ ಕಡೆ ಸಮರ್ಥನೆ ಮಾಡಿಕೊಳ್ಳುವುದಿಲ್ಲ ಎನ್ನುವುದನ್ನು ಗಮನಿಸಬೇಕು. ಶಬರಿಯ ಆಕಾರಣವಾದ ಮಮತೆ ಒಂದು ಕಡೆಗೆ. ಹೀಗೆ ರಾಮಾಯಣ ದರ್ಶನಂನ ಸ್ತ್ರೀ ಪಾತ್ರಗಳನ್ನ ಚರ್ಚಿಸುವಾಗ ಇನ್ನೊಂದು ಪುಟ್ಟ ಮಾತೆಂದರೆ ನಾವು ಸ್ತ್ರೀವಾದಿ ಚಿಂತನೆಯ ಒಂದು ದೊಡ್ಡ ಗುಣವಾಗಿ ಪರಿಗಣಿಸುವುದು ಹೆಣ್ಣಿನೊಳಗಿನ ಸಖ್ಯ ತತ್ವವನ್ನ ಹೊಸ ಅನಾವರಣಗೊಳಿಸಿಕೊಳ್ಳಬೇಕು. ಸೋದರಿತ್ವದ ಭಾವ, ಸೋದರಿತ್ವದ ಛಾಯೆ. ಹೆಣ್ಣಿಗೆ ಹೆಣ್ಣು ಶತ್ರುವಲ್ಲಿ ಎನ್ನುವುದನ್ನ ನಾವು ನಿರೂಪಿಸಲೇಬೇಕಾಗುತ್ತೆ. ಆ ನಿರೂಪವನ್ನ ಅರ್ಧ ಶತಮಾನದಿಂದೆ ರಾಮಾಯಣ ದರ್ಶನಂ ತುಂಬಾ ಸೊಗಸಾಗಿ ಮಾಡಿದೆ.

ಬಹುಶ: ಎರಡು ಸಂವಾದ ಭಾಗವನ್ನು ಸ್ಮರಿಸುವುದಾದರೆ 1) ಸೀತೆ

ಮತ್ತು ತ್ರಿಜಟೆಯರ ಸಂಬಂಧ:–ಲಂಕೆಯ ಅಶೋಕ ವನದಲ್ಲಿ ಯಾವಾಗ ಸೀತೆ ಮಂಡೋದರಿಯನ್ನ ಕಾಣುತ್ತಾಳೋ ಆಗ ಸೀತೆಗೆ ಅನ್ನಿಸುತ್ತಂತೆ ಇದು ಅಸುರರ ಲಂಕೆಯಲ್ಲ; ಇದು ಮಂಡೋದರಿಯ ಲಂಕೆ; ಮಂಡೋದರಿ ನಾನಿನಗೆ ಅಕ್ಕ ಅಂತ ಹೇಳುವ ಮಂಡೋದರಿ ಛಾಯೆಗಾಣಿಸಿಕೊಳ್ಳುವ ಮಂಡೋದರಿ ಸೀತೆ ಮತ್ತು ಮಂಡೋದರಿಯರ ಮಧ್ಯದ ಆ ಸಂವಾದವನ್ನ ಒಂದು ಕ್ಷಣ ನೆನಪಿಸಿಕೊಂಡರೆ ಸೀತೆ ಕೇಳ್ತಾಳೆ. "ಅಷ್ಟು ಕಣ್ಣೀರಿಡುತ್ತಿದ್ದೇಯಲ್ಲ ಅಕ್ಕ ನನ್ನ ದು:ಖಕ್ಕಿಂತ ದೊಡ್ಡದೆ ನಿನ್ನ ದು:ಖ ಅಂತ ಅದಕ್ಕೆ ಮಂಡೋದರಿ ಹೇಳುತ್ತಾ. "ಖಂಡಿತ ದೊಡ್ಡದು ತಂಗಿ; ನಿನ್ನಂಥ ಹಲವು ಸೀತೆಯರ ದು:ಖಕ್ಕೆ ಕಾರಣನಾದವನ ಮಡದಿ ನಾನು" ಎಂಬ ಅದ್ಭುತ ಮಾತಾಡುತ್ತಾಳೆ. ನಮ್ಮ ಹೊಳಹುಗಳಿಗೆ, ಆಲೋಚನೆಗಳಿಗೆಲ್ಲಾ ಮೂಲ ಬೆಳಕಾಗಿ ರಾಮಾಯಣ ದರ್ಶನಂನಲ್ಲಿದೆ. ಇಲ್ಲಿ ಕುವೆಂಪು ಮಂಡೋದರಿಯ ಮೂಲಕ "ನನ್ನ ನೋವು ಬಹಳ ದೊಡ್ಡದು ತಂಗಿ; ರಾವಣನ ಮಡದಿ ನಾನು ಇದಕ್ಕಿಂತ ದೊಡ್ಡ ನೋವೇನಿದೆ? ಅತ್ಯಾಚಾರಿ ಹೆಣ್ಣನ್ನು ಹಗುರವಾಗಿ ನೋಡುವ; ಹೆಣ್ಣನ್ನು ದೇಹವಾಗಿ ನೋಡುವ ಕಣ್ಣುಗಳ ಒಡತಿ ನಾನು ಅನ್ನುವುದಕ್ಕಿಂತ ಹೀನವೊಂದು ಹೆಣ್ಣಿಗೆ ಇದೆಯೆ? ಎನ್ನಿಸುವ ಕಾವ್ಯವಿದು. ಬಹುಶ: ತ್ರಿಜಟೆ ಮತ್ತು ಸೀತೆಯರ ಸಂವಾದದಲ್ಲಿ ಯುದ್ಧ ನಡಿತ್ತಾಯಿದೆ. ರಾವಣನಿದ್ದಿದ್ದರೆ ಹೇಳಬಹುದಿತ್ತೇನೊ? ಸೀತೆ ಪವಿತ್ರಳು ಅಂತ. ಆದರೆ ಹೇಳಬೇಕು ಯಾರಿಗೆ ಲಂಕೆಯ ಯುದ್ಧ ಮುಗಿದರೂ ಶಂಕೆ ಯುದ್ದಕ್ಕೆ ಮುಕ್ತಾವಿಲ್ಲ. ರಾಕ್ಷಸ ಸ್ತ್ರೀ ಸಮನ್ವಯ.. ಆ ದನಿ ಕೇಳಿದ ತಕ್ಷಣ ಸೀತೆ ಎಚ್ಚರವಾಗುತ್ತಾ ಹೇಳ್ತಾಳೆ. ಸೀತೆ ಈಗ ಮೊದಲಿನ ಸೀತೆಯಲ್ಲ. ಅವಳೀಗ ಬದಲಾಗಿದ್ದಾಳೆ; ಬೆಳೆದಿದ್ದಾಳೆ, ಗಟ್ಟಿಯಾಗಿದ್ದಾಳೆ 'ಪುಣ್ಯ' ಚಿದ್ರಗೊಂಡಿಲ್ಲ. ಸೀತೆಗೆ, ರಾಮನ ಮಾತು; "ತೊಲಗು ತೊಲಗು ಎಲ್ಲಾದರೂ" ಎಂದಾಗ ಸೌಮಿತ್ರಿ ರಚಿಸು ಚಿತೆಯಂ; ಓ ಅಗ್ನಿ ದೈಗೆ ಕರೆದ್ಯೊಯಿ ಅಗ್ನಿ. ಆ ಭಾಗ ಚಿತೆಯನ್ನ ಪ್ರವೇಶ ಮಾಡೋದಕ್ಕೆ ಹೋಗ್ತಾಳೆ. ತಕ್ಷಣ ರಾಮ, ಸೀತೆ ಚಿತೆಯನ್ನು ಪ್ರದಕ್ಷಿಣೆ ಮಾಡುವಷ್ಟರಲ್ಲಿ ರಾಮನೂ ಜೊತೆಗೂಡಿ ಪ್ರವೇಶ ಮಾಡ್ತಾನೆ.

ತ್ರಿಜಟೆ:

ಮತ್ತು ಸೀತೆಯರ ಸಂವಾದದ ಭಾಗದ ಒಂದು ಸಂದರ್ಶನದಲ್ಲಿ ಯುದ್ಧ ನಡೆಯುತ್ತಿದೆ ತ್ರಿಜಟೆಗೆ ಸಾಕುಸಾಕಾಗಿದೆ. ಏಕೆಂದರೆ ಅವಳ ತಂದೆ ಗಾಯಗೊಂಡಿದ್ದಾನೆ. ಅವಳ ತಮ್ಮನನ್ನ ಅಪಹರಿಸಲಾಗಿದೆ. ನಾಳಿನ ಯುದ್ಧಕ್ಕೆ ಅವಳ ಗಂಡ ಹೋಗುವವನಿದ್ದಾನೆ. ತಡೆಯಲಾರದೆ ತ್ರಿಜಟೆ ಸೀತೆಗೆ ಏನ್ ತಾಯಿ ನಿನ್ನೊರ್ವಳಿಂದೆ

ಏನೇನಪ್ಪುದಿರ್ಕುಮೋ ಆರ್ರಾರ್ಗೆ"" ನೀನೊಬ್ಬಳ ಸಲುವಾಗಿ ನಾವು ಲಂಕೆಯ ಜನ ಏನೇನು ಅನುಭವಿಸಬೇಕು ಎಂದಾಗ ಸೀತೆ ನೊಂದು ಕೊಳ್ಳದೆ ಸತ್ಯ ಕುಳಿತುಕೊ ನಾನು ನೂರ ಸಲ ಇದನ್ನೆ ಅಂದು ಕೊಂಡಿದ್ದೀನಿ. ನನ್ನ ತಂದೆ, 'ಮಿಥಿಲೇಶ' ನೆಲದಿಂದ ಹೆಣ್ಣು ಶಿಶುವಾದ ನನ್ನನ್ನು ಹೆತ್ತಲಿಲ್ಲ. ಹೆಣ್ಣಿನ ಲೋಕವನ್ನೆ ಹೆತ್ತಿದ; ಹೆತ್ತಿ ರಾಮನ ಕೈಗೊಪ್ಪಿಸಿದ ರಾಮನ ಕೈಗೊಪ್ಪಿಸಿದ ಮೇಲೆ ರಾಮನಿಂದ ಸಾಕೇತ, ಸಾಕೇತದಿಂದ ಲಂಕೆ; ಲಂಕೆಯಿಂದ ಅಯೋಧ್ಯೆ, ಆ ಶೋಕ ತೂಗುತ್ತಿದೆ. ನೋಡು ಆ ತೂಗು ಮಂಚವನ್ನ ಎನ್ನುತ್ತಾಳೆ ಸೀತೆ. ತ್ರಿಜಟೆಗೆ ಹೇಳುವಾಗ ಸೀತೆಯಾಗ ವಯಸ್ಸಿನಲ್ಲಿ ಚಿಕ್ಕವಳಿರಬಹುದು ಆದರೆ ಮನಸ್ಸಿನಲ್ಲಿ ದೊಡ್ಡವಳಾಗಿದ್ದಾಳೆ. ತನ್ನ ತಾಯಿ ವಯಸ್ಸಿನ ತ್ರಿಜಟೆಗೆ ಹೇಳುತ್ತಾ ನನ್ನ ಮಾಂಗಲ್ಯಮಂ ಪಣವಿಟ್ಟ ಪೇಳ್ವೆನೀ ಪೂರ್ಣೆಯಂ: ನಿನಗೆ ವೈಧವ್ಯಮಾದಂದೆನಗೆ ವೈಧವ್ಯಮೆಂದು ತಿಳಿ!" ನನ್ನ ಮಾಂಗಲ್ಯದಾಣೆ ನಿನ್ನ ಮಾಂಗಲ್ಯವನ್ನು ಕಾಪಾಡುವ ಜವಾಬ್ದಾರಿ ನನ್ನದು ಎಂದು ಹೇಳಿ ಧ್ಯಾನಸ್ಥಳಾದ ಆಕೆ ಇದೇ ತಪ್ಪಶಕ್ತಿ ಇದ್ದಿರಬಹುದಲ್ಲವೆ? ಎಂದು ಕೊಳ್ಳುತ್ತಾ ನಡೆಯಲಿ ನನ್ನ ಮಾತು, ಉಳಿಯಲಿ ತ್ರಿಜಟೆಯ ಮಾಂಗಲ್ಯ. ಮಾರನೆ ದಿನ ಅದು ನಡೆಯುತ್ತೆ. ರಾವಣ ತೀರ್ಮಾನಿಸುತ್ತಾನೆ. ಯುದ್ಧ ಸಾಕಿನ್ನು, ಇನ್ನೇನಿದ್ದರೂ ನೇರಾನೇರ ಮುಖಾಮುಖಿ. ಎಲ್ಲಾ ಸೈನಿಕರನ್ನ ಒಳಗೊಂಡ ರಕ್ತಪಾತ ಸಾಕು. ನಾನೊಬ್ಬನೆ ಇಳಿಯುತ್ತೇನೆ ರಣಭೂಮಿಗೆ. ರಾವಣ, ಇಳಿಯುತ್ತೇನೆ ಯುದ್ಧ ಭೂಮಿಗೆ ಎಂಬುದನ್ನ ಗಮನಿಸಬೇಕು.

ಅನಲೆ :

'ಅನಲೆ' ಮರೆಯಬಾರದ ಪಾತ್ರ. ಮರೆಯಲಿಕ್ಕೆ ಅಸಾಧ್ಯವಾಗುವ ಪಾತ್ರ. ರಾವಣನ ಪಾಲಿಗೆ 'ಅನಲೆ' ಹೆಣ್ಣು ಹೆರದ ತಂದೆ ಮಗಳವಳು. ಹೆಣ್ಣು ಮಗುವನ್ನ ಹೆತ್ತು ಬೆಳೆಸಿಲ್ಲ ಅದಕ್ಕೆ ವಿಭೀಷಣನಿಗೆ ಹೇಳ್ತಾನೆ ರಾವಣ, ನಿನ್ನ ಮಗಳಲ್ಲ ಅನಲೆ ನನ್ನ ಮಗಳು, 'ಬಾ ಅಕ್ಕ' ಅಂತ ಮಮತೆಯಿಂದ ಕರೆಯುತ್ತಾನೆ. ರಾವಣನ ಮಮತೆಯ ಒಂದು ದೊಡ್ಡ ರೂಪಕ ಅನಲೆ. ಅನಲೆ ಮತ್ತು ರಾವಣನ ಮುಖಾಮುಖಿಯಲೆಲ್ಲಾ ನಮಗೆ ತಿಳಿಯುವುದು, ಇಷ್ಟು ಒಳ್ಳೆಯ ಅಪ್ಪ ಅಷ್ಟು ಕೆಟ್ಟ ಗಂಡಸು ಯಾಕಾಗುತ್ತಾನೆ. ಇಷ್ಟು ಒಳ್ಳೆಯ ತಂದೆ ಮಗಳನ್ನು ಮಗಳ ಜೀವವನ್ನು ತನ್ನ ಜೀವವೆಂದು ಭಾವಿಸುವ ಗಂಡಸು ಇನ್ನೊಂದು ಹೆಣ್ಣನ್ನ ಅಷ್ಟು ಕೆಟ್ಟವನಾಗಿ ನೋಡುವ ಸ್ಥಿತಿ ಏಕೆ ಬೆಳೆಯುತ್ತೆ. ಅವನಿಗೆ ಅದರ ಮೂಲ ಎಲ್ಲಿದೆ ಯಾವ ತಪ್ಪಿನಿಂದ ನಮಗೆ ಈ ರೀತಿಯ ತೊಂದರೆಗಳು ಸಂಭವಿಸುತ್ತಿವೆ ಸಮಾಜದಲ್ಲಿ. ಹಾಗಾಗಿ ಕಾವ್ಯ ಅಲ್ಲಿಗೆ ನಿಲ್ಲದೆ

ಇಲ್ಲಿಗೆ ಬರುತ್ತೆ.

ಅನಲೆ ಮತ್ತು ಸೀತೆಯ ಸಂಬಂಧವನ್ನ ಗಮನಿಸಿದರೆ, ಸೀತೆಯನ್ನು ತಕ್ಕೈಸುತ್ತಾ ಅನಲೆ ಕುಂಭಕರ್ಣ ಸತ್ತು ಹೋಗಿದ್ದಾನೆ. ನೋವನ್ನ ಹಂಚಿಕೊಳ್ಳೋದಕ್ಕೆ ಅನಲೆ ಓಡುವುದು ಅಶೋಕವನದ ಸೀತೆಯ ಬಳಿಗೆ ಓಡಿ ಹೇಳುತ್ತಾ "ನಿನಗೆ ಗೊತ್ತಿಲ್ಲ ನೀನು ನೋಡಿದ್ದರೂ ನನ್ನ ಮಾತನ್ನ ಒಪ್ಪುತ್ತಿದ್ದೆ. ಹೇಗಿದ್ದ ಗೊತ್ತಾ ನನ್ನ ದೊಡ್ಡಯ್ಯ; ನಮ್ಮೊಂದಿಗೆ ಆಡುತ್ತಿದ್ದ ಯಾವಾಗಲೂ ಮಲಗಿಯೇ ಇರುತ್ತಿದ್ದ. ಹೋಗಿ ತೊಂದರೆ ಕೊಡುತಿದ್ವಿ. ಒಮ್ಮೆಲೆ ಎದ್ದವನೆ ನಾನು ಮಗುವಾಗಿದ್ದಾಗ ನನ್ನನ್ನು ಎತ್ತಿ ತೂರಿ ಹಿಡಿಯುತ್ತಿದ್ದ. "ಹೂವಿನ ಚೆಂಡು, ಹೂವಿನ ಚೆಂಡು; ಚೆಂಡು ಹೂ ನೀನು, ಚೆಂಡು ಹೂ ನೀನು" ಅನ್ನುತ್ತಿದ್ದ. ಅದಿನ್ನೂ ನನ್ನ ಕಿವಿಯಲ್ಲಿ ಗುನುಗುನಿಸುತ್ತಿದೆ. ತಾಯಿ ಯುದ್ಧ ಬೇಕೆ? ಇದು ಅನಲೆ ಎತ್ತುವ ಬಹು ಮುಖ್ಯಪ್ರಶ್ನೆ. ಹಾಗೆಯೇ ಇದು ರಾಮಾಯಣ ದರ್ಶನಂ ಎತ್ತುವ ಬಹಳ ಮುಖ್ಯ ಪ್ರಶ್ನೆಯೂ ಹೌದು. ಯುದ್ಧ ಬೇಕೆ? ಯುದ್ಧ ವಿರೋಧಿಯಾದ ಹೆಣ್ಣು ಎಂದೂ ಕೂಡ ಯುದ್ಧದ ವಿರೋಧಿ, ಹೆಣ್ಣು ಎಂದೂ ಕೂಡ ತನ್ನ ಗರ್ಭದ ರಕ್ತವನ್ನ ಬೀದಿಯಲ್ಲಿ ಚೆಲ್ಲುವುದನ್ನ ಇಷ್ಟಪಡುವುದಿಲ್ಲ ಎನ್ನುವುದನ್ನ ರಾಮಾಯಣ ದರ್ಶನಂನ ಅನಲೆಯ ಪಾತ್ರ ಹೇಳುತ್ತೆ. ಪುಟ್ಟ ಮಗು ಅನಲೆ; ಷೋಡಷಿ ಅನಲೆ ಇನ್ನೂ ಮದುವೆ ಆಗದ ತಾಯಿಯಲ್ಲದ ಅನಲೆ ಲೋಕಕ್ಕೆ ತಾಯಿಯಾಗಲು ಹೊರಡುತ್ತಾಳೆ. ಅನಲೆ ಹೇಳುತ್ತಾ ಸೀತೆಗೆ "ಪೆಣ್ ತಟಸ್ಥಮಿರಲೇಕೆ? ಗಂಡುಗಳಿಂತು ಮೈಮರೆತು ಕ್ರೋಧಮೂರ್ಛಿತರಾಗಿ, ಸರ್ವನಾಶಕೆ ಮಲೆತು ಪಣೆ ಪಣೆದು ನಿಲ್ಲಲ್? ಪೆಣ್ಣು ತಟಸ್ಥಂ ಇರಲೇಕೆ? ಮಹೀಯಿಸಿ, ನೀನೊಪ್ಪೆ ನೆರಮಪ್ಪೆ ನಾ. ನಿನಗೆ ನೆರಮೆಪ್ಪಳು ನಾ ಬಲ್ಲೆನು ನೆರಮಪ್ಪಳು ಆ ದೊಡ್ಡಮ್ಮ ಆ ಮಂಡೋದರಿ. ದೇವಿ ಆ ತಾರಾಕ್ಷಿ ಮೇಘನಾದನ ಪತ್ನಿ ನನ್ನತ್ತಿಗೆ ಮತ್ತು ನೆರಮಪ್ಪಳು ಎನಗೆ. ಕೇಡ್ ನಿನ್ ಇಲ್ಲಿಗೆ ತರಲು ಸಂಚು ಹೂಡಿದ ಚಂದ್ರನಖಿಯೂ ಈಗ ಬೇರೆ ಬಗೆಯಳವೆ? ನಾವೆಲ್ಲರೂ ಸೇರಿ ಯುದ್ಧವನ್ನ ತಡೆದುಬಿಡೋಣ; ಬೇಡ ಈ ಯುದ್ಧ ಸಾಕು ಈ ಜೀವ ಹಿಂಸೆ / ಹಾನಿ ಸಾಲ್ಗುಂ ಈ ಲಂಕೆ, ಸಾಲ್ಗು ಈ ಕೊಲೆ. ಆರಂಭದ ಆ ಮಾತಿದೆಯಲ್ಲ. ಕೊಲೆ ಸಾಲ್ಗುಂ; ಸಾಕಾಗಿದೆ ಈ ಕೊಲೆ ಈ ಮಾತನ್ನ ಅನಲೆ ಹೇಳಿದಾಗ ಸೀತೆ ಕಂಗಲಾಗಿ ಹೇಳುತ್ತಾಳೆ. ನಾನ ಅಸ್ವತಂತ್ರಳು ಕುವರಿ; ನನಗೆ ಸ್ವಾತಂತ್ರವಿಲ್ಲ ಮಗಳೆ ನಿನ್ನವರು . . . . . ನೀನು ಸ್ವತಂತ್ರರು ನಡೆಸು ಕೈಗೂಡಲಿ ಹರಸುವೆ ನಾನ್" ಹರಸುವುದೊಂದನ್ನು ಬಿಟ್ಟು ಇನ್ನೇನು ಮಾಡಲು ಸಾಧ್ಯವೇ ಇಲ್ಲವೆನ್ನುವ ಸೀತೆ ಏನಾದರೂ ಮಾಡಲೇ ಬೇಕೆನ್ನುವ

ಅನಲೆ ಏನಾದರೂ ಮಾಡಲೇ ಬೇಕೆನ್ನುವ ಇಂದಿನ ಯುವ ಮನಸ್ಸಿನ ಎಳೆ ಮನಸ್ಸಿನ ಜೀವ ಸಂಶೋಧನೆಯ ತುಡಿತದ ಮಾದರಿಯಾಗಿ ಅನಲೆಯ ಪಾತ್ರವಿಲ್ಲಿ ಕಾಣುತ್ತದೆ. ಬದಲಾಗಲಿ ಈ ಬದುಕು ಅನ್ನುವಂಥ ದೊಡ್ಡ ಗುಣವಾಗಿ ಅನಲೆಯ ನುಡಿಗಳು ಕಾಣಿಸುತ್ತವೆ. ಹಾಗಾಗಿ ಹಿಡೀ ಕಾವ್ಯ ಲಂಕೆಯ ಕಥೆ ಮುಗಿಯಿತು ಆದರೆ ಸೀತೆಯ ಕಥೆ ಉಳಿಯಿತು. ನಮ್ಮ ಜನ ಹೇಳುವಂತೆ ಮುಗಿದಾವ ನಮ್ಮ ಜೋಳ, ಉಳಿದಾವೆ ನಮ್ಮ ಕಾಳು ಎನ್ನುವಂತೆ ಹಿಟ್ಟು ಬೀಸ್ತಾ ಜೋಳ ಮುಗೀತು ಆದರೆ ಕಾಳು ಉಳಿಯಿತು. ಉಳಿದ ಕಾಳಿನ ಒಂದು ರೂಪಕವಾಗಿ; ಘಟನೆಯಾಗಿ ಕಾಣುವ ಕೊನೆಯ ಭಾಗ: ಕೊನೆಯಿಲ್ಲದಿದ್ದರೂ ಕಥಾ ಚರಿತ್ರೆಯೊಳಗೆ ಕಥಾ ಹಂದರದೊಳಗೆ 'ರೈ ಕರೆದೊಯ್ಯ ಅಗ್ನಿ;' ಸೀತೆ ಏನೆಲ್ಲವನ್ನು ಕಂಡವಳು, ಉಂಡವಳು, ಕಟ್ಟವಳು, ಅನುಭವಿಸಿದವಳು ಇಷ್ಟು ಕಾಲ ಅಶೋಕವನದಲ್ಲಿ ಸ್ನಾನವೇ ಇಲ್ಲದೆ ಇದ್ದವಳು. ಅದೇ ಬಟ್ಟೆಯಲ್ಲಿ ಇದ್ದವಳು. ರಾವಣನಂತಹ ರಾವಣ ಒಮ್ಮೆ ಬಂದು ತ್ರಿಜಟೆ ಬಳಿ ಗುಡುಗುತ್ತಾ ಹೇಳುತ್ತಾನೆ. "ಸೀತೆಯೆ ಇವಳು. ಸೀತೆಯ ಭೂತ/ಪ್ರೇತ". ಸೀತೆಯಲ್ಲ, ಸೀತೆಯ ಪ್ರೇತ" ಇದೇ ಮಾತನ್ನ ಚಂದ್ರನಖಿ ಕೇಳುತ್ತಾಳೆ. ನಿನಗೆ ಈಗಲೂ ಕಾಮ ಭಾವನೆಯಿಕ್ಕೆ ಸೀತೆಯ ಮೇಲೆ. ಅದಕ್ಕೆ ರಾವಣ ಹೇಳುತ್ತಾ "ಇಲ್ಲ ಇಲ್ಲ ಕಾಮ ಭಾವನೆಯಿಕ್ಕೆ ಎಂದೋ ಸೊಲ್ಲುಗ್ಗಂ. ಮೊಹಂ ಅಕ್ಕುಂ; ಮೋಹ ಇದೆ ನನಗೆ ಯಾವ ಮೋಹವೆಂದರೆ ಅವಳ ತಾಯಿತನದ ಮೋಹ ಉಳಿದು ಬಿಟ್ಟಿದೆ ಅದರಿಂದ ಹೇಗೆ ಪಾರಾಗಬೇಕೊ ನನಗೊತ್ತಿಲ್ಲ. ರಾವಣ ಹೀಗೆ ಬದಲಾಗಲಿಕ್ಕೆ ಸೀತೆ ಕೈಗೊಂಡ ಅದ್ಭುತವಾದ ತಪಶ್ಚರ್ಯೆ ಇದೆಯಲ್ಲ ಬಹಳ ದೊಡ್ಡದದು. ಆ ತಪಶ್ಯರ್ಯೆಗೆ ಎದುರಾಗುವ ತ್ರಾಣ ರಾಮನಿಗೂ ಇಲ್ಲ. ಅದಕ್ಕೆ ಅವನ ಆಜ್ಞೆ ಆಗಿದೆ. "ಸೀತೆಯನ್ನು ಸ್ನಾನ ಮಾಡಿಸಿ ತಲೆಸ್ನಾನ ಮಾಡಿಸಿ ಶುಭ್ರಸ್ನಾನಯಾಗಿಸಿ ಹೊಸ ಉಡುಗೆಯನ್ನು ಉಡಿಸಿ ಮದುವಣಗಿತ್ತಿಯಂತೆ ಕರೆತರಬೇಕು". ಇದನ್ನು ಹೇಳುವ ಸಂದರ್ಭ ಗಮನಿಸುವುದಾದರೆ ರಾವಣ ಮಡಿದಿದ್ದಾನೆ್ಲ ಯುದ್ಧ ಭೂಮಿಯಲ್ಲಿ ಗಾಯಗೊಂಡ ರಾವಣ ಮಧ್ಯ ರಾತ್ರಿಯಲ್ಲಿ ಅಸು ನೀಗುತ್ತೆ. ಬೆಳಗ್ಗೆಯಷ್ಟರಲ್ಲಿ ಇಚ್ಛಾ ಮರಣಿಯಾದ ಮಂಡೋದರಿಯ ಸುದ್ದಿಯಿದೆ. ಸೀತೆ ಅಂದುಕೊಳ್ಳುತ್ತಾ "ಗೆದ್ದಳು ಮಂಡೋದರಿ, ಗೆದ್ದಳು ಮಂಡೋದರಿ". ಸರಿ ಕಾಯ್ತಾ ಇದ್ದಾಳೆ ಸೀತೆ. ಬರಬಹುದು ಆ ಬೆಳಕು "ರೈಗೆ ಕರೆದ್ಯೊಯ್ ಕೊ ಅಗ್ನಿ" ಆ ಸಾಲು ಬೆಳಗಾಗೊದೆ ಹೀಗೆ ಸೂರ್ಯ ಕೇಳ್ತಾನೆ ಉಷೆಗೆ; ಇನ್ನೇಕೆ ಶಂಕೆ? ಇನ್ನೊನು ತಡೆ ಸೀತೆಯನ್ನು ಕರೆತರಲು. ಇದು ಓದುಗರೆಲ್ಲರ ಪ್ರಶ್ನೆಯೂ ಹೌದು. ಆದರೆ ದೊಡ್ಡ ತಡೆಯೊಂದು ರಾಮನ ಮುಂದಿದೆ. ಸೀತೆ ಕಾಯುತ್ತಿದ್ದಾಳೆ ನೋಡು

ಆರ್ ಅವರ್ ಎಲ್ಲ ಬಂದರ್ ಯಾರವರ್ ತ್ರಿಜಟೆ ಕೋಪಿಸಿಕೊಳ್ಳುತ್ತಾ ಹೇಳ್ತಾಳೆ. ಇಲ್ಲ ಇಲ್ಲ ನವಿಲುಗಳು ಅವು. ಅದಕ್ಕೆ ಸೀತೆ, ನವಿಲಲ್ಲ ನೀಲದೇಹಿ ಅವನು ನೀನು ನವಿಲೆಂದುಕೊಂಡಿದ್ದೀಯಾ ಎಂದ್ದಕ್ಕೆ ತ್ರಿಜಟೆ ಇಲ್ಲ ತಾಯಿ ಅವನಲ್ಲ. ಕೊನೆಗೆ ಬಂದರು ವಿಭೀಷಣ ಅನಲೆ. ತನ್ನ ಪತಿಯನ್ನ ಕಾಣೊದಕ್ಕೆ ನಾನು ಹೀಗೆ ಹೋಗೋದಕ್ಕೆ ಇಷ್ಟಪಡ್ತೀನಿ ಎನ್ನುತ್ತಾಳೆ. ಆದರೆ ರಾಜಾಜ್ಞೆಯಿದು ಅರಸಿ ಎಂದು ಬಹಳ ಸಣ್ಣಗೆ ವಿಭೀಷಣ ಹೇಳ್ತಾನೆ. ರಾಮನಾಜ್ಞೆ ಆಗಿದೆ. ಆಯಿತು ಎನ್ನುತ್ತಾಳೆ ಸೀತೆ. ಅಲಂಕೃತಳಾದ ಸೀತೆಯನ್ನ ವಿಭಿಷಣ ಮಗಳು ಅನಲೆಗೆ ಕೊಡುವ ಸೂಚನೆ ಎಂದರೆ "ಅಂದು ಮಿಥಲೆಯಿಂದ ಸೀತೆಯ ದಿಬ್ಬಣ ಸಾಕೇತ ನಗರಿಗೆ ಹೊರಟಂತೆ ಇಂದು ಹೊರಡಲಿ ಅಲಂಕರಿಸು ಅವಳನ್ನು" ಲಂಕೆಯ ಮಗಳವಳು" ಸೀತೆಯನ್ನ ಅಲಂಕರಿಸಲಾಗಿದೆ. ಜವನಿಕೆಯನ್ನ ಹೊದೆಸಿ ತರಲಾಗಿದೆ. ರಾಮ ಕೆಂಡಾಮಂಡಲನಾಗಿದ್ದಾನೆ, "ಜವನಿಕೆಯಾಕೆ? ಅಗ್ನಿಯಷ್ಟು ಶುದ್ಧವೆ? ಅದು. ಹೆಣ್ಣೆ ಎಂಬ ಪಾವಿತ್ರ್ಯವನು ಕಾಪಾಡಲು" ಅನ್ನುತ್ತಾನೆ. ತೆಗೆ ಜವನಿಕೆಯ ಅವಳಿಗಾಗಿ ಹೋರಾಡಿದ, ಬದುಕುಳಿದ ಎಲ್ಲರನ್ನು ಅವಳು ನೋಡಲಿ; ಅವಳನ್ನ ಎಲ್ಲರೂ ನೋಡಲಿ ಎಂದು ಕಡೆಗಣ್ಣುಪೇಕ್ಷೆಯಿಂದ ದಾಶರಥಿ ಬಂದು ನಿಂತ ಸೀತೆಯನ್ನ ನೋಡಿದವನಂತೆ ತುದಿಗಣ್ಣಿನಿಂದ. ನೋಡಿ ಹೇಳುತ್ತಾನೆ. "ಸೀತೆ ಸುಷ್ಣಾತೆ, ಶುಶೋಭಿತೆ, ರಾಕ್ಷಸ ಸ್ತ್ರೀ ಸಮನ್ವಿತೆ". ಗೊತ್ತಾಗುತ್ತೆ ಸೀತೆಗೆ, ರಾವಣನಿದ್ದಿದ್ದರೆ ಹೇಳಬಹುದಿತ್ತೇನೋ ಸೀತೆ ಪವಿತ್ರಳು ಅಂತ ಆದರೆ ಹೇಳುವುದು ಯಾರಿಗೆ ಲಂಕೆಯ ಯುದ್ಧ ಮುಗಿಯುತ್ತೆ. ಶಂಕೆಯ ಯುದ್ಧಕ್ಕೆ ಮುಕ್ತಾಯವೇ ಇಲ್ಲ. ರಾಕ್ಷಸ ಸ್ತ್ರೀ ಸಮನ್ವಿತೆ. ಆ ದನಿ ಕೇಳಿದ ತಕ್ಷಣ ಸೀತೆ ಎಚ್ಚರಾಗ್ತಾಳೆ. ಮೊದಲಿನ ಸೀತೆಯಲ್ಲ, ಅವಳೀಗ ಬದಲಾಗಿದ್ದಾಳೆ. ಬೆಳೆದಿದ್ದಾಳೆ. ಗಟ್ಟಿಯಾಗಿದ್ದಾಳೆ ಪುಣ್ಯ ಚಿದ್ರಗೊಳ್ಳಲಿಲ್ಲ. ಸೀತೆಗೆ ರಾಮನ ಮಾತು ತೊಲಗು ತೊಲಗಾಚೆ ಎಲ್ಲಾದರೂ. ಸೌಮಿತ್ರಿ ರಚಿಸು ಚಿತೆಯನ್ನು "ಓ ಅಗ್ನಿ, ರೈಗೆ ಕರೆದ್ಯೊಯ್, ಓ ಅಗ್ನಿ ಆ ಭಾಗದಲ್ಲಿ ಚಿತೆಯನ್ನ ಪ್ರವೇಶ ಮಾಡಲು ಹೋಗ್ತಾಳೆ ತಕ್ಷಣ ರಾಮ ಚಿತೆಯನ್ನು ಸೀತೆ ಪ್ರದಕ್ಷಿಣೆ ಹಾಕಿ ಪ್ರವೇಶ ಮಾಡುವ ಸಂದರ್ಭದಲ್ಲಿ ರಾಮನೂ ಓಡಿ ಪ್ರವೇಶ ಮಾಡುತ್ತಾನೆ. ಅಲ್ಲಿಗೆ ಸೀತೆಯನ್ನು ಪರೀಕ್ಷಿಸಿದ ರಾಮ ಸೀತೆಗಾಗಿ ಚಿತೆಯ ಆಹ್ವಾನವನ್ನು ಒಡ್ಡಿದ ರಾಮ ಸೀತೆಯನ್ನು ಅಗ್ನಿ ಪ್ರವೇಶ ಮಾಡಿಸಿದ ರಾಮ ಅನ್ನುವ ಆರೋಪದಿಂದ ರಾಮಾಯಣ ದರ್ಶನಂನ ರಾಮ ಮುಕ್ತನಾಗ್ತಾನೆ ಅಥವಾ ಕೈಗೆ ಅಂಟದೆ ರಕ್ತ ಕೊಲೆಗೈಯುವ ರೀತಿಯಲ್ಲಿ. ಸೀತೆಯಾಗಿ ಸೀತೆಯೇ ಹೇಳುತ್ತಾಳೆ ಚಿತೆಯನ್ನ ರಚಿಸು ಅಂತ. ಚಿತೆಯನ್ನ ರಚಿಸಿ ಪ್ರವೇಶ

ಮಾಡಿಸಬೇಕು ಅಂತ ರಾಮ ಎಲ್ಲಿ ಹೇಳ್ತಾನೆ, ಹೇಳಲ್ಲ ಇಲ್ಲಿ ಆದರೆ ಮೂಲ ರಾಮಾಯಣದ ಬಗ್ಗೆ ಅಂತ ಮಾತಾಡುವುದು ತಪ್ಪು ಅಂತ ಗೊತ್ತಿದ್ದರೂ ಮೂಲ ವಾಲ್ಮೀಖಿ ರಾಮಾಯಣಕ್ಕೆ ಹೋದರೆ; ಅಲ್ಲಿ ಸೀತೆ ಅಗ್ನಿ ಪ್ರವೇಶ ಮಾಡುವಾಗಿರುವ ಒಂದು ಶ್ಲೋಕ ದಿಕ್ ದಿಕ್ ಧಿಕ್ಕಾರವಿರಲಿ ಇಕ್ಷ್ವಾಕುವಂಶಕೆ, ಧಿಕ್ಕಾರವಿರಲಿ ರಘು ಸಂಭವನಿಗೆ, ಧಿಕ್ಕಾರವಿರಲಿ ಎನ್ನ ಹೆಣ್ತನಕೆ. ಆದರೆ ಅತ್ಯಂತ ಸುಶೀಲವಾದ ಸಮಾಧಾನವಾದ ಧಾಟಿಯಲ್ಲಿ ದಾಂಪತ್ಯ ಧರ್ಮವನ್ನ ಬೆಳೆಸುವ ಬಿಚ್ಚುಗದಲ್ಲಿ ನಿರತವಾದ ಶ್ರೀಕುವೆಂಪು ಅವರಿಗೆ ಸೀತೆಯ ಪ್ರತಿರೋಧವನ್ನ ಇಷ್ಟು ತೀಕ್ಷ್ಣವಾಗಿ ಕೊಡುವ ಮನಸ್ಸಿಲ್ಲ. ಹಾಗಾಗಿ ಇಲ್ಲಿ ಸೀತೆ ಅತ್ಯಂತ ಪೇಲವವಾಗಿ ಬಿಡುತ್ತಾಳೆ. ಇವಳು ಪೇಲವ ಆಗ್ತಾಳೆ ಅಂದುಕೊಳ್ಳುವುದು ಮುಂದಿನ ಪಟ್ಟಾಭಿಷೇಕ ಮತ್ತು ಮುಂದಿನ ಎರಡು ಅಧ್ಯಾಯಗಳ ಭಾಗ ಇರಬಹುದು. ಅಲ್ಲೆಲ್ಲಾ ರಾಮ ಮತ್ತು ಸೀತೆಯರ ನಡುವೆ ಮಾತೇ ಇಲ್ಲ. ಸಲ್ಲಾಪವಿರಲಿ; ವಾಗ್ವಾದವೂ ಇಲ್ಲ. ಮಾತೆ ಇಲ್ಲ ರಾಮ ಸೀತೆಯರ ಮಧ್ಯೆ ಸಂಭಾಷಣೆಯ ತಂತುವೊಂದು ಕಡಿದು ಹೋಯಿತು. ಎಲ್ಲಿತ್ತದು; ಅಲ್ಲಿತ್ತು, ವನವಾಸದಲ್ಲಿತ್ತು. ಅಲ್ಲಿ ಕವಿ ಕುವೆಂಪು ಉದ್ಗಾರದಂತೆ "ನಮಿಸುವೆ ಶ್ರೀರಾಮನ ಚರಣಕೆ ದೈತ್ಯನನು ಸಂಹರಿಸಿದ್ದಕ್ಕಾಗಲ್ಲ. ಸೀತೆಯನು ಉದ್ಧರಿಸಿದ್ದಕ್ಕೆ ತನ್ನ ಮಡದಿಯ ಜೊತೆಗಿನ ಸಂಬಂಧಕ್ಕಾಗಿ ನಾನು ರಾಮನನ್ನು ಗೌರವಿಸುತ್ತೇನೆ". ಆದರೆ ಇಲ್ಲಿಗೆ ಬಂದಾಗ ಸೀತೆ ಇದ್ದೂ ಇಲ್ಲದ ಬರೀ ಪಾತ್ರವಾಗ್ತಾಳೆ. ಜೀವಶವ ಆಗ್ತಾಳೆ ಜೀವಂತವಾದ ಉಸಿರಾಡುವ ಗೊಂಬೆಯಂಥಾಗುತ್ತಾಳೆ. ಸೀತೆಯ ಮಾತು ಕೇಳುವುದು ಕೊನೆಯ ಒಂದೇ ಒಂದು ಸೊಲ್ಲು. ಅದೆಲ್ಲಿ ಎಂದರೆ ಮರಳಿ ಅಯೋಧ್ಯೆಯನ್ನು ಸೇರಲಾಗಿದೆ. ಸೀತೆಗೀಗ ಅಪ್ಪನನೊಮ್ಮೆ ನೋಡುವ ಬಯಕೆ. ಆದರೆ ಅದನ್ನು ಅವಳು ರಾಮನೊಂದಿಗೆ ಹೇಳಲಾರಳು. ಏಕೆಂದರೆ ಸೀತೆ, ಕೌಸಲ್ಯೆಯ ಬಳಿ ಸಣ್ಣ ದನಿಯಲ್ಲಿ ಹೇಳ್ತಾಳೆ. "ಅತ್ತೆ ಮಿಥಿಲೇಶನೊನೊಮ್ಮೆ ನೋಡಿ ಬರಲೆ?" ಎಷ್ಟು ದಣಿದಿರಬಹುದು ಸೀತೆ. ಮಿಥಿಲೇಶನನ್ನೊಮ್ಮೆ ನೋಡಿ ಬರಲೆ? ಎಂದಾಗ ಕೌಸಲ್ಯೆಗೂ ಏನೋ ಸೂಕ್ಷ್ಮ ಹೊಳೆದಂತಿದೆ. ಹಾಗಾಗಿ ಅವಳು ಹೇಳ್ತಾಳೆ ನಾಳೆಯ ಪಟ್ಟಾಭಿಶೇಕಕ್ಕೆ ನಿನ್ನ ನಲ್ಲ ಕರೆಸದಿಹನೆ ತನ್ನ ಮಾವನ? ಕರೆಸಬಹುದು ತಾಳು. ಅಲ್ಲಿಗೆ ಕಥಾ ಪ್ರಪಂಚ ಮುಕ್ತಾಯ ಆಗುತ್ತೆ. ಬಹುಶ: ಹೆಣ್ಣಿನ ನೆಲೆಯಿಂದ ಬಂದು ಅದ್ಭುತವಾದ ಕಾವ್ಯ ಜಗತನ್ನ ಪ್ರವೇಶ ಮಾಡಿ ಆ ಲೋಕವನ್ನ ಪ್ರವೇಶ ಮಾಡಿದರೆ ಏನೆಲ್ಲಾ ಹೊಳಹುಗಳು ನಮಗೆ ಸಿಗಬಹುದೋ ಅದೆಲ್ಲವನ್ನ ಮೊಗೆಮೊಗೆದು ಕೊಡತಕ್ಕ ಶಕ್ತಿ ರಾಮಾಯಣ ದರ್ಶನಂ ಕಾವ್ಯಕ್ಕಿದೆ.

ಅಲ್ಲಿ ಕೊನೆಯ ಭಾಗದ ಸೀತೆ. ಅಥವಾ ನಾವು ಸುಮ್ಮನೆ ಹಾಗೆ ಕೇಳಿಕೊಳ್ಳುವುದಾದರೆ ಮುಂದೆ ನಡೆಯುವ ಕಥೆ ತುಂಬಾ ತುಂಬಾ ಬೇರೆ ಆಗಿದೆ. ರಾವಣನನ್ನು ಎದುರಿಸಬಹುದು ಸೀತೆ ಆದರೆ ರಾಮನನ್ನು ಎದುರಿಸುವ ದಾರಿ ಯಾವುದು? ಎನ್ನುವ ಪ್ರಶ್ನೆ ಸೀತೆಯ ಬದುಕಿನಲ್ಲಿ ಮುಂದುವರಿಯುತ್ತೆ. ಅದು ಮುಂದಿನ ಖಾಲಿತನದಲ್ಲಿ ದರ್ಶನಂ ಎಲ್ಲರ ಅವರವರ ಗ್ರಹಿಕೆಗೆ ಕೈಬಿಡುತ್ತೆ.

ಸಮಾರೋಪ

ಕೊನೆಯ ಕುವೆಂಪು ಮಾತು ಕಲೆಯನಲ್ಲದೆ ಶಿಲ್ಪಿ ಶಿಲೆಯನೇನ್ ಕೆತ್ತಪನೆ? ಆ ಕಲೆ, ಕಲೆಗಿರುವ ಶಕ್ತಿ ಯಾವುದೆಂದರೆ ಶ್ರೀ ರಾಮಾಯಣ ದರ್ಶನಂ ಕುವೆಂಪು ಅವರಿಗೆ ಮಾತ್ರ ಶ್ರೀಕುವೆಂಪು ಸೃಜಿಸಿದ ರಾಮಾಯಣ ದರ್ಶನಂ. ಆದರೆ ಓದುಗ ಅದರೊಳಗೆ ತುಂಬಾ ಮೌನವಾಗಿ ತುಂಬಾ ಒಳಗೆ ಇಳಿತಾ ಹೋದಂಗೆ ಖಂಡಿತ ಓದುಗ ಪ್ರಜ್ಞೆಯನ್ನು ಮರು ಸೃಜಿಸುವ ಶಕ್ತಿ ರಾಮಾಯಣ ದರ್ಶನಂ ಕಾವ್ಯಕ್ಕಿದೆ ಎಂದಿದ್ದಾರೆ ವಿನಯ ಒಕ್ಕುಂದ.

ಪರಾಮರ್ಶನಗಳು :

1. ಶ್ರೀ ರಾಮಾಯಣ ದರ್ಶನಂ ಪಾತ್ರಲೋಕ, ಡಾ.ಎಚ್.ಜೆ. ಲಕ್ಕಪ್ಪಗೌಡ, ಪವನಜ ಪ್ರಕಾಶನ, 2006.

2.https://youtube.co _playlist?list=PLzo_usghXPcgQLcQ1W0XbMFy7VjrLfFsb&si=cVIqwrBOVYnXB4H9

3.https://www.youtube.com/live Pzbj4359CjM?si=Dybf9EIlfNM3a_gN

4.https://youtu.be/quZE0BoUUPM?si=BIMJn1orvdTFE3YO

5.https://youtu.be/aLV5jse7L5I?si=uU1e6Jfs0Xpwll_2

6.https://youtu.be/pT_P__3T0ps?si=_L-J3gGKp-LuMkZh

***

ಬಸವಣ್ಣನವರ ವಚನಗಳಲ್ಲಿ ಸಾಹಿತ್ಯ ಕ್ರಾಂತಿ ಒಂದು ಅವಲೋಕನ

1
ಕೆ.ಎನ್. ನಂದೀಶ
ಸಹಾಯಕ ಪ್ರಾಧ್ಯಾಪಕರು ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಅಂಕೋಲಾ.
ಉತ್ತರ ಕನ್ನಡ ಜಿಲ್ಲೆ.

ಬಸವಣ್ಣನವರು ಹನ್ನೆರಡನೆಯ ಶತಮಾನದಲ್ಲಿ ಮಾಡಿದ ಮಹತ್ತರವಾದ ಕ್ರಾಂತಿ ಹಲವು ಪರಿಯದು. ಮಾನವ ಮತಿವಿಕಾಸದಲ್ಲಿ ಒಂದು ಹೊಸ ತಿರುವನ್ನು ತಂದ ವ್ಯಕ್ತಿಯು ಹಾಗೂ ಸಮಾಜದ ಬದುಕಿನ ಸಮಸ್ತ ಮುಖಗಳಲ್ಲೂ ವಿಚಾರಧಾರೆಯ ಹೊಸ ಬೆಳಕನ್ನು ತಂದ ಸಮಗ್ರಕ್ರಾಂತಿ. ಸಮಾಜ ಸುಧಾರಕರು, ಕ್ರಾಂತಿಯೋಗಿಗಳಾಗಿರುವ ಇವರ ತತ್ವ, ಆದರ್ಶಗಳು ಸಾರ್ವಕಾಲಿಕ ಪ್ರಸ್ತುತ. ತಮ್ಮ ವಚನಗಳ ಮೂಲಕ ಸಮಾಜದ ಅನಿಷ್ಟಗಳನ್ನು ತೊಲಗಿಸಿ ಮಹಾಕ್ರಾಂತಿ ಮಾಡಿದ ಮಹಾಮಾನವತಾದಿಯಾಗಿದ್ದಾರೆ. ‘ಶಿಕ್ಷಣ ಎಂಬುದು ಹುಲಿಯ ಹಾಲಿದ್ದಂತೆ, ಅದನ್ನು ಕುಡಿದವರು ಘರ್ಜಿಸಲೇಬೇಕು’ ಎಂಬ ಸೂಕ್ತಿಯ ನುಡಿದವರು ವಿಶ್ವಜ್ಞಾನಿ ಡಾ. ಬಾಬಾ ಸಾಹೇಬ್ ಅಂಬೇಡ್ಕರರು.

ಮನುಷ್ಯನ ಬದುಕನ್ನು ಹಸನುಮಾಡುವಂತಹದ್ದು ಈ ಶಿಕ್ಷಣ

ಅಥವಾ ಸಾಹಿತ್ಯ ಕ್ರಾಂತಿ ಎನ್ನಬಹುದು.

'ಕಾವ್ಯ ಎಂಬುದು ಉತ್ಕೃಷ್ಟಕ್ರಮದಲ್ಲಿ ಉತ್ಕೃಷ್ಟ ಪದಗಳ ಜೋಡಣೆ' ಎಂಬ ಉಕ್ತಿಯನ್ನು ಕವಿ ವರ್ಡ್ಸ್‌ವರ್ತ್ ಅಭಿಪ್ರಾಯ ಪಟ್ಟಿದ್ದಾರೆ. ಕಾವ್ಯ ಎಂಬುದು ಸಮಸ್ತ ಜ್ಞಾನದ ಉಸಿರು ಮತ್ತು ಅಂತಸ್ಸತ್ವ ಎಂಬ ವಿಚಾರವನ್ನು ಕಾವ್ಯದ ವಿವರಣೆಗೆ ಅರಿಯಬಹುದು.

ಮ್ಯಾಥ್ಯೂ ಆರ್ನಾಲ್ಡ್ 'ಕಾವ್ಯ ಎನ್ನುವುದು ಮನುಷ್ಯನ ವಾಕ್ ಸಾಮರ್ಥ್ಯಕ್ಕೆ ನಿಲುಕಬಹುದಾದಷ್ಟು ಆಹ್ಲಾದಕರ ಹಾಗೂ ಪರಿಪೂರ್ಣ ರೂಪದ ಉಕ್ತಿ'. 'ಕಾವ್ಯ ಸತ್ಯ ಹಾಗೂ ಕಾವ್ಯ ಸೌಂದರ್ಯಗಳ ಅನುಶಾಸನ ನಿಗದಿಪಡಿಸಿದ ನಿಬಂಧನೆಗಳಿಗನುಗುಣವಾಗಿ ಮಾಡುವ ಬದುಕಿನ ವಿಮರ್ಶೆಯಾಗಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಆಧುನಿಕ ಭಾರತದ ಸಮಸ್ಯೆಗಳನ್ನು ಪರಿಹರಿಸಬೇಕೆನ್ನುವ ಮನಸ್ಸಿದ್ದರೆ ಕರ್ನಾಟಕದ ಬಸವೇಶ್ವರರ ಕಡೆಗೆ ನಾವು ಹೊರಳಬೇಕಾಗುತ್ತದೆ' ಎಂಬ ನ್ಯಾಯಮೂರ್ತಿ ಗಜೇಂದ್ರಗಡ್‌ಕರ್ ಅವರ ಹೇಳಿಕೆ ಉಲ್ಲೇಖನೀಯವಾಗಿದೆ. ಜಗತ್ತಿನ ಪ್ರಪ್ರಥಮ ವಿಚಾರವಾದಿ ಮಹಾಕ್ರಾಂತಿವೀರ ಕರ್ನಾಟಕದಲ್ಲಿ ಹುಟ್ಟಿದವರೆಂಬ ಹೆಗ್ಗಳಿಕೆ ನಮ್ಮದಾಗಿದೆ. ಕರ್ನಾಟಕದಲ್ಲಿ ಹುಟ್ಟಿದರೂ ಇಡೀ ಜಗತ್ತಿನ ಕಲ್ಯಾಣಕ್ಕಾಗಿ, ಶ್ರೀ ಸಾಮಾನ್ಯರ ಏಳ್ಗೆಗಾಗಿ ಜೀವ ತೇದ ಮಹಾಮಹಿಮರೆಂದರೆ ಕಲ್ಯಾಣದ ಶರಣರು.

ಬಸವಣ್ಣನವರ ನೂತನ ವಿಚಾರಗಳು ತಂದ ಜನ ಜಾಗೃತಿಯ ಪ್ರಭಾವ ಸಮಸ್ತ ಜೀವನದ ಮೇಲೆ ಬಿದ್ದಿತು, ಸಾಹಿತ್ಯದ ಮೇಲೂ ಸಹಜವಾಗಿ ಬಿದ್ದಿತು. ಜನ ಸಾಮಾನ್ಯರ ಬುದ್ಧಿಗೂ ದೈನಂದಿನ ಬದುಕಿಗೂ ದೂರವಾದುದಾಗಿ ಅಲಂಕಾರ ಭೂಯಿಷ್ಠವಾದ ಪ್ರೌಢಭಾಷೆಯ, ಆಸ್ಥಾನ ಕವಿಗಳ ಕೃತಿಯಾಗಿ ನಿಂತ ಆ ಕಾಲದಲ್ಲಿ ಬಸವಣ್ಣನವರ ಸರಳ-ಸುಂದರ ವಚನದ ನಡೆ ಸಾಹಿತ್ಯ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟುಮಾಡಿತು. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಇದೊಂದು ಮೈಲಿಗಲ್ಲು.

11ನೇ ಶತಮಾನದಲ್ಲಿ ಹೊರಹೊಮ್ಮಿ 12ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ಕನ್ನಡದ ಲಯಬದ್ಧ ಬರವಣಿಗೆಯ ಒಂದು ರೂಪವಾದ ವಚನ ಸಾಹಿತ್ಯವು ಶರಣ ಚಳುವಳಿಯ ಭಾಗವಾಗಿತ್ತು. ಬಸವಣ್ಣನವರ ಸಾಹಿತ್ಯ ಕ್ರಾಂತಿ ಎಂದರೆ ಅವರ ವಚನಗಳ ಮೂಲಕ ಸಮಾಜದಲ್ಲಿ ತಂದ ಬದಲಾವಣೆ. ಅವರು ಕೇವಲ ಸಾಹಿತ್ಯ ರಚನೆ ಮಾಡಲಿಲ್ಲ, ಆದರೆ ವಚನಗಳ ಮೂಲಕ ಸಾಮಾಜಿಕ, ಆರ್ಥಿಕ, ಮತ್ತು ಧಾರ್ಮಿಕ ಕ್ರಾಂತಿಯನ್ನು ಮಾಡಿದರು. ಅವರ ವಚನಗಳು ಸಮಾನತೆ,

ಕಾಯಕ ನಿಷ್ಠೆ ಮತ್ತು ಭಕ್ತಿ ಮಾರ್ಗವನ್ನು ಸಾರುತ್ತದೆ. ಅನುಭವ ಮಂಟಪದಲ್ಲಿ ಎಲ್ಲಾ ಜಾತಿಯ ಎಲ್ಲಾ ವೃತ್ತಿಯ ಸಾಮಾನ್ಯ ಜನರು ಭಾಗವಹಿಸಿ ತಮ್ಮ ಸಮಸ್ಯೆಗಳನ್ನು ಚರ್ಚಿಸುತ್ತಿದ್ದರು ಹಾಗೂ ತಮ್ಮ ಅನುಭವವನ್ನು ಎಲ್ಲರೊಂದಿಗೆ ಹಂಚಿಕೊಳ್ಳುತ್ತಿದ್ದರು. ವಚನ ಸಾಹಿತ್ಯವು ವಿಶ್ವದ ಮೇರುಪರ್ವತ ಭಕ್ತಿ ಭಂಡಾರಿ ಬಸವಣ್ಣನವರು. ಅವರು ಮಾಡಿದ ಕ್ರಾಂತಿ ಭಾರತ ದೇಶದ ಸಮಾಜವನ್ನೇ ಬದಲಿಸಿತು. ಕನ್ನಡದ ಮೇಲ್ಮೆಯ ಕಹಳೆಯನೂದಿತು. ಸ್ತ್ರೀ ವಿಮೋಚನೆಯ ನಾಂದಿಯನ್ನು ಹಾಡಿತು. ಸಮಾಜದ ತುಳಿತಕ್ಕೆ ಸಿಕ್ಕಿದ್ದ ದುರ್ಬಲ ವರ್ಗಗಳಲ್ಲಿ ಆ ಕ್ರಾಂತಿ ಹೊಸ ಅಲೆಯನ್ನು ಮೂಡಿಸಿತು. ಭಕ್ತ–ದೈವಗಳ ಮಧ್ಯೆ ದಳ್ಳಾಳಿಗಳಂತೆ ವರ್ತಿಸುತ್ತಿದ್ದ ಪುರೋಹಿತರ ದರ್ಪವನ್ನು ಅಡಗಿಸಿತು. ಸಾವಿರದ ಐದುನೂರು ವರ್ಷಗಳ ಹಿಂದೆ ಭಗವಾನ್ ಬುದ್ಧರು ಸಾಮಾಜಿಕ ಅನ್ಯಾಯಗಳ ವಿರುದ್ಧ ಎದ್ದುನಿಂತು ಹಾಗೆ ಹನ್ನೊಂದನೆಯ ಶತಮಾನದಲ್ಲಿ ಬಸವಣ್ಣನವರು ಎದ್ದುನಿಂತು ಪ್ರತಿಭಟನೆಯ ಭೇರಿಯನ್ನು ಬಾರಿಸಿದರು. ಬಸವೇಶ್ವರರ ದೃಷ್ಟಿಯಲ್ಲಿ ಎರಡೇ ಜಾತಿ. ಒಂದು ಭವಿಗಳ ಜಾತಿ ಮತ್ತೊಂದು ಭಕ್ತರ ಜಾತಿ. ಬಸವೇಶ್ವರರ ಭಕ್ತ ಮತ್ತು ಭವಿ ಎಂಬ ಪದಗಳು ಆಸ್ತಿಕ ಮತ್ತು ನಾಸ್ತಿಕ ಪದಗಳಿಗೆ ಪರ್ಯಾಯ ಪದಗಳು ಅವರು ಜಾತಿಗಿಂತಲೂ ನೀತಿ ತತ್ತ್ವಕ್ಕೆ ಮಹತ್ವವನ್ನು ನೀಡುತ್ತಿದ್ದರು. ಬಸವೇಶ್ವರರ ಸಮಕಾಲೀನರಾದ ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯ ಇತರರ ಬಗೆಗೆ ಬಸವಣ್ಣನವರು ಇಟ್ಟುಕೊಂಡಿದ್ದ ಜಾತ್ಯತೀತ ಮನೋಭಾವನೆಯನ್ನು ನಾವು ನೋಡಬಹುದಾಗಿದೆ.

‘ಹೊಸ ಸಮಾಜವನ್ನು ರೂಪಿಸಲು ಹಲವು ಕ್ರಾಂತಿಕಾರಕ ಹೆಜ್ಜೆಗಳನ್ನಿಟ್ಟ ಬಸವಾದಿ ಶಿವಶರಣೆಯರ ಈ ಆಂದೋಲನ ವಿಫಲಗೊಂಡಿದ್ದೆ ಕನ್ನಡ ಜನತೆಯ ಮಹಾದುರಂತಗಳಲ್ಲಿ ಒಂದಾಗಿದೆ’ ಎಂಬ ಡಾ. ಚದುರಂಗರ ಮನೋವೇದನೆ ಅರ್ಥಪೂರ್ಣ ಸತ್ಯವೆಂಬುದು ನಿಜ. ಸತ್ಯ, ಅಹಿಂಸೆ, ದಯೆ, ಕಾಯಕ, ದಾಸೋಹ ಇವೇ ಮೊದಲಾದ ವಿಚಾರಗಳು ಸಾರ್ವತ್ರಿಕ ಹಾಗೂ ಸಾರ್ವಕಾಲಿಕವಾದುವು.

ಸಾಹಿತ್ಯ ಕ್ರಾಂತಿಗೆ ಉದಾಹರಣೆಗಳೆಂದರೆ:

12ನೇ ಶತಮಾನದ ಕನ್ನಡ ಸಾಹಿತ್ಯದಲ್ಲಾದ ವಚನ ಚಳುವಳಿ ಒಂದು ದೊಡ್ಡ ಸಾಹಿತ್ಯ ಕ್ರಾಂತಿ. ಇದು ಅಂದಿನ ಸಾಮಾಜಿಕ ಮತ್ತು ಧಾರ್ಮಿಕ ಅಸಮಾನತೆಗಳ ವಿರುದ್ಧ ಧ್ವನಿ ಎತ್ತಿತು ಮತ್ತು ಹೊಸ ರೀತಿಯ ಸಾಹಿತ್ಯಿಕ ರಚನೆಗಳನ್ನು ಪರಿಚಯಿಸಿತು. ನವೋದಯ ಸಾಹಿತ್ಯ: ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ಆದ ನವೋದಯವು ಸಾಹಿತ್ಯದಲ್ಲಿ ಹೊಸ ಆಸಕ್ತಿಗಳು ಮತ್ತು ಮೌಲ್ಯಗಳನ್ನು ತಂದಿತು. ಇದು ಸಾಂಪ್ರದಾಯಿಕ ಸಾಹಿತ್ಯಿಕ

ಪ್ರಕಾರಗಳನ್ನು ಪ್ರಶ್ನಿಸಿತು. ಮತ್ತು ಹೊಸ ಶೈಲಿಗಳು ಮತ್ತು ವಿಷಯಗಳನ್ನು ಪರಿಚಯಿಸಿತು.

ಆಧುನಿಕ ಸಾಹಿತ್ಯ : 20ನೇ ಶತಮಾನದಲ್ಲಿ ಆದ ಸಾಹಿತ್ಯಿಕ ಕ್ರಾಂತಿ ಆಧುನಿಕ ಜೀವನದ ಸಮಸ್ಯೆಗಳು ಮತ್ತು ಸವಾಲುಗಳನ್ನು ಕೇಂದ್ರೀಕರಿಸಿತು. ಇದು ಸಾಂಪ್ರದಾಯಿಕ ರಚನೆಗಳನ್ನು ಮೀರಿ ಹೊಸ ಶೈಲಿಗಳು ಮತ್ತು ವಿಧಾನಗಳನ್ನು ಬಳಸಿತು.

ಬಸವಣ್ಣನವರ ಸಾಹಿತ್ಯ ಕ್ರಾಂತಿಯ ವಚನಗಳು:

ಬಸವೇಶ್ವರರ ಕ್ರಾಂತಿಯ ಕಿಚ್ಚು ಜನಸಾಮಾನ್ಯರ ಬಾಳ್ವೆಗೆ ದೀವಿಗೆ ಎನ್ನಬಹುದು. ಪ್ರತಿಯೊಬ್ಬ ಮನುಜರಿಗೂ ಸ್ವಾತಂತ್ರ್ಯ, ಸಮಾನತೆ, ಬಾತೃತ್ವ ಮನೋಭಾವನೆಗಳ ಒಳಗು ಮಾಡಿದ ಮಹಾನ್ ಚೇತನ. ಇವರ ಆಲೋಚನೆಗಳು ಸಮಾಜಮುಖಿ ಚಿಂತೆಗೆ ಸಾಕ್ಷಿಯಾಗಿದೆ. ಅದರಲ್ಲೂ ಈ ಸಾಹಿತ್ಯ ಕ್ರಾಂತಿಯ ಕುರಿತ ಚಿಂತನಧಾರೆಗಳು ಅವಿಸ್ಮರಣೀಯವಾದುದಾಗಿದೆ.

ತಾಳಮಾನ ಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣವನರಿಯೆ
ಕೂಡಲಸಂಗಮದೇವಾ
ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ.

ಸಂಗೀತದಲ್ಲಿ ಬರುವ ತಾಳದ ಲೆಕ್ಕಾಚಾರಗಳನ್ನಾಗಲೀ, ಸ್ವರವಿನ್ಯಾಸಗಳನ್ನಾಗಲೀ ಏರಿಳಿತಗಳನ್ನಾಗಲೀ ತಾವು ತಿಳಿಯದವರೆಂದು ಹೇಳಿಕೊಳ್ಳುತ್ತಿದ್ದಾರೆ. ಹಾಗೆಯೇ ಛಂದಸ್ಸಿನ ವಿವರಗಳನ್ನು ಅಲ್ಲಿ ಬರುವ ಅಮೃತಗಣ, ದೇವಗಣಗಳನ್ನು ಅವರು ತಿಳಿಯರು, ಅವಾವುದನ್ನೂ ಗಮನಿಸದೆ 'ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ' ಎಂಬ ಮಾತಿನಲ್ಲಿ ಭಕ್ತಿಸಂಗೀತದ ಸಾರಸತ್ವ ಅಡಗಿದೆ. ಭಗವಂತನ ಒಲವು ತುಂಬಿದ ಹೃದಯದಿಂದ ಹೊರಹೊಮ್ಮಿದ ಹಾಡು ಎಲ್ಲ ಶಾಸ್ತ್ರಗಳ ಲೆಕ್ಕಾಚಾರವನ್ನೂ ಮೀರಿ ಹೃದಯವನ್ನು ತುಂಬಿ ತುಳುಕುತ್ತದೆ.

ಮೇರುಗುಣವನರಸುವುದೆ ಕಾಗೆಯಲ್ಲಿ?
ಪರುಷದಗುಣವನರಸುವುದೆ ಕಬ್ಬುನದಲ್ಲಿ?
ಸಾಧುಗುಣವನರಸುವುದೆ ಅವಗುಣಿಯಲ್ಲಿ?
ಚಂದನಗುಣವನರಸುವುದೆ ತರುಗಳಲ್ಲಿ?
ಸರ್ವಗುಣಸಂಪನ್ನ ಲಿಂಗವೆ, ನೀನೆನ್ನಲ್ಲಿ ಅವಗುಣವನರಸುವುದೆ,

ಕೂಡಲಸಂಗಮದೇವಾ?

'ಮೇರುಪರ್ವತದ ಆಶ್ರಯಗುಣ ಮತ್ತು ಪರಿವರ್ತನಶಕ್ತಿ, ಪರುಷದಲ್ಲಿರುವ ಅಮೂಲ್ಯತೆ, ಸಾದುವಿನಲ್ಲಿರುವ ನಿರ್ಮಲತೆ, ಪರಿಶುದ್ಧಕ್ಕೆ, ಚಂದನದಲ್ಲಿರುವ ಮಧುರತೆ, ಆಹ್ಲಾದಕತೆ – ಈ ಎಲ್ಲ ಗುಣಗಳನ್ನೂ ಒಳಗೊಂಡಿರುವ ಲಿಂಗ, ನನ್ನಲ್ಲಿ ದೋಷವನ್ನು ಹುಡುಕಬಾರದು. ನನ್ನಲ್ಲಿ ದೋಷಗಳಿದ್ದರೂ ನಿನ್ನ ಔದಾರ್ಯದಿಂದ ಅವುಗಳನ್ನು ಪರಿಗಣಿಸದೆ ನನ್ನನ್ನು ಉದ್ಧರಿಸು' ಎಂಬ ಈ ಮಾತಿನಲ್ಲಿ ಬುದ್ಧಿಜೀವಿಗಳ ಉದ್ಧಾರದ ಅಭೀಪ್ಸೆ ಅಭಿವ್ಯಕ್ತಗೊಂಡಿದೆ.

ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ
ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನೆಯೊಳಗೆ ಮನೆಯೊಡೆಯನಿಲ್ಲ ಕೂಡಲಸಂಗಮದೇವ!

ಈ ತನುವನ್ನು ಮನೆಗೆ ಹೋಲಿಸಿ ಅಲ್ಲಿ ಮನೆಯೊಡೆನಿರುವ ಚಿತ್ರವನ್ನು ಕೊಡುವ ಈ ವಚನ ಧ್ವನಿಪೂರ್ಣವಾದ ಭಾವಗೀತೆಯಂತೆ ಮೂಡಿಬಂದಿದೆ. ಮನೆಯ ಹೊಸ್ತಿಲಲ್ಲಿ ಹುಲ್ಲು ಹುಟ್ಟಿದೆ. ಮನೆಯೊಳಗೆ ಧೂಳು ತುಂಬಿದೆ. ಮನೆಯೊಳಗೆ ಮನೆಯೊಡೆಯನಿದ್ದರೆ ಹೊರ ಅಂಗಳವನ್ನು ಗುಡಿಸಿ, ಹೊಸ್ತಿಲನ್ನು ತೊಳೆದು ರಂಗವಲ್ಲಿಯನ್ನಿಕ್ಕಿರಬೇಕು. ಆದರೆ ಮನೆಯ ಒಳಗೂ ಹೊರಗೂ ಕೊಳೆ ತುಂಬಿ ಅದು ಹಾಳುಬಿದ್ದಿದೆ. ಇದನ್ನು ನೋಡಿದರೆ ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ ಎಂಬ ಸಂದೇಹ ಸಹಜವಾಗಿಯೇ ಬರುತ್ತದೆ.

ದೇಹವೆಂಬ ಮನೆಯ ಚಿತ್ರವನ್ನು ಕಲ್ಪಿಸಿಕೊಳ್ಳುತ್ತದೆ ಎಂಬುದನ್ನು ಗಮನಿಸಬಹುದು. ಈ ದೇಹದಲ್ಲಿ ಹುಸಿ ತುಂಬಿದೆ. ಮನದೊಳಗೆ ವಿಷಯ ತುಂಬಿದೆ. ಇದನ್ನು ನೋಡಿದರೆ ಈ ಮನೆಯೊಳಗೆ ಶಿವಭಾವ ಯುಕ್ತನಾದ ಜೀವನಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಈ ಕಾವ್ಯಪ್ರತಿಮೆಯ ಹಿಂದೆ ಆಧ್ಯಾತ್ಮಿಕ ಪರಿಭಾವನೆ ಅನುಭಾವಿಕ ನಿಲುವಿನಲ್ಲಿ ಧ್ವನಿತವಾಗುತ್ತಾ ಬರುತ್ತದೆ. ಈ ಅಂಗವೆಂಬ ಮಂದಿರದಲ್ಲಿ ಶಿವಭಾವಯುಕ್ತನಾದ ಜೀವನೇ ಒಡೆಯ. ಈ ಶಿವಭಾವ ಇಲ್ಲದಿದ್ದರೆ ದೇಹದಲ್ಲಿ ಕಸ ಬೆಳೆಯುತ್ತದೆ. ತನುವಿನಲ್ಲಿ ಹುಸಿ ತುಂಬುತ್ತದೆ, ಮನದಲ್ಲಿ ವಿಷಯ ತುಂಬುತ್ತದೆ. ವಿಷಯ ವ್ಯಾಮೋಹ ಲಾಲಸೆಗಳು ಮನಸ್ಸನ್ನು ತುಂಬುತ್ತದೆ. ಶಿವಭಾವ ಇಲ್ಲದಿದ್ದಾಗ ದೇಹ ಮನಸ್ಸುಗಳು ಕೆಡುತ್ತದೆ. ಬದುಕಿನಲ್ಲಿ ಸತ್ಯತೆ, ಶುದ್ಧತೆ, ಪ್ರಾಮಾಣಿಕತೆಗಳನ್ನು

ಬಸವಣ್ಣನವರು ಎತ್ತಿಹಿಡಿದಿದ್ದಾರೆ.

ಕಾಂಚನವೆಂಬ ನಾಯ ನಚ್ಚಿ ನಿಮ್ಮ ನಾನು ಮರೆವೆನಯ್ಯಾ;
ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ,
ಹಡಿಕೆಗೆ ಮಚ್ಚಿದ ಸೊಣಗ
ಅಮೃತದ ರುಚಿಯ ಬಲ್ಲುದೆ ಕೂಡಲಸಂಗಮದೇವಾ?

'ಕಾಂಚನವೆಂಬ ನಾಯಿ' ಎಂದರೆ ಭೌತಿಕ ಸುಖ, ಸಂಸಾರದ ಲೋಲುಪತೆ, ಇದನ್ನು ನಂಬಿ ಆ ಭಗವಂತನನ್ನು ನಾವು ಮರೆಯುತ್ತೇವೆ. ಕ್ಷುದ್ರ ಸಂಪತ್ತಿನ ಗಳಿಕೆಯಲ್ಲೇ ಸಮಯವೆಲ್ಲಾ ಕಳೆದುಹೋಗುತ್ತದೆ. ಲಿಂಗಪೂಜೆಗೆ ವೇಳೆ ಇಲ್ಲದಂತಾಗುತ್ತದೆ. ಅದನ್ನು ನಂಬಿ ಇದನ್ನು ಕೈಬಿಡುತ್ತೇವೆ. ಅದಕ್ಕೆ ಒಂದು ಸಾದೃಶ್ಯವನ್ನು ಕೊಡುತ್ತಾರೆ. ಹೊಲಸು ತಿನ್ನುವುದನ್ನೇ ಮೆಚ್ಚಿಕೊಂಡಿರುವ ನಾಯಿಗೆ ಅಮೃತದ ರುಚಿ ತಿಳಿಯಲಾರದು ಎಂಬ ಸಾದೃಶ್ಯದಲ್ಲಿ ಲೌಕಿಕ ಭೋಗಗಳ ಅಲ್ಪತೆ ಮತ್ತು ವಿಫಲತೆಗಳು ಸೂಚಿತವಾಗಿವೆ.

ಕೆರೆ ಹಳ್ಳ ಬಾವಿಗಳು ಮೈದೆಗೆದಡೆ
ಗುಳ್ಳೆ ಗೊರಚೆ ಚಿಪ್ಪುಗಳ ಕಾಣಬಹುದು;
ವಾರಿಧಿ ಮೈದೆಗೆದಡೆ ರತ್ನಂಗಳ ಕಾಣಬಹುದು,
ನಮ್ಮ ಕೂಡಲಸಂಗನ ಶರಣರು ಮನದೆರೆಯ ಮಾತನಾಡಿದಡೆ
ಲಿಂಗವ ಕಾಣಬಹುದು!

ಶರಣರಿಗೂ ಸಾಮಾನ್ಯರಿಗೂ ಇರುವ ಅಂತರವನ್ನು ಒಂದು ಸಾದೃಶ್ಯದಿಂದ ಮನವರಿಕೆ ಮಾಡಿಕೊಡುತ್ತಿದ್ದಾರೆ. ಕೆರೆ, ಹಳ್ಳ, ಬಾವಿಗಳು ಬತ್ತಿದರೆ ಅವುಗಳ ತಳದಲ್ಲಿ ಕಪ್ಪೆ ಚಿಪ್ಪು ಸಣ್ಣ ಸಣ್ಣ ಶಂಖಗಳು, ಗಿಡಗಂಟೆಗಳನಷ್ಟೇ ಕಾಣಬಹುದು. ಆದರೆ ಸಮುದ್ರ ಮೈದೆಗೆದರೆ, ಅಂದರೆ ತನ್ನ ಒಳಮೈಯನ್ನು ತೋರಿಸಿದರೆ ಮುತ್ತುರತ್ನಗಳೇ ಅಲ್ಲಿ ಹೊಳೆಯುತ್ತವೆ. ಹಾಗೆ ಶರಣರು ಸಾಗರದಂತೆ; ಕ್ಷುದ್ರ ಜನರು ಕೆರೆ ಹಳ್ಳ ಬಾವಿಗಳಂತೆ. ಇವರು ಮಾತನಾಡಿದರೆ ವೈಷಯಿಕ ಭಾವನೆಗಳ ವಿಚಾರಗಳಷ್ಟೇ ಹೊರಬೀಳುತ್ತವೆ. ವಾರಿಧಿಯಂತೆ ವಿಶಾಲವಾದ ಮನಸ್ಸನ್ನುಳ್ಳ ಶರಣರು ಮನದೆರೆದು ಮಾತನಾಡಿದರೆ ಲಿಂಗವನ್ನೇ ಕಾಣಬಹುದು. ಶರಣರ ಆಂತರಿಕ ನಿಲುವನ್ನು ಅರ್ಥವತ್ತಾಗಿ ಇಲ್ಲಿ ಸೂಚಿಸಿದ್ದಾರೆ. ವಚನ ಸಾಹಿತ್ಯ ತನಗೆ ತಾನೇ ವಿಶಿಷ್ಟ ಪೂರ್ಣ ಸಾಹಿತ್ಯವಾಗಿದೆ. ಜೀವನ ಮೌಲ್ಯಗಳ ಅನ್ವೇಷಣೆಯ ಕ್ರಿಯೆಯಲ್ಲಿ ವಚನಕಾರರು ಒಂದು ನೂತನ ಸಮಷ್ಟಿಹಿತವನ್ನುಳ್ಳ ಸಮಾಜದ ನಿರ್ಮಾಣ, ಸತ್‌ಸಂಕಲ್ಪದ ಮೂಲಕ ಬೆಳೆದಿರುವುದು ಎಂತಹವರಿಗೂ ಮನವರಿಕೆಯಾಗುತ್ತದೆ.

12, 15, ಮತ್ತು 16ನೇ ಶತಮಾನಗಳಲ್ಲಿ ಮಾತ್ರ ವಿಪುಲವಾಗಿ ರಚಿತವಾದ ವಚನಗಳ ಸ್ಫೂರ್ತಿಯಿಂದ ಈಚೆಗೆ ನವೋದಯ ಕಾಲದ ನಂತರದ ಆಧುನಿಕ ಕನ್ನಡ ಕವಿಗಳು ಕೆಲವರು ವಚನಗಳನ್ನು ರಚಿಸಿದ್ದಾರೆ. ರವೀಂದ್ರನಾಥ ಠಾಕೂರರ 'ಗೀತಾಂಜಲಿ' (ಇಂಗ್ಲೀಷಿಗೆ ಅನುವಾದಗೊಂಡ ಅವರ ಬಂಗಾಳಿ ಗೀತೆಗಳು) ಸಂಕಲನದ ಇಂಗ್ಲೀಷ್ ರೂಪ, ಖಲೀಲ್ ಗಿಬ್ರಾನನ ಕೆಲವು ಬರೆಹಗಳು 'ವಚನ' ಪ್ರಕಾರವನ್ನು ಹೋಲಬಹುದಾದರೂ, ವಚನಗಳು ತಮ್ಮದೇ ಆದ ರೂಪ–ಶೋಭೆಗಳಿಂದ ಬೇರೆಯಾಗಿ ನಿಲ್ಲುತ್ತದೆ. ಸ್ವಲ್ಪ ಹೋಲಿಕೆ ಇರುವ ಬರಹಗಳು ವಿಶ್ವದ ಇನ್ನೂ ಇತರ ಭಾಷೆಗಳಲ್ಲೂ ಇರಬಹುದು. ಮುಕ್ತ ಛಂದಸ್ಸಿನ ನಡೆಯ ವಚನದ ರಚನೆ ಭಾವ–ಆಲೋಚನೆಗಳ ಮುಕ್ತ ಅಭಿವ್ಯಕ್ತಿಗೆ ಸಹಕಾರಿಯಾಗಿದೆ.

ಮಾನವ ಜೀವಿತದ ಮೂಲಭೂತವಾದ ಗುರಿ ಆಗಿರುವ ಆತ್ಮೋದ್ಧಾರ ಅಥವಾ ಆತ್ಮದ ಪರಿಪೂರ್ಣ ವಿಕಾಸ ಅವರ ಕ್ರಾಂತಿಯ ಗುರಿ. ವ್ಯಕ್ತಿಯ ಹಾಗೂ ಸಮಾಜದ ಮನೋಧರ್ಮವನ್ನು ಮೂಲಭೂತವಾಗಿ ಬದಲಾಯಿಸುವುದೇ ಅವರ ಉದ್ದೇಶ. ಬಸವಣ್ಣನವರು ಬದುಕನ್ನು ಐಹಿಕ, ಪಾರಮಾರ್ಥಿಕ, ಧಾರ್ಮಿಕ, ನೈತಿಕ, ಆರ್ಥಿಕ, ಸಾಮಾಜಿಕ ವಿಚಾರಗಳ ಜೊತೆಗೆ ಸಮಗ್ರ ವಿಕಾಸ, ವ್ಯಕ್ತಿಸ್ವರದಲ್ಲಿ ಆತ್ಮೋದ್ಧಾರವನ್ನು ಎಲ್ಲರಿಗೂ ಸುಲಭವಾದ ಭಕ್ತಿ ಮಾರ್ಗದಲ್ಲಿ ಸಾಧಿಸಬಹುದೆಂಬುದನ್ನು ತಮ್ಮ ಅನುಭಾವ ಸಿದ್ಧಿ–ಹಂಬಲಿಸಿ ಸಾಧನೆಯನ್ನು ಕೈಗೊಳ್ಳುವ ರೀತಿ ಎಲ್ಲರಿಗೂ ಲಭಿಸಬೇಕು.

ಬಸವೇಶ್ವರ ಎಂದು ಕರೆಯಲ್ಪಡುವ ಇವರು ಶಿವಕೇಂದ್ರಿತ ಭಕ್ತಿ ಚಳುವಳಿಯಲ್ಲಿ ಪೂಜ್ಯ ತತ್ವಜ್ಞಾನಿ, ಕವಿ ಮತ್ತು ಸಮಾಜ ಸುಧಾರಕರಾಗಿದ್ದರು. ತಮ್ಮ ಕಟುವಾದ ಕಾವ್ಯಗಳಾದ ವಚನಗಳ ಮೂಲಕ ಜಾತಿ ತಾರತಮ್ಯ, ಮೂಢನಂಬಿಕೆಗಳು ಮತ್ತು ಆಚರಣೆಗಳನ್ನು ತಿರಸ್ಕರಿಸುವ ಮೂಲಕ ಸಮಾನತೆಯ ಸಂದೇಶಗಳನ್ನು ಹರಡಿದರು. ಬಸವಣ್ಣನವರು 12ನೇ ಶತಮಾನದ ಸಮಾಜ ಸುಧಾರಕ, ಕಾರ್ಯಕರ್ತ ಮತ್ತು ಸಂತರಾಗಿದ್ದರು. ಇವರ ಸಾಹಿತ್ಯ ಕ್ರಾಂತಿಯು ಇಂದಿಗೂ ಪ್ರಸ್ತುತವಾಗಿದೆ.

ಪರಾಮರ್ಶನ ಗ್ರಂಥಗಳು:

1. ಶ್ರೀ ಬಸವೇಶ್ವರರು – ಪ್ರೊ. ದೇ.ಜ.ಗೌ
2. ಬಸವೇಶ್ವರ ವಚನದೀಪಿಕೆ – ಡಾ. ಎಚ್. ತಿಪ್ಪೇರುದ್ರಸ್ವಾಮಿ
3. ಬಸವ ದರ್ಶನ – ಪ್ರೊ. ದೇ.ಜ.ಗೌ
4. ಬಸವಣ್ಣನವರ ವಚನಗಳು – ಡಾ.ಎಲ್.ಬಸವರಾಜು
5. ವಚನ ಸಾಹಿತ್ಯ – ಚಿದಾನಂದಮೂರ್ತಿ
6. ಅಂತರ್ಜಾಲ

***

ತೇಜಸ್ವಿಯವರ ಅಣ್ಣನ ನೆನಪು ಒಂದು ವಿಶ್ಲೇಷಣೆ

1

ಡಾ. ಮಂಜುಳ ಜಿ

w/o ಪ್ರತಾಪ್ ಕೆ
ಅರಹಳ್ಳಿ ಗ್ರಾಮ & ಅಂಚೆ
ಕೋಲಾರ ತಾಲೂಕು & ಜಿಲ್ಲೆ
563101

ಕುವೆಂಪುರವರು ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಪರಿಚಿತರಾಗಿರುವ ಅಪರೂಪದ ವ್ಯಕ್ತಿತ್ವಗಳಲ್ಲೊಬ್ಬರು. ಆಡು ಮುಟ್ಟದ ಸೊಪ್ಪಿಲ್ಲ ಕುವೆಂಪುರವರು ಬರೆಯದ ಸಾಹಿತ್ಯವಿಲ್ಲ ಎಂಬ ಮಾತಿನಂತೆ ಸಣ್ಣಕಥೆ, ಕವಿತೆ, ಕಾದಂಬರಿ, ನಾಟಕ, ವಿಮರ್ಶೆ, ಆತ್ಮಕಥೆ, ವಿಜ್ಞಾನ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ವಿಶ್ವಮಾನವ ಸಂದೇಶವನ್ನು ಕನ್ನಡದ ಮೂಲಕ ಜಗತ್ತಿಗೆ ಸಾರಿದವರು. ಇವರ ಶ್ರೀ ರಾಮಾಯಣ ದರ್ಶನಂ ಕೃತಿಯು ಆಧುನಿಕ ಭಾರತೀಯ ಸಾಹಿತ್ಯ ಸಂದರ್ಭದಲ್ಲಿ ಬಹುಮುಖ್ಯವಾದ ಕೃತಿಯೆಂದೇ ಹೇಳಬಹುದು. ಮಲೆಗಳಲ್ಲಿ ಮದುಮಗಳು ಹಾಗೂ ಕಾನೂರು ಸುಬ್ಬಮ್ಮ ಹೆಗ್ಗಡತಿ ಕಾದಂಬರಿಗಳು ಕೂಡ ಅತಿ ಹೆಚ್ಚು ಪ್ರಶಂಸೆಗೆ ಒಳಗಾದಂತಹ ಮಹತ್ವದ ಕೃತಿಗಳಾಗಿವೆ. ಮಲೆನಾಡಿನ ದಟ್ಟ ಕಾಡನ್ನು ತಮ್ಮ ಸಾಹಿತ್ಯದ ಮೂಲಕವಾಗಿ ವಿಶಿಷ್ಟವಾಗಿ ಚಿತ್ರಿಸಿದ್ದಾರೆ. ಸಮಾಜದ

ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳು, ಮಹಿಳೆಯರು, ರೈತರ ಪರವಾದ ಧೋರಣೆಯನ್ನು ಇವರ ಸಾಹಿತ್ಯದಲ್ಲಿ ಗುರ್ತಿಸಬಹುದಾಗಿದೆ.

ಇವರ ಬದುಕು ಬರಹಗಳನ್ನು ಬಹು ಹತ್ತಿರದಿಂದ ಕಂಡಂತಹವರು ತೇಜಸ್ವಿಯವರು. ತಂದೆಯಂತೆ ಇವರೂ ಕೂಡ ತಮ್ಮದೇ ಆದ ವಿಭಿನ್ನವಾದ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಎಲ್ಲೂ ಕೂಡ ಕುವೆಂಪುರವರ ಆಶ್ರಯವನ್ನು ಆಶಿಸದೆ ತಮ್ಮ ಸ್ವಂತ ಆಲೋಚನೆಗಳಿಂದ ಸಾಹಿತ್ಯವಲಯದಲ್ಲಿ ಗುರ್ತಿಸಿಕೊಂಡಿದ್ದಾರೆ. ತೇಜಸ್ವಿಯವರ ಅಣ್ಣನ ನೆನಪು ಕೃತಿಯು ಮಗನಾಗಿ ತಂದೆಯನ್ನು ಗ್ರಹಿಸಿರುವ ರೀತಿಯನ್ನು ಕಾಣಬಹುದು. ಇವರ ಅನುಭವಗಳ ಸಂಕಲನವಾಗಿ ಈ ಕೃತಿಯನ್ನು ಕಾಣಬಹುದು. ಹಾಗಂತ ಎಲ್ಲಿಯೂ ಕೂಡ ಹೊಗಳಿಕೆ, ಹೆಚ್ಚುಗಾರಿಕೆ, ಅತಿ ಎನಿಸುವಂತಹ ಯಾವುದೇ ಕಿಂಚಿತ್ತೂ ವಿಷಯವನ್ನೂ ಕೂಡ ತೇಜಸ್ವಿಯವರು ಅನವಶ್ಯಕವಾಗಿ ತುರುಕಿಲ್ಲ ಅಂತಲೇ ಹೇಳಬಹುದು. ಸಾಹಿತ್ಯ ವಲಯದ ಒಬ್ಬ ಮಹಾನ್ ದಾರ್ಶನಿಕರ ವ್ಯಕ್ತಿತ್ವವನ್ನು ಮತ್ತೊಬ್ಬ ವೈವಿಧ್ಯಮಯ ಅಭಿವ್ಯಕ್ತಿಯುಳ್ಳ ಲೇಖಕ ಈ ಕೃತಿಯಲ್ಲಿ ಹೇಗೆ ಕಟ್ಟಿಕೊಡಲಾಗಿದೆ ಎಂದು ವಿಶ್ಲೇಷಿಸುವ ಪ್ರಯತ್ನ ಇಲ್ಲಿದೆ. ಈ ಕೃತಿಯಲ್ಲಿ ತಂದೆ ಮತ್ತು ಮಗನ ಬದುಕನ್ನ ಸಮತೋಲನದಲ್ಲಿ ನೋಡುತ್ತಾ ಹೋಗುತ್ತೇವೆ. ಆದರೂ ಕುವೆಂಪುರವರನ್ನೇ ಪ್ರಧಾನವಾಗಿಟ್ಟು ನೋಡಿರುವ ದೃಷ್ಟಿಕೋನ ಇಲ್ಲಿ ಅಪರೂಪದ್ದಾಗಿದೆ.

ಅಣ್ಣನ ನೆನಪು ಕೃತಿಯು ತೇಜಸ್ವಿಯವರ ಅಪೂರ್ವ ಕಲಾಸೃಷ್ಟಿ. ಕೇವಲ ಕಲೆಯ ನೆಲೆಯಲ್ಲಿಯೇ ರಚಿತವಾಗದೇ ಹಲವಾರು ಅಂತರ್‌ಶಿಸ್ತೀಯ ನೆಲೆಯಲ್ಲಿ ಸೃಜಿಸಿರುವ ಕೃತಿ. ತೇಜಸ್ವಿಯವರು ತನ್ನ ತಂದೆಯ ಬದುಕನ್ನು, ಬದುಕಿನ ಹಲವಾರು ಸನ್ನಿವೇಶಗಳನ್ನು ಮಗನಾಗಿ ಸಹಜೀವಿಯಾಗಿ ಅವರು ಕಣ್ಣಾರೆ ಕಂಡ ಅನುಭವದ ಕಥಾಗುಚ್ಚವನ್ನ ನಮ್ಮ ಮುಂದಿಟ್ಟಿದ್ದಾರೆ. ಒಂದು ಕಥೆಯಲ್ಲಿ ಮತ್ತೊಂದು ಕಥೆಯು ನಿರೂಪಣೆಯ ಶೈಲಿಯಂತೆ ಬೆಸೆದುಕೊಂಡಿದೆ. ಅದು ಪ್ರತ್ಯೇಕ ಸಣ್ಣಕಥೆಗಳ ರೀತಿಯಲ್ಲಿ ರಚಿತವಾದುದಾಗಿದೆ. ಈ ಕೃತಿಯನ್ನು ಕುರಿತು ತೇಜಸ್ವಿಯವರು ಮುನ್ನುಡಿಯಲ್ಲಿ ಹೀಗೆ "ನಾನು ಚಿಕ್ಕಂದಿನಿಂದ ನಾನು ಓದು ಮುಗಿಸುವವರೆಗೆ ನಮ್ಮ ತಂದೆಯ ನೆನಪುಗಳನ್ನು ದೈನಂದಿನ ದಿನಚರಿಯ ಮಾದರಿಯಲ್ಲಿ ಬರೆದಿದ್ದೇನೆ. ಅಣ್ಣನ ವೈವಿಧ್ಯತಮ ವ್ಯಕ್ತಿತ್ವದಿಂದಾಗಿ ಈ ನೆನಪಿನ ಸರಣಿಯಲ್ಲಿ ರಾಜಕೀಯ ಮೀಮಾಂಸೆ, ಸಾಮಾಜಿಕ ಜಿಜ್ಞಾಸೆ, ತತ್ವ ಚಿಂತನೆ, ಕರ್ನಾಟಕ ಸಂಸ್ಕೃತಿ ಅವಲೋಕನ, ಸಾಹಿತ್ಯ ಮೀಮಾಂಸೆ ಮುಂತಾದವೆಲ್ಲಾ ಮಿಳಿತಗೊಂಡಿವೆ. ಆದರೂ ನೆನಪುಗಳು

ಸಂಕೀರ್ಣವಾಗದಂತೆ, ಜಟಿಲವಾಗದಂತೆ, ಸರಳವಾಗಿ ಜೀವನದ ಸಹಜ ಲಯದಲ್ಲಿ ರೂಪಿಸಲು ಯತ್ನಿಸಿದ್ದೇನೆ" ತಿಳಿಸುತ್ತಾರೆ.

ಕವಿಯಾಗಿ, ದಾರ್ಶನಿಕರಾಗಿ, ಗುರುವಾಗಿ ತೇಜಸ್ವಿಯವರು ತಮ್ಮ ತಂದೆಯನ್ನು ಕಂಡಿರುವುದಾಗಿ ಹೇಳುತ್ತಾರೆ. ಕುವೆಂಪುರವರು ಮೇಲುನೋಟಕ್ಕೆ ಸರಳ ವ್ಯಕ್ತಿತ್ವವನ್ನು ಹೊಂದಿದ್ದರು ಸಹ ಅಂತರಂಗದಲ್ಲಿ ಅರ್ಥವಾಗದ ಸಂಕೀರ್ಣ, ಜಟಿಲ ವ್ಯಕ್ತಿತ್ವವುಳ್ಳವರಾಗಿದ್ದರು. 'ಒಂದು ಕಡೆ ಇಂಗ್ಲಿಷ್ ಜ್ಞಾನ ಮುಖ್ಯವೆಂದು ಶೂದ್ರರನ್ನೆಲ್ಲಾ ಎಚ್ಚರಿಸುತ್ತಾರೆ. ಕನ್ನಡದ ವಿಷಯಕ್ಕೆ ಬಂದಾಗ ಇಂಗ್ಲಿಷ್‌ನ್ನು ಪೂತನಿ ಎಂದು ಕಟುವಾಗಿ ಟೀಕಿಸುತ್ತಾರೆ. ಭಾರತೀಯ ಸನಾತನ ಧರ್ಮದ ಬಗೆಗಿನ ಕಟು ವಿಮರ್ಶೆಯನ್ನು ಕುವೆಂಪುರವರಲ್ಲಿ ಕಾಣಬಹುದು. ಅಂತೆಯೇ ಉಪನಿಷತ್ ದರ್ಶನಗಳ ಆರಾಧನೆಯನ್ನೂ ಕಾಣಬಹುದು. ಅವರು ಜೀವನದಾದ್ಯಂತ ಎಂದೂ ಯಾವ ದೇವಸ್ಥಾನಕ್ಕೂ ಕಾಲಿಡಲಿಲ್ಲ. ಆದರೆ ಅಷ್ಟೇ ಗಾಢವಾಗಿ ಧ್ಯಾನ, ತಪಸ್ಸು, ಪ್ರಾರ್ಥನೆಗಳನ್ನು ಪ್ರತಿಪಾದಿಸಿದರು. ಆದ್ದರಿಂದಲೇ ಅನೇಕ ವೇಳೆ ಸನಾತನಿಗಳು, ದೈವಭಕ್ತರು, ವಿಚಾರವಾದಿಗಳು, ನಾಸ್ತಿಕರು ಎಲ್ಲ ವ್ಯಕ್ತಿತ್ವಗಳನ್ನೂ ಕುವೆಂಪು ಒಬ್ಬರಲ್ಲಿಯೇ ಕಾಣಬಹುದಾಗಿತ್ತು. ಕುವೆಂಪುರವರು ವೈಜ್ಞಾನಿಕ ಚಿಂತನೆಗಳನ್ನು ತಮ್ಮ ಜೀವನದುದ್ದಕ್ಕೂ ಪಾಲಿಸಿಕೊಂಡು ಬಂದದ್ದಲ್ಲದೇ ತಮ್ಮ ಬರಹಗಳಲ್ಲೂ ಕೂಡ ಅದನ್ನೇ ಪ್ರತಿಪಾದಿಸಿಕೊಂಡು ಬಂದವರು. ಮಾನವೀಯತೆಯೇ ಅವರ ಅಂತಿಮ ಮಂತ್ರವಾಗಿತ್ತು. ಮೌಢ್ಯದ ಭ್ರಾಂತಿಯಲ್ಲಿದ್ದಂತವರನ್ನು ಸದಾ ಎಚ್ಚರಿಸುವ ರೀತಿಯಲ್ಲಿಯೇ ಇವರ ಸಾಹಿತ್ಯದಲ್ಲಿನ ವೈಚಾರಿಕತೆಯನ್ನು ಗುರ್ತಿಸಬಹುದಾಗಿದೆ. ಪ್ರತಿಯೊಬ್ಬರ ಬದುಕಲ್ಲೂ ಬಾಲ್ಯವು ತುಂಟಾಟಗಳಿಂದಲೇ ಕೂಡಿರುತ್ತವೆ. ವಿಶಿಷ್ಟವಾದ, ವಿಭಿನ್ನವಾದ ಸಂತಸದ ಅಗಾಧ ಅನುಭವ ಅಲ್ಲಿ ತುಂಬಿರುತ್ತದೆ. ಹೀಗೆ ತೇಜಸ್ವಿಯವರ ಬಾಲ್ಯದ ಹಲವಾರು ಕುತೂಹಲಕಾರಿ ಸಂಗತಿಗಳನ್ನ ಇಲ್ಲಿ ಬರೆದುಕೊಂಡಿದ್ದಾರೆ. ಶಾಲೆಯ ದಿನಗಳಲ್ಲಿ ಶಿಕ್ಷಕರನ್ನು ಇವರು ಕುತೂಹಲಕಾರಿ ಪ್ರಶ್ನೆಗಳನ್ನು ಕೇಳುವ ಮೂಲಕ ಚಿಕ್ಕಂದಿನಲ್ಲಿಯೇ ಸೂಕ್ಷ್ಮ ಬುದ್ಧಿಮತ್ತೆಯನ್ನು ಬೆಳೆಸಿಕೊಂಡಿದ್ದರು. ಕೆಂಪು ಶಾಯಿಯ ಕಲೆಗಳು, ತುಂಟಾಟಿಕೆಗಳಂತಹ ಹಲವಾರು ನಿದರ್ಶನಗಳಲ್ಲಿ ಕಲಾತ್ಮಕವಾದ ಹಾಗೂ ಹಾಸ್ಯಭರಿತ ಪ್ರಸಂಗಗಳನ್ನು ನೋಡಬಹುದು. ಕ್ಷೌರಿಕ ದಾಸಿಯ ಪ್ರಸಂಗ, ಬೋರಮ್ಮನನ್ನು "ನೀನು ಸೂಳೆ ಅಂತೇ ಹೌದಾ" ಎಂದು ಅರಿಯದ ವಯಸ್ಸಲ್ಲಿ ಅರ್ಥವಾಗದ ಅವಾಚ್ಯ ಶಬ್ಧ ಪ್ರಯೋಗ ಮಾಡಿದ್ದನ್ನು ನೆನೆಯುತ್ತಾರೆ. ಮಲೆನಾಡಿನಲ್ಲಿ ನಾಯಿ ಸಾಕುವುದು ಒಂದು ಮಹತ್ತರವಾದ ಸಂಗತಿ ಎಂದು ತಿಳಿದು ಕಂತ್ರಿ

ನಾಯಿಯನ್ನು ಜಾತಿ ನಾಯಿಯಾಗಿ ಪರಿವರ್ತಿಸುವುದಕ್ಕಾಗಿ ಅದರ ಬಾಲ ಕತ್ತರಿಸುವುದು, ಚಾಟರ ಬಿಲ್ಲಿನ ಪ್ರಯೋಗ, ಅಳಿಲಿನ ಬೇಟೆ, ಎಮ್ಮೆ ಸಾಗಾಣಿಕೆ, ಎಣ್ಣೆಗಾಣದ ಪ್ರಸಂಗ, ಮೀನುಗಾರಿಕೆಯ ಶಿಕಾರಿ ಹೀಗೆ ಹಲವಾರು ಬಾಲ್ಯದ ಹುಡುಗಾಟಿಕೆಯ ಸನ್ನಿವೇಶಗಳನ್ನು ಮನೋಜ್ಞವಾಗಿ ಕಟ್ಟಿಕೊಟ್ಟಿದ್ದಾರೆ. ಇದು ನಮ್ಮಗಳ ಬಾಲ್ಯವನ್ನೂ ಕೂಡ ಒಮ್ಮೆ ಕಣ್ಮುಂದೆ ತರುವಂತೆ ಮಾಡುತ್ತದೆ. ಒಂದು ಪುಸ್ತಕ ಬರೆಯಲು ಯಾವ ಸಂಗತಿಗಳನ್ನು ಒಳಗೊಂಡು ರಚಿತವಾಗಿರಬೇಕು, ಯಾವ ಸಂಗತಿಗಳನ್ನು ಒಳಗೊಂಡಿರಬಾರದು ಎಂದು ಅರಿತಾಗ ದಿನನಿತ್ಯದ ಬದುಕಿನ ಹಲವಾರು ಜೀವನ ಕ್ರಮಗಳ ಚಿತ್ರಣವನ್ನು ಓದುಗರ ಮನಸ್ಸಿನಲ್ಲಿ ಹಿಡಿದಿಡುತ್ತದೆ. ತೇಜಸ್ವಿಗೆ ಕುವೆಂಪುರವರು ಎಂದೂ ಕೂಡ ಕಥೆ, ಕವನಗಳನ್ನು ಹೇಗೆ ಬರೆಯಬೇಕು ಎಂಬುದರ ಕುರಿತ ಮಾಹಿತಿಯನ್ನಾಗಲಿ ಅಥವಾ ರೀತಿಯನ್ನಾಗಲಿ ಎಂದು ತೋರಿಸಲಿಲ್ಲ. ಆದರೆ ಅವರು ಮಗನಿಗೆ ಜವಾಬ್ದಾರಿಯುತ ಬದುಕನ್ನು ಜೀವಿಸುವ ಬಗೆಯನ್ನು ರೂಢಿಸಿಕೊಟ್ಟರು. ತಂದೆಯಾಗಿ, ಗುರುವಾಗಿ ಬದುಕನ್ನು ತಿದ್ದುತ್ತಾ ಸಮಾಜದಲ್ಲಿ ಸತ್ಪ್ರಜೆಯಾಗಲು ಸಾಗಬಹುದಾದ ದಾರಿಯನ್ನು ತೋರಿದರು. 'ಕೂಸಿನ ಕನಸು' ಶೀರ್ಷಿಕೆಯಡಿಯಲ್ಲಿ ಚರ್ಚಿಸುವ ಪದ್ಯದ ಸಾಲುಗಳನ್ನು ಕುರಿತಂತೆ ಸಾಹಿತ್ಯ ಹಾಗೂ ವಿಜ್ಞಾನದ ಬಗೆಗಿನ ಅವರ ಅರ್ಥ ಸಾಧ್ಯತೆಯನ್ನು ಹೀಗೆ ವಿವರಿಸುತ್ತಾರೆ. "ಈ ಕವನದ ಅರ್ಥ ಹೇಳಿ ಹೊರಟು ಅಣ್ಣ ಅವತ್ತು ನನಗೆ ವಿಶ್ವ ಸೃಷ್ಟಿಯ ಬಗ್ಗೆ ಇರುವ ವೈಜ್ಞಾನಿಕ ತಿಳುವಳಿಕೆಯನ್ನು ಜೀವ ವಿಕಾಸದ ಅನೇಕ ಮಜಲುಗಳನ್ನು ವಿವರಿಸಿದರು. ಜೀವ ನೀರಿನಲ್ಲಿ ಮೀನಾಗಿ ಪ್ರಾರಂಭವಾದದ್ದು, ಅಲ್ಲಿಂದ ನೆಲದ ಮೇಲೆ ಕಾಲಿಟ್ಟ ಸರಿಸೃಪವಾಗಿ, ಅಲ್ಲಿಂದ ಸಸ್ತನಿಯಾಗಿ ಅನಂತರ ಮಂಗನಾಗಿ, ಆಮೇಲೆ ಬಾಲ ಕಳೆದುಕೊಂಡು ವಾನರನಾಗಿ, ಆಮೇಲೆ ಮನುಷ್ಯನಾಗಿದ್ದು, ಕಾಲವನ್ನು ಚರಿತ್ರೆಯಾಗಿ ನಿರಂತರ ಘಟನಾವಳಿಗಳ ಸರಣಿಯನ್ನಾಗಿ ಪರಿಭಾವಿಸುವಾಗ ಕಾಣುವ ಸತ್ಯ. ಆದರೆ ತೊಟ್ಟಿಲಲ್ಲಿ ಮಲಗಿರುವ ಕೂಸಿಗೆ ಚರಿತ್ರೆಯಿಲ್ಲ. ಆ ಸೃಷ್ಟಿ ಪೂರ್ವದ ಪ್ರಪ್ರಾಚೀನ ಆಯಾಮದಿಂದಲೇ ಉದ್ಭವಿಸುವ ಕೂಸಿನ ಕನಸಿನಲ್ಲಿ ಈ ಮಿಲಿಯಾಗಟ್ಟಲೇ ವರ್ಷದ ಸೃಷ್ಟಿ ಸಂಕ್ಷಿಪ್ತವಾದ ಒಂದೇ ಒಂದು ದಿವ್ಯಕ್ಷಣ" ಎಂದು ಮಾನವನ ವಿಕಾಸಕ್ರಮವನ್ನು ಕುರಿತು ಹೇಳಿರುವುದು ಕುತೂಹಲಕಾರಿಯಾಗಿದೆ. ಸದ್ಯದ ಪಠ್ಯಗಳಲ್ಲಿ ಕೆಲವೊಂದು ಪಠ್ಯಗಳು ಹೇಗೆ ಪರಿಣಾಮಕಾರಿಯಾಗಿ ರೂಪಿತವಾಗಿವೆ, ಅವುಗಳು ವಿದಾರ್ಥಿಗಳನ್ನ ಸಜ್ಜುಗೊಳಿಸುವ ಬಗೆಯನ್ನು ಹಾಗೂ ಜೀವನದ ಬಗ್ಗೆ ಜಿಗುಪ್ಸೆ ಮೂಡಿಸುವಂತಹ ಪಠ್ಯಗಳ ಕುರಿತು ಹೇಳುತ್ತಾರೆ. ಇದಕ್ಕೆ ನಿದರ್ಶನವಾಗಿ ಸರ್ಕಾರ

ಪ್ರಕಟಿಸಿರುವ ಪುಸ್ತಕಗಳು ಹಾಗೂ ಕನಸಿನ ಕೂಸು ಕವಿತೆಯ ಸತ್ವಗಳೇ ಸಾಕ್ಷಿಯಾಗಿವೆ. ತೇಜಸ್ವಿ ಮನೆಗೆ ಮೀನು ತಂದಾಗ ತಾಯಿ ಹೀಗೆ ಹೇಳುತ್ತಿದ್ದಳು. "ಮನೆ ಹಿಂದುಗಡೆಯಿಂದಲೇ ಬನ್ನಿ, ಎದುರುಗಡೆ ಯಾರಾದರೂ ಕುಳಿತಿರುತ್ತಾರೆ" ಈ ಮಾತು ಸಮಾಜದಲ್ಲಿ ಕೆಲವು ಮಡಿ ಮೈಲಿಗೆಯಂತಹ ಮನಸ್ಥಿತಿಗಳು ಇನ್ನೂ ಇತ್ತೆಂಬುದನ್ನು ಸ್ಪಷ್ಟೀಕರಿಸುತ್ತದೆ.

ನಾವು ನಮ್ಮ ಆಹಾರವನ್ನು ಧೈರ್ಯವಾಗಿ ತಿನ್ನಲು ಅಸಾಧ್ಯವಾದಂತಹ ಸಂದರ್ಭವಿದು. ಇಂದಿಗೂ ಕೂಡ ತಾವು ತಿನ್ನುವ ಆಹಾರವನ್ನು ಮತ್ಯಾರೋ ನಿರ್ಧರಿಸುವಂತಹ ಸನ್ನಿವೇಶವನ್ನು ಕಾಣುತ್ತಿದ್ದೇವೆ ಕೂಡ. ಕುವೆಂಪುರವರಾಗಲೀ. ತೇಜಸ್ವಿಯವರಾಗಲೀ ಎಂದೂ ಕೂಡ ತಿನ್ನುವ ಆಹಾರದ ಕುರಿತು ಕೇವಲವಾಗಿ ಮಾತಾಡಿದ್ದಿಲ್ಲ. ಅವರವರ ಆಹಾರ ಅವರಿಗೆ ಹೆಚ್ಚು ಎಂಬುದನ್ನೇ ಬೆಂಬಲಿಸಿಕೊಂಡು ಬಂದರು. ಹಾಗಾಗಿಯೇ ತೇಜಸ್ವಿಯವರ ಮನೆಗೆ ಊಟಕ್ಕೆ ಯಾರಾದರೂ ಬಂದಾಗ ಮಾಂಸಹಾರಿಗಳೋ, ಸಸ್ಯಹಾರಿಗಳೋ ಮೊದಲೇ ಕೇಳಿ ತಿಳಿಯುತ್ತಿದ್ದರು ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ಇದಕ್ಕೆ ಉದಾಹರಣೆಯಾಗಿ ತೇಜಸ್ವಿಯವರೇ ಈ ರೀತಿ ಬರೆದಿದ್ದಾರೆ. "ಸ್ನೇಹಿತರೊಬ್ಬರು ಮನೆಗೆ ಬಂದಾಗ ಮಾಂಸಹಾರಿ ಮೊದಲಿಯಾರಿ ಪಲಾವು ತಿಂದ ಮೇಲೆ ಮೊಸರನ್ನು ಬಡಿಸಲು ಹೋದರೆ, ಪ್ರತಿಭಟಿಸದ ಪಲಾವು ಶೂದ್ರ ಅಂತೆ! ಮೊಸರನ್ನ ಬ್ರಾಹ್ಮಣ ಅಂತೆ! ಹೊಟ್ಟೆಯಲ್ಲಿ ಸಹ ಅವಂತೂ ಮಿಕ್ಸ್ ಆಗಬಾರದಂತೆ" ಹೀಗೆ ತಿನ್ನುವ ಆಹಾರದಲ್ಲೂ ಕೂಡ ಭೇದ ಭಾವದ ಕುಹಕವನ್ನು ಇಂದಿಗೂ ಕಾಣಬಹುದಾಗಿದೆ. ಅನ್ನ ದೇವರ ಮುಂದೆ ಇನ್ನು ದೇವರುಂಟೆ ಎಂಬ ಮಾತು ಅಕ್ಷರಷಃ ಸತ್ಯವಾದದ್ದು. ಆದರೋ ನಾವು ತಿನ್ನುವ ಆಹಾರದಿಂಲೇ ಇಂದು ನಮ್ಮ ನಮ್ಮ ಜಾತಿ, ಧರ್ಮವನ್ನು ಊಹಿಸುವ ಮನಸ್ಥಿತಿಗಳೇ ತುಂಬಿ ಹೋಗಿವೆ. ಕುವೆಂಪು ಅವರ ಅಂತ್ಯ ಸಂಸ್ಕಾರದ ಸಮಯದಲ್ಲಿ ಶಾಸ್ತ್ರದ ರೀತಿಯಲ್ಲಿ ಗಂಧದ ಚಕ್ಕೆಯನ್ನು ಇಡುವಾಗ "ಅಯ್ಯೋಯ್ಯೋ ಬಲಗೈ ಇಡಬಾರದು ಎಡಗೈಲಿ ಇಡಬೇಕು" ಎಂಬ ಸಂಪ್ರದಾಯದ ಹಿರಿಯರೊಬ್ಬರು ಹೇಳುತ್ತಾರೆ. ಆದರೆ ಕುವೆಂಪುರವರು ಅದಕ್ಕೆ ವ್ಯತಿರಿಕ್ತವಾಗಿರುವುದನ್ನು ಕಾಣಬಹುದು.

ತೇಜಸ್ವಿಯವರ ತರಗತಿಯಲ್ಲಿ ಅಧ್ಯಾಪಕರೊಬ್ಬರು, ಕುವೆಂಪುರವರು ಕುಮಾರವ್ಯಾಸ ಭಾರತ ಪದ್ಯವನ್ನು ಬೋಧಿಸುತ್ತಾ ತರಗತಿಯಲ್ಲಿ ಕಾವ್ಯ ರಚನೆ ಮಾಡುತ್ತಾ ಮಾಂಸಹಾರವನ್ನು ಸಂಪೂರ್ಣ ವರ್ಜಿಸುತ್ತಾರೆಂದು, ಮಡಿ ಜೀವನ ನಡೆಸುತ್ತಾ ಬರೆಸುತ್ತಾರೆಂದು ಬೊಗಳೆ ಹೊಡೆಯುತ್ತಾರೆ . ಆಗ ಈ ವಿಚಾರವನ್ನು

ಕುರಿತು ತೇಜಸ್ವಿಯವರು ಮನೆಗೆ ಬಂದು ತಂದೆಯ ಬಳಿ ಚರ್ಚಿಸಿದಾಗ ಕುವೆಂಪುರವರು ಹೇಳುವ ಮಾತುಗಳು ಸಾರ್ವಕಾಲಿಕವಾಗಿ ಒಪ್ಪತಕ್ಕಂತಹವು ಎಂದೆ ಹೇಳಬಹುದು. 'ನೀತಿ ನಿಯಮ, ವ್ರತ ಆಚಾರಗಳ, ಜಾತಿ ಪದ್ಧತಿಗಳ ಕಂದಾಚಾರಗಳು ಎಲ್ಲವನ್ನೂ ವಿರೋಧಿಸುತ್ತಾ ಇದ್ದರು. ಅಂದಿನ ಬಹುಮಂದಿ ಜನರು ಮೂಲಭೂತವಾದಿಗಳು ಮತ್ತು ಸಂಪ್ರದಾಯವಾದಿಗಳ ಶರಣರಾಗಿದ್ದವರು" ಎಂದು ಹೇಳುತ್ತಾರೆ. ಹೀಗೆ 'ಅಸತೋಮ ಸದ್ಗಮಯ' ಲೇಖನದಲ್ಲಿ ಸಮಾಜದ ಡೊಂಕುಗಳನ್ನು ಎತ್ತಿ ತೋರಿಸುತ್ತಾ ಅವುಗಳನ್ನು ಖಂಡಿಸುವುದನ್ನು ಕಾಣಬಹುದು.

ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ದೇಶ ವಿಭಜನೆ, ಮತಾಂತರ, ಮತೀಯ ಗಲಭೆಗಳು, ಆಂತರಿಕ ಕ್ಷೋಭೆಗಳು, ಜಾತಿ–ಜಾತಿಗಳ ವೈಷಮ್ಯದಿಂದ ಅನೇಕರು ನಿರ್ಗತಿಕರಾದರು. ರಾಜ್ಯಗಳ ವಿಲೀನೀಕರಣ, ಕನ್ನಡ ಭಾಷಾಪರವಾದ ಚಳುವಳಿಗಳು ಆರಂಭವಾಯಿತು. ಇವುಗಳೆಲಲ್ಲವೂ ಕೂಡ ತೇಜಸ್ವಿಯವರ ಮೇಲೆ ಪ್ರಭಾವ ಬೀರಿದ ಅಂಶಗಳೆಂತಲೇ ಹೇಳಬಹುದು. ಇವರು ಎಸ್.ಎಸ್.ಎಲ್.ಸಿಯಲ್ಲಿ ಎರಡು ಬಾರಿ ಫೇಲಾಗಿದ್ದರೂ ಸಹ ತಮ್ಮ ವಿಶೇಷ ಆಸಕ್ತಿಯ ಮೂಲಕ ಸಾಹಿತಿಯಾಗಿ ಗುರ್ತಿಸಿಕೊಂಡಿದ್ದು ವಿಶೇಷವೇ ಆಗಿದೆ. ತೇಜಸ್ವಿಯವರಿಗೆ ಎಲಿಯಟ್‌ರ 'ಅಡಿಟರ್ ಇಮ್ಯಾಜಿನೇಷನ್' ಹಾಗೂ 'ಲತಾನಟಿ' ಪದ್ಯದಲ್ಲಿನ ಸಂಸ್ಕೃತ ಪದಗಳ ಚರ್ಚೆ ಹಾಗೂ ಭಾಷೆಯಿಂದ ಭಾಷೆಗೆ ಪದ್ಯಗಳು ಹೇಗೆ ಬದಲಾವಣೆಯಾಗುತ್ತದೆ ಎಂಬುದರ ಕುರಿತ ಮಾಹಿಯನ್ನು ಉದಾಹರಣೆಗಳ ಮೂಲಕ ಕುವೆಂಪುರವರು ವಿವರಿಸುತ್ತಾರೆ. ವ್ಯಾಕರಣದ ನಿಯಮಗಳು ಹೇಗೆ ಪರಿವರ್ತನೆಯಾಗುತ್ತವೆ ಎಂಬುದಕ್ಕೆ ಸಂಸ್ಕೃತದ 'ಅಕ್ಷರ'ವನ್ನು ಕನ್ನಡದಲ್ಲಿ 'ಅಕ್ಕರ' ಎಂತಲೂ ಇಂಗ್ಲೀಷ್‌ನ 'ಮಾಸ್ಟರ್'ನ್ನು ಕನ್ನಡದಲ್ಲಿ 'ಮೇಷ್ಟ್ರು' ಮಾಡುತ್ತಾರೆ ಎಂದು ಭಾಷೆಯ ಬಗೆಗಿನ ಸೂಕ್ಷ್ಮ ಚರ್ಚೆ ಮಾಡಿರುವುದನ್ನು ಕಾಣಬಹುದು.

ಒಮ್ಮೆ ತೇಜಸ್ವಿ ಅರಸು ಬೋರ್ಡಿಂಗ್ ಕಡೆಯಿಂದ ಸೈಕಲ್ ಹೊಡೆದುಕೊಂಡು ಬರುತ್ತಿದ್ದಾಗ ಮಹಾರಾಜ ಕಾಲೇಜಿನ ಹಾಸ್ಟೆಲ್ ಸರ್ಕಲ್ ಎದುರು ಪೊಲೀಸ್ ಪೇದೆ ಸೈಕಲ್ ಲೈಸೆನ್ಸ್ ಕೇಳಿದರು. ಅದು ಮನೆಯಲ್ಲಿರುವುದಾಗಿ ತೇಜಸ್ವಿ ಹೇಳುತ್ತಾರೆ. ಹೇಗೋ ಆತನನ್ನು ಸಮಜಾಯಿಸಿ ಸೈಕಲ್ ಹೊಡೆದುಕೊಂಡು ಹೋಗಬೇಕೆನ್ನುವಷ್ಟರಲ್ಲಿ ಹಿಂದೆಯಿಂದ ನಂಜುಂಡ ಸ್ವಾಮಿ, ಫೋಟೋಗ್ರಾಫರ್ ಬಿ.ಎಸ್.ಆಚಾರ್‌ರವರು ಬಂದು ವಿಚಾರ ತಿಳಿದು ಪೊಲೀಸ್ ಪೇದೆಗೆ ಕಾನೂನಿನ ಪಾಯಿಂಟ್ ಹಾಕಿ ಪೇದೆಯನ್ನು ಅವಮಾನಿಸಿದನು. ಅಲ್ಲಿನ ಹಾಸ್ಟೆಲ್ ಯುವಕರು ಎಲ್ಲಾ ಸೇರಿ ಪೇದೆಯ

ಮೇಲೆ ಯುದ್ಧ ಸಾರಿದರು. ಮೊದಲೇ ಮಾತುಕತೆಯನ್ನಾಡಿ ಸುಮ್ಮನಾದವರಿಗೆ ನಂಜುಂಡಸ್ವಾಮಿ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಹಾಗೆ ಬೀದಿಯಲ್ಲಿ ಹೋಗೋ ನಾಯಿನಾ ಮೈ ಮೇಲೆ ಬಿಟ್ಟುಕೊಳ್ಳುವಂತಹ ಸಂದರ್ಭವನ್ನು ಸೃಷ್ಟಿಸಿ ಜಗಳಕ್ಕೆ ಎಲ್ಲರೂ ಅಣಿಯಾಗಿದ್ದರು. ಆದರೆ ಶಿಕ್ಷೆಯನ್ನು ಅನುಭವಿಸುವ ವೇಳೆಗೆ ಒಬ್ಬರು ಇರಲಿಲ್ಲ. ಹೀಗೆ ಅಸಭ್ಯವಾಗಿ ವರ್ತಿಸಿದ ನಂಜುಂಡಸ್ವಾಮಿಯಿಂದ ತೇಜಸ್ವಿರವರಿಗೆ ಕೋರ್ಟಿನಿಂದ ನೋಟಿಸ್ ಬಂದ ಕಾರಣ ಎಂಟು ರೂಪಾಯಿ ದಂಡ ತೆರಬೇಕಾಯಿತು. ಪೊಲೀಸ್ ವಾರೆಂಟ್ ವಿಷಯಕ್ಕೆ ತಂದೆಯಿಂದ ಯಾವುದೇ ಉತ್ತರ ಸಿಗದಿದ್ದಾಗ "ಏನಣ್ಣ ನೀವು? ಪೊಲೀಸಿನವನೇ ನನ್ನ ಹೊಕ್ಕೊಳ್ಳಲಿ ಹೋಗು ಅಂತ ಬಿಟ್ಟು ಬಿಟ್ಟಿದ್ದ! ನಂಜುಂಡಸ್ವಾಮಿನೂ ಆಚಾರ್ರೂ ಬರದಿದ್ದರೆ ನನ್ನ ಮೇಲೆ ಯಾವ ಕೇಸು ಇರ್ತಿರಲಿಲ್ಲ. ನೀವು ಪೊಲೀಸಿನವರ ಪರ ಮಾತಾಡ್ತೀರಲ್ಲ?" ಎಂದು ಅಸಹನೆಯಿಂದ ಹೇಳಿದಾಗ ಅದಕ್ಕೆ ವ್ಯತಿರಿಕ್ತವಾಗಿ ಕುವೆಂಪು ಹೀಗೆ ಹೇಳುತ್ತಾರೆ. "ಕರೆಕ್ಟ್, ನಾನು ನಿನ್ನ ವಿರುದ್ಧ ಯೋಚನೆ ಮಾಡೋದನ್ನು ಕಲೀತಿಯೋ ಅಷ್ಟಷ್ಟು ನಿನ್ನ ದೃಷ್ಟಿ ಅಬ್ಜೆಕ್ಟಿವ್ ಆಗುತ್ತೆ. ವಸ್ತುನಿಷ್ಠ ಆಗುತ್ತೆ, ಬರೀ ಈ ಕೋರ್ಟಿನ ಕೇಸಿನೊಂದಕ್ಕೆ ಅಲ್ಲ. ಜೀವನದಲ್ಲೂ ಇದು ತುಂಬಾ ಅಗತ್ಯ. ಕಣ್ಣು ಪಟ್ಟಿ ಕಟ್ಟಿದ ಕುದುರೆ ಹಾಗೆ ನಿನ್ನ ಮೂಗಿನ ನೇರಕ್ಕೆ ನೀನು ಯೋಚನೆ ಮಾಡೋದು ಸರಿಯಲ್ಲ. ಸಾಹಿತ್ಯದಲ್ಲಿ ಅಷ್ಟೇ ಬರಹಗಾರನಿಗೂ ಕೆಟ್ಟ ಬರಹಗಾರನಿಗೂ ಇರೋ ವ್ಯತ್ಯಾಸ ಇಷ್ಟೇ. ಒಳ್ಳೆಯ ಬರಹಗಾರ ತನ್ನ ವಿರುದ್ಧ ತಾನೇ ಯೋಚಿಸಬಲ್ಲವ. ಕೆಟ್ಟ ಬರಹಗಾರ ತನ್ನನ್ನು ಬಿಟ್ಟರೆ ಇಲ್ಲ ಅಂತ ತಿಳ್ಕೊಂಡಿರುತ್ತಾನೆ." ಹೀಗೆ ಬದುಕಿನ ನೈತಿಕತೆಗೆ ಸಂಬಂಧಿಸಿದ ಹಲವಾರು ಸಂಗತಿಗಳನ್ನು ಸಾಹಿತ್ಯದ ಮೂಲಕ ಬದುಕನ್ನು ರೂಪಿಸುವ ಜವಾಬ್ದಾರಿಯುತ ಸುಳಿವುಗಳನ್ನು ಕುವೆಂಪುರವರು ತಿಳಿಸಿಕೊಡುತ್ತಾರೆ. ಹಣದ ಬೆಲೆ, ಕಾಲದ ಬೆಲೆ, ಮನೋಭಾವ ಆತ್ಮಗೌರವಕ್ಕೆ ಬೆಲೆ, ಇವೆಲ್ಲಾ ಒಂದೇ ದೃಷ್ಟಿಕೋನದ ವಿವಿಧ ಅಭಿವ್ಯಕ್ತಿಗಳಾಗಿದ್ದವು. ನೈತಿಕ ಶಿಕ್ಷಣ ನೀಡುವುದರ ಮೂಲಕ ಒಂದನ್ನೊಂದು ಹೇಗೆ ಸಮರ್ಥಿಸಿಕೊಳ್ಳಬೇಕು ಎಂಬ ದೃಷ್ಟಿಕೋನವು ಇರುವುದನ್ನು ಗಮನಿಸಬಹುದು.

ತೇಜಸ್ವಿ ಹೇಳಿದ ಹಾಗೆ ತಂದೆಯು ಸಂಗೀತವನ್ನು ಧ್ಯಾನ ಮಾಡುವ ಹಾಗೆ ಕಣ್ಣುಮುಚ್ಚಿ ಏಕಾಗ್ರತೆಯಿಂದ ಕೇಳಿದರೆ, ತನಗೂ – ಸಂಗೀತಕ್ಕೂ ಗೋಕುಲಾಷ್ಟಮಿಯ ಇಮಾಂಸಾಬಿ ಸಂಬಂಧ ಎಂದು ಹೇಳುತ್ತಾ, ಸಂಗೀತಾಸಕ್ತಿಗೆ ಮರುಳಾಗಿ ಪಟ್ಟ ಪಾಡುಗಳನ್ನು ಕುರಿತಂತೆ ಮನೋಜ್ಞವಾಗಿ ತಿಳಿಸುತ್ತಾರೆ. ಅಂತಹ ವಿಚಾರಗಳು ನಗೆಪಾಟಲಿಗೆ ಒಳಗಾಗುವಂತಹ ಶಾಮಣ್ಣ ಮತ್ತು ತೇಜಸ್ವಿಯವರ

ಸಂಗೀತ ಉಪಕರಣಗಳ ಸಾಮ್ರಾಜ್ಯದ ತಿರುವುಗಳಾದ ಬುಲ್‌ಬುಲ್ ತರಂಗ್, ದಂತವಾದ್ಯ, ಗ್ರಾಮೋಫೋನ್ ಮೂಲಕ ತರಭೇತಿ, ಕಾಲೇಜಿಗೆ ವರ್ಗಾವಣೆ, ಶಹಾನಾಯ್‌ನ್ನು ಡೆಲ್ಲಿಯಿಂದ ತರಿಸಿದ್ದು, ಮೆಡಿಟೇಷನ್ ರೂಂಗೆ ಶಿಫ್ಟ್ ಮಾಡಿದ್ದು, ಶಹಾನಾಯ್ನ ಸ್ವರ ಹೊರಡಿಸಲು ಯತ್ನಿಸಿದ ಪ್ರಯತ್ನಗಳು, ವೈಸ್ ಛಾನ್ಸಲರ್ ಕ್ವಾಟರ್ಸ್‌ಗೆ ಶಿಫ್ಟ್ ಆಗಿ ಅಲ್ಲಿ ನಾಯಿಗಳು ಶಹಾನಾಯ್ ರಾಗಕ್ಕೆ ಒಲಿದು ಶಹಾನಾಯ್ಗೆ ಗುಡ್ ಬೈ ಹೇಳಿದ್ದು ಹೀಗೆ ಸಂಗೀತದ ಕಲಿಕೆಗೆ ಹತ್ತು ವರ್ಷಗಳಲ್ಲಿ ಮುಳುಗಿ ಹೋದಂತಹ ಹಲವಾರು ವಿಚಾರಧಾರೆಗಳನ್ನು ಕಟ್ಟಿಕೊಡುತ್ತದೆ.

ಶಾಲೆಯಲ್ಲಿ ಕುಮಾರವ್ಯಾಸ ಭಾರತದ ಪಾಠ ಮಾಡುವಾಗ ಅಲ್ಲಿನ ಅಧ್ಯಾಪಕರು ಹೇಳಿದ ಮಡಿ ಮೈಲಿಗೆಯ ಸಂಗತಿಗಳು ಹಾಗೂ ಸಂಗೀತದಲ್ಲಿಯು ತುರುಕರ ಸಂಗೀತ ಎಂದು ಉತ್ತರಾಧಿ ಸಂಗೀತವನ್ನು ಸಹ ಜಾತಿ ಜಾತಿಗಳ, ಧರ್ಮ ಧರ್ಮಗಳ ನೆಲೆಯನ್ನು ಎತ್ತಿತೋರಿಸುತ್ತದೆ. ಹಾಗೆಯೇ ಸಾಹಿತ್ಯದಲ್ಲಿಯೂ ನವೋದಯ ನವ್ಯ ಎಂದೂ, ಬ್ರಾಹಣ ಬ್ರಾಹ್ಮಣೇತರ ಎಂದು ಕನ್ನಡ ಮತ್ತು ಸಾಹಿತ್ಯ ವಿಭಾಗಳಲ್ಲಿಯೂ ಧ್ರುವೀಕರಣಗಳಾದವು. ಪ್ರಜಾವಾಣಿ ಪತ್ರಿಕೆಯು ಏರ್ಪಡಿಸಿದ್ದ ಸಂದರ್ಶನದ ವೇಳೆಯಲ್ಲಿ ಕೇಳಿದ ಪ್ರಶ್ನೆಗಳು ಒಬ್ಬ ತಂದೆಯನ್ನು ಮಗ ಕ್ರಮವಾಗಿ, ಕವಿಯನ್ನು ಒಬ್ಬ ವಿಮರ್ಶಕ, ಓದುಗ ಪ್ರಶ್ನಿಸಿರುವ ಗುಣ ಹಾಗೂ ಮಹಾಕವಿಯ ಅಭಿಪ್ರಾಯಗಳು ಭೂತದಿಂದ ಪ್ರಸ್ತುತ ವರ್ತಮಾನ ಕಾಲದ ಸಮಸ್ಯೆಗಳೇ ಎಂದು ಹೇಳುವ ದೂರದೃಷ್ಟಿಯ ಬಗೆ ಗಮನಾರ್ಹವಾದುದು.

ಸಂಗೀತ ಕೆಲಸ ಮುಗಿದ ನಂತರ ಯಂತ್ರಗಳ ತಂತ್ರಜ್ಞಾನದ ಕಾರ್ಯದಲ್ಲಿ ತೊಡಗುವುದು, ಸ್ಕೂಟರ್, ಗಡಿಯಾರ ಇತರ ಯಂತ್ರ ಭಾಗಗಳನ್ನು, ಅವುಗಳ ಅನ್ವೇಷಣೆಯನ್ನು ಕೈಗೊಳ್ಳುತ್ತಿದ್ದರು. ತಂದೆಯೇ ಇದನ್ನು ಪ್ರಶ್ನಿಸಿ ಪ್ರೋತ್ಸಾಹಿಸುತ್ತಿದ್ದರು. ಶಾಮಣ್ಣನ ರಾಯಲ್ ಎನ್ಫೀಲ್ಡ್ ಪ್ರಿನ್ಸ್ ಬೈಕು ಒಂದು ರೀತಿಯ ಹಾಸ್ಯಸ್ಪದ ಸಂಗತಿಯಾಗಿ ಕೃತಿಯಲ್ಲಿ ಮೂಡಿಬಂದಿರುವುದು ಬಹುಮುಖ್ಯವಾದುದು..

ಜಿ.ಎಸ್.ಎಸ್, ಶ್ರೀಕೃಷ್ಣ ಆಲನಹಳ್ಳಿ, ಜೀ.ಶಂ.ಪರಮೇಶ್ವರ ಭಟ್ಟ, ಕೃಷ್ಣಮೂರ್ತಿಯರಂತಹ ಹಲವಾರು ಸಾಹಿತ್ಯ ಪ್ರತಿಭೆಗಳ ಸ್ನೇಹ–ಪ್ರಭಾವ ಬೀರಿದೆ. ಕುವೆಂಪುರವರಿಗೆ ಕನ್ನಡ ಭಾಷೆ ಮತ್ತು ಜಾತಿಪದ್ಧತಿ, ಮಠಗಳ ಬಗೆಗಿನ ಸಿಟ್ಟು ಬಹುವಾಗಿ ಕಾಡಿದೆ. ಕರ್ನಾಟಕ ರಾಜ್ಯ ಸ್ಥಾಪನೆಗೆ ಆಗ ಹಲವಾರು ಚಳುವಳಿಗಳು, ಸಂಘಟನೆಗಳು ಆರಂಭವಾಯಿತು. ಆಗ ಹಲವರು ಒಪ್ಪದೇ ಇದ್ದರು. ಆಗ ರಚಿತವಾದ 'ಅಖಂಡ ಕರ್ನಾಟಕ' ಪದ್ಯ ಸೂಕ್ಷ್ಮ ರೀತಿಯಲ್ಲಿ ಮಂತ್ರಿಮಂಡಲವನ್ನು ಪ್ರಶ್ನಿಸಿತು.

ಆಗ ಸರ್ಕಾರ ಅವರಿಗೆ ಷೋಕಾಸ್ ನೋಟಿಸ್ ಕೂಡ ಜಾರಿ ಮಾಡಿತ್ತು.

ವಿನೋಭಾ ಭಾವೆ ಮತ್ತು ರಾಮಮನೋಹರ ಲೋಹಿಯಾರಂತಹ ಹಲವಾರು ಸಾಮಾಜಿಕ ಕಾರ್ಯಕರ್ತರ ಪರಿಚಯ ಕುವೆಂಪುರವರಿಗಿತ್ತು. ಬಸವಲಿಂಗಪ್ಪನವರ ಬೂಸಾ ಸಾಹಿತ್ಯ ಪ್ರಕರಣ, ಲೋಹಿಯಾರ ಅಂಗ್ರೇಜಿ ಹಠಾವ್ ಚಳುವಳಿ ಶಿವಮೊಗ್ಗದಲ್ಲಿ ಗೋಪಾಲಗೌಡರ ಉಳುವವನೆ ಹೊಲದೊಡೆಯ, ಕಾಗೋಡು ಸತ್ಯಾಗ್ರಹ, ಕಡಿದಾಳು ಮಂಜಪ್ಪ ಗೇಣಿ ಶಾಸನ ತಂದು ಗೇಣಿ ಪದ್ದತಿಗೆ ಐತಿಹ್ಯ ಹಾಡಿದ್ದು ಇವು ಚಳುವಳಿಯ ಅರಿವನ್ನು ಕುವೆಂಪುರವರಲ್ಲಿ ಮೂಡಿಸಿದ್ದವು. ಇವರ ಕಲ್ಕಿ, ನೇಗಿಲಯೋಗಿ ಪದ್ಯಗಳನ್ನು ಜಿ.ಎಚ್.ಪಟೇಲರು ಪಾರ್ಟಿಹಾಲಿನಲ್ಲಿ ಮೊಟ್ಟಮೊದಲ ಬಾರಿಗೆ ಕನ್ನಡದಲ್ಲಿ ಭಾಷಣ ಮಾಡಿದ್ದು ಇಂತಹ ಹಲವಾರು ಹೋರಾಟಗಳು ಸ್ವಾತಂತ್ರ್ಯ ಚಳುವಳಿಗೆ ನಾಂದಿಯಾಯಿತೆಂದು ಹೇಳಬಹುದು. ಮಾತೃ ಭಾಷೆಯ ಬಗೆಗಿನ ತುಡಿತ, ಜಮೀನ್ದಾರರು ಬಂಡವಾಳಶಾಹಿಗಳಿಂದ ಕಾರ್ಮಿಕರ ಶೋಷಣೆ, ಅಧಿಕಾರಿಗಳ ದರ್ಪ ಮುಂತಾದ ಸಂಗತಿಗಳನ್ನು ಕಂಡಿಸುವ ನಿಟ್ಟಿನಲ್ಲಿಯೇ ತಮ್ಮ ಸಾಹಿತ್ಯವನ್ನು ರಚಿಸಿರುವುದಾಗಿ ತೇಜಸ್ವಿಯವರು ತಂದೆಯವರ ಮನಸ್ಥಿತಿಯನ್ನು ಹಾಗೂ ವ್ಯಕ್ತಿತ್ವವನ್ನು ಈ ಕೃತಿಯಲ್ಲಿ ಚಿತ್ರಿಸಿದ್ದಾರೆ.

ತೇಜಸ್ವಿ ಇಂಗ್ಲಿಂಷ್ ವಿಷಯದಲ್ಲಿ ಫೇಲಾದಾಗ ಕುವೆಂಪು ಹೀಗೆ ಹೇಳುತ್ತಾರೆ. "ನೀವು ಇಂಗ್ಲಿಷನ್ನು ಅಲಕ್ಷಿಸಿದರೆ ನಿಮಗೆ ಭವಿಷ್ಯವೇ ಇಲ್ಲ. ಅದಕ್ಕೆ ನಾನು ಇಂಗ್ಲೀಷ್, ಕನ್ನಡ ಎರಡನ್ನು ಸೇರಿಸಿ ಒಂದೇ ಸಾಹಿತ್ಯದ ಕೋರ್ಸ್ ಮಾಡಬೇಕು" ಎಂದು ವಿಷಾದದಿಂದ ಹೇಳುತ್ತಿದ್ದರು. "ನೀನು ಇಂಗ್ಲೀಷ್ ಚೆನ್ನಾಗಿ ಕಲಿಯಬೇಕಾಗಿರುವುದು ನಿನ್ನ ಅಗತ್ಯಕ್ಕಾಗಿ ಹೊರತು, ಇಂಗ್ಲಿಷಿನವರ ಅಗತ್ಯಕ್ಕಾಗಿ ಅಲ್ಲ. ಅದು ಬಿಟ್ಟು ಕನ್ನಡದಲ್ಲೇ ಎಲ್ಲಾ ಇದೆ ಎಂದು ತಿಳಿದು ಕೂಪ ಮಂಡೂಕ ಆಗಬೇಡ! ಯಾವ ಭಾಷೆಯಲ್ಲೂ ಎಲ್ಲಾ ಇದೆ ಎಂದು ತಿಳಿಯುವವನು ಮೂರ್ಖ" ಎಂದು ಭಾಷೆಯ ಬಗೆಗಿನ ಅಗತ್ಯತೆಯನ್ನು ಕುರಿತು ಹೇಳುತ್ತಾರೆ.

ಎಪ್ಪತ್ತರ ದಶಕದಲ್ಲಿ ರಾಮಾಯಣ ದರ್ಶನಂ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆಯಿತು. ಆಗ ಸಾಹಿತಿಗಳ ಮಧ್ಯೆ ದಳ್ಳುರಿ ಶುರುವಾಗಿ ಕುವೆಂಪುರವರನ್ನು ಜರಿದದ್ದೂ ಇದೆ. ಮಹಾಕಾವ್ಯದ ರಚನೆಯಿಂದ ಕಾದಂಬರಿ ಬರವಣಿಗೆಯತ್ತ ಸಾಗುತ್ತಿದ್ದ ಕಾಲವದು. ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳಾದವು. ಬಸವಲಿಂಗಪ್ಪನವರ ಬೂಸಾ ಸಾಹಿತ್ಯ ಪ್ರಕರಣದ ಹೇಳಿಕೆಯು ಕರ್ನಾಟಕದಾದ್ಯಂತ ಪ್ರತಿಭಟನೆಗಳಾದವು. ಸಾಹಿತ್ಯ ರಚನೆಯ ಆಸಕ್ತಿ ಕ್ಷೇತ್ರಗಳು ಮನೋಧರ್ಮಗಳು ಬದಲಾಗಿ ಸಮಾಜವನ್ನು

ಗ್ರಹಿಸುವ ದೃಷ್ಟಿಕೋನ ಬದಲಾಯಿತು.

ಯುವಕ ಯುವತಿಯರು ಗೊಡ್ಡು ಸಂಪ್ರದಾಯಗಳಿಗೆ ವಿವಾಹ ಸಮಯದಲ್ಲಿ ಬಲಿಯಾಗುತ್ತಾರೆಂದು ಹೀಗೆ ಹೇಳುತ್ತಾರೆ. "ನೀವು ಲೋಕವನ್ನಾಗಲೀ, ಸಮಾಜವನ್ನಾಗಲೀ, ಪುರೋಹಿತಶಾಹಿಯನ್ನಾಗಲೀ ಬದಲಾಯಿಸಲು ಪ್ರಯತ್ನಿಸುವ ಅಗತ್ಯ ಖಂಡಿತ ಇಲ್ಲ ಇಲ್ಲ. ನೀವು ಮತ್ತು ನಿಮ್ಮ ಮನಸು ಪರಿವರ್ತನೆ ಆಗದೆ ಏನು ಬದಲಾಗುವುದಿಲ್ಲ. ನಿಮ್ಮಲ್ಲಿ, ನಿಮ್ಮ ಜೀವನದಲ್ಲಿ ಸಣ್ಣ ಸುಧಾರಣೆ ಮಾಡಿಕೊಳ್ಳಿ" ಎಂದು ಹೇಳುತ್ತಾ ಮಂತ್ರ ಮಾಂಗಲ್ಯವನ್ನು ಪ್ರೋತ್ಸಾಹಿಸುತ್ತಾರೆ. ಯುವ ಸಮುದಾಯ ಮೌಢ್ಯಗಳಿಂದ ದೂರವಾಗಿ ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳುವಂತೆ ತಮ್ಮ ಬರಹಗಳಿಂದ ಅರಿವು ಮೂಡಿಸಿದ್ದಾರೆ.

ಹೀಗೆ ತಂದೆ–ಮಗನ ಸಂಬಂಧಗಳನ್ನು ವಿವರಿಸುತ್ತಾ, ಕೇವಲ ತಂದೆಯಾಗಿ ಮಾತ್ರವಲ್ಲದೆ ಹಲವಾರು ಅನುಭವ ಸಂಗತಿಗಳನ್ನು, ಜೀವನ ಪಾಠಗಳನ್ನು ಮನದಟ್ಟು ಮಾಡಿಸುವುದನ್ನು ಇಲ್ಲಿ ನೋಡಬಹುದು. ಎಲ್ಲರಿಗೂ ಸಾಮಾಜಿಕ ಶಿಕ್ಷಣವು ಸಾಮಾನ್ಯವಾಗಿ ಶಾಲೆಗಳಲ್ಲಿ ಸಿಕ್ಕರೆ, ತೇಜಸ್ವಿಯವರಿಗೆ ತಮ್ಮ ತಂದೆಯಿಂದ ಮನೆಯಲ್ಲಿಯೇ ಸಿಗುವಂತಾಯಿತು. ಹಾಗಾಗಿಯೇ ತಂದೆಯಂತೆ ನೊಂದವರ ಪರವಾಗಿ ಮಿಡಿಯುವ ಮಾನವೀಯ ಗುಣವನ್ನು ತೇಜಸ್ವಿಯವರಲ್ಲಿಯೂ ನೋಡಬಹುದು. ಇನ್ನು ವೈಚಾರಿಕ ನಿಲುವುಗಳನ್ನು ತಂದೆಯಂತಯೇ ರೂಢಿಸಿಕೊಂಡು ಮೌಢ್ಯಗಳ ವಿರುದ್ದ ನಿಂತರು. ಹೀಗೆ ಕುವೆಂಪುರವರ ನೆನಪುಗಳೊಂದಿಗೆ ತಮ್ಮ ಅನುಭವವನ್ನೂ ಕೂಡ ತೇಜಸ್ವಿಯವರು ಇಲ್ಲಿ ಬಿಚ್ಚಿಟ್ಟಿದ್ದಾರೆ. ಮಗನಾಗಿ ಮಾತ್ರವಲ್ಲದೆ ಅವರೊಂದಿಗೆ ಜೀವಿಸಿ ಗಳಿಸಿದ ಬದುಕಿನ ನೂರಾರು ಸಂಗತಿಗಳನ್ನು ಓದುಗರ ಮುಂದಿಡುತ್ತಾರೆ. ಬಹಮುಖ್ಯವಾಗಿ ಸಮಾಜದ ಗೊಡ್ಡು ಸಂಪ್ರದಾಯಗಳು, ಜೀವನ ಕ್ರಮಗಳು ಹಾಗೂ ಅದನ್ನು ಕುರಿತ ಚಿಂತನೆಗಳನ್ನು ಚರ್ಚಿಸಿ ತಿಳುವಳಿಕೆ ಮೂಡಿಸುವ ವೈಚಾರಿಕ ಬರಹಗಳಂತೆ ನಮಗೆ ಕಾಣಸಿಗುತ್ತವೆ.

ಪರಾಮರ್ಶನ ಗ್ರಂಥಗಳು

1. ಅಣ್ಣನ ನೆನಪು – ಪೂರ್ಣಚಂದ್ರ ತೇಜಸ್ವಿ, ಪುಸ್ತಕ ಪ್ರಕಾಶನ – ಮೈಸೂರು ನಾಲ್ಕನೆಯ ಮುದ್ರಣ – 2003 ಬೆಲೆ – ರೂ. 120 ಪುಟಗಳು – 236
2. ತೇಜಸ್ವಿ ಕಥನ – ಟಿ.ಪಿ. ಅಶೋಕ, ಅಕ್ಷರ ಪ್ರಕಾಶನ – ಹೆಗ್ಗೋಡು, ಸಾಗರ ಎರಡನೇ ಮುದ್ರಣ 2010 ಬೆಲೆ – ರೂ. 100 ಪುಟಗಳು – 138
3. ಮಗಳು ಕಂಡ ಕುವೆಂಪು – ತಾರಿಣಿ ಚಿದಾನಂದ, ಪುಸ್ತಕ ಪ್ರಕಾಶನ ಮೈಸೂರು – ಬೆಲೆ – ರೂ. 576 ಪುಟಗಳು – 370

***

ಜಯಂತ ಕಾಯ್ಕಿಣಿಯವರ ಚಾರ್ಮಿನಾರ್ ಕಥೆಯಲ್ಲಿ ಪ್ರಾದೇಶಿಕ ಅಸ್ಮಿತೆಗಳ ಅನಾವರಣ

1
ಶ್ರೀ. ಮಾರುತಿ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸ.ಪ್ರ.ದ ಕಾಲೇಜು ತೀರ್ಥಹಳ್ಳಿ
ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾಲಯ.
ಮಂಗಳೂರು.

ಕನ್ನಡ ಸಾಹಿತ್ಯದಲ್ಲಿ ನವ್ಯದ ಪ್ರಭಾವವು ಇಳಿಮುಖವಾಗುತ್ತಿರುವ ಸಂದರ್ಭದಲ್ಲಿ ಕಥೆಗಳನ್ನು ಬರೆಯಲು ಪ್ರಾರಂಭಿಸಿದ ಹೊಸ ತಲೆಮಾರಿನ ಕಥೆಗಾರರ ಸಾಲಿನಲ್ಲಿ ಕಾಣುವ ಜಯಂತ್ ಕಾಯ್ಕಿಣಿಯವರು ಕನ್ನಡದ ಸೂಕ್ಷ್ಮ ಸಂವೇದನೆಯ ಕಥೆಗಾರರು. ನವೋದಯದ ಮಾಸ್ತಿ ಹಾಗೂ ನವ್ಯದ ಯಶವಂತ ಚಿತ್ತಾಲರ ಜೀವನ ದರ್ಶನದ ಹಾದಿಯಲ್ಲಿಯೇ ಹೆಜ್ಜೆಯಿಟ್ಟು, ಇವರಿಬ್ಬರಿಗಿಂತ ಭಿನ್ನವಾದ ಶೈಲಿಯಲ್ಲಿ, ವಿಶಿಷ್ಟವಾದ ಭಾಷೆಯಲ್ಲಿ ಕನ್ನಡದ ಓದುಗರಿಗೆ ಅನೂಹ್ಯವಾದ ಅನುಭವ ಜಗತ್ತನ್ನು ತಮ್ಮ ಕಥೆಗಳ ಮೂಲಕ ಕಟ್ಟಿಕೊಟ್ಟು, ಕನ್ನಡಕಥಾ ಲೋಕವನ್ನು ವಿಸ್ತರಿಸಿದ ಮಹತ್ವದ ಕಥೆಗಾರರು ಜಯಂತ್ ಕಾಯ್ಕಿಣಿ. ಬಹುಮುಖ ಪ್ರತಿಭೆಯ ಕಾಯ್ಕಿಣಿಯವರು ಮೂಲತಹ ಅತ್ಯಂತ ಸಂವೇದನಾಶೀಲ ಕವಿ. ಆದರೆ ಕನ್ನಡದಲ್ಲಿ ಇವರು ಒಬ್ಬ

ಒಳ್ಳೆಯ ಕಥೆಗಾರರಾಗಿ, ನಾಟಕಕಾರರಾಗಿ, ಅಂಕಣಕಾರರಾಗಿ, ಅನುವಾದಕರಾಗಿ, ಸಂಪಾದಕರಾಗಿ, ದೂರದರ್ಶನದಲ್ಲಿ ಸಂದರ್ಶಕರಾಗಿ, ಹಾಗೂ ಕನ್ನಡ ಚಲನಚಿತ್ರರಂಗದಲ್ಲಿ ಚಿತ್ರಕಥೆ –ಸಂಭಾಷಣೆ – ಗೀತರಚನಕಾರರಾಗಿ ಚಿರಪರಿಚಿತರು. ಜಯಂತ್ ಕಾಯ್ಕಿಣಿಯವರ ಚಾರ್ಮಿನಾರ್ 2012ರಲ್ಲಿ ಪ್ರಕಟಗೊಂಡ ಕನ್ನಡದ ಒಳ್ಳೆಯ ಕಥಾ ಸಂಕಲನಗಳಲ್ಲಿ ಒಂದು. ನಾಲ್ಕು ಬಾರಿ ಮರು ಮುದ್ರಣಗೊಂಡ ಈ ಕಥಾ ಸಂಕಲನದಲ್ಲಿ ಒಟ್ಟು ಎಂಟು ಕಥೆಗಳಿದ್ದು, ಅವುಗಳು ದೇಶಕಾಲ, ತರಂಗ, ಪ್ರಜಾವಾಣಿ, ಉದಯವಾಣಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಈ ಸಂಕಲನದ ಕೊನೆಯ ಕಥೆಯಾದ ಚಾರ್ಮಿನಾರ್ ಪರಂಪರೆ ಹಾಗೂ ಆಧುನಿಕತೆಯ ಸಂಘರ್ಷದ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದಾದ ವಿಶಿಷ್ಟ ಕಥೆಯಾಗಿದ್ದು, ಇದರಲ್ಲಿ ಮುಖ್ಯವಾಗಿ ಓದುಗರ ಗಮನ ಸೆಳೆಯುವ ಸಂಗತಿ ಎಂದರೆ ಕಥೆಯ ಉದ್ದಕ್ಕೂ ಕಾಣಿಸಿಕೊಳ್ಳುವ ಪ್ರಾದೇಶಿಕ ಅಸ್ಮಿತೆ. “ನಮ್ಮ ಊರು ನಮ್ಮ ಪರಿಸರ ನಮ್ಮ ಮಾತು ಯಾವತ್ತೂ ಜೀವಕ್ಕೆ ಒಳ್ಳೆಯದು” ಎನ್ನುವ ಜಯಂತ್ ಕಾಯ್ಕಿಣಿ ಅವರನ್ನು ಅವರು ಹುಟ್ಟಿ ಬೆಳೆದ ಗೋಕರ್ಣದ ಪರಿಸರ, ಅಲ್ಲಿನ ಜನಜೀವನ, ಸಮುದ್ರತೀರ ಹಾಗೂ ಈ ಸಮುದ್ರವನ್ನು ಆಶ್ರಯಿಸಿ ಬದುಕುವ ಜನರ ಜೀವನ ವೈಖರಿ, ಅಲ್ಲಿನ ದೇವಾಲಯಗಳು, ಪುಣ್ಯಕ್ಷೇತ್ರಗಳು ಹಾಗೂ ಆಧುನಿಕತೆಯ ಪ್ರಭಾವದಿಂದ ಅಲ್ಲಿಗೆ ಬರುವ ವಿದೇಶಗರು, ಇವುಗಳಿಂದ ಅಲ್ಲಿನ ಸ್ಥಳೀಯ ಜನ ಸಮುದಾಯದ ಬದುಕಿನಲ್ಲಾದ ಸ್ಥಿತ್ಯಂತರಗಳು ಇವೆಲ್ಲವೂ ಕಾಯ್ಕಿಣಿಯವರನ್ನು ಸದ್ದಿಲ್ಲದೆ ಪ್ರಭಾವಿಸಿದೆ. ಹಾಗೂ ಅವರ ಸಾಹಿತ್ಯವನ್ನ ಪೋಷಿಸಿದೆ. ಇದು ಅವರ ಚಾರ್ಮಿನಾರ್ ಕಥೆಯ ಉದ್ದಕ್ಕೂ ಅನಾವರಣಗೊಂಡಿರುವುದನ್ನು ಕಾಣಬಹುದು.

ಚಾರ್ಮಿನಾರ್ ಕಥೆಯಲ್ಲಿ ಬರುವ ಬಹುಮುಖ್ಯವಾದ ಪಾತ್ರ ಕಥಾ ನಾಯಕ ನೈರುತ್ಯ ಗಾಂವಕರ್. ಈತ ಆಧುನಿಕತೆಯ ಪ್ರಭಾವ ಗಟ್ಟಿಯಾಗಿ ಬೇರೂರುತ್ತಿದ್ದ ಸುಮಾರು ಎಂಬತ್ತರ ದಶಕದ ಕಾಲಾವಧಿಯಲ್ಲಿ ಆಣಂದನ್ ಇನ್ಸ್ಟಿಟ್ಯೂಟ್ ಆಫ್ ರೂರಲ್ ವ್ಯಾನೇಜ್ಮೆಂಟ್ನಿಂದ ಪದವಿ ಪಡೆದ ಪದವೀಧರ. ಆಧುನಿಕ ಮಹಾನಗರಗಳಲ್ಲಿ ಬೇರೆ ಬೇರೆ ಕಾರ್ಪೊರೇಟ್ ಕಂಪನಿಗಳಲ್ಲೋ ಅಥವಾ ಬಹು ರಾಷ್ಟ್ರೀಯ ಕಂಪನಿಗಳಲ್ಲೋ ತನಗೆ ಬೇಕಾದ ಉದ್ಯೋಗ ಆಯ್ದುಕೊಂಡು ಆಧುನಿಕವಾಗಿ ಬದುಕುವ ಎಲ್ಲಾ ಅವಕಾಶಗಳು ಇದ್ದರೂ ಸಹ ನೈರುತ್ಯ ಆ ಬಗ್ಗೆ ಲಕ್ಷ್ಯ ವಹಿಸದೆ ತಾನು ಪಡೆದ ಶಿಕ್ಷಣದಿಂದ ಈ ಸಮಾಜಕ್ಕೆ ಹಾಗೂ ತನ್ನ ಊರಿಗೆ ಏನಾದರೂ ಉಪಯೋಗವಾಗಬೇಕೆಂಬ ಆದರ್ಶದ ಬೆನ್ನು ಹತ್ತಿ ಹೋದವನು.

ಈತ ತನ್ನ ಸ್ನೇಹಿತನನ್ನು ಭೇಟಿ ಮಾಡಲು ಹೈದರಾಬಾದಿಗೆ ತೆರಳಿದ್ದಾಗ ಅಲ್ಲಿನ ಇತಿಹಾಸ ಪ್ರಸಿದ್ಧ ಚಾರ್ಮಿನಾರಿಗೆ ಭೇಟಿ ನೀಡುತ್ತಾನೆ. ನೈರುತ್ಯ ಚಾರ್ಮಿನಾರಿನ ಮೊದಲ ಅಂತಸ್ತಿನಲ್ಲಿ ನಿಂತು ಸುತ್ತ ಮುತ್ತಲಿನ ದೃಶ್ಯಗಳನ್ನು ವೀಕ್ಷಿಸುವಾಗ ಅವನನ್ನು ತೀವ್ರವಾಗಿ ಕಾಡುವುದು ಅವನೂರಿನ ಗೋಕರ್ಣ, ಅಲ್ಲಿನ ಕಡಲತೀರ ರಾಮತೀರ್ಥ ಗುಡ್ಡ ಹಾಗೂ ರುದ್ರಪಾದ. "ಗೋಕರ್ಣದ ಕಡಲ ತೀರದ ಈಚೆ ತುದಿ ರಾಮತೀರ್ಥದ ಗುಡ್ಡವಾದರೆ ಈ ಗುಡ್ಡದ ಹಿಂದಿನಿಂದ ಬೇರೊಂದು ಗುಡ್ಡವು ಕಡಲಲ್ಲಿ ಮುಂದೆ ಸರಿದು ಪ್ರತ್ಯಕ್ಷವಾಗಿ ನಿಂತಿರುತ್ತದೆ ರಂಗದ ಮೇಲೆ ವಿಂಗಿನಿಂದ ಚಲಿಸಿ ಬಂದು ನಿಂತ ಟ್ರಾನ್ಸ್ಫರ್ ಸೀನರಿಯಂತೆ ಆ ತನಕ ಮರೆಯಲ್ಲಿದ್ದ ಆ ಗುಡ್ಡ ಗೋಚರಿಸುವ ಈ ಬಿಂದುವೇ ರುದ್ರಪಾದ. ಸಾಮಾನ್ಯವಾಗಿ ಸಂಜೆಯ ಸಮುದ್ರ ವಿಹಾರಕ್ಕೆ ಬರುವ ಗೋಕರ್ಣದ ನಾಗರಿಕರು ಈ ರುದ್ರ ಪಾದದ ತನಕ ಬಂದು, ಮರಳಿ ಹೋಗುತ್ತಾರೆ. ಇಲ್ಲಿ ಥಟ್ಟನೆ ಗೋಚರವಾಗುವ ಹೊಸ ಗುಡ್ಡಗಳಿಗೂ ಮತ್ತು ಅವರು ಮರಳುವ ಕ್ಷಣಕ್ಕೂ ಏನೋ ನಂಟಿದೆ. ತಮ್ಮ ನಿತ್ಯದ ನೆರೆಹೊರೆ, ಊರುಕೇರಿ ನಂಟು ಪಾಕಗಳ ಪರಿಚಿತ ನೋಟಗಳ ಸೂಕ್ಷ್ಮ ಸುಳಿವಿನಲ್ಲಿದ್ದವರಿಗೆ ಇಲ್ಲಿ ಒಮ್ಮೆಗೆ ಅವುಗಳ ಆಚೆಗೆ ಹೋದಂತಹ ಒಂದು ಭಯವೂ, ನಿತ್ಯದ ಹೊಸ ಆವೃತ್ತಿಯ ಕ್ಷಣವೂ ಒಟ್ಟಿಗೆ ಕವಿಯುತ್ತಿತ್ತು. ಹೀಗಾಗಿ ಸ್ಥಿತಿ ಮತ್ತು ಸಾಧ್ಯತೆಗಳ ಸಂಗಮ ಬಿಂದುವಿನಂತೆ ಸದಾ ತನ್ನದೇ ನಿರ್ಭಯದಲ್ಲಿ ನೆಲ ಮತ್ತು ನೀರನ್ನು ಕಲೆಸುತ್ತಿರುವ ಈ ರುದ್ರಪಾದ ಎಲ್ಲರಿಗೂ ಏಕಕಾಲಕ್ಕೆ ದೂರದ ಮತ್ತು ಅಷ್ಟೇ ಹತ್ತಿರದ ತೀರವಾಗಿತ್ತು. ಹೀಗೆ ನೆನೆಯುತ್ತಾ ನೇರ ಅಲ್ಲೇ ಹೋಗಿಬಿಡುವ, ಅದೇ ಆಗಿಬಿಡುವ ನೈರುತ್ಯ ಗಾಂವಕರ ಈಗ ನಿಜಕ್ಕೂ ನಿಂತಿರುವುದು ಹೈದರಾಬಾದಿನ ಚಾರ್ಮಿನಾರಿನ ಮೊದಲ ಅಂತಸ್ತಿನಲ್ಲಿ.."[1] ಎಂಬ ಗೋಕರ್ಣದ ರುದ್ರಪಾದದ ಸಮುದ್ರ ತೀರದ ದೀರ್ಘ ವರ್ಣನೆಯೊಂದಿಗೆ ಕಥೆ ಪ್ರಾರಂಭವಾಗುತ್ತದೆ. ಕಥೆ ಮುಂದುವರಿದಂತೆ ಕಥೆಯ ಉದ್ದಕ್ಕೂ ಅಲ್ಲಲ್ಲಿ ಗೋಕರ್ಣ, ರಾಮತೀರ್ಥ, ರುದ್ರಪಾದದ ಅಸ್ಮಿತೆಗಳು ಅನಾವರಣಗೊಳ್ಳುತ್ತಾ ಸಾಗುತ್ತದೆ.

ಕಥಾನಾಯಕ ನೈರುತ್ಯ ಗಾಂವಕರ ತಾನು ಹುಟ್ಟಿ ಬೆಳೆದ ಗೋಕರ್ಣದ ರುದ್ರಪಾದದ ಸಮುದ್ರ ತೀರದಲ್ಲಿ ನಡೆದಾಡಿದಾಗ ಗಮನಿಸಿದ ಅಲ್ಲಿನ ಜನಸಮುದಾಯದ ಬದುಕಿನ ಅಸ್ಮಿತೆಗಳು ಅವನ ನೆನಪಿನ ಬುತ್ತಿಯಲ್ಲಿ ಅಚ್ಚಳಿಯದೆ ಹಾಗೆಯೇ ಉಳಿದಿವೆ. ಹಾಗಾಗಿ ಈತ ತನ್ನ ಊರು ಬಿಟ್ಟು ಎಲ್ಲೇ ಹೋದರೂ ಅಲ್ಲಿನ ಜನಸಮುದಾಯದ ಬದುಕನ್ನು ಗಮನಿಸುವುದು ತನ್ನ ಊರಿನ ಕಣ್ಣೋಟದಲ್ಲಿ.

ಹಾಗಾಗಿ ಅವುಗಳೆಲ್ಲವೂ ಅವನಿಗೆ ತನ್ನ ಊರಿನ ಅಸ್ಮಿತೆಗಳಾಗಿ ಕಾಡುತ್ತವೆ. ನೈರುತ್ಯ ತನ್ನ ಗೆಳೆಯನಾದ ಹೇಮಚಂದ್ರನ ಮದುವೆಗೆ ಹೋಗಿ ಹೈದರಾಬಾದಿನಿಂದ ಹಿಂದಿರುಗಿ ಬರುವಾಗ ಗುಂತ್ಕಲ್ ಜಂಕ್ಷನ್ ರೈಲ್ವೆ ಸ್ಟೇಷನ್ನಲ್ಲಿ ರೈಲಿನೊಳಗೆ ನಾನಾ ರೂಪದಲ್ಲಿ ನುಸುಳುವ ರೈಲು ಮಕ್ಕಳು ಅವನ ಕಣ್ಣಿಗೆ ಬೀಳುತ್ತಾರೆ. ಶಾಲೆಯಲ್ಲಿ ಓದಿ ದೊಡ್ಡವರಾಗಿ ಬದುಕು ಕಟ್ಟಿಕೊಳ್ಳಬೇಕಾದ ಈ ಮಕ್ಕಳೆಲ್ಲರೂ ನಾನಾ ಕಾರಣಗಳಿಗಾಗಿ ಮನೆ ಬಿಟ್ಟು ಓಡಿ ಬಂದ ಮಕ್ಕಳು. ಇವರ ಊರುಗಳ ಮೂಲಕವೇ ಹಾದು ಹೋಗುವ ರೈಲುಗಳಲ್ಲಿ ಗೇಯ್ಮೆ ಮಾಡುತ್ತಾರೆ. ಇವರನ್ನು ನೋಡಿದಾಗ ನೈರುತ್ಯನಿಗೆ ತನ್ನೂರಿನ ರುದ್ರ ಪಾದದ ನೆನಪಾಗುತ್ತದೆ. ರುದ್ರ ಪಾದದ ಸಮುದ್ರ ತೀರದಲ್ಲಿ ಸಮುದ್ರದ ಸೌದೆ ಹಿಡಿಯುವ ಜಲ ಸಮರಕ್ಕೆ ನಿಂತ ಮಕ್ಕಳೇ ಇಲ್ಲಿಗೂ ಬಂದು, ರೈಲಿನಲ್ಲಿ ತಮ್ಮ ತಮ್ಮ ಕಾಯಕದಲ್ಲಿ ನಿರತರಾದಂತೆ ಭಾಸವಾಗುತ್ತದೆ. "ನೈರುತ್ಯ ರುದ್ರ ಪಾದದ ತೀರದಲ್ಲಿ ಹಗುರಾಗಿ ನಡೆಯುತ್ತಿದ್ದ. ತುಫಾನಿನಲ್ಲಿ ಕೊಚ್ಚಿಕೊಂಡು ಬಂದ ಕಸ ತೀರದುದ್ದಕ್ಕೂ ದಟ್ಟಗೆ ಬಿದ್ದಿತ್ತು. ಊರಿನ ಜನರೆಲ್ಲ ಅದರ ಜೊತೆ ತೇಲಿ ಬರುವ ಸೌದೆಗಾಗಿ ಕಡಲಿನ ಜೊತೆ ಜಿದ್ದಿಗೆ ಬಿದ್ದಿದ್ದರು.

ಜಲಪ್ರಳಯದ ಕಸದ ವಿಲೇವಾರಿಯ ಈ ಯಜ್ಞವನ್ನು ಬಾಲ್ಯದಿಂದಲೂ ನೋಡಿಕೊಂಡೆ ಬಂದಿದ್ದ ನೈರುತ್ಯ ಯಾಕೋ ಮೊದಲ ಬಾರಿಗೆ ಅದರಲ್ಲಿ ಹೊಸದೊಂದು ಲಕ್ಷಣವನ್ನು ಕಂಡವನಂತೆ ಬೆಚ್ಚಿಬಿದ್ದ. ಹೌದು, ವಯಸ್ಕರಷ್ಟೇ ಪಾಲ್ಗೊಳ್ಳುತ್ತಿದ್ದ ಜಲ ಸಮರದಲ್ಲಿ ಈಗ ಮಕ್ಕಳೇ ಇದ್ದರು. ಚಡ್ಡಿ ಅಷ್ಟೇ ಹಾಕಿಕೊಂಡು ಮಿರ ಮಿರ ಮಿರುಗುತ್ತ ಹೊಸ ಬಗೆಯ ಏಡಿಗಳಂತೆ ಅವರು ಹೆಡೆಯೆತ್ತಿ ಪೂತ್ಕರಿಸುವ ತೆರೆಗಳ ಉದರದೊಳಕ್ಕೆ ತಲೆ ಇರಿದು ನಗ್ಗುತ್ತಿದ್ದರು. ಕೈಗೆ ಉರುವಲು, ಜಿಗ್ಗು, ಕರಿಗಟ್ಟಿದ ತೊಂಗೆ ಸಿಕ್ಕಿದವರು ಅದನ್ನು ವಿಜಯಧ್ವಜದಂತೆ ಹಿಡಿದು ತೀರದೆಡೆ ಈಜಿ ಬರುತ್ತಿದ್ದರು. ಕೈಗೆ ಏನೂ ಹತ್ತದ ಹತ ಪ್ರಭರು ಮತ್ತೆ ಚಲಾಂಗನೆ ನೀರೊಳಗೆ ಜಿಗಿಯುತ್ತಿದ್ದರು. ತನ್ನ ಬಾಲ್ಯದಲ್ಲಾಗಿದ್ದರೆ ಮೈ ನವಿರೇರಿಸುತ್ತಿದ್ದ ಈ ಸಮರ ಈಗ ದುರ್ಬಲ ಹತಾಶ ನೃತ್ಯದಂತೆ ನೈರುತ್ಯನಿಗೆ ತೋರಿತು. ಈ ಸಮಯದಲ್ಲಿ ಶಾಲೆಯಲ್ಲಿ ಇರಬೇಕಾದ ಹಾಲಕ್ಕಿ ಕೊಪ್ಪದ ಮಕ್ಕಳೆಲ್ಲ ಇಲ್ಲೇ ಇರುವುದು ಕಂಡು ಅವನಿಗೆ ತಡೆಯಲಾಗಲಿಲ್ಲ. 'ಏಹ್ ... ಹೋಗ್ರೋ ಶಾಲೆಗೆ ಹೋಗ್ರೋ' ಎಂದು ಅವರನ್ನು ಅಟ್ಟಿಸಿಕೊಂಡು ಹೋದ. ಸಮುದ್ರ ಘೋಷದಲ್ಲಿ ಅವರಾರಿಗೂ ಇದೇನು ಕೇಳಿಸದೆ ಮುಟ್ಟಾಟ ಆಡುವಂತೆ ಅವರೆಲ್ಲ 'ಹೋ' ಎಂದು ನಗುತ್ತ ಓಡಿ ಸಮುದ್ರದೊಳಗೆ ಜಿಗಿದರು"[2] ಎಂಬ ತನ್ನೂರಿನ ಘಟನಾವಳಿಗಳ ನೆನಪುಗಳು ನೈರುತ್ಯನಿಗೆ ಗುಂತಕಲ್

ಜಂಕ್ಷನ್ನಿನ ರೈಲ್ವೆ ನಿಲ್ದಾಣದಲ್ಲಿ ರೈಲು ಮಕ್ಕಳನ್ನು ನೋಡಿದಾಗ ನೆನಪಿನ ಬುತ್ತಿಯಿಂದ ಮರುಕಳಿಸಿ ಅವನನ್ನು ತೀವ್ರವಾಗಿ ಕಾಡುತ್ತವೆ. ಇದು ಈತನಿಗೆ ಮುಂದೆ ಈ ರೈಲು ಮಕ್ಕಳ ಬದುಕನ್ನು ಹಸನುಗೊಳಿಸುವ ಹೊಸ ಕೈಂಕರ್ಯಕ್ಕೆ ಪ್ರೇರಣೆಯಾಗುತ್ತದೆ. ಮುಂದಿನ ಒಂದು ತಿಂಗಳಲ್ಲೇ ನೈರುತ್ಯ ಈ ರೈಲು ಮಕ್ಕಳ ಲೋಕವನ್ನು ತಿಳಿಯುವ, ತಿಳಿದು ಅದನ್ನು ತುಸುವಾದರೂ ಹಸನುಗೊಳಿಸಲು ಯತ್ನಿಸುವ ತನ್ನ ಕೈಂಕರ್ಯವನ್ನು ಪ್ರಾರಂಭಿಸುತ್ತಾನೆ. ಹಿಂದೂಪುರ, ತೋರಣಗಲ್ಲು, ಧರ್ಮಾವರಂ, ಬಳ್ಳಾರಿ ಇತ್ಯಾದಿ ಊರುಗಳಲ್ಲಿ ಮನೆ ಬಿಟ್ಟು ಓಡಿ ಹೋದ ಮಕ್ಕಳ ಮಾಹಿತಿಗಳನ್ನು ಊರಿನ ಪೊಲೀಸ್ ಸ್ಟೇಷನ್ನುಗಳಿಂದ ಕಲೆ ಹಾಕುವುದು, ಮನೆ ಮಂದಿಯನ್ನು ಸಂಪರ್ಕಿಸುವುದು ಹಾಗೂ ರೈಲ್ವೇ ನಿಲ್ದಾಣದ ಪ್ಲಾಟ್ ಫಾರ್ಮ್ ಗಳಲ್ಲಿ ಸಿಕ್ಕಿದ ಹುಡುಗರ ಮನ ಗೆದ್ದು ಅವರನ್ನು ಮನೆಗೆ ತಲುಪಿಸುವುದು ಹೀಗೆ ನೈರುತ್ಯನ ಕೆಲಸ ಶುರುವಾಗುತ್ತದೆ. ಅಂದರೆ ಈತನ ಈ ಸಮಾಜಮುಖಿ ಕಾರ್ಯಕ್ಕೆ ಪ್ರೇರಣೆ ಗೋಕರ್ಣದ ರುದ್ರಪಾದದ ಸಮುದ್ರ ತೀರದಲ್ಲಿ ಸೌದೆ ಹಿಡಿಯುವ ಮಕ್ಕಳು ಎನ್ನುವುದನ್ನು ಕತೆಗಾರರು ಕಥೆಯಲ್ಲಿ ಸೂಕ್ಷ್ಮವಾಗಿ ಧ್ವನಿಸಿರುವುದು ಗಮನಾರ್ಹ.

ನೈರುತ್ಯ ತನ್ನ ಈ ರೈಲು ಮಕ್ಕಳ ಉದ್ಧಾರದ ಕಾರ್ಯಕ್ಕೆ ಗೆಳೆಯ ಹೇಮಚಂದ್ರನ ಸಹಾಯವನ್ನು ಬಯಸಿ ಎರಡನೇ ಬಾರಿಗೆ ಹೈದರಾಬಾದಿಗೆ ಹೋದಾಗ ಅಲ್ಲಿನ ಇತಿಹಾಸ ಪ್ರಸಿದ್ಧ ಚಾರ್ಮಿನಾರಿಗೆ ಹೋಗಲೇಬೇಕೆಂದು ನಿರ್ಧರಿಸುತ್ತಾನೆ. ಚಾರ್ಮಿನಾರಿನ ಮೊದಲ ಅಂತಸ್ತಿನಲ್ಲಿ ನಿಂತು ನೋಡುವಾಗ ಸುತ್ತಲೂ ದೂರ ದೂರದ ತನಕ ಚಾಚಿಕೊಂಡ ನವಾಬೀ ನಗರವನ್ನು ನೋಡುತ್ತಾನೆ. ಈತನಿಗೆ ಅದೇ ಸಂದರ್ಭದಲ್ಲಿ ತನ್ನ ಊರಿನ ಗೋಕರ್ಣದ ಬಾಲ್ಯದ ನೆನಪುಗಳು ಮನಸ್ಸಿನಲ್ಲಿ ಮರುಕಳಿಸುತ್ತವೆ. "ಅಲ್ಲೇ ಅದೋ ಆ ಗುಡ್ಡದ ಹಿಂದೆ ರುದ್ರಪಾದ ಸಮುದ್ರ ಎಲ್ಲಾ ಸನಿಹದಲ್ಲೇ ಇದೆ ಎಂಬ ಬಾಸ ಉಕ್ಕುತ್ತದೆ. ಬಯಲು ಮತ್ತು ಆಲಯ ಎರಡೂ ಅಭಿನ್ನವಾಗಿ ಅರಳುವ ಈ ಬಿಂದುವಿನಲ್ಲಿ ಸಕಲವನ್ನು ಒಳಗೊಳ್ಳುವ ಕಥನವೇ ಇಲ್ಲದ ಕಥೆಯೊಂದರ ಸ್ಪರ್ಶವಿದೆಯೇ?... ನೈರುತ್ಯನಿಗೆ ಮಧ್ಯಾಹ್ನದ ರಣ ಬಿಸಿಲಿನಲ್ಲಿ ರುದ್ರ ಪಾದದ ತಮ್ಮ ಮನೆ ಎದುರು ಹಾಯುವ ಎಲ್ಲರನ್ನೂ ದಣಪೆ ಕಟ್ಟೆಯ ತಂಪು ನೆರಳಿಗೆ ಕರೆದು ಬೆಲ್ಲ ನೀರು ಕೊಡುವ ತಾಯಿಯ ನೆನಪಾಯಿತು. ಅವನೊಮ್ಮೆ ಬೀದಿಲಿ ಹೋಗೋ ಗೊತ್ತಿಲ್ಲದವರನ್ನೆಲ್ಲಾ ಕರ್ದು ಯಾಕೆ ಆಸರೆ ಕೊಡ್ತಿ ಎಂದು ಗೊಣಗಿದಾಗ ಅವಳು ಸಣ್ಣದನಿಯಲ್ಲಿ 'ಹಾಂಗೆ ಹೇಳಬೇಡವೋ ಕಂದ, ಇಪ್ಪತ್ತು ವರ್ಷಗಳ ಹಿಂದೆ ಅವರಲ್ಲಿ ಯಾರೋ ಒಬ್ಬ ನಿನ್ನ ಬಾವಿಯಿಂದ ತೆಗೆದಿದ್ದ' ಎಂದಳು"[3]

ಕಥೆಯ ಈ ವಿವರಣೆಗಳ ಮೂಲಕ ಕಥೆಗಾರರು ಪ್ರಾದೇಶಿಕ ಅಸ್ಮಿತೆಯ ಜೊತೆಗೆ ಮನುಷ್ಯ ಸಂಬಂಧಗಳ ಅನನ್ಯತೆಯನ್ನು ಸೂಕ್ಷ್ಮವಾಗಿ ಪ್ರತಿಪಾದಿಸುತ್ತಾರೆ. ನೈರುತ್ಯ ಚಿಕ್ಕವನಿದ್ದಾಗ ಅವನನ್ನ ಬಾವಿಯಿಂದ ರಕ್ಷಿಸಿದ ಯಾವುದೋ ಪುಣ್ಯಾತ್ಮನನ್ನು ಅವನ ತಾಯಿ ತನ್ನ ಕೊನೆಯ ಉಸಿರು ಇರುವವರೆಗೂ ನೆನಪಿಸಿಕೊಳ್ಳುತ್ತಾ, ಊರಿನ ಎಲ್ಲ ಮಹನೀಯರಲ್ಲೂ ಆ ಪುಣ್ಯಾತ್ಮನನ್ನು ಕಾಣುವ ಅವಳ ಅಂತಃಕರಣ ಓದುಗರ ಹೃದಯ ತಟ್ಟುತ್ತದೆ. ಪರಸ್ಪರ ಸಹಾಯ ಸಹಕಾರಗಳ ಅರಿವೇ ಇಲ್ಲದೆ ಸ್ವಾರ್ಥ ಪರವಾಗಿ ಆಲೋಚಿಸುವ ಇಂದಿನ ಆಧುನಿಕ ಜನ ಸಮುದಾಯಗಳಿಗೆ ಕಥೆಯ ಈ ಪ್ರಸಂಗ ಒಳ್ಳೆಯ ಪಾಠದಂತಿದೆ.

ರೈಲುಗಳಲ್ಲಿ ಸಂಚರಿಸುತ್ತಾ ರೈಲು ನಿಲ್ದಾಣದ ಕ್ಯಾಂಟೀನುಗಳಲ್ಲಿ ದುಡಿಯುವ, ಸಂಚರಿಸುವ ರೈಲುಗಳಲ್ಲಿ ಕಾಫಿ– ತಿನಿಸುಗಳನ್ನು ಮಾರುತ್ತಾ ಗೇಯ್ಮೆ ಮಾಡುವ ಅನಾಥ ಬೀಡಾಡಿ ರೈಲು ಮಕ್ಕಳಿಗೆ ಸಾಮಾನ್ಯ ಶಿಕ್ಷಣವನ್ನು ನೀಡಿ ಅವರನ್ನು ಮರಳಿ ಮನೆಗೆ ಕಳುಹಿಸುವ ಕಾರ್ಯವನ್ನು ನಿರ್ವಹಿಸುತ್ತಿದ್ದ ನೈರುತ್ಯನಿಗೆ ಜೊತೆಯಾಗುವ ಅವನ ಬಾಳ ಸಂಗಾತಿ ಪುನರ್ವಸು ಮೂಲತಃ ಮಹಾರಾಷ್ಟ್ರದ ಸೊಲ್ಲಾಪುರದವಳು. ಆದರೆ ಇವಳ ಸಮಾಜಮುಖಿ ಸೇವಾ ಕಾರ್ಯಗಳೆಲ್ಲವೂ ನಡೆಯುವುದು ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಲ್ಲಿ ಎನ್ನುವುದು ಗಮನಾರ್ಹ. ಕಥೆಯ ಕೊನೆಯಲ್ಲಿ ಇವಳ ಗಮನ ಗೋಕರ್ಣದ ರುದ್ರ ಪಾದದ ಹಾಲಕ್ಕಿ ಸಮುದಾಯದ ಮಕ್ಕಳ ಉದ್ಧಾರದ ಕಡೆಗೆ ಹರಿಯುತ್ತದೆ. ಹೆಂಡತಿ ಪುನರ್ವಸು ಹಾಗೂ ಪುಟ್ಟ ಮಗಳನ್ನು ಗೋಕರ್ಣದ ರುದ್ರ ಪಾದದಲ್ಲಿರುವ ತನ್ನ ಮನೆಯಲ್ಲಿ ಬಿಟ್ಟು ಹೈದರಾಬಾದಿಗೆ ಹೋಗಿದ್ದ ನೈರುತ್ಯ ಅಲ್ಲಿನ ಟೆಲಿಫೋನ್ ಬೂತಿನಿಂದ ಹೆಂಡತಿಗೆ ಕರೆ ಮಾಡಿದಾಗ ಅವಳ ಪ್ರತಿಕ್ರಿಯೆ ಓದುಗರ ಗಮನ ಸೆಳೆಯುತ್ತದೆ. "ಇಲ್ಲಿ ಏನೆಲ್ಲ ಮಾಡಲಿಕ್ಕಿದೆ ನೈರೂ.... ರುದ್ರಪಾದದಿಂದ ಬೇಲೆ ಹಿತ್ತಲ ತನಕದ ಬೆಲ್ಟಿನಲ್ಲಿ ಹಾಲಕ್ಕಿ ಕುಟುಂಬಗಳ ಒಬ್ಬರು ಮಕ್ಕಳೂ ಶಾಲೆಗೆ ಹೋಗ್ತಾ ಇಲ್ಲ. ಶಾಲೆಯಲ್ಲಿ ಇವರೆಲ್ಲರ ಹೆಸರಿದೆ. ಆದರೆ ದೇ ಕೀಪ್ ಡ್ರಾಪಿಂಗ್ ಔಟ್. ಒಂದೇ ಗೋಕರ್ಣ ದೇವಸ್ಥಾನಗಳ ಹೊರಗೆ ಹೂ ಮಾರಲಿಕ್ಕೆ ಹೋಗ್ತಾರೆ. ಅಥವಾ ಸಮುದ್ರ ಬೇಲೆಯಲ್ಲಿ ಸೌದೆ ಹಿಡಿಯಲಿಕ್ಕೆ ಹೋಗ್ತಾರೆ. ವಿದೇಶಿ ಟೂರಿಸ್ಟರ ಡಿಸ್ಟ್ರಾಕ್ಷನ್ ಬೇರೆ ಇದೆ. ನಾನೀಗಾಗಲೇ ಅವರ ತಂದೆ ತಾಯಿಗಳ ಜೊತೆ, ಮಾಸ್ತರರ ಜೊತೆ ಮಾತಾಡಲಿಕ್ಕೆ ಶುರು ಮಾಡಿದ್ದೇನೆ. ನೀನೊಂದು ಸಲ ಬಂದು ಇಲ್ಲಿ ಹಾಲಕ್ಕಿ ಪಾಲಕರ ಜೊತೆ ಮಾತನಾಡಬೇಕು"[4] ಎನ್ನುತ್ತಾ ಮಾತು ಮುಂದುವರಿಸುತ್ತಾಳೆ. ಅಂದರೆ ಅನಾಥ ಬೀಡಾಡಿ ರೈಲು ಮಕ್ಕಳಿಗೆ

ಸಾಮಾನ್ಯ ಶಿಕ್ಷಣವನ್ನು ನೀಡಿ ಅವರನ್ನು ಮರಳಿ ಮನೆಗೆ ಕಳಿಸುವ ಹಾಗೂ ಅವರ ಉದ್ಧಾರದ ಕೈಂಕರ್ಯವನ್ನು ನಿರ್ವಹಿಸುತ್ತಿದ್ದ ನೈರುತ್ಯ ಹಾಗೂ ಪುನರ್ವಸು ಈಗ ಗೋಕರ್ಣದ ರುದ್ರ ಪಾದದ ಸಮುದ್ರ ತೀರದಲ್ಲಿ ಸೌದೆ ಹಿಡಿಯುವ, ದೇವಸ್ಥಾನದ ಹೊರಗೆ ಹೂ ಮಾರುವ ಹಾಲಕ್ಕಿ ಸಮುದಾಯದ ಮಕ್ಕಳ ಉದ್ಧಾರಕ್ಕೆ ತಮ್ಮನ್ನು ತೊಡಗಿಸಿಕೊಳ್ಳುವ ನಿರ್ಧಾರ ಮಾಡುತ್ತಾರೆ.

ಒಟ್ಟಿನಲ್ಲಿ ಕಥೆಯ ಉದ್ದಕ್ಕೂ ಕಾಣುವ ಈ ಪ್ರಾದೇಶಿಕ ಅಸ್ಮಿತೆಗಳು ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿಯೇ ಹುಟ್ಟಿ ಬೆಳೆದ ಜಯಂತ್ ಕಾಯ್ಕಿಣಿ ಅವರನ್ನು ತೀವ್ರವಾಗಿ ಪ್ರಭಾವಿಸಿದೆ. ಸುಮಾರು ಇಪ್ಪತ್ತ ಮೂರು ವರ್ಷಗಳ ಕಾಲ ಮುಂಬೈಯಲ್ಲಿಯೇ ನೆಲೆಸಿದ ಕಾಯ್ಕಿಣಿಯವರು ಬರೆದ ಬಹುತೇಕ ಕಥೆಗಳು ನಗರ ಸಂವೇದನೆಯ ಕಥೆಗಳಾದರೂ ಅವುಗಳಲ್ಲಿ ಪ್ರಾದೇಶಿಕ ಅಸ್ಮಿತೆಗಳು ಮೇಳೈಸಿವೆ. “ಸಾಹಿತ್ಯ ಸಂಸ್ಕೃತಿ ಹಳ್ಳಿಗಳಲ್ಲಿ ಬೆಳೆಯಲು ಸಾಧ್ಯ. ಹಳ್ಳಿಗಳಲ್ಲಿ ಮೂಡುವ ಒಂದೊಂದು ಕಥಾನಕಗಳು ಕೂಡ ಸಾಹಿತ್ಯದ ಹುಟ್ಟಿಗೆ ಕಾರಣವಾಗುತ್ತದೆ. ಈ ಕಾರಣಕ್ಕಾಗಿ ನಗರದಲ್ಲಿ ಕುಳಿತ ಒಬ್ಬ ಬರಹಗಾರ ಕೂಡ ಹಳ್ಳಿಗಳತ್ತ ಕಣ್ಣರಳಿಸುವ ಸನ್ನಿವೇಶ ಸೃಷ್ಟಿಯಾಗಿದೆ. ಅಂತಿಮವಾಗಿ ಗ್ರಾಮೀಣ ಭಾಗದ ಜನಬದುಕಿನ ಕುರಿತು ಸಾಹಿತ್ಯ ಬೆಳೆದು ಬರುವಂತಾಗಲಿ ”[5] ಎಂಬ ಮಾತು ಜಯಂತ್ ಕಾಯ್ಕಿಣಿ ಅವರ ಬರಹಗಳ ಮಟ್ಟಿಗೆ ಸತ್ಯವೆನಿಸುತ್ತದೆ. ಇವರ ಚಾರ್ಮಿನಾರ್ ಕತೆ ಇದನ್ನು ಸಮರ್ಥವಾಗಿ ನಿರ್ವಹಿಸಿದೆ.

ಕೊನೆ ಟಿಪ್ಪಣಿ :

1. ಜಯಂತ್ ಕಾಯ್ಕಿಣಿ : ಚಾರ್ಮಿನಾರ್ – 2012, ಪು.ಸಂ – 112.
2. ಅದೇ ಕೃತಿ, ಪು.ಸಂ – 118
3. ಅದೇ ಕೃತಿ, ಪು.ಸಂ – 137
4. ಅದೇ ಕೃತಿ, ಪು.ಸಂ – 138
5. ಉದಯವಾಣಿ–ಮಾರ್ಚ 25, 2012, ಮಂಗಳೂರು ವಿ.ವಿ ಮಟ್ಟದ 8ನೇ ವಿದ್ಯಾರ್ಥಿ ಸಾಹಿತ್ಯ ಸಮ್ಮೇಳನ.

ಪರಾಮರ್ಶನ ಗ್ರಂಥಗಳು :

1. ಜಯಂತ ಕಾಯ್ಕಿಣಿ : ಚಾರ್ಮಿನಾರ್ 2012, ಅಂಕಿತ ಪುಸ್ತಕ ಪ್ರಕಾಶನ., ಬೆಂಗಳೂರು.
2. ಡಾ. ಮಮತಾ ರಾವ್ : ಜಯಂತ ಕಾಯ್ಕಿಣಿಯವರ ಕಥನಾವರಣ 2015, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು.
3. ಡಾ. ಮಮತಾ ರಾವ್: ಸಾಹಿತ್ಯ ಸಹವಾಸ (ವಿಮರ್ಶಾ ಲೇಖನಗಳು) 2014, ಸಾಹಿತ್ಯ ನಂದನ ಪುಸ್ತಕ ಪ್ರಕಾಶನ ಬೆಂಗಳೂರು.
4. ಡಾ. ಟಿ.ಪಿ ಅಶೋಕ: ಸಾಹಿತ್ಯ ಸಮೃದ್ಧಿ (ವಿಮರ್ಶಾ ಲೇಖನಗಳು) 2013, ಅಂಕಿತ ಪುಸ್ತಕ ಪ್ರಕಾಶನ ಬೆಂಗಳೂರು.
5. ಎಸ್. ಆರ್. ವಿಜಯಶಂಕರ: ಒಳದನಿ 2012, ಸಾಗರ್ ಪ್ರಕಾಶನ ಬೆಂಗಳೂರು.

***

ಲಲಿತ ಕಲೆಗಳ ಕಲಾತ್ಮಕತೆ

1
ಡಾ. ಶಿವಕುಮಾರ್.ಜಿ.ಎನ್.
ಸಹಾಯಕ ಪ್ರಾಧ್ಯಾಪಕ,
ಆಚಾರ್ಯ ಬೆಂಗಳೂರು ಬಿ ಸ್ಕೂಲ್,
ಬೆಂಗಳೂರು

ಶಿಲಾಯುಗದ ಮಾನವರು ತಮ್ಮ ಜೀವನೋಪಾಯಕ್ಕಾಗಿ ಒಂದೆಡೆ ನೆಲೆನಿಂತು ವ್ಯವಸಾಯ, ಪಶುಪಾಲನೆ, ಕುಂಬಾರಿಕೆ, ಬುಟ್ಟಿ ಹೆಣೆಯುವಿಕೆಗಳಂತಹ ವೃತ್ತಿ ಆಧಾರಿತ ಕಸುಬುಗಳು ಹುಟ್ಟಿಕೊಂಡ ಬೆನ್ನಲ್ಲೆ ಅವರು ಮಾಡಲಾರಂಭಿಸಿದ ಪ್ರತಿಯೊಂದು ಕೆಲಸದಲ್ಲೂ ಕಲೆಗಾರಿಕೆ ಹೊರಸೂಸಲಾರಂಭಿಸಿತು. ವ್ಯವಸಾಯಕ್ಕೆ ಬೇಕಾದ ನೇಗಿಲು, ನೊಗ, ಕುಳ ಇತ್ಯಾದಿಗಳಲ್ಲಿ ಒಂದು ಬಗೆಯ ಕಲಾತ್ಮಕತೆ ಅಭಿವ್ಯಕ್ತವಾದರೆ, ಭೂಮಿಯನ್ನು ಉತ್ತು, ಬಿತ್ತುವಾಗ ಆಗುತ್ತಿದ್ದ ಆಯಾಸ ಕಳೆಯುವುದಕ್ಕಾಗಿ ಜೀವನಾನುಭವವನ್ನು ಹಾಡುಗಳನ್ನಾಗಿ ಕಟ್ಟಿ ಹಾಡುತ್ತಿದ್ದರು. ಅಲ್ಲದೆ ರಾಗಿ ಬೀಸುವಾಗ, ಭತ್ತ ಕುಟ್ಟುವಾಗ, ಕಳೆ ಕೀಳುವಾಗ ಹಾಡು, ಒಗಟು, ಗಾದೆಗಳನ್ನು ಹೇಳಿ, ಕೇಳುವ ಮೂಲಕ ದೇಹ ಮತ್ತು ಮನಸ್ಸಿನ ದಣಿವಾರಿಸಿಕೊಳ್ಳುತ್ತಿದ್ದರು. ಬೆಳೆಗಳು ಕೆಲವೊಮ್ಮೆ ರೋಗ, ಅತಿವೃಷ್ಟಿ–

ಅನಾವೃಷ್ಠಿ ಅಥವಾ ಕ್ರೂರ ಪ್ರಾಣಿಗಳ ದಾಳಿಗೆ ಬಲಿಯಾಗಿ ನಾಶವಾಗುತ್ತಿದ್ದವು. ಇವುಗಳಿಂದ ತಪ್ಪಿಸಿಕೊಳ್ಳಲು ಪ್ರಕೃತಿಯ ಅಂಗಗಳಾದ ವಾಯು, ವರುಣ, ಭೂಮಿ, ಸೂರ್ಯ, ಚಂದ್ರಾದಿಗಳನ್ನು ದೇವರನ್ನಾಗಿ ಪರಿಭಾವಿಸಿಕೊಂಡು ಪೂಜಿಸಿದರು. ಇವುಗಳ ಪ್ರಭಾವದಿಂದ ಶಿವ, ವಿಷ್ಣು, ಇಂದ್ರಾದಿ ದೇವಮೂರ್ತಿಗಳು ನಿರ್ಮಾಣವಾದವು. ದೈವ ಮಂದಿರಗಳನ್ನು ಕಟ್ಟಲು ಮುಂದಾದರು. ದೇವಾಲಯಗಳನ್ನು ನಿರ್ಮಿಸುವಾಗ ಎಚ್ಚರಿಕೆ ವಹಿಸಿ ಭೂಮಟ್ಟದಿಂದ ಎತ್ತರವಾದ, ಗಟ್ಟಿಯಾದ ನೆಲದಲ್ಲಿ ಸುದೀರ್ಘ ಬಾಳಿಕೆ ಬರುವಂತಹ ಕಟ್ಟಡಗಳನ್ನು ಕಟ್ಟಿಕೊಳ್ಳುವದರಲ್ಲಿಯೆ ಕಲೆಗಾರಿಕೆ ಕಾಣಿಸಿ ಕೊಂಡಿತು.

ಲಿಖಿತ ಸಾಹಿತ್ಯ ರಚನೆಯಾದ ಮೇಲಂತೂ ಲಲಿತ ಕಲೆಗಳು ಪ್ರಧಾನ ವಸ್ತುವಿಗೆ ಮೆರುಗನ್ನು ಕೊಡುವ ಸಲುವಾಗಿ ಸನ್ನಿವೇಶಕ್ಕೆ ತಕ್ಕಂತೆ ತಮ್ಮದೇ ಆದ ಸ್ಥಾನವನ್ನು ನಿರ್ವಹಿಸುತ್ತಿವೆ. ಪಂಪ ಕವಿಯಿಂದ ಮೊದಲುಗೊಂಡು ಪ್ರಸ್ತುತ ಸಂದರ್ಭದ ಸಾಹಿತಿಗಳೂ ಲಲಿತ ಕಲೆಗಳಿಂದ ಪ್ರಭಾವಿತರಾಗಿದ್ದಾರೆ. ವಚನಕಾರರಾದ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಮೊದಲಾದವರು ಸಮಾಜದಲ್ಲಿನ ಸಮಸ್ಯೆಗಳನ್ನು ಹಾಡಿನ ಮೂಲಕ ಜನರಲ್ಲಿ ತಿಳುವಳಿಕೆ ಮೂಡಿಸಿದರು. ದಾಸಶ್ರೇಷ್ಠರಾದ ಪುರಂದರದಾಸ, ಕನಕದಾಸರು ಸಂಗೀತಕ್ಕೆ ಹಲವು ರಾಗತಾಳಗಳನ್ನು ಪರಿಚಿಸಿದರು. ಹೊಸಗನ್ನಡದ ಕವಿಗಳಾದ ಬೇಂದ್ರೆ, ಕುವೆಂಪು, ಕೆ.ಎಸ್. ನರಸಿಂಹಸ್ವಾಮಿ ಜಿ.ಎಸ್. ಶಿವರುದ್ರಪ್ಪ, ಕೆ.ಎಸ್. ನಿಸಾರ್ ಅಹಮದ್ ಮೊದಲಾದವರ ಭಾವಗೀತೆಗಳು ಕಾವ್ಯ ಮತ್ತು ಸಂಗೀತ ಪ್ರಭಾವಿತವಾಗಿ ಸಾಹಿತ್ಯ ಮತ್ತು ಕಲಾಭಿಮಾನಿಗಳ ಮನಗೆದ್ದಿವೆ. ಮಲ್ಲಿಕಾರ್ಜುನ ಮನ್ಸೂರ್ ಮತ್ತು ಡಿ.ವಿ.ಗುಂಡಪ್ಪ ಅವರು ಪರಂಪರೆಯಿಂದ ಬಂದ ಶಾಸ್ತ್ರೀಯ ಸಂಗೀತವನ್ನು ಬೆಳೆಸುವಲ್ಲಿ ಕಂಕಣ ಬದ್ಧರಾಗಿದ್ದರು.

ಹಿಂದೂ ಧರ್ಮದ ಪುರಾಣ ಪ್ರಸಂಗಗಳಲ್ಲಿ ದೇವ ಮಾನವರ ನರ್ತನ ಭಂಗಿಗಳ ಉಲ್ಲೇಖಗಳು ಕಂಡುಬರುತ್ತವೆ. ಸ್ವರ್ಗಲೋಕದಲ್ಲಿ ಗಂಧರ್ವ, ಅಪ್ಸರೆಯರು ಋಷಿ ಮುನಿಗಳನ್ನು ರಂಜಿಸಲು ನೃತ್ಯ ಮಾಡುತ್ತಿದ್ದರೆಂಬ ಪ್ರತೀತಿ ಇದೆ. ಋಗ್ವೇದದಲ್ಲಿ ದೇವತೆಗಳ ನೃತ್ಯವನ್ನು ವರ್ಣಿಸುವಾಗ 'ನೃತ್ಯಮಾನೋ ಅಮೃತ' ನುಡಿ ವ್ಯಕ್ತವಾಗುತ್ತದೆ. ಹಿಂದೂ ಧರ್ಮದ ಪ್ರಕಾರ ಮೂರು ಮುಖ್ಯ ಶೃತಿಗಳಾದ ಸ್ರುಹೂ, ಶೃತಿ ಮತ್ತು ಲಯಗಳನ್ನು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಪ್ರತಿನಿಧಿಸುತ್ತಾರೆಂಬ ನಂಬಿಕೆ. ಇವರಲ್ಲಿ ಲಯಕಾರನಾದ ಮಹೇಶ್ವರನನ್ನು ನಾಟ್ಯಾಧಿದೇವನೆಂದು ಪರಿಗಣಿಸಲಾಗಿದೆ. ಶಿವನ ನಾಟ್ಯ 'ಶಿವತಾಂಡವ' ಎಂಬ ಹೆಸರಿನಲ್ಲಿ ಪ್ರಸಿದ್ಧಿ ಪಡೆದಿದೆ. ಶಿವ ನರ್ತಿಸಲು

ಆರಂಭಿಸಿದಾಗ ಸಕಲ ಅಧಿದೇವತೆಗಳು ಅವನ ನಾಟ್ಯಕ್ಕೆ ಸಹಕರಿಸುತ್ತಿದ್ದರು. ಸರಸ್ವತಿ ವೀಣೆಯನ್ನೂ, ಇಂದ್ರ ಕೊಳಲನ್ನು, ಬ್ರಹ್ಮ ತಾಳ ಹಾಕುತ್ತಿದ್ದ. ಈ ಸಂದರ್ಭವನ್ನು ವೀಕ್ಷಿಸಲು ಗಂಧರ್ವ, ಯಕ್ಷ, ಯಕ್ಷಿಣಿ, ಅಪ್ಸರೆ, ಅಮರ ಮೊದಲಾದವರು ಮೂರು ಲೋಕಗಳಿಂದಲೂ ಬಂದು ನೋಡಿ ಸಂತೋಷಪಡುತ್ತಿರುವ ಪೌರಾಣಿಕ ಸಂದರ್ಭವನ್ನು ಕಾರಂತರು ತಮ್ಮ 'ಕಲಾಪ್ರಪಂಚ' ಕೃತಿಯಲ್ಲಿ ಅಭಿವ್ಯಕ್ತಪಡಿಸಿದ್ದಾರೆ.

ಸಂಗೀತದಲ್ಲಿ ಉನ್ನತ ಸೇವೆ ಸಲ್ಲಿಸಿದ ಮಹನೀಯರಲ್ಲಿ ಒಬ್ಬರಾದ ನಿಜಗುಣ ಶಿವಯೋಗಿಗಳು ವೇದಾಂತ ಮತ್ತು ಶಾಸ್ತ್ರೀಯ ಸಂಗೀತಗಳೆರಡರಲ್ಲೂ ಪಾಂಡಿತ್ಯ ಪಡೆದಿದ್ದರು. ಅವರು ಶಾಸ್ತ್ರೀಯ ಸಂಗೀತಕ್ಕೆ ಸಂಬಂಧಿಸಿದಂತೆ 'ವಿವೇಕ ಚಿಂತಾಮಣಿ' ಕೃತಿಯಲ್ಲಿ ನಾಟಿ, ಮೋಹನ, ತೋಡಿ, ಕಾಂಭೋದಿ, ಗೌಳ ಮೊದಲಾದ ಮೂವತ್ತಾರು ರಾಗಗಳನ್ನು ಪರಿಚಯಿಸಿದ್ದಾರೆ. ಅದರಲ್ಲಿ ಸಂಗೀತ ಕಲೆ ರಾಮಾಯಣ ಕಾಲಕ್ಕಾಗಲೇ ಪ್ರಬುದ್ಧಮಾನಕ್ಕೆ ಬಂದಿದ್ದನ್ನು ಪ್ರಸ್ತಾಪಿಸಿದ್ದಾರೆ. ಆಂಜನೇಯ ಸೀತಾನ್ವೇಷಣೆಗೆಂದು ರಾವಣನ ಅಂತಃಪುರಕ್ಕೆ ಬಂದಾಗ ರಾಕ್ಷಸ ಕನ್ಯೆಯರು ಸಂಗೀತ, ನೃತ್ಯದಿಂದ ಬಳಲಿ ಮಲಗಿದ್ದ ದೃಶ್ಯ "ಒಬ್ಬಳು ತನ್ನ ಕೈ ಕಾಲುಗಳನ್ನು ನೃತ್ಯ ಭಂಗಿಯಲ್ಲಿಟ್ಟುಕೊಂಡು ನಿದ್ರಿಸುತ್ತಿದ್ದಳು. ಇನ್ನೊಬ್ಬಳು ವೀಣೆಯನ್ನು ತಬ್ಬಿಕೊಂಡು ಮಲಗಿದ್ದಳು. ಮತ್ತೊಬ್ಬಳು ಕಂಕುಳಲ್ಲಿ ಮಗುವನ್ನು ಮಲಗಿಸಿಕೊಂಡಂತೆ ಮೃದಂಗವನ್ನು ಹಿಡಿದು ಮಲಗಿದ್ದರೆ ಮಗದೊಬ್ಬಳು ತನ್ನ ಪ್ರಿಯಕರನನ್ನು ಅಪ್ಪಿಕೊಂಡಂತೆ ತಮಟೆಯನ್ನು ತಬ್ಬಿದ್ದಾಳೆ"[1]. ಹೀಗೆ ಒಬ್ಬೊಬ್ಬರು ಒಂದೊಂದು ಸಂಗೀತದ ಪರಿಕರಗಳನ್ನು ತಮ್ಮೊಟ್ಟಿಗೆ ಇಟ್ಟುಕೊಂಡು ಮಲಗಿರುವ ದೃಶ್ಯ ಸಂಗೀತದ ಮೇಲಿನ ವ್ಯಾಮೋಹವನ್ನು ಸೂಚಿಸುತ್ತದೆ.

ಜಾನಪದ ಸಂಗೀತದಿಂದ ಪ್ರಭಾವಿತವಾದ ಭಾರತೀಯ ಸಂಗೀತ ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತಗಳೆಂಬುದಾಗಿ ಹದಿಮೂರನೆಯ ಶತಮಾನದಲ್ಲಿ ಇಬ್ಭಾಗವಾಗಿರಬಹುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಕರ್ನಾಟಕ, ಆಂಧ್ರ, ತಮಿಳುನಾಡು, ಕೇರಳ ಪ್ರಾಂತ್ಯಗಳ ಅನೇಕ ವಿದ್ವಾಂಸರ ಕೊಡುಗೆಯಿಂದ ದಕ್ಷಿಣ ಭಾಗದ ಸಂಗೀತವು 'ಕರ್ನಾಟಕ ಸಂಗೀತ'ವೆಂಬ ಹೆಸರಿನಿಂದ ಸಮೃದ್ಧವಾಗಿದೆ. ಉತ್ತರ ಭಾಗದಲ್ಲಿ ಪ್ರಚಲತೆಯಲ್ಲಿದ್ದ ಸಂಗೀತವನ್ನು 'ಹಿಂದೂಸ್ತಾನಿ ಸಂಗೀತ'ವೆಂದು ಕರೆಯಲಾಗುತ್ತಿದೆ. ಇವೆರಡರ ಮೂಲ ಒಂದೇ ಆದರೂ ರೂಪ, ಆಕಾರಗಳು ವಿಶಿಷ್ಟವಾಗಿವೆ.ಹಲವು ರಾಗಗಳು ಎರಡೂ ಪದ್ಧತಿಗಳಿಗೆ ಸಂಬಂಧಿಸಿವೆ.

ಕರ್ನಾಟಕ ಸಂಗೀತ ಪುರಂದರದಾಸರಿಂದ ಆರಂಭಗೊಂಡು, ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತ, ಮುತ್ತಪ್ಪ ಭಾಗವತರ ಮೂಲಕ ಪ್ರಸಿದ್ಧಿಯನ್ನೂ ಪಡೆಯಿತು.

ದಕ್ಷಿಣ ಭಾರತದಲ್ಲಿ ಕರ್ನಾಟಕ ಸಂಗೀತದ ಪ್ರಭಾವವಿದ್ದರೂ, ಕರ್ನಾಟಕದ ವಿಶಿಷ್ಟತೆಯೆಂದರೆ ಹಿಂದೂಸ್ತಾನಿ ಸಂಗೀತಕ್ಕೆ ಪ್ರೋತ್ಸಾಹ ನೀಡಿದ್ದು. ಭೀಮಸೇನ ಜೋಶಿ, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್ಲ ಮೊದಲಾದವರು 'ಹಿಂದೂಸ್ತಾನಿ ಸಂಗೀತ' ಶೈಲಿಯನ್ನು ರೂಢಿಸಿಕೊಂಡು ತಮ್ಮ ಕಲಾ ಸಾರ್ವಭೌಮತ್ವವನ್ನು ಮೆರೆದರು.

'ಭಾರತದ ಮೇಲೆ ಪಾಶ್ಚಾತ್ಯ ಸಂಸ್ಕೃತಿ ಪ್ರಭಾವ ಬೀರಿದ ಕಾರಣ ಅದುವರೆಗೂ ರೂಢಿಗತವಾಗಿ ಬಂದಿದ್ದ ದೇಶೀಯ ಕಲಾ ಸಂಪ್ರದಾಯಕ್ಕೆ ಕೊಡಲಿ ಪೆಟ್ಟುಬಿದ್ದು ಪಾಶ್ಚಾತ್ಯ ಕಲಾ ಸ್ವರೂಪಗಳು ಎಲ್ಲೆಡೆ ಪ್ರಾಧಾನ್ಯತೆ ಪಡೆದವು. ಇದರ ಪರಿಣಾಮವಾಗಿ ದೇಶಿಯ ಕಲೆಗಳು ಮೂಲೆ ಗುಂಪಾದವು. ಭಾರತೀಯ ಕಲಾವಿದರೂ ಸಹ ದೇಶಿಯ ವಸ್ತುವಿಗೆ ವಿದೇಶಿ ತಂತ್ರಗಾರಿಕೆಯನ್ನು ಬಳಸಿಕೊಂಡು ಕಲೆಯನ್ನು ಬೆಳಸಿದರು. ಇಂತಹ ಸಂದರ್ಭದಲ್ಲಿ ಅವನೀಂದ್ರನಾಥ ಠಾಗೂರ್, ಇ.ಬಿ.ಹಾವೆಲ್, ವೆಂಕಟಪ್ಪ, ಅಸಿತಕುಮಾರ ಹಲ್ದಾರ, ಗಗನೇಂದ್ರನಾಥ ಠಾಗೂರ್, ನಂದಲಾಲ ವಸು ಮೊದಲಾದವರಿಂದ ಭಾರತೀಯ ಕಲೆ ಪುನರ್ಜೀವ ಪಡೆಯಿತು. ಚಿತ್ರಕಲೆಯಲ್ಲಿ ಭಾರತೀಯತೆಯನ್ನು ಮರು ಸ್ಥಾಪಿಸಿದವರಲ್ಲಿ ಅವನೀಂದ್ರನಾಥ ಠಾಕೂರರು ಮೊದಲಿಗರು. ಇವರು ಆರಂಭದಲ್ಲಿ ವಿದೇಶಿ ಶೈಲಿಯಿಂದ ಪ್ರಭಾವಿತರಾದರೂ ಕೂಡಲೆ ಭಾರತೀಯ ವಸ್ತು, ತಂತ್ರಗಾರಿಕೆಗಳ ಹಿನ್ನೆಲೆಯಲ್ಲಿಯೂ ಸಾಕಷ್ಟು ಚಿತ್ರಗಳನ್ನು ರಚಿಸಿದ್ದಾರೆ. ಅವನೀಂದ್ರರ ಶಿಷ್ಯರಾದ ನಂದಲಾಲ ವಸು ಕೃಷಿಕ ಸತಿ, ಭರತನು ಶ್ರೀರಾಮನನ್ನು ಇದಿರು ಕಾಯುತ್ತಿರುವುದು, ಬೌದ್ಧ ಭಿಕ್ಷು ಮೊದಲಾದವು ಗಳು ದೇಶಿಯತೆಯತೆಯ ಪಡಿಯಚ್ಚುಗಳಾಗಿವೆ.

ಅವನೀಂದ್ರರ ಮತ್ತೋರ್ವ ಶಿಷ್ಯ ವೆಂಕಟಪ್ಪ 'ಕಲಾ ತಪಸ್ವಿ' ಎಂಬ ಬಿರುದಿಗೆ ಪಾತ್ರರಾಗಿ ಕಲೆಯನ್ನೆ ಜೀವನದ ಸರ್ವಸ್ವವನ್ನಾಗಿಸಿಕೊಂಡು ರಾಜಸ್ಥಾನಿ, ಬುಂದಿ, ಕಾಂಗಡಾ, ಮೊದಲಾದ ಶೈಲಿಗಳಲ್ಲಿ ಚಿತ್ರ ಮತ್ತು ಶಿಲ್ಪಗಳನ್ನು ಚಿತ್ರಿಸಿದ್ದಾರೆ. ಅವರು ಅವನೀಂದ್ರರ ಬಳಿ ಕಲಿತು ರಾಮಾಯಣ, ಮಹಾಭಾರತ, ಬುದ್ಧನ ಜೀವನ ಚರಿತ್ರೆಯಿಂದ ಹಲವು ಪ್ರಸಂಗಗಳನ್ನು ಆರಿಸಿಕೊಂಡು ಸುಂದರ ಆಕೃತಿಗಳನ್ನು ರಚಿಸಿ ತಮ್ಮ ಕಲಾ ಕೌಶಲ್ಯವನ್ನು ಹೊರಸೂಸಿದ್ದಾರೆ. ಹನುಮಂತನ ಮೂಲಕ ಸೀತೆಗೆ ಮುದ್ರೆಯುಂಗುರ ಕಳುಹಿಸುತ್ತಿರುವ ಚಿತ್ರ, ಏಕಲವ್ಯ ದ್ರೋಣರನ್ನು ತನ್ನ ಮಾನಸ ಗುರುವನ್ನಾಗಿ ಧನುರ್ವಿದ್ಯೆಯಲ್ಲಿ ತೊಡಗಿರುವುದು, ಕಣ್ವಮಹರ್ಷಿ ತನ್ನ ಸಾಕು ಮಗಳು ಶಕುಂತಲೆಯನ್ನು ಗಂಡನ ಮನೆಗೆ ಕಳುಹಿಸುತ್ತಿರುವ ಚಿತ್ರಗಳಲ್ಲಿ ದೇಶಿಯ

ಕಲಾತ್ಮಕತೆ ಮೈದಳೆದಿದೆ. ವೆಂಕಟಪ್ಪನವರ ಚಿತ್ರಗಳನ್ನು ಪ್ರಕೃತಿ, ಕಾಲ್ಪನಿಕ ಮತ್ತು ವ್ಯಕ್ತಿ ಚಿತ್ರಗಳೆಂದು ವಿಭಾಗಿಸಬಹುದು. ಉದಕಮಂಡಲ, ಕೊಡೆಕೈನಾಲು, ಪುರಿ ಜಗನ್ನಾಥ, ಡಾರ್ಜಲಿಂಗ್ ಮೊದಲಾದವು ಪ್ರಕೃತಿ ಚಿತ್ರಗಳಾಗಿದ್ದರೆ ಹೋಟಲ್ ಮಾಣಿ ನರಸಿಂಹಯ್ಯ, ವೀಣೆ ಶೇಷಣ್ಣ, ರವೀಂದ್ರನಾಥ ಠಾಗೂರ್, ಅವನೀಂದ್ರ – ವ್ಯಕ್ತಿ ಚಿತ್ರಗಳು. ಅವರ ಮೊದಲ ಶಿಲ್ಪ ಹೋಟಲೊಂದರಲ್ಲಿ ಕೆಲಸ ಮಾಡುತ್ತಿದ್ದ ಹುಡುಗ ನರಸಿಂಹಯ್ಯನದು. ಇದರಲ್ಲಿ ಮಾಣಿಯ ಲವಲವಿಕೆ, ಅಮಾಯಕತೆಗಳು ಎದ್ದು ಕಾಣುತ್ತವೆ. ವ್ಯಕ್ತಿ ಚಿತ್ರಗಳಲ್ಲಿ ಮುಖ್ಯವಾದುದು ಅವರ ಕಲಾ ಗುರು ಅವನೀಂದ್ರನಾಥರದ್ದು. ಈ ಚಿತ್ರದಲ್ಲಿ ಗುರುವಿನ ಗುಣ, ಗಾಂಭೀರ್ಯ, ನಯವಂತಿಕೆಯನ್ನು ಚಿತ್ರಿಸಿದ್ದಾರೆ. ಅವನೀಂದ್ರರ ಮೆಳ್ಳಗಣ್ಣು ಚಿತ್ರದ ವಾಸ್ತವಿಕತೆ, ಚೆಲುವನ್ನು ತೋರಿಸುತ್ತದೆ. ಅವರ ಕೈಯಲ್ಲಿನ ನೀಲಿಗಟ್ಟಿದ ನರವನ್ನು ಸಹ ಯಥಾವತ್ತಾಗಿ ಮೂಡಿಸಿ, ಚಿತ್ರಕ್ಕೆ ಜೀವ ತುಂಬಿದ್ದಾರೆ.

ವೆಂಕಟಪ್ಪನವರು ಬ್ರಹ್ಮಚರ್ಯ ಪರಿಪಾಲನೆ ಮಾಡಿಕೊಂಡು ಕಲೆಯೇ ಜೀವನದ ಸರ್ವಸ್ವವನ್ನಾಗಿಸಿಕೊಂಡು ಕಲೆಯಲ್ಲಿ ಪುರುಷಾರ್ಥವನ್ನು ಕಂಡುಕೊಂಡರು. ಯಾರದರೂ ಅವರನ್ನು ಒಳ್ಳೆಯ ಕಲಾವಿದ ಎಂದರೆ “ನಾನು ಕಲಾವಿದನಲ್ಲ, ಕಲಾವಿದ್ಯಾರ್ಥಿಯಷ್ಟೆ; ಕಲೆಯು ಒಂದು ಸಾಗರ, ನಾನೋ ಒಂದು ಸಣ್ಣ ಬಿಂದಿಗೆಯನ್ನು ಎತ್ತಿಕೊಂಡು ನೀರನ್ನು ತರಲು ಹೋಗುತ್ತಿದ್ದೇನೆ. ಸಾಗರದ ನೀರನ್ನೆಲ್ಲ ಒಂದು ಬಿಂದಿಗೆಯಲ್ಲಿ ತುಂಬಿಸಲಾದೀತೆ”[೨] ಎನ್ನುತ್ತಿದ್ದರು. ಎಷ್ಟೇ ಕಲಾ ಪಾಂಡಿತ್ಯ ಪಡೆದುಕೊಂಡಿದ್ದರೂ ತಿಳಿದುಕೊಳ್ಳಬೇಕಾಗಿರುವುದು ಇನ್ನೂ ಸಾಕಷ್ಟಿದೆ ಎಂಬ ಮನೋಭಾವನೆ ವೆಂಕಟಪ್ಪವನರದಾಗಿತ್ತು.

ಕೆ. ಶ್ರೀಕಂಠಯ್ಯನವರು ತಮ್ಮ ‘ಭಾರತೀಯ ಸಂಗೀತ: ಕೆಲವು ಚಿಂತನೆಗಳು’ ಕೃತಿಯಲ್ಲಿ ಧರ್ಮ, ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಕಲೆಯ ಮಹತ್ವವನ್ನು ಪ್ರಚುರಪಡಿಸಿದ್ದಾರೆ. ಅಮರಾವತಿ, ಸಾಂಚಿ, ಬೇಲೂರು, ಹಳೇಬೀಡು, ಅಜಂತಾದ ಚಿತ್ರಗಳು ತಂಜಾವೂರು ದೇವಾಲಯಗಳ ಮೇಲಿನ ನೃತ್ಯಭಂಗಿಗಳು ಆ ಕಾಲದ ಜನರ ಸಂಸ್ಕೃತಿಯನ್ನು ಪ್ರತಿಬಿಂಬಿಸಿದರೆ ಕೆಲ ರಾಜ ಮನೆತನಗಳು ಸಂಗೀತದ ಸಂಕೇತಗಳನ್ನು ನಾಣ್ಯಗಳ ಮೇಲೆ ಮುದ್ರಿಸುತ್ತಿದ್ದ ಪ್ರಸ್ತಾಪವೂ ಇದೆ. ಒಂದು ನಾಣ್ಯದ ಮೇಲೆ ಸಮುದ್ರಗುಪ್ತನು ‘ಹಾರ್ಪ್’ ವಾದ್ಯವನ್ನು ನುಡಿಸುವ ಚಿತ್ರ,ರಾಜರು ತಮ್ಮ ಆಸ್ಥಾನದಲ್ಲಿ ಹಲವು ಬಗೆಯ ಸ್ಪರ್ಧೆಗಳನ್ನು ಏರ್ಪಡಿಸುವಂತೆ ಆಗಾಗ ಸಂಗೀತ ಸ್ಪರ್ಧೆಗಳನ್ನು ಆಯೋಜಿಸಿ, ಪಾಂಡಿತ್ಯ ಪ್ರದರ್ಶಿಸಿದ ಸಂಗೀತಗಾರನಿಗೆ ಸೋತ ಸಂಗೀತಗಾರರು ಈ ಹಿಂದೆ

ಪಡೆದಿದ್ದ ಬಿರುದಾವಳಿ, ಕೃತಿ, ವಿಜಯಪತ್ರಗಳನ್ನು ಗೆದ್ದ ಸಂಗೀತಗಾರನಿಗೆ ಒಪ್ಪಿಸುವ ಪರಿಪಾಠವಿದ್ದ ಮಾಹಿತಿ ಲಭ್ಯವಾಗುತ್ತದೆ. ಶ್ರೀಕಂಠಯ್ಯನವರು 'ಮಹಾ ಭಾರತದ' ಸಭಾಪರ್ವ ಮತ್ತು ವಿರಾಟ ಪರ್ವಗಳಲ್ಲಿ ಸಂಗೀತಕ್ಕೆ ಸಂಬಂಧಿಸಿದ ಹಲವು ಶ್ಲೋಕಗಳನ್ನು ಪರಿಚಯಿಸುವುದರ ಮೂಲಕ ಆಗಿನ ಕಾಲದ ದೇವಮಾನವ ಮತ್ತು ಸಾಮಾನ್ಯ ಜನರಲ್ಲಿನ ಕಲೆಗಾರಿಕೆಯನ್ನು ವಿಶ್ಲೇಷಿಸಿದ್ದಾರೆ. ಅಲ್ಲದೆ ಶೂದ್ರಕನ 'ಮೃಚ್ಛಕಟಿಕ' ನಾಟಕದಲ್ಲಿ ರೇಬಿಲನ ಗಾಯನವನ್ನು ಕೇಳಿದ ಚಾರುದತ್ತ ಮೈತ್ರೇಯಿಯರು ಸಂಗೀತದಲ್ಲಿನ ಸರಿ–ತಪ್ಪುಗಳ ಪರಾಮರ್ಶನ ಮಾಡುತ್ತಿದ್ದ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

ಮೈಸೂರು ಅರಸ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬಿಡಾರದ ಕೃಷ್ಣಪ್ಪ, ವೀಣೆಶೇಷಣ್ಣ, ವಾಸುದೇವಾಚಾರ್ಯ ಸಂಗೀತ ಮೇಧಾವಿಗಳಿಗೆ ಆಶ್ರಯಕೊಟ್ಟು ಕರ್ನಾಟಕ, ಹಿಂದೂಸ್ತಾನಿ ಮತ್ತು ಪಾಶ್ಚಾತ್ಯ ಸಂಗೀತ ಪದ್ಧತಿಗಳ ಬೆಳವಣಿಗೆಗೆ ಪ್ರಮುಖ ಕಾರಣಕರ್ತರಾಗಿದ್ದರು. ಅರಮನೆಯಲ್ಲಿ ತಮ್ಮ ಮನಸಂತೋಷಕ್ಕಾಗಿ ಸಂಗೀತ ಕಚೇರಿಗಳನ್ನು ಏರ್ಪಡಿಸಿ ಕಲಾವಿದರನ್ನು ಪ್ರೋತ್ಸಾಹಿಸುತ್ತಿದ್ದರು. ಮೈಸೂರು ಸಂಸ್ಥಾನದಲ್ಲಿ ಬೆಳೆದ ಶೇಷಣ್ಣನವರು ತಮ್ಮ ಕಲಾ ಶೈಲಿ, ನೈಪುಣ್ಯತೆ ಮತ್ತು ವೈವಿಧ್ಯತೆಗಳಿಂದ ಕೀರ್ತಿ ಪಡೆದಿದ್ದರು. ಅವರ ಸಂಗೀತದ ಮಾಂತ್ರಿಕತೆಯ ಬಗ್ಗೆ ರಾಳಪಲ್ಲಿ ಶರ್ಮರು "ಇತರ ಗಾಯಕರು ಬರಲಿಲ್ಲವೆನ್ನೋಣ, ನಷ್ಟವೇನು? ಶೇಷಣ್ಣನವರು ಹತ್ತು ದಿನವೂ ಕಚೇರಿ ಮಾಡುವರು. ಈ ದಿನ ವೀಣೆ, ನಾಳೆ ಜಲತರಂಗ, ಮಾರನೆ ದಿನ ಪಿಟೀಲು! ಇನ್ನೊಂದು ದಿನ ಪಿಯಾನು, ಬೇರೊಂದು ದಿನ ಸ್ವರ ಬತ್ತು. ಆತನಿಗೆ ಬಾರದಿದ್ದ ವಿದ್ಯೆಯೆ ಇಲ್ಲ. ಆತನ ಬೆರಳಿನ ಗಾರುಡೀ ವಿದ್ಯೆಗೆ ಒಳಪಡದ ತಂತಿಯಾಗಲಿ ಹಲಗೆಯಾಗಲಿ, ಚಕ್ಕೆಯಾಗಲಿ ಇಲ್ಲ. ಅಲ್ಲದೆ ವೀಣೆ ನುಡಿಸಿದರೂ ಇವತ್ತಿನ ವೀಣೆಯೆ ಬೇರೆ ನಾಳೆಯ ವೀಣೆಯೆ ಬೇರೆ"[3] ಎಂದು ಕಲಾವಿದರ ಕಲಾಭಿಮಾನವನ್ನು ಕೊಂಡಾಡುವರು.

ಹಲವು ಶತಮಾನಗಳವರೆಗೆ 'ಕಲೆಗಾಗಿ ಕಲೆ'ಯಾಗಿದ್ದ ಲಲಿತಕಲೆ ಇತ್ತೀಚಿನ ದಶಕಗಳಲ್ಲಿ ಸಿನಿಮಾ, ಟಿ.ವಿ.ಚಾನಲ್‌ಗಳ ಪ್ರಭಾವಕ್ಕೆ ಒಳಗಾಗಿ ತನ್ನ ನೈಜ ಸ್ವರೂಪವನ್ನು ಬದಲಿಸಿಕೊಂಡು ಪ್ರತಿಷ್ಠೆ, ಸ್ವಾರ್ಥ ಸಾಧನೆ ಹಣಗಳಿಕೆಗಾಗಿ ಬಳಕೆಯಾಗುತ್ತಿರುವುದನ್ನು ಕಂಡ ಮಲ್ಲಿಕಾರ್ಜುನ ಮನ್ಸೂರ್, ಪಿ.ಆರ್.ತಿಪ್ಪೇರುದ್ರ ಸ್ವಾಮಿ, ಕೆ.ಶ್ರೀಕಂಠಯ್ಯ ಮೊದಲಾದವರು ಶಾಸ್ತ್ರೀಯ ಕಲಾ ಸಂಪ್ರದಾಯವನ್ನು ಪುರಸ್ಕರಿಸುತ್ತಾ ಇಂದಿನ ಕಲೆಗಾರಿಕೆಯ ಕೊರತೆಗಳನ್ನು ವಿಮರ್ಶಿಸಿದ್ದಾರೆ. ತಿಪ್ಪೇರುದ್ರ ಸ್ವಾಮಿಯವರು ತಮ್ಮ

'ಕಲಾವಿದನ ನೆನಪುಗಳು' ಕೃತಿಯಲ್ಲಿ ಲಲಿತ ಕಲೆಗಳನ್ನು ಕುರಿತು ಇಂದಿನ ಸಂಗೀತ ವಿಶಾಲವಾಗಿ ವ್ಯಾಪಿಸಿಕೊಂಡಿದ್ದರೂ ಗುಣಮಟ್ಟದ ದೃಷ್ಟಿಯಿಂದ ಹಿಂದುಳಿದಿರುವುದನ್ನು ಕಂಡು ಈಗಿನ ರೀತಿಯಲ್ಲೆ ವಿದ್ಯಾರ್ಥಿಗಳು ಸಂಗೀತ ಕಲಿತರೆ ಶಾಸ್ತ್ರೀಯ ಸಂಗೀತ ಬೆಳೆಯಲು ಸಾಧ್ಯವಿಲ್ಲ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಸಂಗೀತವನ್ನು ಪರಿಷ್ಕರಿಸಿ, ಅಭಿವೃದ್ಧಿಪಡಿಸಲು ಸಂಗೀತಾಭ್ಯಾಸಿಗಳಿಗೆ ಬೇಕಾಗಿರುವ ಶಿಕ್ಷಣ, ಹೊಣೆಗಾರಿಕೆಗಳ ವಿಚಾರವನ್ನು ತಿಳಿಸಿದ್ದಾರೆ. ಇಂದಿನ ಆಧುನಿಕ ಕಲಾ ಶೈಲಿಯಲ್ಲಿ ಅರೆ–ಬರೆ ಕಲಾಭ್ಯಾಸಿಯೂ ಬಹುಬೇಗ ಕಲಾವಿದನೆಂಬ ಬಿರುದಿಗೆ ಪಾತ್ರನಾಗುವ ಸಾಧ್ಯತೆ ಇದೆ. ಆದರೆ ಅಂತಹವರಲ್ಲಿ ಗುಣಮಟ್ಟದ ಸಂಗೀತ ಜ್ಞಾನವಿರುವುದಿಲ್ಲ ಎಂದು ಕಲೆ–ಕಲಾವಿದರ ಗುಣಲಕ್ಷಣಗಳನ್ನು ವಿಶ್ಲೇಷಿಸುವರು. ಇದಕ್ಕೆ ಪರಿಹಾರ 'ಹಳೆಯ ಮತ್ತು ಯುವ ಪೀಳಿಗೆಯವರ ನಡುವೆ ಸಂವಾದ ನಡೆಸುವುದರ ಮೂಲಕ ಸಂಗೀತದಲ್ಲಿ ಗಟ್ಟಿತನ ಬೆಳೆಸುವುದಕ್ಕೆ ಸಹಾಯವಾಗಬೇಕು'ಎಂದು ತಿಪ್ಪೇರುದ್ರ ಸ್ವಾಮಿಯರು ಅಭಿಪ್ರಾಯಪಟ್ಟಿದ್ದಾರೆ. ತಮ್ಮ ಮಾತುಗಳನ್ನು ಮುಂದುವರೆಸುತ್ತಾ "ಸಂಗೀತದಲ್ಲಿ ಇದುವರೆಗೂ ವಿಮರ್ಶೆ ಅಷ್ಟಾಗಿ ನಡೆದಿಲ್ಲ. ವಿಮರ್ಶೆ ವಸ್ತುನಿಷ್ಟವಾಗಿರಬೇಕು. ವಿಮರ್ಶಕನಾದವನಿಗೆ ಭಾರತೀಯ ಸಂಗೀತದ ಬಗ್ಗೆ ಸ್ಪಷ್ಟ ಅರಿವಿರಬೇಕು. ಪಂಥ, ಶೈಲಿ ಯಾವುದೇ ಇರಲಿ ಅದರಲ್ಲಿನ ಸಕಾರಾತ್ಮಕ ಅಂಶಗಳನ್ನು ಆಯ್ಕೆ ಮಾಡಿಕೊಂಡು ಪುರಸ್ಕರಿಸುವ, ಮತ್ತು ದೋಷಗಳನ್ನು ವಿಡಂಬಿಸುವ ಮನೋಭಾವನೆಯನ್ನು ವಿಮರ್ಶಕನಾದವನು ಹೊಂದಿರಬೇಕು"[4]. ಸಂಗೀತ ಸನ್ಮಾರ್ಗದಲ್ಲಿ ವಿಮರ್ಶೆಗೆ ಒಳಗಾಗಬೇಕಾದರೆ ಅದು ವ್ಯಕ್ತಿಯ ಮನಸನ್ನು ಕಲಕುವಂತಿರಬೇಕು. ಸಂಗೀತದ ಒಂದು ಪದ ಕೇಳಿದರೂ ಕೇಳುಗನ ಮನಸ್ಸಿನಲ್ಲಿ ಸಂತೋಷ, ಶೋಕ, ಕೋಪ ಹೀಗೆ ಯಾವುದೇ ರೀತಿಯಲ್ಲಿ ಮನಸ್ಸನ್ನು ಜಾಗ್ರತಗೊಳಿಸುವಂತಿರಬೇಕು.

ಆಧುನಿಕತೆಯ ಹಿನ್ನೆಲೆಯಲ್ಲಿ ಬಹುತೇಕ ಎಲ್ಲಾ ಕ್ಷೇತ್ರಗಳು ಅಭಿವೃದ್ಧಿ ಹೊಂದುತ್ತಿರುವ ಸಂದರ್ಭದಲ್ಲಿ ಸಂಗೀತ ಇನ್ನೂ ಅನಾದಿಕಾಲದ ಸಂಪ್ರದಾಯ ಮತ್ತು ಮೂಢನಂಬಿಕೆಗಳನ್ನು ರೂಢಿಸಿಕೊಂಡದ್ದು ಅಭಿವೃದ್ಧಿಗೆ ಮಾರಕವಾಗಿದೆ. ಕಲೆ ಬೆಳೆಯಬೇಕಾದರೆ 'ಸಂಸ್ಕೃತಿಗೆ ದಕ್ಕೆ ಬರದ ಹಾಗೆ ಇಂದಿನ ಪರಿಸ್ಥಿತಿಗನುಗುಣವಾಗಿ ಶಾಸ್ತ್ರೀಯತೆಯಲ್ಲಿ ಸಡಿಲಿಕೆ ಮಾಡಿಕೊಂಡು ಸಂಗೀತವನ್ನು ಬೆಳೆಸಬೇಕು' ಎಂಬ ತಿಪ್ಪೇರುದ್ರ ಸ್ವಾಮಿಯವರ ಮಾತು ಆಧುನಿಕ ಸಂದರ್ಭದಲ್ಲಿ ಕಲಾಮಾಧ್ಯಮ ಅನುಸರಿಸಬೇಕಾದ ಮಾರ್ಗವನ್ನು ವಿಷದಪಡಿಸುತ್ತದೆ. ಈ ತತ್ವವನ್ನು ಕಾರಂತರು

ಕಲೆಯನ್ನು ವಿಶ್ಲೇಷಿಸುವ ಪ್ರತಿ ಹಂತದಲ್ಲೂ ಪರಿಪಾಲಿಸಿದ್ದಾರೆ.

ಕಲಾತ್ಮಕತೆ ಇಪ್ಪತ್ತನೆಯ ಶತಮಾನದ ಆದಿಯಿಂದಲೆ ಕರ್ನಾಟಕದಲ್ಲಿ ತನ್ನ ಬಾಹುಗಳನ್ನು ವಿಸ್ತರಿಸಿತು. ಐರೋಪ್ಯ ಶೈಲಿಯ ಕಲಾವಿದ ರವಿವರ್ಮನ ಕಲಾಕೃತಿಗಳಿಂದ ಪ್ರಭಾವಿತರಾದ ಯುವ ಕಲಾವಿದರು ಮುಂಬಯಿ, ಕೋಲ್ಕತ್ತಾದ ಶಾಂತಿನಿಕೇತನಗಳಲ್ಲಿ ಕಲಿತು, ದೇಶಿಯ ಕಲಾಶೈಲಿಯನ್ನು ಮೈಗೂಡಿಸಿಕೊಂಡು ನಾಡಿನಾದ್ಯಂತ ಕಲಾಮೇಳ, ಕಲಾಯಾತ್ರೆ, ಚಿತ್ರಯಾತ್ರೆಗಳಂತಹ ವಿನೂತನ ಕಾರ್ಯಕ್ರಮಗಳು,ಕಲಾ ಗ್ಯಾಲರಿಗಳು, ಕಲಾ ಪ್ರದರ್ಶನಗಳಿಂದ ದೇಶ–ವಿದೇಶಗಳ ಮೂಲ ಕೃತಿಗಳನ್ನು ಕಾಣುವ ಅವಕಾಶ ಲಭಿಸಿತು.ಹಲವು ಕಲಾ ಅಕಾಡೆಮಿಗಳು ಆರಂಭವಾದವು. 1967ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿ, 1995ರಲ್ಲಿ ಶಿಲ್ಪಕಲಾ ಅಕಾಡೆಮಿಗಳು ರಾಜ್ಯವ್ಯಾಪಿ ಕಲಾಪರ ಚಟುವಟಿಕೆಗಳನ್ನು ಪಸರಿಸುತ್ತಾ ಕಲೆಯ ಕುರಿತಾದ ಹೊಸ ಅನ್ವೇಷಣೆಗಳಲ್ಲಿ ತೊಡಗಿದವು. ಜೇಮ್ಸ್ ಬರ್ಗಸ್ ಬಾದಾಮಿಯ ಚಿತ್ರಗಳ ಶೋಧನೆ ನಡೆಸಿದರೆ, ಕ್ಯಾಂಪ್‌ಬೆಲ್ ಬಿಜಾಪುರ ಜಿಲ್ಲಾ ಗ್ಯಾಜೆಟಿಯರನಲ್ಲಿ ಬಾದಾಮಿಯ ಗುಹಾಂತರ ದೇವಾಲಯದ ಶಿಲ್ಪಗಳ ಬಗ್ಗೆ ಸಾಕಷ್ಟು ವಿವರಗಳನ್ನು ಸಂಗ್ರಹಿಸಿದ. ಲೇಪಾಕ್ಷಿ, ತಂಜಾವೂರಿನ ಚಿತ್ರಗಳ ಬಗ್ಗೆ ಜರ್ನಲ್ ಆಫ್ ಓರಿಯಂಟಲ್ ರೀಸರ್ಚ್, ಜರ್ನಲ್ ಆಫ್ ಅಣ್ಣಾಮಲೈ ಯೂನಿವರ್ಸಿಟಿ ಮೊದಲಾದ ನಿಯತಕಾಲಿಕೆಗಳಲ್ಲಿ ವಿಜಯನಗರದ ಚಿತ್ರ ಕಲೆಯನ್ನು ಕುರಿತ ಲೇಖನಗಳು ಪ್ರಕಟವಾದವು. ರಾಷ್ಟ್ರಮಟ್ಟದಲ್ಲಿ ಬೆಳೆಯುತ್ತಿದ್ದ ಯುವ ಕಲಾವಿದರ ಗುಂಪು ಅಕಾಡೆಮಿ ವತಿಯಿಂದ ಹಾಗೂ ಸ್ವತಃ ತಾವೇ ಪ್ರಕಟಿಸಿದ ಹಲವು ಕಲಾ ಪುಸ್ತಕಗಳು, ಕಲಾ ಪತ್ರಿಕೆಗಳು ಚಿತ್ರಕಲೆಯ ಕಾರ್ಯ ಚಟುವಟಿಕೆಗಳ ಮತ್ತು ಚಿತ್ರಕಲೆಯ ಬೆಳವಣಿಗೆಯ ಬಗೆಗಿನ ಮಾಹಿತಿಯನ್ನು ನೀಡಿದವು. ದೇಶ,ವಿದೇಶಗಳಿಂದ ಬಂದು ಕಲಾ ಪ್ರದರ್ಶನ, ಕಲಾ ಶಿಬಿರಗಳನ್ನು ನಡೆಸಿಕೊಡುವ ಕಲಾವಿದರು, ಕರ್ನಾಟಕ ಕಲಾವಿದರೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸ್ವಾಗತಾರ್ಹ ಕೆಲಸ ಮಾಡುತ್ತಿದ್ದಾರೆ.

ಆಧುನಿಕ ಯುಗದಲ್ಲೂ ಸಿನಿಮಾ, ದೂರದರ್ಶನ, ಮೊಬೈಲ್‌ಗಳು ಆವಿಷ್ಕಾರವಾದ ಮೇಲೂ ನೃತ್ಯ, ಸಂಗೀತ, ಚಿತ್ರಗಳಂತಹ ಲಲಿತ ಕಲೆಗಳು ಸಾಕಷ್ಟು ಪ್ರಮಾಣದಲ್ಲಿ ಜನಪ್ರಿಯವಾದವು. ಸಿನಿಮಾಗಳು ಮನರಂಜನೆಯ ಹಿನ್ನೆಲೆಯಲ್ಲಿ ಸಂಗೀತ ಮತ್ತು ನೃತ್ಯಕಲೆಗಳನ್ನು ಪ್ರೋತ್ಸಾಹಿಸಸಿ ಬೆಳೆಸುವ ಕೆಲಸ ಮಾಡಿದರೆ, ಮೊಬೈಲ್‌ಗಳನ್ನು ಮಾತನಾಡುವುದಕ್ಕೆ ಮಾತನಾಡುವುದರ ಜೊತೆಗೆ ಸಂಗೀತವನ್ನು ಕೇಳುವುದಕ್ಕೂ ಬಳಸಲಾಗುತ್ತಿದೆ. ಇನ್ನು ದೂರದರ್ಶನ ಸಹ ಚಿತ್ರ, ಸಂಗೀತ,

ನೃತ್ಯ ಕಾರ್ಯಕ್ರಮಗಳ ತ್ರಿವೇಣಿ ಸಂಗಮವಾಗಿದೆ. ಲಲಿತಕಲೆಗಳನ್ನು ಬೆಳಸಿ ಪೋಷಿಸುವ ಸಲುವಾಗಿ ಚಿತ್ರ ಬಿಡಿಸುವ ಕಲೆಯನ್ನು ಕಲಿಸಿಕೊಡುವುದು ಒಂದಾದರೆ ಚಿತ್ರ ಸ್ಪರ್ಧೆಗಳನ್ನು ಏರ್ಪಡಿಸಿ, ಒಳ್ಳೆಯ ಚಿತ್ರಕಲಾವಿದರಿಗೆ ಬಹುಮಾನ ಪ್ರಕಟಿಸುವುದರ ಮೂಲಕ ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿಯೂ ಅನೇಕ ಕಲಾ ತಂಡಗಳು, ಅಕಾಡೆಮಿಗಳು ಕಾರ್ಯನಿರ್ವಹಿಸುತ್ತಾ ಕಲೆ ಬೆಳವಣಿಗೆ ಹೊಂದುವಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿವೆ.

ಅಡಿ ಟಿಪ್ಪಣಿಗಳು:

1. ವಿವೇಕ ಚಿಂತಾಮಣಿ–ನಿಜಗುಣ ಶಿವಯೋಗಿ, ಪುಟ: 97
2. ಕಲಾತಪಸ್ವಿ ಕೆ. ವೆಂಕಟಪ್ಪ–ಸಾ.ಕೃ.ರಾಮಚಂದ್ರರಾವ್, ಪುಟ: 102
3. ಗಾನಕಲೆ– ಪುಟ: 6
4. ಕಲಾವಿದನ ನೆನಪುಗಳು–ಪಿ.ಆರ್ ತಿಪ್ಪೇರುದ್ರಸ್ವಾಮಿ, ಪುಟ: 197

ಆಕರ ಗ್ರಂಥಗಳು :

1. ಕೃಷ್ಣರಾಯ ಅ.ನ. ಸಂ –ಭಾರತೀಯ ಕಲಾದರ್ಶನ, ಕರ್ನಾಟಕ ಸಂಗೀತ, ನೃತ್ಯ ಅಕಾಡೆಮಿ, ನೃಪತುಂಗ ರಸ್ತೆ ಬೆಂಗಳೂರು.ಮು.1994
2. ತಿಪ್ಪೇರುದ್ರಸ್ವಾಮಿ.ಪಿ.ಆರ್–ಕಲಾವಿದನ ನೆನಪುಗಳು, ತುಳುಕಿನ ವೆಂಕಣ್ಣಯ್ಯ ಗ್ರಂಥಮಾಲೆ 3ನೇ ಹಂತ, ಮೈಸೂರು. ಮು.1998
3. ಮಾಲಿನಿ ಮಲ್ಯ –ಸಂ ಶಿವರಾಮ ವಾಂಗ್ಮಯ ವೃತ್ತಾಂತ,ಎಸ್.ಬಿ.ಎಸ್ ಪಬ್ಲಿಕೇಶನ್, ಬೆಂಗಳೂರು.ಮು–1992
4. ಮೂರ್ತಿ.ಕೆ.ಎಲ್.ಎನ್.–ಕರ್ನಾಟಕ ಕಲೆ ಮತ್ತು ವಾಸ್ತುಶಿಲ್ಪ, ರಂಜಿತಾ ಪ್ರಕಾಶನ.ಮು–1998
5. ರಾಮಚಂದ್ರರಾವ್.ಎಸ್.ಕೆ.–ಕಲಾತಪಸ್ವಿ ವೆಂಕಟಪ್ಪ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು.ಮು.1999
6. ಶ್ರೀಕಂಠಯ್ಯ.ಕೆ –ಭಾರತೀಯಸಂಗೀತ ಕೆಲವು ಚಿಂತನೆಗಳು, ಅಳಿಲು ಸೇವೆ, ಓಬಳಪ್ಪ ಗಾರ್ಡನ್, ಬೆಂಗಳೂರು. ಮು–1968
7. ಸಮಾಜ ಪುಸ್ತಕಾಲಯ –ಸಂ.ವಾತ್ಸಾಯನ ಕಾಮಸೂತ್ರ, ಧಾರವಾಡ, 14ನೇ ಆವೃತ್ತಿ.ಮು–2001
8. ವಿವೇಕರೈ ಬಿ.ವಿ.ಸಂ ಶತಮಾನದ ಕೊನೆಯಲ್ಲಿ ಶಿವರಾಮ ಕಾರಂತ,ಡಾ.ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

***

‘ಇಡಿದಿರು ನನ್ನ ನಿನ್ನ ಸಿಂಹಾಸನದ ಮೇಲೆ’ ಕವಿತೆಯಲ್ಲಿ ಕೌಟುಂಬಿಕ ಮೌಲ್ಯದ ನಿರ್ವಹಣೆಯ ವಿಶ್ಲೇಷಣೆ

1

ಡಾ. ಜಿ. ಬಿ. ಮಹೇಶ್ವರಿ

ಕನ್ನಡ ಸಹಾಯಕ ಪ್ರಾಧ್ಯಾಪಕರು

ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರಂ, ಬೆಂಗಳೂರು

maheshwarigb1990@gmail.com

ಪೀಠಿಕೆ:

ಕೆ.ಎಸ್. ನ ಅವರು ವಿಭಿನ್ನ ಕೌಟುಂಬಿಕ ನೆಲೆಗಟ್ಟಿನಲ್ಲಿ ರಚಿಸಿರುವ ಅನೇಕ ಕವಿತೆಗಳ ಮೂಲಕವೇ ಜನಮಾನಸರ ಹೃದಯದಲ್ಲಿ ಸ್ಥಾನ ಪಡೆದಿರುವ, ಅವರ ‘ಇಡಿದಿರು ನನ್ನ ನಿನ್ನ ಸಿಂಹಾಸನದ ಮೇಲೆ’ ಕವನವು ‘ಆಯ್ದ ಕವನಗಳು’ ಸಂಕಲನದಲ್ಲಿ ಪ್ರಕಟವಾಗಿರುವ ಕವಿತೆ. ಆದ್ಯಾಗ್ಯೂ ಈ ಕವಿತೆಯ ಬಗ್ಗೆ ಅನೇಕ ಗೊಂದಲಗಳು ಓದುಗರಲ್ಲಿ ಮೂಡಿರುವುದು ಗಮನಾರ್ಹ.

ಕವಿತೆಗೆ ನಿರ್ದಿಷ್ಟವಾದ ಚೌಕಟ್ಟುಗಳಿರುವುದಿಲ್ಲ ಚೌಕಟ್ಟುಗಳನ್ನು ಮೀರಿ ವಿಭಿನ್ನ ಅರ್ಥದ ಮೂಲಕ ಗ್ರಹಿಸುವುದು ಓದುಗರ ಬುದ್ಧಿಶಕ್ತಿಗೆ ಸಂಬಂಧಿಸಿದ ವಿಷಯವಾಗಿದೆ ಪ್ರಸ್ತುತ ಬಿಡದಿರು ಈ ಕವಿತೆಯು ಮುಖ್ಯವಾಗಿ ಮಾತೃ ಪ್ರೇಮದ ಹಿನ್ನೆಲೆ ಆಧ್ಯಾತ್ಮಿಕ ಮತ್ತು ಕೌಟುಂಬಿಕ ಸೆಲೆ ಸಾಮಾಜಿಕ ನೆಲೆ ಹೀಗೆ ವಿಭಿನ್ನ ಹಿನ್ನೆಲೆಯಿಂದ ಅರ್ಥ

ವಿಸ್ತಾರತೆಯನ್ನು ಪಡೆದುಕೊಂಡ ಕವಿತೆಯಾಗಿದೆ.

ಕೆ. ಎಸ್. ನರಸಿಂಹಸ್ವಾಮಿ ಕನ್ನಡಿಗರ ಪ್ರೇಮಕವಿ, ಕನ್ನಡಿಗರ ಅತ್ಯಂತ ಪ್ರೀತಿಯ ಕವನಸಂಕಲನ 'ಮೈಸೂರು ಮಲ್ಲಿಗೆ' ಕೆ.ಎಸ್.ನರಸಿಂಹಸ್ವಾಮಿಯವರ ಮೊದಲ ಕವನ ಸಂಕಲನವಾಗಿದೆ. ಇದು ಮನೆ ಮನೆಯ ಮಾತಾಗಿದೆ. ಕೆ. ಎಸ್. ನರಸಿಂಹಸ್ವಾಮಿ ಅವರನ್ನು ಕುರಿತು ಕವಿ ಮತ್ತು ವಿಮರ್ಶಕ ಡಾ. ಎಚ್. ಎಸ್. ವೆಂಕಟೇಶಮೂರ್ತಿ ಅವರು ಕೆಎಸ್ನ ಬಗ್ಗೆ ಬರೆಯುತ್ತ "ನವೋದಯದ ಕಾವ್ಯ ಸಂದರ್ಭದಲ್ಲಿ ಹೆಸರು ಮಾಡಿದ್ದ ಈ ಕವಿ ತಮ್ಮ ಸುಕುಮಾರ ಜಗತ್ತಿನಿಂದ, ನಿಷ್ಠುರವಾದ ಬದುಕಿನ ಸಂದರ್ಭಕ್ಕೆ ಹೊರಳಿದ್ದು 'ಶಿಲಾಲತೆ'ಯಲ್ಲಿ. ಆದ್ದರಿಂದ ಸಂಗ್ರಹಕ್ಕೆ ಒಂದು ಐತಿಹಾಸಿಕ ಮಹತ್ವವಿದೆ" –ಎಂದು ದಾಖಲಿಸಿದ್ದಾರೆ. ಜೊತೆಗೆ ಮೈಸೂರು ಮಲ್ಲಿಗೆಯ ಕವಿತೆಯ ಭಾಷೆ, ವಸ್ತು, ಲಯಗಳ ಮೇಲೆ ಇಂಗ್ಲಿಷ್ ಗೀತೆಗಳ ಪ್ರಭಾವವನ್ನು ಗುರುತಿಸಬಹುದು ಎಂದು ಡಾ. ಹೆಚ್.ಎಸ್.ವಿ. ಗುರ್ತಿಸಿದ್ದಾರೆ. ಕೆ. ಎಸ್. ನ ಅವರ 'ಇಡಿದಿರು ನನ್ನ ನಿನ್ನ ಸಿಂಹಾಸನದ ಮೇಲೆ' ಕವಿತೆಯು ವೈವಿಧ್ಯಮಯ ಚಿಂತನೆಗೆ ದಾರಿ ಮಾಡಿಕೊಡುವ ಕವಿತೆಯಾಗಿದೆ.

ಉದ್ದೇಶ:

ಬಾಲ್ಯದಿಂದಲೂ ತಂದೆಯ ಪ್ರೀತಿಯಿಂದ ವಂಚಿತನಾಗಿ, ಮಾತೃ ಹಾರೈಕೆಯಲ್ಲಿ ಬೆಳೆದು ದೊಡ್ಡವನಾದ ಮಗನು, ಆ ನಂತರದಲ್ಲಿ ಬರುವ ತಂದೆಯನ್ನು ನಿರಾಕರಿಸುವ ವಸ್ತು ಈ ಕವಿತೆಯ ಮುಖ್ಯ ಅಂಶವಾಗಿದೆ. "ತಂದೆ" ಮಕ್ಕಳಿಗೆ ಧೈರ್ಯ ತುಂಬುವ ಒಂದು ಶಕ್ತಿ. ಅಂತಹ ತಂದೆಗೆ ಮಗನನ್ನು ದೂರ ತಳ್ಳಿದರೆ ಅದು ಆತನ ಪೌರುಷಕ್ಕೆ ಒಂದು ಕಳಂಕದಂತೆ. ತಂದೆ ಇಲ್ಲದ ಮಕ್ಕಳ ಬದುಕು ಅನೇಕ ಸವಾಲಿನಿಂದ ಕೂಡಿರುತ್ತದೆ. ತಂದೆ ಇದ್ದು ಇಲ್ಲದ ಹಾಗೆ ಬೆಳೆಯುವ ಮಕ್ಕಳ ಬದುಕು ಅನೇಕ ಸವಾಲುಗಳ ಜೊತೆಯಲ್ಲಿ ಸಮಾಜದ ಪ್ರಶ್ನೆಗಳಿಗೂ ಎದೆಯೊಡ್ಡಬೇಕಾಗಿರುತ್ತದೆ. ಆ ನಿಟ್ಟಿನಲ್ಲಿ ಈ ಪ್ರಸ್ತುತ ಕವಿತೆಯನ್ನು ಅಧ್ಯಯನ ಮಾಡುವ ಉದ್ದೇಶವಾಗಿದೆ.

ವ್ಯಾಪ್ತಿ:

ಪ್ರಸ್ತುತ ಲೇಖನದಲ್ಲಿ ಕೆ.ಎಸ್. ನರಸಿಂಹಸ್ವಾಮಿ ಅವರ 'ಇಡಿದಿರು ನನ್ನ ನಿನ್ನ ಸಿಂಹಾಸನದ ಮೇಲೆ' ಕವಿತೆಯನ್ನು ಪ್ರಾಥಮಿಕ ಆಕರವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಕವಿತೆ ಮೂಲಕ ಸಾಮಾಜಿಕ, ಕೌಟುಂಬಿಕ ನೆಲೆಯ ಆಧಾರದ ಮೇಲೆ ಪ್ರಸ್ತುತ ಸಂದರ್ಭದ ಸಮಾಜದ ಸವಾಲುಗಳ ಸ್ವರೂಪವನ್ನು

ಅಧ್ಯಯನ ಮಾಡುವುದಾಗಿದೆ.

ವಿಷಯ ವಿಶ್ಲೇಷಣೆ:

ತಂದೆ ಇಲ್ಲದ ಮಗನನ್ನು ಸಾಕುವ ತಾಯಿಯ ಕಷ್ಟಗಳನ್ನು ಸ್ವತಃ ಮಗನು ನೋಡಿದ್ದಾನೆ. ಹಾಗೆಯೇ, ತಂದೆ ಇಂದು "ಸಿಂಹಾಸನದ ಮೇಲೆ ಕೂರಿಸುವೆ, ಎಲ್ಲಾ ಅಧಿಕಾರಗಳನ್ನು ನಿನಗೆ ಹಸ್ತಾಂತರಿಸುತ್ತೇನೆ" ಎಂದು ಮಗನ ಮುಂದೆ ಬಂದು "ಮಗು ಮಗು.." ಎಂದು ಪ್ರೀತಿಯ ಮಾತುಗಳಿಂದ ಕರೆದರೂ ಮಗನು ತಂದೆಯ ಪ್ರೀತಿಯನ್ನು ನಿರಾಕರಿಸುತ್ತಿದ್ದಾನೆ. "ಕೊರಳಿಗೆ ನಕ್ಷತ್ರ ಮಾಲೆ, ತಲೆಗೆ ಚಂದ್ರ ಕಿರೀಟ, ಕೂರಿಸುವ ಸಿಂಹಾಸನ" ಇವೆಲ್ಲವೂ ಅಧಿಕಾರದ, ಜವಾಬ್ದಾರಿಗಳ ನಿರ್ವಹಣೆಯ ಸಂಕೇತಗಳಾಗಿವೆ. ಇವೆಲ್ಲವೂ ಮಗನ ಪಾಲಿಗೆ ಎಂದೆಂದಿಗೂ ಭಾರವಾದ ವಸ್ತುಗಳೇ ಆಗಿವೆ. ಆದರೆ ಕೆ. ಎಸ್ ನ ಕವಿತೆಯಲ್ಲಿ ಚಿತ್ರಿಸಿರುವ "ಮಗ"ನು ಸ್ವಾಭಿಮಾನದ ಸಂಕೇತವಾಗಿದ್ದಾನೆ. ಇದುವರೆಗೂ ತಂದೆಯ ನೆರವಿಲ್ಲದೆ "ಬೆಳೆದ ಮಗ ಹೊರಲಿ ನೊಗ" ಎನ್ನುವುದನ್ನು ಒಪ್ಪಿಕೊಳ್ಳಲು ಸಿದ್ಧನಿಲ್ಲ. ಅಂತಹ ಸ್ವಾಭಿಮಾನಿಯ ಮಗ ತಂದೆಗೆ ಅನೇಕ ವಿಮರ್ಶಾತ್ಮಕ ಪ್ರಶ್ನೆಗಳನ್ನು ಮುಂದಿಡುತ್ತಾನೆ. ತಂದೆಯಿಂದ ನಿರಾಕರಣೆಗೆ ಒಳಗಾದ ಮಗನ ವೇದನೆಯನ್ನು ಆತ ತಂದೆಯ ಮುಂದಿಡುವ ಪ್ರಶ್ನೆಗಳ ಮೂಲಕ ಅರ್ಥಮಾಡಿಕೊಳ್ಳಬಹುದು. ನೀನು ತೊಡಿಸುವ ಚಂದ್ರ ಕಿರೀಟವಾಗಲೇ ನಕ್ಷತ್ರ ಸಿಂಹಾಸನವಾಗಲಿ ನೀನು ನೀಡುವ ದೊರೆತನದ ಪಟ್ಟ ನನಗೆ ಬೇಡವೇ ಬೇಡ. ಬಾಲ್ಯದಲ್ಲಿ ನಿನ್ನ ಅವಶ್ಯಕತೆ ಬಹಳಷ್ಟಿರುತ್ತದೆ. ಬೆಳದು ದೊಡ್ಡವನಾದ ಮೇಲೆ ಈಗ ನೀನು ನನ್ನನ್ನು 'ಮಗು' ಎಂದು ಕೂಗಬೇಡ. ಆ ನಿನ್ನ ಕೂಗು ನನ್ನ ಶಕ್ತಿಯನ್ನು ಕುಗ್ಗಿಸುತ್ತದೆ ಎನ್ನುತ್ತಾನೆ ಮಗ. ತಂದೆ ಎಂದರೆ ಶಕ್ತಿ ಆದರೆ ಇಲ್ಲಿರುವ ಮಗನಿಗೆ ತಂದೆ ಶಕ್ತಿಯಾಗಿ ಉಳಿದಿಲ್ಲ. ಆತನೆಂದರೆ ತನ್ನ ಬಲವನ್ನು ಅಡಗಿಸುವ, ದರ್ಬಲ ಸ್ಥಿತಿ ಎನ್ನುವುದು ಮಗನ ವಾದವಾಗಿದೆ.

"ಕಾಣಲಿ ಬಿಡು ನಿನ್ನ ಪೌರುಷ" ಎನ್ನುವಲ್ಲಿ ಪೌರುಷ ಎನ್ನುವುದು ಕೇವಲ 'ಗಂಡಸ್ತನ'ದ ಸಂಕೇತವಲ್ಲ. ಅದು ಒಂದು ಹೆಣ್ಣನ್ನು ನಡೆಸಿಕೊಳ್ಳುವ ರೀತಿಯಲ್ಲಿ ಪ್ರಕಟವಾಗುವ ಮೌಲ್ಯವಾಗಿದೆ. ತಂದೆಯಾಗಿ, ಗಂಡನಾಗಿ, ಅಣ್ಣನಾಗಿ, ತಮ್ಮನಾಗಿ ಎಲ್ಲಕ್ಕಿಂತ ಮಿಗಿಲಾಗಿ ಒಬ್ಬ ಮಾನವನಾಗಿ, ಮಾನವೀಯ ಮೌಲ್ಯಗಳ ನಿರ್ವಹಣೆಯಲ್ಲಿ ಸಾಬೀತಾಗುವಂತದ್ದು. ಇಂದಿಗೂ ಪುರುಷ ಪ್ರಧಾನ ಸಮಾಜದ ವ್ಯವಸ್ಥೆಯಲ್ಲಿ ಗಂಡಸ್ತನದ ನಿಜವಾದ ಅರ್ಥ ಎಷ್ಟೋ ಪುರುಷರಿಗೆ ಅರ್ಥವೇ ಆಗಿರುವುದಿಲ್ಲ. ಹೆಣ್ಣನ್ನು ಶೋಷಿಸುವಲ್ಲಿ, ಗಂಡಗಸ್ಸಿಗೆ ಮಾತ್ರ ಸೀಮಿತವಾದ ಕೆಲಸಗಳನ್ನು

ನಿರ್ವಹಿಸುವಲ್ಲಿ, ಹೊರ ಸಮಾಜದಲ್ಲಿ ದುಡಿಯುವಲ್ಲಿ ಗಂಡು ಮಾತ್ರ ಮಾನಿನಿಯ. ಬಾಯಾರಿದವರಿಗೆ ಒಂದು ಲೋಟ ನೀರನ್ನು ತುಂಬಿಸಿ ಕೊಡುವುದು ಗಂಡಸಿನ ಕೆಲಸವಲ್ಲ. ಅದೇನಿದ್ದರೂ ಹೆಣ್ಣಿಗೆ ಮಾತ್ರ ಸೀಮಿತವಾಗಿರುವ ಮನೆ ಕೆಲಸ. ಮಕ್ಕಳನ್ನು ಸಾಕುವುದರಲ್ಲಿ ತಾಯಿಯಷ್ಟೇ ಜವಾಬ್ದಾರಿ ತಂದೆಗೂ ಇರುತ್ತದೆ. ಆದರೆ ಅದರಿಂದ ಇಲ್ಲಿನ ತಂದೆ ಪಲಾಯನ ಮಾಡಿರುತ್ತಾನೆ. ಎಂದೋ, ಯಾವುದೋ ಮೋಹದ ಪಾತ್ರಕ್ಕೆ ಸಿಲುಕಿ, ತನ್ನ ತಾಯಿಗೆ ನನ್ನಂತಹ ಮಗ ಹುಟ್ಟಿ ಯಾವ ಸುಖವೂ ಇರಲಿಲ್ಲ. ಇದಕ್ಕೆಲ್ಲ ಕಾರಣ ತನ್ನ ಜನ್ಮದಾತ ಎನ್ನುವ ನೋವು ಮಗನಲ್ಲಿ ಆಳವಾಗಿ ಬೇರು ಬಿಟ್ಟಿದೆ ಗಂಡಿಗೆ ಹಲವು ಹೆಂಡತಿಯರಿರಬಹುದು ಹೆಣ್ಣು ಗಂಡಿಗೆ ಭೋಗದ ವಸ್ತುವಾಗಿರಬಹುದು. ಆದರೆ ಹೆಣ್ಣಿಗೆ ಇದು ಯಾವುದು ಮೋಹದ ಸಂಕೇತವಾಗಲೀ ಅಥವಾ ಭೋಗದ ವಿಚಾರಗಳಾಗಿರುವುದಿಲ್ಲ. ಅದು ಆಕೆಯ ಬದುಕಿನ ಪ್ರಶ್ನೆಯಾಗಿರುತ್ತದೆ. ಗಂಡನ ಸ್ಥಾನಕ್ಕೆ ಹೆಣ್ಣಿಗೆ ಪರ್ಯಾಯಗಳು ಬೇಕಾಗಿರುವುದಿಲ್ಲ. ಗಂಡ ಬಿಟ್ಟ ಹೆಣ್ಣು ಮಗನನ್ನು ಸಾಕುವುದು ಎಷ್ಟು ಕಠಿಣ ಎನ್ನುವುದನ್ನು ಆ ತಾಯಿಯ ಮಗನು ಕಣ್ಣಾರೆ ಅನುಭವಿಸಿದ್ದಾನೆ. ಆ ಕಾರಣಕ್ಕಾಗಿ ಆತ ತನ್ನ ತಂದೆಯನ್ನು ಈಗ ಒಪ್ಪಿಕೊಳ್ಳಲು ಸಿದ್ಧನಿಲ್ಲ. ಇಂದು ನಿನಗೆ ಬೇಡವಾದ ದೊರೆತನವನ್ನು ನನಗೆ ವಹಿಸದಿರು, ತಂದೆಯಿಂದ ತಿರಸ್ಕೃತನಾಗಿ, ದೂರದಲ್ಲಿ ಬೆಳೆದು ನಿಂತ ನನ್ನನ್ನು ನೋಡಿ ಸಮಾಜಕ್ಕೆ ನಿನ್ನ ಪೌರುಷ ಏನೆಂದು ತಿಳಿಯಲಿ ಎನ್ನುವ ಮಗನ ಮಾತಿನಲ್ಲಿ ತಂದೆಯ ಅಸ್ತಿತ್ವ ಮಕ್ಕಳಿಗೆ ಎಷ್ಟು ಮುಖ್ಯ ಎನ್ನುದು ತಿಳಿಯುತ್ತದೆ. ಹಾಗಾಗಿಯೇ ತಂದೆಯ ಪ್ರೀತಿ ವಾತ್ಸಲ್ಯ ಮಾತುಗಳು ಮಗನನ್ನು ಇಂದು ಹೇಡಿಯಾಗಿಸುತ್ತವೆ ಎನ್ನುವ ಭಯ ಕಾಡುತ್ತಿದೆ. ನಿನ್ನ ಪ್ರೀತಿ ನನ್ನ ಪಾಲಿಗೆ ವಜ್ರದಂತೆ ಕಠಿಣ ಎನ್ನುವ ಮಗನಿಗೆ ತಂದೆಯ ಮಮಕಾರ ಮೃದುವಾಗಲು ಸಾಧ್ಯವೇ ಇಲ್ಲ. ಎಷ್ಟೋ ಕಾಲದ ನಂತರ ಮಗನ ಮೇಲೆ ಇಷ್ಟು ಅಭಿಮಾನ ಬಾಲ್ಯದಲ್ಲಿ ಬೇಡವಾದ ಮಗ ಈಗೇಕೆ ನಿನಗೆ ಬೇಕು ಎನ್ನುವಲ್ಲಿ ಮಗನಿಗೆ ತಂದೆಯ ಮೇಲೆ ಸಂಶಯವಿದೆ. ಇದು ಅಪ್ಪನ ಇನ್ನೊಂದು ಬಗೆಯ ಸ್ವಾರ್ಥ ಎನ್ನುವುದು ಮಗನ ಅಭಿಪ್ರಾಯವಾಗಿದೆ. ಇದು ನಿನ್ನ ಇನ್ನೊಂದು ಬಗ್ಗೆ ಸ್ವಾರ್ಥ ನಿನ್ನ ರೀತಿಯೇ ನನಗೆ ಅರ್ಥವಾಗುವುದಿಲ್ಲ ಎಂದು ತಂದೆಗೆ ಪ್ರಶ್ನೆಗಳನ್ನು ಕೇಳುತ್ತಾನೆ.

"ನನ್ನ ತಾಯಿ ಹೇಳಿದಳು. ನೀನು ಆಕೆಯನ್ನು ಮೋಹದಿಂದ ಸೋಕಿದ ದಿನ ನನ್ನ ಜನನವಾಯಿತು ಎಂದು" ಆದರೆ ಮಗ ಹುಟ್ಟಿದನೆಂದು ತಾಯಿಗೆ ಯಾವ ಸಂಭ್ರಮವೂ ಇರಲಿಲ್ಲ ಏಕೆಂದರೆ ಅವಳನ್ನು ಪ್ರೀತಿಸಿದ ವ್ಯಕ್ತಿ ಆಕೆಯ

ಜೊತೆಯಲ್ಲಿ ಇರಲೇ ಇಲ್ಲ. ಮಗ ಹುಟ್ಟಿದ ಮೇಲೆ ತಾಯಿ ಹಲವಾರು ಕಷ್ಟಗಳನ್ನು ಎದುರಿಸಿದಳು. ಸಮಾಜದಿಂದ ಆಕೆಯ ವಿಷವನ್ನೇ ಉಂಡರು ಮಗನಿಗೆ ಮಾತ್ರ ಅಮೃತವನ್ನೇ ಕೊಟ್ಟು ಸಾಕಿ ಸಲುಹಿದಳು. ತಾಯಿಪ್ರೀತಿಗಿರುವ ಶಕ್ತಿಯೇ ಅದು. ಇಡೀ ಪ್ರಕೃತಿಯಲ್ಲಿ, ಬೀಳುವ ಮಳೆಯಲ್ಲಿ ಹಾಡಿ, ಮಗನನ್ನು ತಾಯಿ ನಲಿಸಿದಳು. ಬೆಟ್ಟ ಗುಡ್ಡ ಮುಗಿಲುಗಳನ್ನು ತೋರಿಸಿ ಆಟವಾಡಿಸಿದಾಳು, ಸಂತೋಷಪಡಿಸಿದಳು, ಅಂತಹ ತಾಯಿಯ ಮಗನು ನಾನು. ಅವಳ ಕಷ್ಟಗಳಿಗೆ ಕಾರಣನಾದ ತಂದೆ ಮಗನಿಗೆ ಬೇಡವಾಗಿದ್ದಾನೆ. ತನ್ನ ಒಡಲಿನಲ್ಲಿ ಬೆಂಕಿಯ ಜ್ವಾಲೆ ಸುಡುತ್ತಿದ್ದರು ಮಗನೊಟ್ಟಿಗೆ ಶಾಂತವಾಗಿ ವರ್ತಿಸಿದ ಅಗ್ನಿಕುವರಿ ತನ್ನ ತಾಯಿ ಎನ್ನುವಲ್ಲಿ ಪುರುಷನಿಂದ ವಂಚನೆಗೊಳಗಾದ ಹೆಣ್ಣು ಅಗ್ನಿಕುಂಡದಲ್ಲಿ ಹೇಗೆ ಕುದಿಯುತ್ತಿರುತ್ತಾಳೆ ಎನ್ನುವುದು ಎಲ್ಲರಿಗೂ ಅರ್ಥವಾಗಬೇಕಾದ ಗಂಭೀರ ವಿಷಯ. ಒಮ್ಮೆ ನಿನ್ನನ್ನು ನೋಡಿದ ನನ್ನ ತಾಯಿ ನನಗೆ ಹೇಳಿದನಂತೆ “ಪುಟಾಣಿ ಅವರನ್ನು ಕೂಗು” ತಾಯಿ ಮಾತು ಕೇಳಿದ ನಾನು ಅಂಬೆಗಾಲಿಡುತ್ತಾ, ನಿನ್ನ ಮುಂದೆ ಬಂದು ಕೂಗಿ, ಕೈಬಿಸಿ ಕರೆದನಂತೆ ಆದರೆ ನೀನು ನನ್ನನ್ನು ನೋಡಿದ ಹಾಗೆ ನನ್ನ ಧ್ವನಿಯನ್ನು ಕೇಳಿಸಿಕೊಂಡು ಕೇಳಿಸಿಕೊಳ್ಳದ ಹಾಗೆ ಸೊಕ್ಕಿನಿಂದ ಮುನ್ನಡೆದೆಯಂತೆ. ಅದನ್ನು ನೋಡಿದ ನನ್ನ ತಾಯಿಯ ಹೃದಯ ಬಲು ನೊಂದು ಎಂತಹ ಜನರಿವರು ಎಂದುಕೊಂಡಳು. ತಾಯಿಯೇ ದೇವರು ಎಂದು ತಿಳಿದು ಆಕೆಯ ಮಮತೆಯ ಮಡಿಲಿನಲ್ಲಿ ಬೆಳೆದ ಮಗನು ಕೇವಲ ತಾಯಿಯ ಪ್ರೀತಿಯ ಸವಿಯನ್ನೇ ನಾನು ಕಂಡಿರುವುದು. ತಂದೆಯ ಪ್ರೀತಿಯಿಂದ ವಂಚಿತನಾದ ಮಗ. ತಂದೆಯನ್ನು ಕಾಣದ ಮಗ, ತಾಯಿ ಪ್ರೀತಿಯ ವಿಶಾಲತೆಯನ್ನು ತಿಳಿದವನು. ತಂದೆ ಇಲ್ಲದ ಮಗನನ್ನು ಬೆಳೆಸುವುದು ಒಬ್ಬ ತಾಯಿಗೆ ಎಷ್ಟು ಕಷ್ಟ ಎನ್ನುವ ನೋವನ್ನು ಅನುಭಿಸಿದ ಮಗ. ಬೆಳೆದು ದೊಡ್ಡವನಾದ ಮೇಲೆ ತಂದೆಗೆ ಮಗ ಬೇಕಾಗಿರಬಹುದು ಆದರೆ ತನ್ನ ತಾಯಿಗೆ ನೋವನ್ನು ನೀಡಿದ ನೀನು ನನಗೆ ಎಂದೆಂದಿಗೂ ಬೇಡ.

ತಂದೆಯ ಅಂಗಿಲ್ಲದೆಯೇ ಬಾಳುವುದನ್ನು ಕಲಿಯಬೇಕೆನ್ನುವುದು ಮಗನ ಹಠ. ತಂದೆಯ ಮೇಲಿನ ದ್ವೇಷವೇ ಮಗನಿಗೆ ಬದುಕುವ ಛಲವಾಗಿ ಪರಿಣಮಿಸಿದೆ. ಹಾಗೇನಾದರು ಒಳಿತನ್ನು ಬಯಸುವವನಾದರೆ, ದೂರದಿಂದಲೇ ನೀನು ಮಗನನ್ನು ಹರಸು, ಮಗನನ್ನು ಕಾಡುವ ತಂದೆ ನೀನಾಗು ಎನ್ನುವುದು ಮಗನ ಹೃದಯದಾಳದ ನೋವಾಗಿ ಕವಿತೆಯಲ್ಲಿ ವ್ಯಕ್ತವಾಗಿದೆ. ನಾನು ಎಂದೆಂದಿಗೂ ದ್ವೇಷಿಸುವ ‘ಹಗೆ’ಯಾಗು, ಬಂಡೆಯ ಮೇಲೆ ನನ್ನ ನೆತ್ತರನ್ನು ಹರಿಸು, ನಿನ್ನ ರಕ್ತದಲ್ಲಿ ನನ್ನ ಹೆಸರು ಕಾಣಲಿ,

ಆಗಲಾದರೂ ತನ್ನ ತಾಯಿಗೆ ಉಂಟಾಗಿರುವ ನೋವಿನ ಪ್ರಮಾಣ ಕಡಿಮೆಯಾಗಲಿ. ಮಣ್ಣಿನಿಂದಲೇ ಬಂದಿರುವ ದೇಹ ಕೊನೆಗೆ ಮಣ್ಣಿಗೆ ಸೇರುತ್ತದೆ ಜನನ ಮತ್ತು ಮರಣಗಳ ನಡುವೆ ರಕ್ಷಿಸುವುದು ತಾಯಿಯ ಪ್ರೀತಿ ಮಾತ್ರ ಅವಳ ರಕ್ಷಣೆ, ಅವಳ ಅಕ್ಕರೆ ನಮ್ಮನ್ನು ಕಾಪಾಡುವುದು. ಮಗನನ್ನು ಹರಸಿ ಬಂದಿರುವ ನಿನ್ನ ಆಸೆ ಎಂದೆಂದಿಗೂ ಈಡೇರುವುದಿಲ್ಲ. ನನ್ನ ಮೇಲಿನ ನಿನ್ನ ನಂಬಿಕೆಯನ್ನು ಕೈಬಿಡುವುದು ವಾಸಿ. ಮುಪ್ಪಿರದ ಸಾವಿರದ ನಿನ್ನ ದೊರೆತನಕ್ಕಾಗಿ ನಾನು ಎಂದಿಗೂ ಆಸೆ ಪಟ್ಟಿಲ್ಲ ಬೆಳೆದ ಮಗ ಹೊರಲಿನೋಗ ಎಂಬುದು ನಿನ್ನ ಭ್ರಮೆ ಹಾಗಾಗಿ ನೀನು ನನ್ನನ್ನು ನಿನ್ನ ಸಿಂಹಾಸನದ ಮೇಲೆ ಕೂರಿಸದಿರು ಎಂದು ತಂದೆಗೆ ಮಗನು ಹೇಳುತ್ತಾನೆ.

ಉಪಸಂಹಾರ:

ಮಕ್ಕಳ ಪಾಲನೆ ಮತ್ತು ಪೋಷಣೆಯಲ್ಲಿ ತಂದೆ ಮತ್ತು ತಾಯಿಯ ಪಾತ್ರ ಸಮಾನವಾಗಿರುತ್ತದೆ. ತಂದೆಯ ನೆರಳಲ್ಲಿ ಬೆಳೆಯದ ಮಕ್ಕಳ ನೋವಿನ ಒಟ್ಟಾರೆ ಚಿತ್ರಣವನ್ನು ಕಟ್ಟಿಕೊಡುವಲ್ಲಿ ಈ ಕವಿತೆಯು ನ್ಯಾಯ ಒದಗಿಸಿದೆ. ತಾಯಿಯ ಆಸರೆಯಲ್ಲಿ ಬೆಳೆಯುವ ಮಗ ತನ್ನ ತಂದೆಯನ್ನು ನಿರಂತರವಾಗಿ ನಿರಾಕರಿಸುವಲ್ಲಿಯೇ ತನ್ನ ಬದುಕನ್ನು ಗಟ್ಟಿಗೊಳಿಸಿಕೊಳ್ಳುವಿಕೆ ಪ್ರಸ್ತುತ ಗಮನಾರ್ಹವಾದದ್ದಾಗಿದೆ.

ಪರಾಮರ್ಶನ ಗ್ರಂಥಗಳು:

1. ಕೆ. ಎಸ್. ನರಸಿಂಹಸ್ವಾಮಿ., ಆಯ್ದ ಕವನಗಳು., ಪ್ರಥಮ ಮುದ್ರಣ., ಕಾವ್ಯಾಲಯ, ಮೈಸೂರು.
2. https://www.sallapa.com/2021/01/blog-post_810.html
3. ವಿಕಿಪೀಡಿಯಾ

***

ಕರಾವಳಿಯ ಮೊಗವೀರರು ಮತ್ತು ಗುರುಪರಂಪರೆ
(ಸಮುದಾಯವೊಂದರ ನಂಬಿಕೆ – ಆಚರಣೆಗಳ ಸಾಂಸ್ಕೃತಿಕ ವಿಶ್ಲೇಷಣೆ)

1

ರಾಮು
ಸಂಶೋಧನಾ ವಿದ್ಯಾರ್ಥಿ
ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾಲಯ.
ಮಂಗಳೂರು.

ಭಾರತ ಬಹು ಸಂಸ್ಕೃತಿಕಯ ದೇಶ. ಇಲ್ಲಿ ಅಸಂಖ್ಯಾತ ಬುಡಕಟ್ಟುಗಳೂ, ಅಲೆಮಾರಿ ಜನಾಂಗಗಳು, ಆದಿವಾಸಿಗಳು, ಅನೇಕ ಜಾತಿ–ಸಮುದಾಯಗಳು ತಮ್ಮ ವಿಭಿನ್ನ ಭಾಷೆ ಸಂಸ್ಕೃತಿಯೊಂದಿಗೆ ಪ್ರಾಕೃತಿಕ ವೈಲಕ್ಷಣಗಳನ್ನು ಬದುಕಿನ ಜೀವನಾಡಿಯಾಗಿಸಿಕೊಂಡು ಬಾಳುತ್ತಿವೆ. ಇವೆಲ್ಲ ಸಮುದಾಯಗಳು, ಜನಾಂಗಗಳು ಅನೇಕ ಪ್ರಧಾನ ಸಂಸ್ಕೃತಿಗಳ ನಡುವೆಯೂ ತಮ್ಮ ಪ್ರತ್ಯೇಕತೆಯನ್ನು ಕಾಯ್ದುಕೊಂಡು ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವುದು ಗಮನಾರ್ಹ. ಕರ್ನಾಟಕದ ದಕ್ಷಿಣ ಭಾಗದಲ್ಲಿನ ಅರಬ್ಬಿ ಸಮುದ್ರದ ತೀರ ಪ್ರದೇಶವಾದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ (ಪ್ರಸ್ತುತ ವಿಭಜಿತ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು) ಪ್ರಾಚೀನ ಕಾಲದಲ್ಲಿ ವಿಸ್ತಾರವಾದ ಭೂಪ್ರದೇಶದ ವ್ಯಾಪ್ತಿ ಹೊಂದಿರುವ 'ತುಳುನಾಡು' ಎಂದೇ ಪ್ರಖ್ಯಾತಿ ಪಡೆದಿತ್ತು. ಇದರ ವಿಸ್ತಾರ

ಚಂದ್ರಗಿರಿ ನದಿಯಿಂದ ಪ್ರಾರಂಭವಾಗಿ ಉತ್ತರಾಭಿಮುಖವಾಗಿ ಈಗಿನ ಉತ್ತರ ಕನ್ನಡ ಜಿಲ್ಲೆಯ ಕೆಲವು ಭಾಗಗಳನ್ನು ಒಳಗೊಂಡಿತ್ತು. ಪೂರ್ವಾಭಿಮುಖವಾಗಿ ಪಶ್ಚಿಮ ಘಟ್ಟದವರೆಗೂ ಹಬ್ಬಿತು. ಇಂತಹ ತುಳು ನಾಡು ಜನಪದ ಕಲೆಗಳ ತವರೂರು ಎಂದೇ ಖ್ಯಾತಿ ಪಡೆದಿತ್ತು. ಈ ನಾಡು ಅನೇಕ ರಾಜಕೀಯ ದಾಳಿಗಳನ್ನು, ಸಾಂಸ್ಕೃತಿಕ ದಾಳಿಗಳನ್ನು ಎದುರಿಸಿದ್ದರೂ ತನ್ನ ಮೂಲಭೂತ ಸಂಸ್ಕೃತಿಯನ್ನು ಪಟ್ಟು ಹಿಡಿದು ಉಳಿಸಿಕೊಂಡು ಬಂದಿದೆ. ಈ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಅರ್ಥಾತ್ ತುಳುನಾಡು ಹಲವಾರು ಸಮುದಾಯಗಳ ನಿವಾಸಕ್ಕೆ ಆಶ್ರಯದಾತವಾಗಿದೆ. ಇಂತಹ ಹಲವು ಜನಾಂಗಗಳಲ್ಲಿ ಮೊಗವೀರ ಜನಸಮುದಾಯವು ಒಂದು. ಇವರ ಕುಲಕಸುಬು ಮೀನುಗಾರಿಕೆಯಾಗಿದ್ದು ತುಳು ಮತ್ತು ಕನ್ನಡ ಎರಡನ್ನೂ ಇವರು ಮಾತೃ ಭಾಷೆಯಾಗಿ ಮಾತನಾಡುತ್ತಾರೆ. ಈ ಸಮುದಾಯ ಯಕ್ಷಗಾನ, ಕುಸ್ತಿಯಂತಹ ಕಲೆಯನ್ನ ತಮ್ಮ ಪ್ರೌವೃತ್ತಿಯಾಗಿಸಿಕೊಂಡು ಸಮಾಜದ ಇತರೆ ಸಮುದಯದವರೊಂದಿಗೆ ಹಾಗೂ ಅನ್ಯ ಭಾಷಿಕರೊಂದಿಗೆ, ಅನ್ಯ ಧರ್ಮೀಯರೊಂದಿಗೆ ಸ್ನೇಹ, ಸೌಹಾರ್ದತೆ ಹಾಗೂ ಹೊಂದಾಣಿಕೆಯಿಂದ ಬಾಳಿ ಜೀವನ ನಿರ್ವಹಿಸಿಕೊಂಡು ಬಂದಿದ್ದಾರೆ. ಈ ಮೊಗವೀರ ಸಮುದಾಯದಲ್ಲಿ ಗುರುಪರಂಪರೆ ಪ್ರಾರಂಭವಾಗಿ ಬೆಳೆದು ಬಂದ ಬಗೆ, ಈ ಗುರು ಪರಂಪರೆಯ ಬಗ್ಗೆ ಸಮುದಾಯದವರ ನಂಬಿಕೆ, ಗುರುಗಳ ಮಹಿಮೆ ಇತ್ಯಾದಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಾಂಸ್ಕೃತಿಕ ಅಧ್ಯಯನದ ಮಾದರಿಯಲ್ಲಿ ಈ ಲೇಕನದಲ್ಲಿ ವಿಶ್ಲೇಷಿಸಲಾಗಿದೆ.

ಕರಾವಳಿ ತೀರ ಪ್ರದೇಶದಲ್ಲಿ ರಾಜ ಮಹಾರಾಜರ ಆಳ್ವಿಕೆಯ ಕಾಲಘಟ್ಟದಲ್ಲಿ ತುಳುನಾಡಿನ ರಾಜಧಾನಿಯಾಗಿ ಎಲ್ಲ ವೈಭವದಿಂದ ಮೆರೆದು, ನಾಡಿನ ಇತಿಹಾಸದ ಪುಟದಲ್ಲಿ ಶ್ರೇಷ್ಠ ಸ್ಥಾನ ಪಡೆದ ಬಾರ್ಕೂರು ಸಂಸ್ಥಾನದ ಬೆಣ್ಣೆ ಕುದ್ರು ಮೊಗವೀರ ಸಮಾಜದ ಗುರುಪೀಠ ಮತ್ತು ಗುರುಪರಂಪರೆಗೆ ನಾಂದಿ ಹಾಡಿದ ಐತಿಹಾಸಿಕ ಕ್ಷೇತ್ರವಾಗಿದೆ. ಇದು ಸುಂದರವಾದ ಕರಾವಳಿ ತೀರದ ಉಡುಪಿ ಜಿಲ್ಲೆಯ ಹೊಂದಾಡಿ ಗ್ರಾಮದಲ್ಲಿದ್ದು, ಈ ಬೆಣ್ಣೆ ಕುದ್ರು ಕ್ಷೇತ್ರದಲ್ಲಿ ಶ್ರೀ ಕುಲ ಮಹಾಸ್ತ್ರಿ ಅಮ್ಮನವರ ದೇವಸ್ಥಾನ ಅಲ್ಲಿನ ಪ್ರಮುಖ ದೇವಾಲಯಗಳಲ್ಲಿ ಒಂದಾಗಿದೆ. ಇದು ಸೀತಾನದಿಯ ದಡದ ಮೇಲಿದ್ದು ಮೊಗವೀರರ ಕುಲಮಾತೆಯಾಗಿ, ಕುಲ ದೇವತೆಯಾಗಿ ಶ್ರೀ ಕುಲ ಮಹಾಸ್ತ್ರಿ ಅಮ್ಮನವರು ಮಗವೀರ ಸಮುದಾಯದ ಜನಮಾನಸದಲ್ಲಿ ಸ್ಥಾನ ಪಡೆದಿದ್ದಾಳೆ. ಕರಾವಳಿಯ ಈ ಉಡುಪಿ ಜಿಲ್ಲೆಯ ಬಾರ್ಕೂರು ಅರಸರ ಆಳ್ವಿಕೆಯ ಕಾಲದಲ್ಲಿ ಪ್ರಮುಖ ಸೇನಾ ನೆಲೆಯಾಗಿದ್ದು, ಸೇನಾಧಿಪತಿಗಳು ವಾಸವಾಗಿದ್ದ

ಸ್ಥಳವಾಗಿತ್ತು. ಆದ್ದರಿಂದ ಇವರು ತಮ್ಮ ರಕ್ಷಣೆಗಾಗಿ ಶ್ರೀ ವೀರಭದ್ರ ಸ್ವಾಮಿಯನ್ನು ಆರಾಧಿಸಿ ಪೂಜಿಸುತ್ತಿರುವುದರ ಬಗ್ಗೆ ಇತಿಹಾಸದಲ್ಲಿ ಸಾಕಷ್ಟು ಉಲ್ಲೇಖಗಳಿವೆ. ಒಂದು ಐತಿಹ್ಯದ ಪ್ರಕಾರ ಶ್ರೀ ವೀರಭದ್ರ ಸ್ವಾಮಿಯ ಸನ್ನಿಧಾನಕ್ಕೆ ಬಿಕ್ಷುಕಿ ರೂಪದ ಮುದುಕಿಯೊಬ್ಬಳು ಆಗಮಿಸುತ್ತಾಳೆ. ಅವಳ ಆಗಮನನ ನಂತರ ಪವಾಡಗಳೆಂಬಂತೆ ಕೆಲವು ಘಟನೆಗಳು ನಡೆದವು. ಶಕ್ತಿಯ ಸಂಕೇತದಂತೆ ಗೋಚರಿಸಿದ ಸ್ತ್ರೀ ಶಕ್ತಿಯ ನಿಗೂಢತೆ ಅರಿಯಲು ಗುರುಗಳೊಬ್ಬರ ಮರೆ ಹೋದಾಗ ಅವರು ತಮ್ಮ ದಿವ್ಯ ಜ್ಞಾನದಿಂದ ಆ ಶಕ್ತಿಯನ್ನು ಮನಗಂಡು ಗುರುಗಳ ಮಾರ್ಗದರ್ಶನದಂತೆ ವೀರಭದ್ರ ಸ್ವಾಮಿಯ ಸನ್ನಿಧಾನದಲ್ಲಿಯೇ ಆ ಮಹಾಸ್ತ್ರಿ ಶಕ್ತಿಯನ್ನ ಪ್ರತಿಷ್ಠಾಪಿಸಲಾಯಿತು.[1] ಈ ಐತಿಹ್ಯ ಕರಾವಳಿ ತೀರದ ಮೊಗವೀರ ಸಮುದಾಯದಲ್ಲಿ ಇಂದಿಗೂ ಜನಜನಿತವಾಗಿದೆ.

ಸುಮಾರು ಒಂದು ಸಾವಿರ ವರ್ಷಗಳ ಹಿಂದೆ ಕರ್ನಾಟಕದ ಉತ್ತರ ಭಾಗದಿಂದ ಕಾರವಾರ ಗೋವಾ ರಾಜ್ಯದಿಂದ ಸುಮಾರು 240 ಕಿಲೋ ಮೀಟರ್ ದೂರದಿಂದ ಒಬ್ಬಳು ಮಹಿಳೆ ಕೆಲವೊಂದು ಪರಿವಾರ ದೈವಗಳ ಬಿಂಬಗಳೊಂದಿಗೆ ತನ್ನ ಸಹೋದರನ ಜೊತೆಯಲ್ಲಿ ಶ್ರೀ ಕ್ಷೇತ್ರ ಬೆಣ್ಣೆ ಕುದ್ರುವಿಗೆ ಬಂದಳು. ಅಲ್ಲಿ ಈಗಾಗಲೇ ಶಕ್ತಿ ಸ್ವರೂಪಳಾಗಿ ಪ್ರತಿಷ್ಠಾಪನೆಗೊಂಡಿದ್ದ ಮಹಾಸ್ತ್ರಿ ಅಮ್ಮನವರನ್ನು ಆರಾಧಿಸ ತೊಡಗಿದಳು. ಕೆಲವು ವರ್ಷಗಳ ಬಳಿಕ ಈ ಜೇಷ್ಠ ಸಹೋದರಿ ದೈವಾಧೀನರಾದ ಮೇಲೆ ಅವಳ ಜೊತೆಗಿದ್ದ ಸಹೋದರ ಶ್ರೀ ಬೆಣ್ಣೆ ಕುದ್ರು ಕ್ಷೇತ್ರದ ದೇವಿಯ ಜೊತೆಗೆ ಪರಿವಾರದೈವಗಳ ಪೂಜಾ ಕೈಂಕರ್ಯ ನೆರವೇರಿಸಿಕೊಂಡು ಹೋಗತೊಡಗಿದನು. ಹೀಗೆ ಉತ್ತರ ಭಾಗದಿಂದ ಬಂದ ಈ ಸಹೋದರ ಸಹೋದರಿಯರು ಮೊಗವೀರ ಜನಾಂಗಕ್ಕೆ ಸೇರಿದವರಾಗಿದ್ದು, ಇವರು ಪೂಜಿಸುತ್ತಿದ್ದ ಶ್ರೀ ಮಹಾಸ್ತ್ರಿ ಅಮ್ಮನವರನ್ನು ಮೊಗವೀರರು ಕುಲಮಾತೆಯಾಗಿ ನಂಬಿ ಆರಾಧಿಸಿದ್ದರಿಂದ ಆ ದೇವತೆ ಮೊಗವೀರರ ಪಾಲಿಗೆ ಕುಲ ಮಹಾ ಸ್ತ್ರಿ ಅಮ್ಮನಾಗಿ ಪೂಜಿಸಲ್ಪಟ್ಟಳು. ದೇವಿಯ ಪೂಜೆ ಮಾಡಿ ಅರ್ಚಕರಾಗಿ ಕಾರ್ಯನಿರ್ವಹಿಸಿದ ಅಜ್ಜಮ್ಮಳ ಸಹೋದರನನ್ನೇ ಕುಲ ಗುರುಗಳನ್ನಾಗಿ ಸ್ವೀಕರಿಸಿರುವುದು ಅಷ್ಟಮಂಗಲ ಪ್ರಶ್ನೆಯಲ್ಲಿ ಉಲ್ಲೇಖಿಸಲಾಗಿದೆ. ಹೀಗೆ ಮೊಗವೀರ ಸಮುದಾಯದಲ್ಲಿ ಶ್ರೀ ಕ್ಷೇತ್ರ ಬೆಣ್ಣೆ ಕುದ್ರು ಕುಲಮಹಾ ಸ್ತ್ರೀ ಅಮ್ಮನವರ ಸನ್ನಿಧಾನದಲ್ಲಿ ಉತ್ತರದಿಂದ ಬಂದು ನೆಲೆ ನಿಂತ ಮಹಿಳೆಯ ತಮ್ಮನ ಮೂಲಕ ಗುರುಪೀಠ ಮತ್ತು ಗುರುಪರಂಪರೆ ಪ್ರಾರಂಭವಾಯಿತು.[2] ಎಂಬ ಈ ಮಾಹಿತಿಗಳು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಸ್ಥಳೀಯ ಹಿರಿಯ ವಕ್ತೃವೊಬ್ಬರಿಂದ ಹಾಗೂ ಐತಿಹಗಳಿಂದ ಲಭ್ಯವಾಗಿವೆ. ಶ್ರೀ ಕ್ಷೇತ್ರ ಬೆಣ್ಣೆ ಕುದ್ರು

ದೇವಸ್ಥಾನದಲ್ಲಿ ಗರ್ಭಗುಡಿಯಲ್ಲಿ ಕುಲಮಹಾ ಸ್ತ್ರೀ ಅಮ್ಮನವರು, ಎಡಭಾಗದಲ್ಲಿ ಮೊದಲ ಗುರುಗಳ ವಿಗ್ರಹ, ಗುರು ಪತ್ನಿ ವಿಗ್ರಹ ಹಾಗೂ ಗುರು ಸಹೋದರಿ ಅಜ್ಜಮ್ಮಳ ವಿಗ್ರಹ ಇರುವುದು ಈ ಮಾಹಿತಿಗಳಿಗೆ ಪುಷ್ಟಿ ನೀಡುತ್ತವೆ.

ಶ್ರೀ ಕ್ಷೇತ್ರ ಬೆಣ್ಣೆ ಕುದ್ರು ಮೂಲತಃ ವೀರಭದ್ರ ಸ್ವಾಮಿಯ ಸಾನಿಧ್ಯವಾಗಿದ್ದು, ಮೊಗವೀರರು ಇಲ್ಲಿ ಮಹಾ ಸ್ತ್ರೀ ಅಮ್ಮನವರನ್ನು ಕುಲಮಾತೆಯಾಗಿ ಆರಾಧಿಸಿದ ನಂತರ ಶ್ರೀ ದೇವಿಯು ಪ್ರಧಾನ ದೇವತೆಯಾಗಿ ಪೂಜಿಸಲ್ಪಟ್ಟಳು. ಗರ್ಭಗುಡಿಯಲ್ಲಿರುವ ಕುಲ ಮಹಾ ಸ್ತ್ರೀ ಅಮ್ಮನ ಬಲ ಭಾಗದಲ್ಲಿ ವೀರಭದ್ರ ಸ್ವಾಮಿಯ ವಿಗ್ರಹವಿದ್ದು, ಇವನು ಎರಡನೇ ಪ್ರಧಾನ ಪೂಜೆಯಿಂದ ಭಕ್ತರಿಗೆ ರಕ್ಷಣೆ ನೀಡುವನು. ಈ ಕ್ಷೇತ್ರದಲ್ಲಿ ಉತ್ತರ ಭಾಗದಿಂದ ಬಂದ ಅಜ್ಜಮ್ಮಳ ಸಹೋದರನು ಮಗವೀರ ಸಮುದಾಯದ ಮೊದಲ ಗುರುವಾಗಿದ್ದು ಶ್ರೀದೇವಿಯ ಪ್ರಧಾನ ಅರ್ಚಕನಾಗಿ, ಮೊಗವೀರರ ಕುಲ ಗುರುಗಳಾಗಿ, ಅವರ ಮಾರ್ಗೋದ್ಧಾರಕನಾಗಿ ಹಾಗೂ ಮೊಗವೀರ ಸಮಾಜದ ಸೇವಕನಾಗಿ ಪೂಜಾರ್ಹನಾಗಿರುವುದು, ಮೊಗವೀರರ ಗೌರವಾದರಗಳಿಗೆ ಪಾತ್ರನಾಗಿರುವುದು ತಿಳಿದುಬರುತ್ತದೆ.[೩] ಶ್ರೀ ಕ್ಷೇತ್ರ ಬೆಣ್ಣೆ ಕುದ್ರು ಕುಲಮಹಾ ಸ್ತ್ರೀ ಅಮ್ಮನವರ ದೇವಸ್ಥಾನದಲ್ಲಿ ಪುರಾತನ ಕಾಲದಿಂದ ಇಲ್ಲಿಯ ತನಕ ಪ್ರಧಾನವಾಗಿ ಒಂಬತ್ತು ಮಂದಿ ಗುರುಗಳು ಮೊಗವೀರ ಸಮುದಾಯಕ್ಕೆ ಮಾರ್ಗದರ್ಶಕರಾಗಿ, ಶ್ರೀ ಅಮ್ಮನವರ ಪೂಜೆ ಮಾಡಿಕೊಂಡು ಬಂದಿರುವುದಾಗಿ ತಿಳಿದು ಬರುತ್ತದೆ. ಆದರೆ ಮೊಗವೀರ ಸಮುದಾಯದ ಕೆಲವು ಹಿರಿಯರ ವಕ್ತೃಗಳ ಅನಿಸಿಕೆಗಳಂತೆ ಇಪ್ಪತ್ನಾಲ್ಕು ವರ್ಷದ ಒಳಗೆ ಗುರುಗಳು ದೈವಾಧೀನರಾದರೆ ಅವರ ಪ್ರತಿಮೆಗಳನ್ನು ಅನಾವರಣ ಮಾಡುವ ಪದ್ಧತಿ ನಿಷಿದ್ಧವಾದುದರಿಂದ ಒಂಬತ್ತು ಕುಲಗುರುಗಳ ಪೈಕಿ ಐದು ಮಂದಿಯ ಹೆಸರು ಮಾತ್ರ ಲಭ್ಯವಿರುವ ದಾಖಲೆಗಳ ಆಧಾರದಿಂದ ತಿಳಿದು ಬಂದಿದೆ. ಇವರೆಲ್ಲರ ಹೆಸರಿನ ಮುಂದೆ ಮಂಗಳಪೂಜಾರ್ಯ ಎಂದು ಸಂಬೋಧಿಸಿರುವುದು ಕುತೂಹಲ ಮೂಡಿಸುತ್ತದೆ. ಇದು ಮಗವೀರರ ಗುರುಪರಂಪರೆಗೆ ಸಂಬಂಧಪಟ್ಟಂತೆ ಇನ್ನಷ್ಟು ಸಂಶೋಧನೆಗೆ ಅವಕಾಶ ಇರುವುದನ್ನು ಸೂಚಿಸಿದೆ. ಒಂದು ದೃಷ್ಟಿಕೋನದಲ್ಲಿ ಯೋಚಿಸಿದರೆ ಮೂಲ ಗುರು ಅಥವಾ ಪ್ರಥಮ ಗುರುವಿನ ಹೆಸರು ಮಂಗಳ ಪೂಜಾರ್ಯ ಎಂಬುದಾಗಿ ಇದ್ದಿರಬಹುದು. ಅಥವಾ ಮೊಗವೀರ ಪ್ರಮುಖರೇ ಆ ಹೆಸರಿನಿಂದ ಗುರುಗಳನ್ನು ಗೌರವದಿಂದ ಕರೆದಿರಬಹುದು. ಅವರ ನಂತರ ಬಂದ ಇತರ ಗುರುಗಳಿಗೂ ಈ ಹೆಸರು ಹಾಗೆಯೇ ಅಂಟಿಕೊಂಡು ಮುಂದುವರೆದಿರಬಹುದು ಎಂದು ಊಹಿಸಬಹುದಾಗಿದೆ. ಮೂಲ ಗುರುವಿನ ನಂತರ

ಬಂದ ಮೂವರು ಗುರುಗಳ ಹೆಸರು ಮತ್ತು ಮಾಹಿತಿ ಇಂದಿಗೂ ಲಭ್ಯವಾಗಿಲ್ಲ. ಉಳಿದಂತೆ ಇತರ ಗುರುಗಳ ಹೆಸರು ಮತ್ತು ಮಾಹಿತಿ ದಾಖಲೆಯಲ್ಲಿ ಲಭ್ಯವಾಗಿದೆ. ಅವರುಗಳೆಂದರೆ..

ಲಿಂಗ ಮಂಗಳ ಪೂಜಾರ್ಯ

ಅಂತಯ್ಯ ಮಂಗಲ ಪೂಜಾರ್ಯ

ಕೃಷ್ಣಮಂಗಲ ಪೂಜಾರ್ಯ

ಅಣ್ಣಪ್ಪ ಮಂಗಳ ಪೂಜಾರ್ಯ

ಮಾಧವ ಮಂಗಲ ಪೂಜಾರ್ಯ

ಈ ಗುರುಪರಂಪರೆಯಲ್ಲಿ ಮಾಧವಮಂಗಲ ಪೂಜಾರ್ಯರು ಮೊಗವೀರ ಸಮುದಾಯದ ಒಂಭತ್ತನೇ ಹಾಗೂ ಕೊನೆಯ ಕುಲಗುರುಗಳಾಗಿದ್ದು, ಈ ಮೇಲಿನವರೆಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಅಲ್ಲದೇ ಅಳಿಯ ಸಂತಾನ ಕಟ್ಟು ಕುಟುಂಬ ಪದ್ಧತಿಯಂತೆ ಈ ಗುರು ಸ್ಥಾನ ವಂಶಪಾರಂಪರ್ಯವಾಗಿ ಮಾವನಿಂದ ಅಳಿಯನಿಗೆ ಲಭಿಸಿದೆ ಎಂಬ ಮಾಹಿತಿಯನ್ನ ಈ ಗುರು ಕುಟುಂಬದ ಹಿರಿಯರು ನೀಡಿರುತ್ತಾರೆ. “ಮೊಗವೀರ ಸಮುದಾಯದ ಕುಲಗುರುಗಳೂ, ಶ್ರೀ ಕ್ಷೇತ್ರದ ಪ್ರಧಾನ ಅರ್ಚಕರೂ ಆಗಿದ್ದ ಮಾಧವ ಮಂಗಳ ಪೂಜಾರ್ಯರ ಕಾಲದಲ್ಲಿ ಅವರ ಅಳಿಯ ಹೆರಿಯಣ್ಣ ಮೆಂಡನ್ ಸಹಾಯಕ ಅರ್ಚಕರಾಗಿದ್ದು, ಗುರುಗಳ ಕಾಲದ ನಂತರ ಪ್ರಧಾನ ಅರ್ಚಕರಾಗಿ ಕಾರ್ಯನಿರ್ವಹಿಸಿದ್ದರು. ಆಮೇಲೆ ಅದೇ ಕುಟುಂಬದ ಕೃಷ್ಣಮೆಂಡನ್, ತದನಂತರ ಶೀನ ಮೆಂಡನ್ ಪ್ರಧಾನ ಅರ್ಚಕರಾಗಿ ಸೇವೆ ಸಲ್ಲಿಸಿದರು. ಇವರೇ ಗುರು ಕುಟುಂಬದ ಕೊನೆಯ ಪ್ರಧಾನ ಅರ್ಚಕರಾಗಿದ್ದರು. ಅನಂತರ ಅಲ್ಲಿಗೆ ಶ್ರೀ ಕ್ಷೇತ್ರ ಬೆಣ್ಣೆಕುದ್ರು ಗುರು ಕುಟುಂಬದ ವಂಶ ಪಾರಂಪರ್ಯವಾದ ಗುರುಸ್ಥಾನ ಹಾಗೂ ಪ್ರಧಾನ ಅರ್ಚಕತ್ವಗಳೆರಡೂ ಸ್ಥಗಿತಗೊಂಡಿತು.”[4] ಎಂಬ ಮಾಹಿತಿ ಕುತೂಹಲವನ್ನು ಕೆರಳಿಸುತ್ತದೆ. ಅಲ್ಲದೆ ಈ ಮೊಗವೀರರ ಗುರುಪರಂಪರೆಗೆ ಸಂಬಂಧಪಟ್ಟಂತೆ ಇನ್ನಷ್ಟು ಸಂಶೋಧನೆಗಳಿಗೆ ಎಡೆ ಮಾಡಿಕೊಡುತ್ತದೆ.

ಕುಲ ಗುರುವಿನ ಆಯ್ಕೆ

ಮೊಗವೀರ ಸಮಾಜ ಬಾಂಧವರಲ್ಲಿ ಕುಲಗುರುಗಳ ಆಯ್ಕೆಯು ವಂಶ ಪಾರಂಪರ್ಯವಾಗಿತ್ತು ಎನ್ನುವುದಕ್ಕೆ ಸಾಕಷ್ಟು ನಿದರ್ಶನಗಳು, ಉಲ್ಲೇಖಗಳು ಸಿಗುತ್ತವೆ. “ಬಾರ್ಕೂರು, ಬಗ್ವಾಡಿ, ಮಂಗಳೂರು ಹೋಬಳಿಯ ಸಮಸ್ತ ಮೊಗವೀರರು ಏಕಸ್ತರಾಗಿ ಸಭೆ ಸೇರಿ ಗುರು ಕುಟುಂಬದ ಎಲ್ಲ ಯುವಕರನ್ನು ಒಟ್ಟಿಗೆ ನಿಲ್ಲಿಸುತ್ತಾರೆ . ನಂತರ

ನೆರೆದ ಎಲ್ಲಾ ಮೊಗವೀರ ಸಮಾಜ ಬಾಂಧವರು ಸಾಮೂಹಿಕವಾಗಿ ಕುಲಮಹಾ ಸ್ತ್ರೀ ಅಮ್ಮನವರ ಮುಂದೆ ಪ್ರಾರ್ಥನೆ ಮಾಡಿ, ಗುರು ಕುಟುಂಬದ ಒಬ್ಬ ವ್ಯಕ್ತಿಯನ್ನು ಆಯ್ಕೆ ಮಾಡಿ ದೇವಿಯ ತೀರ್ಥ ಪ್ರಸಾದವನ್ನು ಸಂಪ್ರೋಕ್ಷಣೆ ಮಾಡುತ್ತಾರೆ. ಅನಂತರದ ದಿನಗಳಲ್ಲಿ ಆತನಿಗೆ ಪಟ್ಟಾಭಿಷೇಕ ನಡೆದು ಸಮಸ್ತ ಮೊಗವಿರರು ಆ ವ್ಯಕ್ತಿಯನ್ನು ಕುಲ ಗುರುಗಳನ್ನಾಗಿ ಭಕ್ತಿ ಭಾವದಿಂದ ಸ್ವೀಕರಿಸುತ್ತಾರೆ. ಹಾಗೂ ಗುರುವಂದನೆಯನ್ನು ಮಾಡಿ ಗುರುಗೌರವ ಸಲ್ಲಿಸುತ್ತಾರೆ. ಶ್ರೀ ಕುಲಮಹಾ ಸ್ತ್ರೀ ಅಮ್ಮನವರ ತೀರ್ಥ ಪ್ರಸಾದವನ್ನು ಸಂಪ್ರೋಕ್ಷಣೆ ಮಾಡಿದಾಗ ಆಯ್ಕೆ ಮಾಡಿದ ಕುಲಗುರು ಮೇಲೆ ವೀರಭದ್ರ ಸ್ವಾಮಿ ಮತ್ತು ದೇವಿಯ ಆವಾಹನೆಯಾಗುತ್ತದೆ. ಆಗ ನೆರೆದ ಎಲ್ಲಾ ಸಮಾಜ ಬಾಂಧವರು ಭಕ್ತಿ ಪರವಶರಾಗುತ್ತಿದ್ದರು. ಗುರುಗಳ ಮುಂದೆ ತಮ್ಮ ಮನದ ಇಚ್ಛೆಯನ್ನು ಬಿಚ್ಚಿಡುತ್ತಿದ್ದರು. ಹಾಗೂ ತಮ್ಮ ಆಂತರ್ಯದ ಅಳಲಿಗೆ ಮುಕ್ತಿ ಬೇಡುತ್ತಿದ್ದರು.“[5] ಎಂದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಹಿರಿಯ ವಕ್ತ ಒಬ್ಬರು ತಮ್ಮ ಅನುಭವದ ಮಾತುಗಳನ್ನ ಹೇಳಿದ್ದಾರೆ.

ಮೊಗವೀರ ಸಮಾಜ ಬಾಂಧವರಲ್ಲಿ ಹಿರಿಯರು ಸಭೆ ಸೇರಿ ಗುರು ಕುಟುಂಬದಿಂದ ಗುರು ಸ್ಥಾನಕ್ಕೆ ಒಬ್ಬ ಅರ್ಹ ವ್ಯಕ್ತಿಯನ್ನು ಆಯ್ಕೆ ಮಾಡುವಾಗ ಶ್ರೀ ದೇವಿಯು ಪ್ರೇರಣೆ ನೀಡುತ್ತಾಳೆ ಎಂಬುದಕ್ಕೆ ಗುರು ಕುಟುಂಬದ ಹಿರಿಯರೊಬ್ಬರು ಗುರುವಿನ ಆಯ್ಕೆಯ ವಚಾರವನ್ನು ಈ ರೀತಿಯಾಗಿ ಬಿಚ್ಚಿಟ್ಟಿದ್ದಾರೆ." ಕುಲ ಗುರುಗಳ ಆಯ್ಕೆಗಾಗಿ ಮೂರು ಹೋಬಳಿಯ ಸಮಾಜದ ಬಾಂಧವರು ಏಕಸ್ತರಾಗಿ ಗುರು ಕುಟುಂಬದ ಯುವ ಸದಸ್ಯರೆಲ್ಲರೊಂದಿಗೆ ಚರ್ಚೆಯಲ್ಲಿದ್ದ ಆ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿರುವ ಕುಟುಂಬದ ಸದಸ್ಯರಲ್ಲಿ ಯಾರೂ ಕೂಡ ಅರ್ಹರಾಗಿ ಕಂಡು ಬರಲಿಲ್ಲ. ದೇವಿಯ ಪ್ರೇರಣೆ ಎಂಬಂತೆ ನೆರೆದ ಹಿರಿಯರು ಕುಟುಂಬದಲ್ಲಿ ಇನ್ನಾರು ಸದಸ್ಯರಿದ್ದಾರೆ ಎಂಬ ಪ್ರಶ್ನೆ ಅನಿರೀಕ್ಷಿತವೆಂಬಂತೆ ಕೇಳಿಯೇ ಬಿಟ್ಟರು. ಆಗ ಕುಟುಂಬಸ್ಥರಿಗೆ ಸ್ವಲ್ಪ ಕಸಿವಿಸಿ ಆದರೂ ಹಿರಿಯ ಸದಸ್ಯರೊಬ್ಬರು ಇನ್ನೊಬ್ಬ ಹುಡುಗನಿದ್ದಾನೆ, ಆತ ಇವೆಲ್ಲ ಏನೂ ನನಗೆ ಬೇಡ ಎಂದು ದನ ಕಾಯಲು ಹೋಗಿದ್ದಾನೆ ಎಂದು ಉತ್ತರಿಸಿದರು. ಬಳಿಕ ಆ ಹುಡುಗನನ್ನು ಕರೆಸಿ ಸ್ನಾನ ಮಾಡಿಸಿ ಸಭೆಗೆ ಕರೆ ತಂದಾಗ ದೇವಿಯ ಸಂಕಲ್ಪವೆಂಬಂತೆ ಆತನೇ ಯೋಗ್ಯ ವ್ಯಕ್ತಿ ಎಂದು ಎಲ್ಲರೂ ಮನಗಂಡು, ಬಳಿಕ ಆತನಿಗೆ ಪಟ್ಟಾಭಿಷೇಕ ಮಾಡಿದರು. ಇವರು ಬೇರೆ ಯಾರೂ ಅಲ್ಲ, ಮೊಗವೀರ ಸಮಾಜ ಬಾಂಧವರ 9ನೇ ಕುಲ ಗುರುಗಳಾದ ಮಾಧವ ಮಂಗಳ ಪೂಜಾರ್ಯರು. ಇದರಿಂದ ತಿಳಿಯುವುದೇನೆಂದರೆ ದೇವಿಗೆ ಕುಲ ಗುರುಗಳನ್ನಾಗಿ ಯಾರನ್ನು ಆಯ್ಕೆ

ಮಾಡಬೇಕೋ ಅವರೇ ಆ ಸ್ಥಾನಕ್ಕೆ ಆಯ್ಕೆ ಆಗುತ್ತಾರೆ" [6] ಎಂಬ ಹಿರಿಯ ವಕ್ತೃವೊಬ್ಬರ ನೀಡಿದ ಕುಲ ಗುರುವಿನ ಆಯ್ಕೆಗೆ ಸಂಬಂಧಪಟ್ಟಂತೆ ಅಭಿಪ್ರಾಯಗಳು ಕುತೂಹಲವನ್ನು ಮೂಡಿಸುತ್ತವೆ. ಅಲ್ಲದೇ ಮೊಗವೀರ ಸಮಾಜ ಬಾಂಧವರಲ್ಲಿ ಕುಲ ಗುರುವಿನ ಆಯ್ಕೆಗೆ ಸಂಬಂಧಿಸಿದಂತೆ ಅವರಲ್ಲಿರುವ ನಂಬಿಕೆಗೆ ಇನ್ನಷ್ಟು ಪುಷ್ಟಿ ನೀಡುತ್ತದೆ.

ಶ್ರೀ ಕ್ಷೇತ್ರ ಬೆಣ್ಣೆಕುದ್ರು ಕುಲಮಹಾ ಸ್ತ್ರೀ ಅಮ್ಮನವರ ದೇವಸ್ಥಾನದ ಆವರಣದಲ್ಲಿ ಕುಲ ಗುರುಗಳ ಎರಡು ಮಠ ಹಾಗೂ ಎರಡು ಪೀಠಗಳಿರುವುದು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ತಿಳಿದುಬಂದಿದೆ. ದೇವಸ್ಥಾನದ ಎದುರು ಇರುವ ಗುರುಗಳ ಮಠದಲ್ಲಿ ಕುಲ ಗುರುಗಳು ವಾಸವಾಗಿದ್ದರೆ, ದೇವಸ್ಥಾನದ ಹಿಂಬದಿಯಲ್ಲಿರುವ ಮಠದಲ್ಲಿ ಗುರು ಕುಟುಂಬದವರು ವಾಸವಾಗಿದ್ದರು ಎಂಬುದಾಗಿ ತಿಳಿದು ಬರುತ್ತದೆ. ದೇವಸ್ಥಾನದಲ್ಲಿರುವ ಪೀಠವು ಗುರುಗಳ ಪ್ರಧಾನ ಪೀಠವಾಗಿದ್ದು, ಅಲ್ಲಿದ್ದ ಹಿರಿಯ ವಕ್ತೃ ಒಬ್ಬರ ನುಡಿಯಂತೆ ತಿರುಪತಿಯಲ್ಲಿರುವ ಕಾಲಭೈರವನ ಹಾಗೆ ಹಾಗೂ ಧರ್ಮಸ್ಥಳದಲ್ಲಿರುವ ಅಣ್ಣಪ್ಪ ಸ್ವಾಮಿಯ ಹಾಗೆ ಈ ಬೆಣ್ಣೆ ಕುದ್ರು ಕ್ಷೇತ್ರದಲ್ಲಿ ವೀರಭದ್ರ ಸ್ವಾಮಿಯು ಪ್ರಮುಖನಾಗಿದ್ದಾನೆ. ಗುರು ಕುಟುಂಬದವರ ಮನೆಯಲ್ಲಿ ಮನೆದೈವವಾದ ಹೈಗುಳಿ ಗುರುಗಳ ಮೇಲೆ ಆಕರಣೆಯಾಗುತ್ತದೆ ಎಂಬ ನಂಬಿಕೆ ಇದೆ. ಹೈಗುಳಿ ದೈವದ ಸಾನಿಧ್ಯ ಇರುವ ಮಠದಲ್ಲಿ ಶ್ರೀ ದೇವಿಯ ಆಭರಣಾಧಿ ಸಂಪತ್ತುಗಳು ಇಡುವ ಒಂದು ಭಂಡಾರವನ್ನು ಹೊಂದಿದ್ದು, ಉತ್ಸವಗಳ ಸಂದರ್ಭದಲ್ಲಿ ತುಳಸಿ ಪೂಜೆಯನ್ನು ನೆರವೇರಿಸಿ ಭಂಡಾರವನ್ನು ದೇವಸ್ಥಾನಕ್ಕೆ ತಂದು ಉತ್ಸವ ಆರಂಭಿಸುವುದು ಶ್ರೀ ಕ್ಷೇತ್ರದ ಪರಂಪರೆಯಾಗಿದೆ. ಇನ್ನೊಂದು ಮಾಹಿತಿಯ ಪ್ರಕಾರ ಗುರುಪೀಠಕ್ಕೆ ಏರುವ ಕುಲಗುರುಗಳು ಪಿಠಾರೋಹಣ ಮಾಡುವ ಮೊದಲೇ ಮದುವೆಯಾಗಿ ಗ್ರಹಸ್ಥಾಶ್ರಮಕ್ಕೆ ಕಾಲಿಡಬೇಕೆಂಬ ಸಂಪ್ರದಾಯವಿದೆ. ಅಲ್ಲದೆ ಗುರುಪೀಠಕ್ಕೆ ಏರುವ ಮೊದಲು ಆ ವ್ಯಕ್ತಿ ಎಂತವನೇ ಆಗಿದ್ದರೂ ಪೀಠ ಏರಿದಾಕ್ಷಣದಿಂದ ಅವನಲ್ಲಿ ಮಹತ್ತರವಾದ ಬದಲಾವಣೆ ಕಂಡುಬರುತ್ತದೆ ಎನ್ನುವುದು ಹಿರಿಯ ಮೊಗವೀರ ಸಮಾಜ ಬಾಂಧವರ ಅಭಿಪ್ರಾಯವಾಗಿದೆ.

ಮೊಗವೀರ ಸಮಾಜದ ಕುಲಗುರುಗಳ ಪಲ್ಲಕ್ಕಿ ಮೆರವಣಿಗೆಗೆ ಬಹಳ ಪ್ರಾಮುಖ್ಯತೆ ಇದೆ. ಇದನ್ನು ಗ್ರಾಮ ಸಂಚಾರ ಎನ್ನಲಾಗುತ್ತದೆ. ಸಾಧಾರಣವಾಗಿ ಆಷಾಢ ಮಾಸದಲ್ಲಿ ಶ್ರೀ ಕುಲಗುರುಗಳ ಪಲ್ಲಕ್ಕಿ ಮೆರವಣಿಗೆ ಗ್ರಾಮ ಸಂಚಾರಕ್ಕೆ ಹೊರಡುತ್ತದೆ. ಈ ಪಲ್ಲಕ್ಕಿಯನ್ನು 'ಮುಂಚಿಲ್ ಪಲ್ಲಕ್ಕಿ' ಎಂದು ಕರೆಯುತ್ತಾರೆ. ಅಂದರೆ ಇದು ಆರಾಮ ಕುರ್ಚಿಯಂತೆ ಇದ್ದು, ಇದನ್ನು ನಾಲ್ಕು ಮಂದಿ ದೃಢಕಾಯರು

ಹೊರುತ್ತಾರೆ. ಶ್ರೀ ಕುಲಗುರುಗಳ ಈ ಪಲ್ಲಕ್ಕಿ ಮೆರವಣಿಗೆ ಬಗ್ಗೆ ಮೊಗವೀರ ಸಮಾಜ ಬಾಂಧವರಿಗೆ ಅಪಾರವಾದ ಗೌರವ ಮತ್ತು ಭಕ್ತಿಯ ಭಾವನೆಗಳಿದ್ದು, ಶ್ರೀ ಕ್ಷೇತ್ರ ಬೆಣ್ಣೆ ಕುದ್ರು ದೇವಸ್ಥಾನದಿಂದ ಪಲ್ಲಕ್ಕಿಯಲ್ಲಿ ಆಸೀನರಾಗಿ ಗ್ರಾಮ ಸಂಚಾರಕ್ಕೆ ಹೊರಟ ಕುಲಗುರುಗಳನ್ನು ಮೆರವಣಿಗೆಯ ಮೂಲಕ ಮೊಗವೀರ ಸಮಾಜ ಬಾಂಧವರು ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಹೋಗಿ ಬೀಳ್ಕೊಡುತ್ತಿದ್ದರು. ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಗುರುಗಳು ಗ್ರಾಮಕ್ಕೆ ಸಂಬಂಧಪಟ್ಟ ಪ್ರತಿಷ್ಠಿತ ಸಮಾಜ ಬಾಂಧವರ ಮನೆ, ಭಜನಾಮಂದಿರ, ರಂಪಣಿ, ಮಾರಿಬಲೆಗಳವರ ಚಪ್ಪರ ಮೊದಲಾದ ಕಡೆಗಳಲ್ಲಿ ತಂಗುತ್ತಿದ್ದರು. ಆ ಸಂದರ್ಭದಲ್ಲಿ ಭಜನೆ ಪೂಜೆ ಪುನಸ್ಕಾರಾದಿಗಳನ್ನು ನೆರವೇರಿಸಿ ಮೊಘವೀರ ಸಮಾಜ ಬಾಂಧವರಿಂದ ಶ್ರೀ ಕ್ಷೇತ್ರ ಬೆಣ್ಣೆಕುದ್ರು ಕುಲಮಾತೆ ಅಮ್ಮನ ದೇವಸ್ಥಾನಕ್ಕೆ ದೀಪಾರಾಧನೆ, ಕಾಣಿಕೆಗಳನ್ನು ಸಂಗ್ರಹಿಸುತ್ತಿದ್ದರು. ಹೀಗೆ ಕುಲ ಗುರುಗಳು ಗ್ರಾಮ ಸಂಚಾರಕ್ಕೆ ಪಲ್ಲಕ್ಕಿ ಮೆರವಣಿಗೆಯ ಮೂಲಕ ಬಂದ ಸಂದರ್ಭದಲ್ಲಿ ಮೊಗವೀರ ಸಮಾಜ ಬಾಂಧವರಲ್ಲಿದ್ದ ಘರ್ಷಣೆ, ವ್ಯಾಜ್ಯ, ಆಣೆ, ಭಾಷೆ ಇತ್ಯಾದಿಗಳನ್ನು ಗುರುಗಳು ಎಲ್ಲರ ಸಮ್ಮುಖದಲ್ಲಿ ತೀರ್ಮಾನಿಸುತ್ತಿದ್ದರು ಎನ್ನುವುದು ತಳಿದು ಬರುತ್ತದೆ. "ದಕ್ಷಿಣದಲ್ಲಿ ಕೇರಳದ ಮಂಜೇಶ್ವರದ ತನಕ ಗ್ರಾಮ ಸಂಚಾರಕ್ಕೆ ಮುಂಚಿಲ್ ಪಲ್ಲಕ್ಕಿಯಲ್ಲಿ ಮೆರವಣಿಗೆ ಹೋಗುತ್ತಿದ್ದ ಕುಲಗುರುಗಳು ಮಂಗಳೂರಿನ ಉಳ್ಳಾಲಕ್ಕೆ ಭೇಟಿ ನೀಡಿ ಉಳ್ಳಾಲದ ಮೊಘವೀರ ಸಭಾ ವ್ಯಾಪ್ತಿಯ ವ್ಯಾಪ್ರ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಈ ಸಂದರ್ಭದಲ್ಲಿ ಗುರುಗಳನ್ನು ಗಾಣಿಗ ಸಮಾಜ ಬಾಂಧವರು ಪಲ್ಲಕ್ಕಿ ಮೆರವಣಿಗೆಯೊಂದಿಗೆ ಕರೆದುಕೊಂಡು ಹೋಗಿ ಧಾರ್ಮಿಕ ಕೇಂದ್ರದಲ್ಲಿ ಸತ್ಕಾರ ನೀಡುತ್ತಿರುವುದನ್ನ ಇಂದಿಗೂ ಆ ಪ್ರಾದೇಶಿಕ ವ್ಯಾಪ್ತಿಯ ಜನರು ನೆನಪಿಸಿಕೊಳ್ಳುತ್ತಾರೆ."[7] ಇದು ಕರಾವಳಿ ತೀರದಲ್ಲಿ ಬೇರೆ ಬೇರೆ ಸಮುದಾಯದವರ ಅಂದರೆ ಮೊಗವೀರ ಮತ್ತು ಗಾಣಿಗ ಸಮುದಾಯದ ಅನ್ಯೋನ್ಯತೆ ಸೌಹಾರ್ದತೆಯ ಸಂಬಂಧಕ್ಕೆ ಸಾಕ್ಷಿಯಾಗಿದೆ ಎನ್ನಬಹುದು.

ಶ್ರೀ ಕುಲಗುರುಗಳು ಪಲ್ಲಕ್ಕಿ ಮೆರವಣಿಗೆಯಲ್ಲಿ ಕರಾವಳಿ ತೀರಕ್ಕೆ ಭೇಟಿ ನೀಡಿ ವಾಪಾಸಾಗುವ ಸಂದರ್ಭದಲ್ಲಿ ಪವಾಡ ಸದೃಶದ ರೂಪದಲ್ಲಿ ಹೇರಳವಾದ ಮತ್ಸ್ಯ ಸಂಪತ್ತು ಲಭಿಸುತ್ತಿತ್ತು. ಇದರಿಂದ ಮೊಗವೀರ ಸಮಾಜ ಬಾಂಧವರ ಆರ್ಥಿಕ ಸ್ಥಿತಿಗತಿ ಸುಧಾರಿಸಿ ಅವರ ಜೀವನೋಪಾಯಕ್ಕೆ ಅನುಕೂಲವಾಗುತ್ತಿತ್ತು ಎಂಬ ಮಾತು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಹಿರಿಯ ವಕ್ತ್ರಗಳಿಂದ ತಿಳಿದುಬಂದಿದೆ.

ಇನ್ನೋರ್ವ ಹಿರಿಯ ವಕ್ತೃ ಶ್ರೀ ಬಾಬು ಮೆಂಡನ್ ಹೇಳುವಂತೆ "ಕುಲ ಗುರುಗಳ ಗ್ರಾಮ ಸಂಚಾರದ ಸಂದರ್ಭದಲ್ಲಿ ಮೀನುಗಾರರೆಲ್ಲರೂ ಗುರುಗಳ ಬಳಿಗೆ ಬಂದು ಮೀನಿನ ಕೊರತೆ ಹಾಗೂ ಆರ್ಥಿಕ ನಷ್ಟವನ್ನು ತೋಡಿಕೊಂಡಾಗ ಗುರುಗಳು ತಮ್ಮಲ್ಲಿದ್ದ ಪ್ರಸಾದವನ್ನು ಕ್ಷಣ ಹೊತ್ತು ಧ್ಯಾನಮಗ್ನರಾಗಿ ಸಮುದ್ರಕ್ಕೆ ಹಾಕುತ್ತಿದ್ದರು. ಆಗ ಸ್ವಲ್ಪ ದೂರ ಗುರುಗಳು ಮುಂದಿನ ಸಂಚಾರಕ್ಕೆ ಕ್ರಮಿಸುವಾಗಲೇ ಹೇರಳವಾದ ಮತ್ಸ್ಯ ಸಂಪತ್ತು ದೊರಕಿದ ಸಾಕಷ್ಟು ನಿದರ್ಶನಗಳಿವೆ. ಹೀಗೆ ಮೊಗವೀರ ಸಮಾಜ ಬಾಂಧವರ ಕುಲಕಸುಬಾದ ಮೀನುಗಾರಿಕೆಗೆ ಅವರು ಕುಲ ಗುರುಗಳ ಆಶೀರ್ವಾದವನ್ನು ಪಡೆಯುತ್ತಿದ್ದರು. ಗುರುಗಳ ಗ್ರಾಮ ಸಂಚಾರದ ಸಮಯದಲ್ಲಿ ಮೊಘವೀರ ಸಮಾಜ ಬಾಂಧವರು ಸಾಮಾನ್ಯವಾಗಿ ತಮ್ಮ ಕಸುಬಾದ ಮೀನುಗಾರಿಕೆಗೆ ಸಾಮೂಹಿಕವಾಗಿ ರಜೆ ಹಾಕುತ್ತಿದ್ದರು. ಒಂದು ವೇಳೆ ಗುರುಗಳ ಬರುವಿಕೆಯನ್ನು ಧಿಕ್ಕರಿಸಿ ಅಥವಾ ನಿರ್ಲಕ್ಷಿಸಿ ಮೀನುಗಾರಿಕೆಯಲ್ಲಿ ತೊಡಗಿಕೊಂಡರೆ ದುಡಿಮೆಗೆ ಗಂಡಾಂತರ ಒದಗುತ್ತದೆ ಎನ್ನುವುದು ಮೊಗವೀರ ಸಮುದಾಯದವರ ನಂಬಿಕೆಯಾಗಿದೆ. ಕರಿಕಲ್ಲು ಕಟ್ಟೆಯಿಂದ ಹೊಡೆಯವರೆಗೆ ನಾಲ್ಕು ಊರಿನ ಗಡಿ ಇದೆ, ಇಲ್ಲಿಗೆ ಗುರುಗಳು ಬರುವುದನ್ನ ತೋನ್ಸೆಯವರು ಗಮನಿಸಿ ಗುರುಗಳ ಪಲ್ಲಕ್ಕಿಯನ್ನು ಹೊರಲಿಕ್ಕೆ ಹೋದರೆ ಆ ದಿನದ ದುಡಿಮೆ ಹೋಗುತ್ತದೆ ಎನ್ನುವ ನಿಟ್ಟಿನಲ್ಲಿ ಗುರುಗಳ ಕಣ್ಣು ತಪ್ಪಿಸಿ ಮೀನುಗಾರಿಕೆಗೆ ತೆರಳಿದರು. ಇದನ್ನು ಗಮನಿಸಿದ ಗುರುಗಳು ಇವರು ನನ್ನ ಪಲ್ಲಕ್ಕಿ ಹೊರಬೇಕೆಂದು ಅವಸರದಲ್ಲಿ ಮೀನುಗಾರಿಕೆಗೆ ತೆರಳಿದ್ದಾರೆ ಹೋಗಲಿ ಹೋಗಲಿ ಎಂದರಂತೆ. ಆಗ ಪ್ರಶಾಂತವಾಗಿದ್ದ ಸಮುದ್ರದಲ್ಲಿ ತೆರಳಿದ ಮೀನುಗಾರರ ದೋಣಿ ನೀರಿನಲ್ಲಿ ಮುಳುಗಿತು"[8] ಎಂದು ತಮ್ಮ ನೆನಪಿನಂಗಳದಿಂದ ತೆರೆದಿಟ್ಟರು.

ಒಮ್ಮೆ ಕೊಡಿಕನ್ಯಾನ ದೇವಸ್ಥಾನದಲ್ಲಿ ಶ್ರೀ ಕುಲಗುರುಗಳ ಬರವಿಕೆಗಾಗಿ ಮೊಗವೀರ ಸಮಾಜ ಬಾಂಧವರು ಕಾಯುತ್ತಿರುವಾಗ ಗುರುಗಳು ದೇವಸ್ಥಾನಕ್ಕೆ ಭೇಟಿ ನೀಡದೆ ನೇರವಾಗಿ ಮಣೂರು ಪಡುಕೆರೆಯಲ್ಲಿರುವ ರಂಪಣಿಯವರ ಚಪ್ಪರಕ್ಕೆ ತೆರಳಿದರು. ವರ್ಷಂಪ್ರತಿ ಭೇಟಿ ನೀಡುತ್ತಿದ್ದ ಗುರುಗಳು ನಾವು ಕಾಯುತ್ತಿರುವಾಗ ನೇರವಾಗಿ ಮಣೂರು ಪಡುಕೆರೆಗೆ ಹೋದರು ಎಂದು ಬೇಸರದಿಂದ ಸಾಮೂಹಿಕವಾಗಿ ರಜೆ ಹಾಕಿದ್ದ ಮೊಗವೀರ ಸಮಾಜಬಾಂಧವರು ಆ ದಿನ ಮೀನುಗಾರಿಕೆಗೆ ತೆರಳಿದರು. ಸಮುದ್ರದಲ್ಲಿ ಒಂದಾಳು ನೀರಿನಲ್ಲಿ ಭೂತಾಯಿ ಮೀನಿನ ತೆಪ್ಪ ಹೇರಳವಾಗಿತ್ತು. ಸಮುದ್ರದಲ್ಲಿ ಬಲೆಯನ್ನು ಬೀಸುತ್ತಾ ಬೀಸುತ್ತಾ ಗುರುಗಳು ತಂಗಿದ್ದ ಮಣೂರು ರಂಪಣಿಯವರ ಚಪ್ಪರದತ್ತ ಸಾಗುವವರೆಗೂ ಒಂದೇ ಒಂದು ಮೀನನ್ನು ಕೂಡ

ಹಿಡಿಯಲು ಸಾಧ್ಯವಾಗಲಿಲ್ಲ. ಮೀನುಗಾರಿಕೆಗೆ ತೊಡಗಿದ ಇವರನ್ನು ಗಮನಿಸಿದ ರಂಪಣಿಯವರು ಇವರೊಂದಿಗೆ ಜಗಳಕ್ಕೆ ಮುಂದಾದಾಗ ಗುರುಗಳು ತಡೆದು ನಿಲ್ಲಿಸಿ ನೀವು ಅವರ ಮೇಲೆ ಯಾವ ಕ್ರಮ ತೆಗೆದುಕೊಳ್ಳುವುದು ಬೇಡ. ಪಾಪ ಅವರು ಅವರ ಹೊಟ್ಟೆಪಾಡಿಗಾಗಿ ಬಂದಿದ್ದಾರೆ. ನೀವು ಅವರ ದೋಣಿಗಳನ್ನು ಎಳೆದು ಹಾಕಿ ತೊಂದರೆ ಮಾಡಬೇಡಿ. ಅವರ ಪಾಡಿಗೆ ಅವರನ್ನು ಬಿಟ್ಟುಬಿಡಿ ಎನ್ನುತ್ತಾರೆ. ಗುರುಗಳ ಮಾತನ್ನು ಕೇಳಿ ರಂಪಣಿಯವರು ಶಾಂತರಾದರು. ಆದರೆ ಅಲ್ಲಿಂದ ವಾಪಸು ಕೊಡಿಕನ್ಯಾನಕ್ಕೆ ಬರುವವರೆಗೂ ಅವರು ಬಲೆಯನ್ನು ಬೀಸುತ್ತಾ ಬಂದರೂ ಕೂಡ ಒಂದೇ ಒಂದು ಮೀನನ್ನು ಹಿಡಿಯುವಲ್ಲಿ ಇವರು ಯಶಸ್ವಿಯಾಗಲಿಲ್ಲ"[9] ಎಂದು ಗುರುಗಳ ಮಹಿಮೆಯನ್ನು ಬಣ್ಣಿಸಲಾಗಿದೆ.

ಹೀಗೆ ಈ ಮೇಲಿನ ಎಲ್ಲಾ ಸಂಗತಿಗಳು ಮೊಗವೀರ ಸಮಾಜ ಬಾಂಧವರಲ್ಲಿನ ಗುರುಗಳ ಮಹಿಮೆ, ಗುರು ಪರಂಪರೆಯ ಹಿನ್ನೆಲೆ ಹಾಗೂ ಮೊಗವೀರ ಸಮುದಾಯದವರು ಕುಲ ಗುರುಗಳ ಮೇಲೆ ಇಟ್ಟ ಶ್ರದ್ಧೆ, ಭಕ್ತಿ, ನಂಬಿಕೆ, ಗೌರವಗಳನ್ನು ಸೂಚಿಸುತ್ತಿದೆ. ಶ್ರೀ ಕ್ಷೇತ್ರ ಬೆಣ್ಣೆ ಕುದ್ರು ಕುಲಮಹಾ ಸ್ತ್ರೀ ಅಮ್ಮನವರ ದೇವಸ್ಥಾನದಲ್ಲಿ ಪ್ರಾರಂಭವಾದ ಮೊಗವೀರ ಸಮಾಜ ಬಾಂಧವರ ಗುರು ಪರಂಪರೆ ದೀರ್ಘಕಾಲದ ವರೆಗೆ ಮುಂದುವರೆದಿರುವುದು ಕ್ಷೇತ್ರಕಾರ್ಯ ಹಾಗೂ ಲಭ್ಯವಿರುವ ವಿವಿಧ ದಾಖಲೆಗಳ ಆಧಾರದಿಂದ ತಿಳಿದು ಬರುತ್ತದೆ. ಅಲ್ಲವೇ ಬಾರ್ಕೂರು, ಬಗ್ವಾಡಿ ಮಂಗಳೂರು ಹೋಬಳಿಯ ಮೊಗವೀರ ಸಮಾಜದ ಮುಖ್ಯಸ್ಥರು, ಹಿರಿಯರು, ಗುರಿಕಾರರು ಸೇರಿಕೊಂಡು ಈ ಗುರುಪರಂಪರೆಯನ್ನು ಯಥಾ ಸ್ಥಿತಿಯಲ್ಲಿ ಕಾಯ್ದುಕೊಂಡು ಬರಲು ಪ್ರಯತ್ನಿಸಿರುವುದು ಸಮುದಾಯದ ಗುರುಪರಂಪರೆಯ ಹಿರಿಮೆಯಾಗಿದೆ.

ಕೊನೆ ಟಿಪ್ಪಣಿ

1. ಮೊಗವೀರ ಸಿಂಚನ: ಪ್ರಕಾಶಕರು– ಮೊಗವೀರ ಯುವ ಸಂಘಟನೆ (ರಿ) ಉಡುಪಿ ಜಿಲ್ಲೆ, ಪು. ಸಂ – 27
2. ಸತೀಶ ಎಸ್ ಅಮೀನ್ (ವಕ್ತೃ), ಅಧ್ಯಕ್ಷರು ಬಾರಕೂರು ಮೊಗವೀರ ಸಂಯುಕ್ತ ಸಭಾ(ರಿ) ಬೆಣ್ಣೆಕುದ್ರು, ಬಾರಕೂರು.
3. ವೆಂಕಟರಮಣ ಪುಣಿಂಚತ್ತಾಯ: ಮೊಗವೀರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಪು.ಸಂ – 43
4. ಮೊಗವೀರ ಸಿಂಚನ: ಪ್ರಕಾಶಕರು– ಮೊಗವೀರ ಯುವ ಸಂಘಟನೆ (ರಿ)

ಉಡುಪಿ ಜಿಲ್ಲೆ, ಪು. ಸಂ – 29

5. ಶ್ರೀ. ಶಿವಾನಂದ (ಹಿರಿಯ ವಕ್ತೃ), ಪ್ರಧಾನ ಅರ್ಚಕರು ಶ್ರೀ ಕ್ಷೇತ್ರ ಬೆಣ್ಣೆಕುದ್ರು ಬಾರಕೂರ.
6. ಶ್ರೀ. ರಾಮದಾಸ.ಯು, (ಹಿರಿಯ ವಕ್ತೃ), ಗುರಿಕಾರರು, ಶ್ರೀ ಕ್ಷೇತ್ರ ಬೆಣ್ಣೆಕುದ್ರು ಬಾರಕೂರ.
7. ಮೊಗವೀರ ಸಿಂಚನ: ಪ್ರಕಾಶಕರು– ಮೊಗವೀರ ಯುವ ಸಂಘಟನೆ (ರಿ) ಉಡುಪಿ ಜಿಲ್ಲೆ, ಪು. ಸಂ – 32
8. ಶ್ರೀ. ಬಾಬು ಮೆಂಡನ್, (ಹಿರಿಯ ವಕ್ತೃ), ಹೊಸಳ್ಳಿ ಗ್ರಾಮ ಬೆಣ್ಣೆಕುದ್ರು, ಬಾರಕೂರ.
9. ಮೊಗವೀರಸಿಂಚನ: ಪ್ರಕಾಶಕರು– ಮೊಗವೀರ ಯುವ ಸಂಘಟನೆ (ರಿ) ಉಡುಪಿ ಜಿಲ್ಲೆ, ಪು. ಸಂ – 33

ಪರಾಮರ್ಶನ ಗ್ರಂಥಗಳು:

1. ಮೊಗವೀರ ಸಿಂಚನ: ಪ್ರಕಾಶಕರು – ಮೊಗವೀರ ಯುವ ಸಂಘಟನೆ (ರಿ) ಉಡುಪಿ ಜಿಲ್ಲೆ
2. ಸದಾನಂದ ಕೆ. ಉಚ್ಚಿಲ, ಮೊಗವೀರ ಸಮಾಜ – ಒಂದು ಅಧ್ಯಯನ, ದ.ಕನ್ನಡ ಮೊಮ ಸಂಘ, ಉಚ್ಚಿಲ, ಮೊಮ, ಸೇವಾ ಸಂಘ (ಬಾಗ್ವಾಡಿ ಹೋಬಳಿ)2014.
3. ವೆಂಕಟರಮಣ ಪುಣಿಂಚತ್ತಾಯ, ಮೊಗವೀರರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು. 1993
4. ಡಾ. ಶ್ರೀಧರ್ ಉಪ್ಪಿನಗಣಪತಿ, ಕಡಲಿಗರ ಸಂಸ್ಕೃತಿ, ಅದಿತಿ ಪ್ರಕಾಶನ ಕುಮಟಾ.
5. ಡಾ. ಕುಸುಮ ಎಸ್ ಕುಂದರ್, ಮುಂಬೈಯಲ್ಲಿ ಮೊಗವೀರ ಸಮುದಾಯ ಒಂದು ಸಾಂಸ್ಕೃತಿಕ ಅಧ್ಯಯನ, ಮುಂಬೈ ವಿ.ವಿ

***

ಕಿತ್ತೂರು ಇತಿಹಾಸ ಶೋಧಕ: ತಲ್ಲೂರು ರಾಯನಗೌಡ

1

ಡಾ. ರಾಜಶೇಖರ ಬಿರಾದಾರ

ಪ್ರಾಧ್ಯಾಪಕರು
ಶ್ರೀ ಸಿ.ಎಂ. ಮಾಮನಿ ಸರಕಾರಿ ಪ್ರಥಮ ದರ್ಜೆ ಕಾಲೇಜು
ಯರಗಟ್ಟಿ–591129, ಬೆಳಗಾವಿ ಜಿಲ್ಲೆ

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್
ಗುಣಿಗಳ್
ಅಭಿಮಾನಿಗಳತ್ಯುಗ್ರರ್
ಗಭೀರ ಚಿತ್ತರ್ ವಿವೇಕಿಗಳ್ ನಾಡವರ್ಗಳ್
(ಕವಿರಾಜಮಾರ್ಗಂ, 2–28)

ಕನ್ನಡದ ಮೊದಲ ಉಪಲಬ್ಧ ಕೃತಿಯಾಗಿರುವ ಕವಿರಾಜಮಾರ್ಗದಲ್ಲಿನ ಈ ಸಾಲುಗಳು 9ನೆಯ ಶತಮಾನದ ಕನ್ನಡಿಗರ ಗುಣ–ಸ್ವಭಾವ, ಸ್ವಾಭಿಮಾನ ಪರಂಪರೆಯನ್ನು ಬಿಂಬಿಸುತ್ತವೆ. ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಕಥನಗಳನ್ನು ಮೆಲುಕುಹಾಕಿದರೆ ಶ್ರೀವಿಜಯನ ಈ ಮಾತುಗಳು ಬೆಳಗಾವಿಯ ವೀರಪರಂಪರೆಯನ್ನು ಉದ್ದೇಶಿಯೇ ಹೇಳಿದವು ಎನಿಸುತ್ತವೆ. ಬೆಳಗಾವಿಯು ಕಿತ್ತೂರು ರಾಣಿ ಚನ್ನಮ್ಮ, ಸರದಾರ ಗುರುಸಿದ್ಧಪ್ಪ, ಅಮಟೂರು ಬಾಳಪ್ಪ, ಗಜವೀರ, ಬಿಚ್ಚುಗತ್ತಿ ಚೆನ್ನಬಸಪ್ಪ, ವಡ್ಡರ

ಯಲ್ಲಣ್ಣ, ಅವರಾದಿ ವೀರಪ್ಪ, ಸಂಗೊಳ್ಳಿ ರಾಯಣ್ಣ, ಗಂಗಾಧರರಾವ ದೇಶಪಾಂಡೆ, ಹೂಲಿ ವೆಂಕಟರೆಡ್ಡಿ, ಶಿವಾಪುರದ ಸಾತಪ್ಪ ಟೋಪಣ್ಣವರ ಸೇರಿದಂತೆ ಹಲವು ವೀರ ಸ್ವಾಭಿಮಾನದ ಕಲಿಗಳ ನೆಲೆವೀಡಾಗಿದೆ. ಈ ಸ್ವಾಭಿಮಾನ ಪರಂಪರೆಯಲ್ಲಿ ತಲ್ಲೂರು ರಾಯನಗೌಡರದು ಬಹುಮುಖ ಪ್ರತಿಭೆಯ ವಿಶಿಷ್ಟವಾದ ಹೆಸರು. ಅವರು ಏಕಕಾಲಕ್ಕೆ ಸ್ವಾತಂತ್ರ್ಯ ಹೋರಾಟಗಾರ, ಏಕೀಕರಣದ ರೂವಾರಿ, ಇತಿಹಾಸ ಸಂಶೋಧಕ, ಸಾಹಿತ್ಯಾರಾಧಕ, ಉತ್ತಮ ವಾಗ್ಮಿ, ಅಮೂಲ್ಯ ಕೃತಿಗಳ ಲೇಖಕ, ಸಂಪಾದಕ, ಸಮಾಜ ಸುಧಾರಕ ಮತ್ತು ಅಪ್ಪಟ ಕನ್ನಡಪ್ರೇಮಿಯಾಗಿದ್ದರು.

ಬೆಳಗಾವಿ ಜಿಲ್ಲೆಯಲ್ಲಿ ಅನೇಕ ಮಹನೀಯರು ತಮ್ಮ ಮನೆ–ಮಠ, ಬಂಧು–ಬಳಗವನ್ನು ಲೆಕ್ಕಿಸದೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅಂಥವರಲ್ಲಿ ತಲ್ಲೂರ ರಾಯನಗೌಡರ ಹೆಸರು ಕೂಡ ಪ್ರಮುಖವಾಗಿದೆ. ಅವರು ಗಾಂಧೀಜಿಯವರ ಭಾಷಣದಿಂದ ಪ್ರಭಾವಿತರಾಗಿ ತಮ್ಮ ಎಲ್.ಎಲ್.ಬಿ. ಶಿಕ್ಷಣವನ್ನು ಮೊಟಕುಗೊಳಿಸಿ ಸ್ವಂತ ಊರಾದ ತಲ್ಲೂರಲ್ಲಿ ನೆಲೆಸಿ ಹತ್ತಿರದ ಮುರಗೋಡದ ಗುಡ್ಡದಲ್ಲಿ ಭೂಗತರಾಗಿದ್ದುಕೊಂಡು ತಮ್ಮ ಸಹಚರರೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳುವ ಮೂಲಕ ಜೈಲುವಾಸ ಅನುಭವಿಸಿದವರು. ಸ್ವಾತಂತ್ರ್ಯ ನಂತರ ಕರ್ನಾಟಕ ಏಕೀಕರಣ ಮತ್ತು ಕಿತ್ತೂರು ಸಂಸ್ಥಾನದ ಇತಿಹಾಸ ಸಂಶೋಧನೆ, ಬರೆವಣಿಗೆ, ಸೈದ್ಧಾಂತಿಕ ರಾಜಕಾರಣ, ಸಮಾಜ ಸುಧಾರಣೆಯಂತಹ ಹಲವು ರಚನಾತ್ಮಕ ಉಪಯುಕ್ತ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು.

ಹಿಂದಿನ ಸವದತ್ತಿ ತಾಲೂಕಿನ ಈಗಿನ ಯರಗಟ್ಟಿ ತಾಲೂಕಿನ ತಲ್ಲೂರು ಗ್ರಾಮದ ಗೌಡರ ಮನೆತನದ ಲಿಂಗನಗೌಡ ಮತ್ತು ಬಸಮ್ಮ ದಂಪತಿಗಳ ಎರಡನೆಯ ಮಗನಾಗಿ ರಾಯನಗೌಡರು ಜನಿಸಿದರು. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡ ಅವರು ಅಜ್ಜಿ ಸಿದ್ದಲಿಂಗಮ್ಮನವರ ಆರೈಕೆಯಲ್ಲಿ ಬೆಳೆದರು. ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದು, ಎಲ್.ಎಲ್.ಬಿ. ವ್ಯಾಸಂಗಕ್ಕೆ ಮುಂಬೈಗೆ ತೆರಳಿದರು. ಮಹಾತ್ಮಾ ಗಾಂಧೀಜಿಯವರ ಹೋರಾಟ, ಸತ್ಯಾಗ್ರಹ, ಬರೆವಣಿಗೆ ಹಾಗೂ ಭಾಷಣಗಳಿಂದ ಪ್ರೇರೇಪಿತರಾಗಿ ವ್ಯಾಸಾಂಗವನ್ನು ತ್ಯಜಿಸಿ, ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. 1937ರಿಂದ 1942ರವರೆಗೆ ಹಲವು ಹೋರಾಟಗಳಲ್ಲಿ (ಅಸ್ಪೃಶ್ಯತೆ ನಿವಾರಣೆ ಚಳವಳಿ, ಅಸಹಕಾರ ಚಳವಳಿ, ಭಾರತ ಬಿಟ್ಟು ತೊಲಗಿ ಚಳವಳಿ ಹಾಗೂ ವೈಯಕ್ತಿಕ ಸತ್ಯಾಗ್ರಹ) ಸಕ್ರಿಯವಾಗಿ ತೊಡಗಿಸಿಕೊಂಡರು. 1940ರಲ್ಲಿ ಮಹಾತ್ಮಾ ಗಾಂಧೀಜಿಯವರ ಕರೆಯ ಮೇರೆಗೆ ವೈಯಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಂಡರು.

ಮುರಗೋಡದಲ್ಲಿ ಸತ್ಯಾಗ್ರಹದಲ್ಲಿ ತೊಡಗಿದ್ದಾಗ ಪೋಲೀಸರಿಂದ ಬಂಧಿತರಾದರು. ಗಾಂಧೀಜಿಯವರ ಕರೆಗೆ ಮನ್ನಣೆಯಿತ್ತು ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಬ್ರಿಟಿಷರ ವಿರುದ್ಧ ಬುಡಮೇಲು ಕೃತ್ಯಗಳ (ಭೂಗತ ಚಟುವಟಿಕೆಗಳು) ಹೋರಾಟ ನಡೆಸಿದರು. ರಾಯನಗೌಡರನ್ನು ಸೆರೆಹಿಡಿಯುವಲ್ಲಿ ವಿಫಲರಾದ ಪೋಲೀಸರು ತಲ್ಲೂರಿಗೆ ಬಂದು ಇವರ ವಯೋವೃದ್ಧ ತಂದೆಯವರಿಗೆ ಹಿಂಸೆ ಕೊಟ್ಟರು. ಇದರಿಂದ ವಿಚಲಿತರಾಗದ ರಾಯನಗೌಡರು ತಮ್ಮ ಭೂಗತ ಚಟುವಟಿಕೆಗಳನ್ನು ನಿಲ್ಲಿಸಲಿಲ್ಲ. ಪಟ್ಟುಬಿಡದ ಬ್ರಿಟಿಷರು ಇವರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡರು. ಮತ್ತೊಮ್ಮೆ ಬಂಧಿತರಾದ ರಾಯನಗೌಡರು ಹಿಂಡಲಗಾ, ಯರವಾಡ ಜೈಲುಗಳಲ್ಲಿ ಸೆರೆವಾಸ ಅನುಭವಿಸಿದರು. ರಾಯನಗೌಡರ ತಂದೆಯವರು ನಿಧನರಾದಾಗ ಅವರ ಶವಸಂಸ್ಕಾರಕ್ಕೂ ಬ್ರಿಟಿಷರು ಅನುಮತಿಯನ್ನು ನೀಡದೆ ರಾಯನಗೌಡರನ್ನು ಬಂಧಿಸಲು ಹೊಂಚುಹಾಕಿಕೊಂಡು ಕಾಯುತ್ತಾರೆ. ಆದರೆ ರಾಯನಗೌಡರು ಕುರಿ ಕಾಯುವ ವೇಷದಲ್ಲಿ ಬಂದು ತಮ್ಮ ತಂದೆಯವರಿಗೆ ಅಂತಿಮ ನಮನ ಸಲ್ಲಿಸಿ ಹೋಗುತ್ತಾರೆ. ಇಂತಹ ಕ್ಲಿಷ್ಟ ಪರಿಸ್ಥಿತಿಗಳ ಮಧ್ಯೆಯೂ ತಲ್ಲೂರಿನ ಜಂಗ್ಲೆಪ್ಪನವರ, ಈಟಿ ಬಸಪ್ಪ ಅವರೊಂದಿಗೆ ಶಿವಾಪುರದ ಫಕೀರಯ್ಯ ವಸ್ತ್ರದ, ಸಾತಪ್ಪ ಟೋಪಣ್ಣವರ ಸೇರಿದಂತೆ ಅನೇಕ ಯುವಕರಿಗೆ ಮಾರ್ಗದರ್ಶನ ಮಾಡಿದರು. ಜೈಲಿನಿಂದ ಮರಳಿದ ನಂತರವೂ ಭೂಗತರಾಗಿ ಹೋರಾಟವನ್ನು ಮುಂದುವರೆಸಿದರು.

'ಸೋಲಿಲ್ಲದ ಸರದಾರರು' ಎಂದು ಬೀಗುತ್ತಿದ್ದ ಬ್ರಿಟಿಷರಿಗೆ ಮೊದಲ ಸೋಲಿನ ರುಚಿ ತೋರಿಸಿದ ಕಿತ್ತೂರು ಸಂಸ್ಥಾನದ ಮಹತ್ವವನ್ನು ಅರಿತಿದ್ದ ರಾಯನಗೌಡರು ಅದರ ಇತಿಹಾಸವನ್ನು ಮುಂದಿನ ತಲೆಮಾರಿಗೆ ತಿಳಿಸಿಕೊಡಲು ಸಮಾನಮನಸ್ಕರ ಜೊತೆಗೂಡಿದರು. ನಾಡು-ನುಡಿಗೆ ಶ್ರಮಿಸುತ್ತಿದ್ದ ಬಸರಿಗಿಡದ ವೀರಪ್ಪನವರ ಮಾರ್ಗದರ್ಶನ, ಕಿತ್ತೂರು ಸಂಸ್ಥಾನದ ಸಾಹಿತ್ಯದ ಸಂಗ್ರಹಣೆಯ ಭಾರಹೊತ್ತು ಮನೆಮಠ ಮರೆತು ದುಡಿಯುತ್ತಿದ್ದ ಬೈಲಹೊಂಗಲದ ದೊಡ್ಡಭಾವೆಪ್ಪ ಮೂಗಿಯವರ ಸಹಯೋಗ, ವೀರಭದ್ರಪ್ಪ ಸೀಗೀಹಳ್ಳಿ ಹಾಗೂ ಕಲ್ಮೇಶ್ವರ(ಕಲ್ಲಪ್ಪ) ಶೆಟ್ಟರ ಅವರ ಸಹಕಾರದೊಂದಿಗೆ ಬೈಲಹೊಂಗಲದ ಕಲ್ಮಠದ ಆವರಣದಲ್ಲಿ 1946ರಲ್ಲಿ ರಾಣಿ ಚೆನ್ನಮ್ಮ ಇತಿಹಾಸ ಮಂಡಲವನ್ನು ಸ್ಥಾಪಿಸಿದರು. ಸರಕಾರದ ಒಪ್ಪಿಗೆ ಪಡೆದು ಕಿತ್ತೂರಿನ ಹಳೆಯ ಕೋಟೆಯ ಆವರಣ, ಹಾಳಾದ ಅರಮನೆ ಮತ್ತು ಕಿತ್ತೂರಿನ ದೊರೆಗಳ, ಗುರುಗಳ, ಕಲ್ಮಠದ ಶೋಧ ಕಾರ್ಯವನ್ನು ಕೈಗೊಂಡರು. ಇದರಿಂದ ಕಿತ್ತೂರು ಅರಸರ ನಾನೆ(ಖಡ್ಗ, ಡಾಲು) ಇತ್ಯಾದಿ ಲಭ್ಯವಾದವು. ಬೈಲಹೊಂಗಲದ

ಕಲ್ಮಠವನ್ನು ಗುರುತಿಸಿ, ಇತಿಹಾಸ ಮಂಡಲದ ಪರವಾಗಿ ಅದರ ಜೀರ್ಣೋದ್ಧಾರವನ್ನು ಕೈಗೊಂಡರು. ಬೈಲಹೊಂಗಲದಲ್ಲಿಯೇ ನೆಲೆನಿಂತು, ಚನ್ನಮ್ಮ ತಾಯಿಯ ಸಮಾಧಿಯನ್ನು ಕಟ್ಟಿಸಿ, ಅದರ ಮೇಲೆ ಆಕೆಯ ಪುತ್ಥಳಿಯನ್ನು ಪ್ರತಿಷ್ಠಾಪಿಸಿದರು. ಆ ಮೂಲಕ ಕಿತ್ತೂರು ಚನ್ನಮ್ಮಳ ವೀರ ಹೋರಾಟದ ಬದುಕನ್ನು ಜಗತ್ತಿಗೆ ಸಾರಿದರು. ಕಿತ್ತೂರು ಅರಮನೆಯಲ್ಲಿದ್ದ ಮದ್ದಿನ ಸಂಗ್ರಹದ ಕೋಣೆ, ಆಯುಧ ಸಂಗ್ರಹದ ಕೋಣೆ, ತೋಪುಖಾನೆ, ಹಯಶಾಲೆ, ಗಜಶಾಲೆ ಮತ್ತು ಅರಸರ ಪೂರ್ವಜರ ಸಮಾಧಿಗಳನ್ನು ಕಂಡುಹಿಡಿದು ಕಿತ್ತೂರಿನ ಇತಿಹಾಸದ ಮೇಲೆ ಬೆಳಕುಚೆಲ್ಲಿದರು. ರಾಯನಗೌಡರ ಈ ಹಾದಿಯ ಪಯಣ ರೋಚಕವಾದುದು.

ಇಂಗ್ಲೆಂಡಿಗೆ ಪ್ರಯಾಣ:

ಕಿತ್ತೂರಿನ ಇತಿಹಾಸಕ್ಕೆ ಸಂಬಂಧಿಸಿದಂತೆ ಆಕರ ಸಾಮಗ್ರಿಗಳ ಸಂಗ್ರಹಕ್ಕಾಗಿ ಲಂಡನ್‌ವರೆಗೂ ಹೋಗಿ ಅಲ್ಲಿನ ಕಿತೂರು ಸಂಸ್ಥಾನಕ್ಕೆ ಸಂಬಂಧಿಸಿದ ಕಾಗದಪತ್ರಗಳನ್ನು ಭಾರತಕ್ಕೆ ತಂದ ಶ್ರೇಯಸ್ಸು ರಾಯನಗೌಡರಿಗೆ ಸಲ್ಲುತ್ತದೆ. 'ಕಿತ್ತೂರಿನ ಇತಿಹಾಸಕ್ಕೆ ಸಂಬಂಧಿಸಿದ ಮಹತ್ವದ ದಾಖಲೆಗಳು ಇಂಗ್ಲೆಂಡಿನಲ್ಲಿ ದೊರೆಯುತ್ತವೆ' ಎಂಬ ಮಾಹಿತಿಯನ್ನು ಪಡೆದ ರಾಯನಗೌಡರು 'ಅವುಗಳನ್ನು ಹೇಗಾದರೂ ತರಬೇಕು' ಎಂದು ಆಲೋಚಿಸುತ್ತಾರೆ. 194ರಲ್ಲಿ ಬಸರಿಗಿಡದ ವೀರಪ್ಪನವರ ಜೊತೆಗೂಡಿ ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿದರು. ಯುರೋಪ್ ಖಂಡದ ಹಾಲಂಡ್, ನಾರ್ವೆ, ಇಟಲಿ, ಫ್ರಾನ್ಸ್, ಸ್ವೀಡನ್ ದೇಶಗಳ ಸಂಸ್ಕೃತಿ ಪರಂಪರೆಯನ್ನು ಅಧ್ಯಯನ ಮಾಡಿ, ಲಂಡನ್ ನಗರಕ್ಕೆ ಬಂದರು. ಆಗ ಬಸರಿಗಿಡದ ವೀರಪ್ಪನವರ ಆರೋಗ್ಯ ಹದಗೆಟ್ಟ ಕಾರಣ ರಾಯನಗೌಡರಿಗೆ ಹಣದ ವ್ಯವಸ್ಥೆ ಮಾಡಿ, ಅವರು ಭಾರತಕ್ಕೆ ಮರಳಿದರು. ತಲ್ಲೂರ ರಾಯನಗೌಡರು ಲಂಡನ್ನಿನಲ್ಲಿರುವ ಇಂಡಿಯಾ ಹೌಸ್ ಮತ್ತು ಬ್ರಿಟಿಷ್ ಮ್ಯೂಜಿಯಂನಲ್ಲಿರುವ ಕಿತ್ತೂರ ಸಂಸ್ಥಾನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹುಡುಕಲು ಪ್ರಾರಂಭಿಸಿದರು. ಥೇಮ್ಸ್ ನದಿ ಸೇತುವೆ, ಬಕಿಂಗ್ ಹ್ಯಾಮ್ ಅರಮನೆಗಳನ್ನು ನೋಡಿ, ಇಂಡಿಯಾ ಹೌಸ್ ಗ್ರಂಥಾಲಯಕ್ಕೆ ಭೇಟಿ ಕೊಡಲು ಹೋದಾಗ ಅವರಿಗೆ ಪ್ರವೇಶವನ್ನು ನಿರಾಕರಿಸಲಾಯಿತು. ರಾಯನಗೌಡರು ಅಲ್ಲಿಗೆ ಸರಕಾರದ ಪ್ರತಿನಿಧಿಗಳಾಗಿ ಹೋಗಿರದೆ ಖಾಸಗಿ ವ್ಯಕ್ತಿಯಾಗಿ ಲಂಡನ್ ಪ್ರಯಾಣ ಕೈಗೊಂಡಿದ್ದರಿಂದ ಮ್ಯೂಜಿಯಂನ ಭೇಟಿ ಸಾಧ್ಯವಾಗಲಿಲ್ಲ.

ಇಂಗ್ಲೆಂಡ್‌ನ ರಾಣಿ ಎಲಿಜಬೆತ್ ಭೇಟಿ:

ಇಂಡಿಯಾ ಹೌಸ್ ಗ್ರಂಥಾಲಯದ ಭೇಟಿಗೆ ಅವಕಾಶ ನಿರಾಕರಿಸಿದಾಗ

ಪಟ್ಟು ಸಡಿಲಿಸದ ರಾಯನಗೌಡರು ನೇರವಾಗಿ ಬ್ರಿಟನ್‌ನ ರಾಣಿ ಎಲಿಜಬೆತ್ ಅವರನ್ನು ಸಂಪರ್ಕಿಸಿದರು. ಕಿತ್ತೂರಿನ ಇತಿಹಾಸ ಕುರಿತು ಮನವರಿಕೆ ಮಾಡಿದಾಗ ರಾಣಿಯು ಅವರಿಗೆ ಇಂಡಿಯಾ ಹೌಸ್ ಮತ್ತು ಬ್ರಿಟಿಷ ಮ್ಯುಜಿಯಂ ನೋಡಲು ಅವಕಾಶ ಕಲ್ಪಿಸಿದ್ದಲ್ಲದೆ ಕಿತ್ತೂರಿನ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಪಡೆಯಲು ಅನುಕೂಲ ಮಾಡಿಕೊಟ್ಟರು. ಕಿತ್ತೂರು ಸಂಸ್ಥಾನಕ್ಕೆ ಸಂಬಂಧಿಸಿದ ಕಾಗದ–ಪತ್ರಗಳು, ಸಂಗೊಳ್ಳಿ ರಾಯಣ್ಣ ಬ್ರಿಟಿಷರೊಡನೆ ಹೋರಾಡಿದ ಸಂಗತಿಗಳ ದಾಖಲೆಗಳನ್ನಲ್ಲದೆ ಕೈಪಿಯತ್ತುಗಳು, ಆಯುಧಗಳು, ತಾಳೆಗರಿಗಳು, ವೇಷಭೂಷಣಗಳು, ಕಿತ್ತೂರಿನ ಸಾಹಿತ್ಯ – ಎಲ್ಲವನ್ನು ತೆಗೆದುಕೊಂಡು ಭಾರತಕ್ಕೆ ಮರಳಿದರು.

ಕಿತ್ತೂರು ಸಂಶೋಧನಾ ಸಾಹಿತ್ಯ:

ಇಂಗ್ಲೆಂಡಿನಿಂದ ತಂದ ಮಹತ್ವದ ದಾಖಲೆಗಳನ್ನು ಪರಿಶೀಲಿಸಿ, ತಲ್ಲೂರು ರಾಯನಗೌಡರು ಭಾಷಣ, ಬರೆವಣಿಗೆಗಳ ಮೂಲಕ ಕಿತ್ತೂರು ಸಂಸ್ಥಾನದ ಇತಿಹಾಸವನ್ನು ದಾಖಲಿಸುವ ಮಹತ್ವದ ಕಾರ್ಯವನ್ನು ಮಾಡಿದರು. ಇವರ ಬರೆಹಗಳು ಸಂಯುಕ್ತ ಕರ್ನಾಟಕ, ಕರ್ಮವೀರ ವಾರಪತ್ರಿಕೆ, ಪಾಟೀಲ ಪುಟ್ಟಪ್ಪನವರ 'ಪ್ರಪಂಚ' ಮೊದಲಾದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ರಾಣಿ ಚೆನ್ನಮ್ಮ ಇತಿಹಾಸ ಮಂಡಲದ ಮೂಲಕ ಹಲವು ಉಪಯುಕ್ತ ಕೃತಿಗಳನ್ನು ಪ್ರಕಟಿಸಿದರು. ಅವುಗಳಲ್ಲಿ 'ಮಲ್ಲಸರ್ಜ ಕಾವ್ಯ' ಮತ್ತು 'ಕಿತ್ತೂರು ಬಂಡಾಯ' ಕೃತಿಗಳು ಪ್ರಮುಖವಾದುವುಗಳಾಗಿವೆ.

ಮಲ್ಲಸರ್ಜ ಕಾವ್ಯ

ರುದ್ರಕವಿಯು ಬರೆದ 'ಮಲ್ಲಸರ್ಜ ಕಾವ್ಯ'ವನ್ನು ತಲ್ಲೂರು ರಾಯನಗೌಡರು ಸಂಪಾದಿಸಿದರು. ಮಲ್ಲಸರ್ಜನು ಈ ಕಾವ್ಯದ ಕಥಾನಾಯಕ. 'ಆತನು ಕಿತ್ತೂರು ಆಳುತ್ತಿರುವಾಗ ಪೇಶ್ವೆ ಭಾಜೀರಾಯನು ಕರ್ನಾಟಕಕ್ಕೆ ದಂಡೆತ್ತಿ ಬಂದನು. ಮಲ್ಲಸರ್ಜ ಪ್ರಭುವು ಪೇಶ್ವೆ ಭಾಜೀರಾಯನ ಸಾಮಂತನಾಗಿ ಅವನಿಗೆ ಕಪ್ಪ–ಕಾಣಿಕೆಗಳನ್ನು ಕೊಡಲು ನಿರಾಕರಿಸುತ್ತಾನೆ. ಶೇಗುಣಸಿ ಗೌಡರು ಸಂಧಾನಕಾರರಾಗಿ ಬಂದು ರಾಜನನ್ನು ಪೇಶ್ವೆಯ ಬಿಡಾರಕ್ಕೆ ಕರೆತಂದರು. ಕೂಡಲೇ ಪೇಶ್ವೆಗಳು ಮಲ್ಲಸರ್ಜನನ್ನು ರಾಜಬಂಧಿಯಾಗಿಸಿ ಪುಣೆಗೆ ಕರೆದೊಯ್ದರು. ಅಲ್ಲಿಯ ಸೆರೆಮನೆಯಲ್ಲಿ ಮಲ್ಲಸರ್ಜನಿಗೆ ಕ್ಷಯ ರೋಗವು ಅಂಟಿಕೊಂಡಿತು. ಮರಳಿ ಕಿತ್ತೂರಿಗೆ ಬರುವಷ್ಟರಲ್ಲಿ ರೋಗವು ಮತ್ತಷ್ಟು ಉಲ್ಬಣಗೊಂಡಿತು. ರಾಜವಾಡೆಗೆ ಬಂದಿಳಿದ ಮೂರು–ನಾಲ್ಕು ದಿನಗಳಲ್ಲಿ ಮಲ್ಲಸರ್ಜ ದೊರೆಯು ಮೃತಪಟ್ಟನು' ಎಂಬ ಸಂಗತಿಯನ್ನು ಈ ಕಾವ್ಯವು ಒಳಗೊಂಡಿದೆ. ಕಿತ್ತೂರಿನ ಇತಿಹಾಸದ ಮೇಲೆ ವಿಶೇಷ ಬೆಳಕು ಚೆಲ್ಲುವ ಈ ಕೃತಿಯು

ಕಾವ್ಯಾತ್ಮಕವಾಗಿ ರಚಿತವಾಗಿದೆ.

194ರಲ್ಲಿ ಪ್ರಕಟವಾದ ಈ ಕಾವ್ಯವು 'ಶರಣರ ನಾಡು ಕಿತ್ತೂರು' ಎಂಬ ದುಂಧುಬಿಯಿಂದ ಆರಂಭವಾಗುತ್ತದೆ. ಈ ಕಾವ್ಯವು 'ಪೇಶ್ವೆ ದಂಡಿನ ಪಯಣ', 'ಬಾಜಿರಾಯನ ಪಯಣ', 'ಮಲ್ಲಭೂಪನ ಸೈನ್ಯ ಸಿದ್ಧತೆ', 'ಸೇಗುಣಿಸಿ ಗೌಡರ ಕುಟಿಲ ರಾಯಭಾರ', 'ಮಲ್ಲಭೂಪನ ಮೇಲೆ ಕಾವಲು', 'ಬಾಜಿರಾಯನ ಮೇಜವಾನಿ', 'ಮಲ್ಲಭೂಪನಿಗೆ ಔತಣ', 'ಅತ್ತೆಯ ಮರಣ ವಾರ್ತೆ', 'ಮಲ್ಲಭೂಪನ ಹೃದ್ರೋಗ', 'ಮಲ್ಲಭೂಪನ ವ್ಯವಸ್ಥಾ ಪತ್ರ', 'ಮಲಭೂಪನ ಬಿಡುಗಡೆ', 'ಮಲ್ಲಭೂಪನ ಕಾಯಿಲೆ ಹಾಗೂ ಮರಣ', 'ಚೆನ್ನಮ್ಮ ರಾಣಿಯ ಪ್ರಲಾಪ' ಮತ್ತು 'ಸ್ಮಶಾನ ಯಾತ್ರೆ' ಎಂಬ ಒಟ್ಟು 13 ಭಾಗಗಳನ್ನು ಒಳಗೊಂಡಿದೆ.

ಕಿತ್ತೂರು ಬಂಡಾಯ

ಕಿತ್ತೂರು ಸಂಸ್ಥಾನದ ಇತಿಹಾಸಕ್ಕೆ ಸಂಬಂಧಿಸಿದಂತೆ ತಲ್ಲೂರು ರಾಯನಗೌಡರು ವಿಶೇಷ ಶ್ರಮವಹಿಸಿ ಸಿದ್ಧಪಡಿಸಿ ಕೃತಿಯೆಂದರೆ 'ಕಿತ್ತೂರು ಬಂಡಾಯ'. ಚೆನ್ನಮ್ಮ ರಾಣಿ ಇತಿಹಾಸ ಮಂಡಲ, ಬೈಲಹೊಂಗಲದಿಂದ 1947ರಲ್ಲಿ ಪ್ರಕಟವಾದ ಈ ಕೃತಿಯು ಚನ್ನಮ್ಮನ ಲಾವಣಿಯಿಂದ ಪ್ರಾರಂಭವಾಗುತ್ತದೆ. ಕಿತ್ತೂರಿನ ಇತಿಹಾಸಕ್ಕೆ ಸಂಬಂಧಿಸಿದಂತೆ ರಾಯನಗೌಡರು ವಿವಿಧ ಲೇಖಕರಿಂದ ಬರೆಸಿದ ಕನ್ನಡ ಮತ್ತು ಇಂಗ್ಲಿಷ್ ಲೇಖನಗಳನ್ನು ಸಂಪಾದಿಸಿ 'ಕಿತ್ತೂರು ಬಂಡಾಯ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. 'ಕನ್ನಡ ನಾಡಿನ ರಾಣಿ ಕಿತ್ತೂರು ಚನ್ನಮ್ಮ' (ತಲ್ಲೂರು ರಾಯನಗೌಡರು), 'ಕಿತ್ತೂರು ಸಂಸ್ಥಾನದ ಇತಿಹಾಸ' (ಕಲ್ಮೇಶ್ವರ ಚನ್ನಮಲ್ಲಪ್ಪ ಶ್ರೇಷ್ಠಿ), 'ಕಿತ್ತೂರು ಅರಸರು' (ಶೇ.ಗಿ. ಕಟ್ಟಿ), 'ಕಿತ್ತೂರು ರಾಜಮನೆತನಗಳು' (ವೀರಪ್ಪ ಬಸರಿಗಿಡದ), 'ಕಿತ್ತೂರು ಚೆನ್ನವ್ವ' (ಸರಸ್ವತಿದೇವಿ ಗೌಡರ), 'ವೀರರಾಣಿ ಕಿತ್ತೂರು ಚೆನ್ನವ್ವ' (ಕೀರ್ತನಕೇಸರಿ ಬಿ. ಶಿವಮೂರ್ತಿ ಶಾಸ್ತ್ರೀ), 'ಕನ್ನಡತಿಯ ಕ್ರಾಂತಿ ಕಿಡಿಯು' (ಪದ್ಮಾವತಿದೇವಿ ಅಂಗಡಿ), 'ಐತಿಹಾಸಿಕ ಕಾಗದ ಪತ್ರಗಳು' (ದೊಡ್ಡಭಾವೆಪ್ಪ ಮೂಗಿ), 'ವೀರ ಕನ್ನಡಿಗರ ಬೀಡು ಕಿತ್ತೂರು' (ಎಂ.ಪಿ. ವಾಲಿ), 'ಕಿತ್ತೂರ ದೇಸಗತಿ' (ರಾಜ ಪುರೋಹಿತರು), 'ಕಿತ್ತೂರ ದೇಶಗತಿ' (ನರಸಿಂಹಾಚಾರ್ಯ ಪುಣೇಕರ), 'ಚನ್ನವ್ವನ ಕಿತ್ತೂರು ನಾಟಕ' (ಬಸವರಾಜ ಕಟ್ಟೀಮನಿ), 'ಚೆನ್ನವ್ವ' (ದೇಸಾಯಿ ಪಾಂಡುರಂಗರಾವ), 'ಕಿತ್ತೂರಿನ ಕೊನೆಯ ಕಾಳಗ' (ಹೀರೇಮಠ ರಾಮಯ್ಯ ಚನಬಸಯ್ಯ), 'ಕಿತ್ತೂರಿನ ಕೊನೆಯು' (ಶೇ.ಗಿ. ಕಟ್ಟಿ), 'ಮಲ್ಲಸರ್ಜ ದೇಸಾಯರ ಸ್ಥಾನಬದ್ದತೆ' (ಮಲಿಕಸಾಹೇಬ), 'ಕಿತ್ತೂರು ರಾಜೇಂದ್ರ' (ಅಮೃತೇಶ), 'ಮಲ್ಲಸರ್ಜ' (ಕಾಸೀರಾಜ ಕವಿ), 'ಕಿತ್ತೂರ ಗೀತೆ' (ರುದ್ರಕವಿ),

'ಕಿತ್ತೂರು ಕೋಟೆಯ ನೋಟ' (ಆನಂದ ಕವಿ), 'ಕಳೆದ ಕಿತ್ತೂರು' (ಎಸ್.ಡಿ. ಇಂಚಲ), 'ಕಿತ್ತೂರ ರಾಣಿಯ ಸಮಾಧಿ ನೋಡಿ' (ಎಸ್.ಡಿ. ಇಂಚಲ), 'ಸೂಳೆ ಸರ್ಜರ ಪ್ರಣಯ' (ರುದ್ರಕವಿ) ಮತ್ತು 'ಸಂಗೊಳ್ಳಿ ರಾಯನಾಯಕನ ಬಂಡು' (ಶೇ.ಗಿ. ಕಟ್ಟಿ) ಎಂಬ ಮಹತ್ವದ ಲೇಖನಗಳನ್ನು ಈ ಕೃತಿಯು ಒಳಗೊಂಡಿದೆ. 1961ರಲ್ಲಿ ಬಿ.ಆರ್. ಪಂತುಲು ಅವರಿಗೆ ಕಿತ್ತೂರು ರಾಣಿ ಚನ್ನಮ್ಮಳ ಸಾಹಸಗಾಥೆಯನ್ನು ಪರಿಚಯಿಸಿ ಸಿನಿಮಾ ಆಗಿಸುವಲ್ಲಿ ತಲ್ಲೂರು ರಾಯನಗೌಡರು ಮಹತ್ವದ ಪಾತ್ರವಹಿಸಿದರು. ಜೊತೆಗೆ ಕಿತ್ತೂರು ರಾಣಿಯ ಸಾಹಸಗಳ ಪ್ರತೀಕವಾಗಿ ಹೆಣ್ಣುಮಕ್ಕಳಿಗಾಗಿ 'ಕಿತ್ತೂರು ಚನ್ನಮ್ಮ ಶಾಲೆ'ಯನ್ನು ಆರಂಭಿಸಿ, ಆಗಿನ ಪ್ರಧಾನ ಮಂತ್ರಿಗಳಾದ ಇಂದಿರಾ ಗಾಂಧಿಯವರಿಂದ ಉದ್ಘಾಟನೆ ಮಾಡಿಸಿದರು.

"ಪರಂಪರೆಯಲ್ಲಿ ಪ್ರಜ್ಞೆಯಿಲ್ಲದವನಿಗೆ ಈ ದೇಶವೂ ಅಷ್ಟೇ, ಪರದೇಶವೂ ಅಷ್ಟೇ. ಈ ಭಾಷೆಯೂ ಅಷ್ಟೇ, ಪರಭಾಷೆಯೂ ಅಷ್ಟೇ. ಅಂಥವನಿಗೆ ಉಪಜೀವನ ಮುಖ್ಯವಾಗಿರುತ್ತದೆಯೇ ಹೊರತು, ಜೀವನವಲ್ಲ. ವ್ಯಕ್ತಿಕೇಂದ್ರಿತವಾಗಿ ಬದುಕುವುದು ಉಪಜೀವನ, ಪರಂಪರೆಕೇಂದ್ರಿತವಾಗಿ ಬದುಕವುದು ಜೀವನ. ವ್ಯಕ್ತಿಕೇಂದ್ರಿತವಾದವನು ಪರಂಪರೆಗೆ ವಿಮುಖನಾಗಿ ಬೆಳೆಯುವುದರಿಂದ, ಅವನಿಗೆ ಸ್ವಂತ ಮನೆಯೂ ಅಷ್ಟೇ, ಬಾಡಿಗೆಮನೆಯೂ ಅಷ್ಟೇ. ಅವನು ತನ್ನ ಮನೆಯನ್ನು ಸಹ ಭೌತಿಕ ನೆಲೆಯಿಂದ ನೋಡುವವನೇ ಹೊರತು, ಅದರಾಚೆಯ ಸಾಂಸ್ಕೃತಿಕ ಮೌಲ್ಯದಿಂದ ನೋಡುವುದಿಲ್ಲ"(ಮಾರ್ಗ–6, ಪು. 66) ಎಂಬ ಎಂ.ಎಂ. ಕಲಬುರ್ಗಿಯವರ ಮಾತಿನಂತೆ ತಲ್ಲೂರು ರಾಯನಗೌಡರು ಪರಂಪರೆಯ ಪ್ರಜ್ಞೆಯುಳ್ಳ ವ್ಯಕ್ತಿಯಾದ್ದರು. ಆದ್ದರಿಂದ ವೈಯಕ್ತಿಕ ಹಿತಾಸಕ್ತಿಗಿಂತ ನಾಡು–ನುಡಿಯ ಇತಿಹಾಸ–ಪರಂಪರೆಗಳ ಪಾಲನೆ–ಪೋಷಣೆಯ ಮಹತ್ವದ ಜವಾಬ್ದಾರಿಯನ್ನು ನೆರವೇರಿಸಿದರು. ಸ್ವಾತಂತ್ರ್ಯ ಹೋರಾಟಗಾರಾಗಿ ಕರ್ನಾಟಕ ಏಕೀಕರಣ ಹೋರಾಟದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು, ಉತ್ತಮ ವಾಗ್ಮಿಗಳಾಗಿ, ಸಂಶೋಧಕ ಲೇಖಕರಾಗಿ, ಸಾಮಾಜಿಕ ಚಿಂತನಶೀಲರಾಗಿ, ತತ್ತ್ವನಿಷ್ಠ ರಾಜಕೀಯ ಧುರೀಣರಾಗಿ ಬಾಳಿ ಬದುಕಿದ ತಲ್ಲೂರು ರಾಯನಗೌಡರ ಸಾಧನೆಯ ಹಾದಿಯು ಇಂದಿನ ಪೀಳಿಗೆಗೆ ತಲುಪಬೇಕಾಗಿದೆ.

ಆಕರ ಗ್ರಂಥಗಳು:

1. ಬಸನಗೌಡ ಆರ್. ಪಾಟೀಲ : ಅಗ್ರಗಣ್ಯ ಸ್ವಾತಂತ್ರ್ಯ ಯೋಧ ತಲ್ಲೂರು ರಾಯನಗೌಡರು : ತಲ್ಲೂರು ರಾಯನಗೌಡ ವಿಶ್ವಸ್ಥ ಸಂಸ್ಥೆ, ಬೆಂಗಳೂರು, 2010
2. ಬಸನಗೌಡ ಆರ್. ಪಾಟೀಲ : ಸಂಶೋಧಕ ಸಾಹಿತಿ ತಲ್ಲೂರು ರಾಯನಗೌಡರು : ತಲ್ಲೂರು ರಾಯನಗೌಡ ವಿಶ್ವಸ್ಥ ಸಂಸ್ಥೆ, ಬೆಂಗಳೂರು, 2010
3. ಆರ್.ಎಫ್. ತಳವಾರ: ತಲ್ಲೂರು ರಾಯನಗೌಡರು : ವೀರಶೈವ ಅಧ್ಯಯನ ಸಂಸ್ಥೆ, ಗದಗ, 1991

***

ಬಯಲುಸೀಮೆಗೆ ಕಾಯಕ ಸಂಸ್ಕೃತಿ ಸಾರಿದ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ

1

ಡಾ.ಪ್ರಹ್ಲಾದ ಡಿ.ಎಂ.

ಕನ್ನಡ ಉಪನ್ಯಾಸಕರು

ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ

ಕೊಪ್ಪಳ ವಿಶ್ವವಿದ್ಯಾಲಯ–583236

prahaladadm1993@gmail.com

ಅವ ಕಾಯಕವಾದಡೂ ಸ್ವಕಾಯಕವ ಮಾಡಿ
ಗುರು ಲಿಂಗ ಜಂಗಮದ ಮುಂದಿಟ್ಟು,
ಒಕ್ಕುದ ಹಾರೈಸಿ, ಮಿಕ್ಕುದ ಕೈಕೊಂಡು
ವ್ಯಾಧಿ ಬಂದಡೆ ನರಳು, ಬೇನೆ ಬಂದಡೆ ಒರಲು,
ಜೀವ ಹೊದಡೆ ಸಾ, ಇದಕ್ಕಾ ದೇವರ ಹಂಗೇಕೆ,
ಭಾಪು ಲದ್ದೆಯ ಸೋಮಾ. (ಹುಲ್ಲು ಹೊರುವ ಕಾಯಕದ ಸೋಮಯ್ಯ)

ಯಾವುದೇ ಕೆಲಸವನ್ನು ಮಾಡಿದರೂ ತನ್ನ ಅತ್ಮ, ಮನಸ್ಸು, ಸ್ವ–ಇಚ್ಛೆಯಿಂದ ಮಾಡಿ ಗುರುಲಿಂಗ ಜಂಗಮರಿಗೆ ದಾನವನ್ನು ಮಾಡುವುದೇ ನಿಜವಾದ ಕಾಯಕ, ಅದರಲ್ಲಿ ಮಿಕ್ಕಿದನ್ನು ಸಮಾಜದಲ್ಲಿನ ವ್ಯಾಧಿ, ರೋಗಗಳಿಂದ ಬಳಲುತ್ತಿರುವವರಿಗೆ ದಾನವನ್ನು ಮಾಡಿ. ನಿನ್ನ ಸ್ವರ್ವಸ್ವವನ್ನು ತ್ಯಾಗಮಾಡಿ, ನಿನ್ನ ಶರೀರಕ್ಕೆ ಬರುವ ರೋಗ

ರುಜಿನಿಗಳಿಗೆ ಅಂಜಿ ದೇವರ ಹಂಗನ್ನು ಹರಸಿಹೋಗದೆ ಮರಣವನ್ನು ಸಹ ಒಂದು ಕಾಯಕದಂತೆ ಸ್ವೀಕರಿಸು ಎಂಬ ಕಾಯಕವನ್ನು ಸಾರುತ್ತಾನೆ. ಈ ಹಿನ್ನೆಲೆಯಲ್ಲಿ ತಿಪ್ಪೇರುದ್ರಸ್ವಾಮಿಯೂ ಜನ, ಪ್ರಾಣಿ ಪಕ್ಷಿಗಳ ಲೋಕ ಕಲ್ಯಾಣಕ್ಕಾಗಿ, ಮಳೆ ಬಂದರು ಎಲ್ಲಿಯೂ ನೀರಿನ ಹೊರೆತೆಗಳನ್ನು ಕಾಣದೆ ಬರಗಾಲವನ್ನು ಅನುಭವಿಸುತ್ತಿರುವ ಎಪ್ಪತ್ತೇಳು ಹಟ್ಟಿಗಳಲ್ಲಿ ನೆಲೆಸಿರುವ ಜನರ ಹಿತಕ್ಕಾಗಿ ಕೆರೆಗಳನ್ನು ಕಟ್ಟುವ ಕಾಯಕವನ್ನು ಮಾಡಿ ತನ್ನ ಬದುಕಿನ ಅಮೂಲ್ಯ ಸಮಯವನ್ನು ನಾಯಕನಹಟ್ಟಿಯ ಪರಿಸರದ ಉದ್ದಾರಕ್ಕೆ ಶ್ರಮಿಸಿದ. ಈತನು ಬಸವಣ್ಣನ ಕಾಯಕ ಸಂಸ್ಕೃತಿಯನ್ನು ಈ ಭಾಗದಲ್ಲಿ ಸಾರಿದ ಕೀರ್ತಿಗೆ ಪಾತ್ರನಾಗುತ್ತಾನೆ.

ಒಂದು ನಾಡಿನ ಸಾಂಸ್ಕೃತಿಕ ಅಧ್ಯಯನಕ್ಕೆ ಆ ನಾಡಿನ ಧರ್ಮ, ಸಾಹಿತ್ಯ, ಶಾಸನ, ಶಿಲ್ಪ, ಸಂಗೀತ ಮೊದಲಾದ ಕಲೆಗಳು ಮತ್ತು ಜನಜೀವನ ವಿಧಾನಗಳು ಸಮರ್ಥ ಆಕರಗಳು. ಅದರಲ್ಲಿಯೂ ಜನಪದ ಬದುಕಿನ ದೈವೀಶ್ರದ್ದೆ ನಂಬಿಕೆ, ಸಂಪ್ರದಾಯ–ಆಚರಣೆ, ವೃತ್ತಿ, ಮಾಟ, ಮಂತ್ರ, ವೈದ್ಯ ಮೊದಲಾದವುಗಳ ಕೂಲಂಕಷ ಅಧ್ಯಯನ ಪ್ರಮುಖವೆಂದು ಹೇಳಬಹುದು. ಪ್ರಾಚೀನ ರಾಜರು, ಅವರ ಆಡಳಿತ ಕ್ರಮ, ಜನತೆಯ ಸೌಖ್ಯಕ್ಕೆ ಅವರು ಕೈಗೊಂಡ ಕಾರ್ಯ ಹಾಗೂ ಜನರ ಆಚಾರ–ವಿಚಾರಗಳನ್ನು ಒಳಗೊಂಡಿರುವಂಥದ್ದು ಸಂಸ್ಕೃತಿ, ಸಾಂಸ್ಕೃತಿಕಮಾನವಶಾಸ್ತ್ರಜ್ಞರು ನಾಗರಿಕ ಜಗತ್ತಿನ ಸಂಸ್ಕೃತಿಯನ್ನು ಅಧ್ಯಯನ ಮಾಡುವುದರ ಜೊತೆಗೆ ಆದಿಮಾನವನ ಬದುಕಿನ ಕುರುಹುಗಳನ್ನು ಹೇಳುವ ಬುಡಕಟ್ಟುಗಳ ಸಂಪ್ರದಾಯ, ನಡವಳಿಕೆ, ಆಚಾರ ಇವುಗಳನ್ನು ಅಧ್ಯಯನ ಮಾಡಬೇಕಾಗಿ ಬಂತು. ಬುಡಕಟ್ಟುಗಳದು ಕಾಡು ಸಂಸ್ಕೃತಿಯಾದರೆ; ಉಳಿದದ್ದು ಗ್ರಾಮ. ನಗರಗಳ ಸಂಸ್ಕೃತಿ, ಗ್ರಾಮ, ನಗರಗಳು ಕಾಲದಿಂದ ಕಾಲಕ್ಕೆ ಹಲವಾರು ತರಹದ ಧಾರ್ಮಿಕ ಪ್ರಭಾವಗಳಿಗೆ ಒಳಗಾಗಿ ತಮ್ಮ ಸಂಸ್ಕೃತಿಯ ಸ್ವರೂಪ ರಚನೆಯಲ್ಲಿ ಬದಲಾವಣೆಗೊಳ್ಳುತ್ತ ಹೋದವು. ಆದರೆ, ಬುಡಕಟ್ಟುಗಳು ತಮ್ಮ ಯಾವುದೇ ಸಂಪ್ರದಾಯಗಳನ್ನು ಬಿಟ್ಟುಕೊಡದೆ, ಬೇರೆಯವರ ಯಾವುದೇ ಬಗೆಯ ನಡವಳಿಕೆಯನ್ನು ಸ್ವೀಕರಿಸದೆ ತಮ್ಮದೇ ವಿಶಿಷ್ಟತೆಯನ್ನು ಉಳಿಸಿಕೊಳ್ಳುತ್ತಾ ಬಂದವು. ಮತ್ತೆ ಕೆಲವು ಪಂಗಡಗಳು ಇವರಿಂದ ಹೊರಬಂದು ನಗರ, ಗ್ರಾಮಗಳಲ್ಲಿ ವಾಸಿಸತೊಡಗಿರುವ ಹಾಗೂ ಬುಡಕಟ್ಟಿನಿಂದ ಹೊರ ಬಂದು ಅವರದೇ ಗುಂಪಾಗಿ, ಗ್ರಾಮ ಸಂಸ್ಕೃತಿಯಾಗಿ ಬೆಳೆಯ ತೊಡಗಿದೆ.

ಸಾಮಾನ್ಯವಾಗಿ ಬುಡಕಟ್ಟು ಜನಾಂಗಗಳಲ್ಲಿ ಕುಲದೇವತೆಗಳನ್ನಾಗಿ ಸೂರ ಚಂದ್ರರನ್ನು ಸ್ವೀಕರಿಸುತ್ತಾರೆ. ಅಂತೆಯೇ, ಜನಾಂಗದ ಜೊತೆಯಲ್ಲಿ ಬದುಕಿ ಬಾಳಿದ

ವ್ಯಕ್ತಿ ಇಲ್ಲಿ ಸಾಂಸ್ಕೃತಿಕ ಪುರುಷನಾಗಿ ಪ್ರಸಿದ್ಧಿ ಪಡೆಯುತ್ತಾನೆ. ಹಾಗೂ ಪೂಜೆಗೆ ಬಳಪಡುತ್ತಾನೆ. ಇದು ಮ್ಯಾಸಬೇಡ ಮತ್ತು ಕಾಡುಗೊಲ್ಲರಲ್ಲಿ ಕಂಡುಬರುವಂಥದ್ದು. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಹೋಬಳಿಯಲ್ಲಿ ಮ್ಯಾಸಬೇಡರು ಹೆಚ್ಚಾಗಿ ವಾಸಿಸುತ್ತಾರೆ. "ಆಂಧ್ರಪ್ರದೇಶದ ಶ್ರೀಶೈಲದ ಕಡೆಯಿಂದ ಬಂದ ಒಂದು ತಂಡ ಚಿತ್ರದುರ್ಗ ಪ್ರದೇಶದ ಜೆನಿಗೇನಹಳ್ಳಿಯಲ್ಲಿ ನೆಲೆಸಿತು. ಇದು ನಾಯಕನಹಟ್ಟಿಗೆ ತೀರಾ ಸಮೀಪವಿರುವ ಒಂದು ಹಳ್ಳಿ. ಹೀಗೆ ಬಂದು ನೆಲೆಸಿದ ಬೇಡನಾಯಕರ ಗುಂಪಿನ ಯಾಜಮಾನ ಕಾಟೀಮಲ್ಲಪ್ಪನಾಯಕ, ಈ ವ್ಯಕ್ತಿಯ ಹೆಸರಿನಲ್ಲಿ ಕಾಡು ಮತ್ತು ಮಲ್ಲಪ್ಪನಾಯಕ ಎಂಬ ಎರಡು ಪದಗಳಿವೆ. ಇದು ಆರಣ್ಯದೇವತೆಯಾದ ಶ್ರೀಶೈಲ ಮಲ್ಲಿ ಕಾರ್ಜುನನದೇ ಹೆಸರು. ಈಗಲೂ ನಾಯಕನಹಟ್ಟಿ ಸುತ್ತಮುತ್ತಣ ಪ್ರದೇಶದ ನಾಯಕರು ತಮ್ಮನ್ನು ಮಲ್ಲಪ್ಪನಾಯಕ, ಬೋಸೆಮಲ್ಲಪ್ಪನಾಯಕ ಇತ್ಯಾದಿ ಹೆಸರುಗಳಿಂದ ಕರೆದುಕೊಳ್ಳುವುದುಂಟು." ಕಾಟೀಮಲ್ಲಪ್ಪನಾಯಕನ ವಂಶದವರೇ ಮುಂದೆ ನಾಯಕನಹಟ್ಟಿ ಪಾಳೆಯಗಾರರಾಗಿ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಮತ್ತೊಂದು ಬುಡಕಟ್ಟು ಜನಾಂಗದವರಾದ ಕಾಡುಗೊಲ್ಲರು ಕೂಡ ಈ ಪ್ರದೇಶದಲ್ಲಿ ವಾಸಿಸುತ್ತಾರೆ. ಈ ಎರಡೂ ಬುಡಕಟ್ಟಿನವರು ಸಾಮಾನ್ಯವಾಗಿ ಅಡವಿಯಲ್ಲಿ ಬದುಕುವಂತವರು, ಇವರಿಗೆ ಸಾಮಾನ್ಯವಾಗಿ ಗ್ರಾಮ ಪಟ್ಟಣಗಳ ಸಂಪರ್ಕ ಕಡಿಮೆ ಎಂದೇ ಹೇಳಬೇಕು. ಪಶುಪಾಲಕ ವೃತ್ತಿ, ಬೇಟೆ ಸಂಸ್ಕೃತಿಯವರಿಗೆ ನಾಯಕನಹಟ್ಟಿ ಸಾಂಸ್ಕೃತಿಕ ಕೇಂದ್ರವಾಗಿದೆ. ಹಾಗೆಯೇ, ಈ ಬುಡಕಟ್ಟು ಜನಾಂಗಗಳೊಂದಿಗೆ ಜೀವಿಸಿ, ಅವರಿಗೆ ಸಾಂಸ್ಕೃತಿಕ ಅನನ್ಯತೆಯನ್ನು ಬೋಧಿಸಿದ ಪವಾಡಪುರುಷ ತಿಪ್ಪೇಸ್ವಾಮಿಯ ಧಾರ್ಮಿಕ ಕ್ಷೇತ್ರವೂ ಆಗಿದೆ. ಹದಿನೇಳು–ಹದಿನೆಂಟನೆಯ ಶತಮಾನದಲ್ಲಿ ಬದುಕಿದ್ದ ತಿಪ್ಪೇಸ್ವಾಮಿಯ ಸಂಪ್ರದಾಯ–ಆಚರಣೆಗಳು ಈ ಭಾಗದಲ್ಲಿ ವಿಶಿಷ್ಟವಾಗಿ ಕಂಡುಬರುತ್ತವೆ. ತಿಪ್ಪೇಸ್ವಾಮಿಯ ಹಬ್ಬ–ಜಾತ್ರೆಗಳು ನವನಾಗರಿಕತೆಯೊಂದಿಗೆ ಮುಖಾಮುಖಿಯಾಗಿದ್ದರೂ, ಬುಡಕಟ್ಟು ಸಂಸ್ಕೃತಿಯೊಂದಿಗಿನ ಸಂಘರ್ಷಗಳು ನಡೆದೇ ಇವೆ. ಇಲ್ಲಿ ತಿಪ್ಪೇಸ್ವಾಮಿಯು ಯಾವುದೇ ಜಾತಿ ಭೇದವಿಲ್ಲದೆ ಸರ್ವರೂ ಆರಾಧಿಸುವಂತಹ ದೈವವಾಗಿದ್ದಾನೆ. ಆದರೆ, ಎಲ್ಲಾ ಜನಾಂಗದವರು ಕೂಡ ತಮ್ಮ ತಮ್ಮ ಜಾತಿ ಸಂಪ್ರದಾಯಗಳ ಚೌಕಟ್ಟಿನೊಳಗೆ ಆರಾಧಿಸುವುದು ಇಲ್ಲಿ ವಿಶಿಷ್ಟವಾಗಿದೆ. ಬುಡಕಟ್ಟು ಜನಾಂಗದವರ ಸಂಪ್ರದಾಯ–ಆಚರಣೆಗಳು ಪ್ರತಿ ಉತ್ಸವಗಳಲ್ಲಿಯೂ ಕಂಡುಬರುತ್ತವೆ.

ಒಂದು ಸಮುದಾಯದ ಒಳತಿಗಾಗಿ ಶ್ರಮಿಸಿ ಸಾಂಸ್ಕೃತಿಕ

ವೀರನೆನೆಸಿಕೊಂಡರೆ, ಸರ್ವಧರ್ಮಗಳನ್ನು ಕಾಯಕಲ್ಪದ ಉದ್ಧಾರಕ್ಕಾಗಿ ಶ್ರಮಿಸಿ ನಿಯೋಗವನ್ನು ಪಡೆದವರನ್ನು ಅವಧೂತ, ತತ್ವಜ್ಞಾನಿ, ಅರೂಢ, ಅಧ್ಯಾತ್ಮಿಕ ಆಗೋರಿಗಳೆಂದು ಕರೆಯುವುದು ರೂಢಿಯಲ್ಲಿದೆ. ಅದರೇ ಒಂದು ನಾಡಿನ ಉದ್ಧರವೇ ನನ್ನ ಬದುಕಿನ ಉದ್ಧಾರವೆಂದು ಪಣತೊಟ್ಟು ಸಾಮಾಜಿಕ, ಪ್ರಭುತ್ವದ ವಿರುದ್ಧ ಪಣತೊಟ್ಟು ಹೋರಾಡಿ, ಯಾವುದೇ ಫಲಪೇಕ್ಷವಿಲ್ಲದೆ ಒಂಟಿಯಾಗಿಯಾದರೂ ನಾನು ಕೆರೆಕಟ್ಟೆಗಳನ್ನು ಕಟ್ಟಿ ಅವುಗಳ ಜೀರ್ಣೋದ್ಧಾರದಿಂದ ಕುಡಿಯಲು ನೀರು, ಆ ಪರಿಸರದ ಜನರ ಕೃಷಿಗೆ ಪ್ರೇರಣೆಯನ್ನು ನೀಡಿಯೆ ತೀರುತ್ತೇನೆಂದು ಪ್ರಭುತ್ವದೊಂದಿಗೆ ಶಪತಮಾಡಿ ತನ್ನ ದಿವ್ಯ ಶಕ್ತಿಯಿಂದ ಏಳು ಕೆರೆಗಳನ್ನು ಕಟ್ಟಿ ಕಾಯಕಲ್ಪ ಮಾಡಿ, ಜಗತ್ತಿಗೆ 'ಮಾಡಿದಷ್ಟು ನೀಡು ಬೀಕ್ಷೆ' ಎಂಬ ತತ್ವವನ್ನು ಸಾರಿದ ಮಹಾನ್ ತ್ಯಾಗಿ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿಯು, ಕರ್ನಾಟಕ ಅಂಧ್ರದ ನಡುವಿನ ಭಾಂದವ್ಯ ಬೆಸೆಯುವಂತೆ ಎರಡು ರಾಜ್ಯಗಳ ಭಕ್ತರು ಈತನನ್ನು ಆರಾಧಿಸುವುದನ್ನು ಕಾಣಬಹುದು. ಬಯಲು ಸೀಮೆಯಲ್ಲಿ ಕೊಟ್ಯಾನೂಕೋಟಿ ಭಕ್ತರನ್ನು ಹೊಂದಿರುವ ಸಾಂಸ್ಕೃತಿಕ ನಾಯಕನ ದಿನ ಸ್ಮರಣೆಯೆಂಬಂತೆ ಕೆಲವರು ಮನೆದೇವರೆಂದು, ಇನ್ನೂ ಹಲವಾರೂ ಭಕ್ತರು ತಮ್ಮ ಅಂಕಿತವನ್ನು ಸ್ಮರಿಸುತ್ತಿರುವ ಪರಿ ತಿಪ್ಪೇಶ, ತಿಪ್ಪೇರುದ್ರ, ತಿಪ್ಪಯ್ಯ, ತಿಪ್ಪೇಸ್ವಾಮಿ, ತಿಪ್ಪಕ್ಕ, ತಿಪ್ಪವ್ವ, ತಿಪ್ಪಮ್ಮ, ತಿಪ್ಪಿರಕ್ಕ ಎಂಬ ಮುಂತಾದ ಹೆಸರುಗಳನ್ನು ಈ ಭಾಗದಲ್ಲಿಕಾಣಬಹು. ಈ ಹಿನ್ನೆಯಲ್ಲಿ ತಿಪ್ಪೇರುದ್ರಸ್ವಾಮಿ ಈ ಜನರಲ್ಲಿ ಸಾಂಸ್ಕೃತಿಕ ನಾಯಕನಾಗಿ ಆರಾಧನೆಗೊಳ್ಳುವ ಮೌಲ್ಯವನ್ನು ಇಲ್ಲಿ ನೋಡಬಹುದು.

ಶ್ರೀಗುರು ತಿಪ್ಪೇರುದ್ರಸ್ವಾಮಿಯು ಮೂಲ ಆಂಧ್ರಪ್ರದೇಶವಾಗಿದ್ದು. ಹೀಗಾಗಿ ಆ ರಾಜ್ಯದ ಜನರಿಗೂ ಇವರ ಮೇಲೆ ಅನನ್ಯ ಭಕ್ತಿ, ಹಟ್ಟಿ ಪರಿಷೆಯಯನ್ನು ಕರ್ನಾಟಕ, ಆಂಧ್ರ, ತಮಿಳುನಾಡಿನಿಂದ ಭಕ್ತರು ಬರುತ್ತಿದ್ದಾರೆ. ಇನ್ನೂ ಈತನ ಜಾತಿಯಾವುದೆಂದು ನೋಡಿದರೆ ಇಂದಿಗೂ ಸಂಶೋಧಕರಲ್ಲಿ ಸರಿಯಾದ ನಿರ್ಣಯ ಕಂಡುಬಂದಿಲ್ಲ. ಕೆಲವರು ವೀರಶೈವರೆಂದು ಹೇಳಿದರೆ. ಇನ್ನೂ ಕೆಲವರು ಬೇಡ ಜಾತಿಯವರೆಂದು ಹೇಳುತ್ತಾರೆ. ಇದಕ್ಕೆ ಪೂರಕವೆಂಬಂತೆ ಇಲ್ಲಿ ಹೊರಮಠ ಒಳಮಠಗಳಿದ್ದು, ಒಳಮಠದಲ್ಲಿ ಲಿಂಗಾಯತರು ಪೂಜೆ ಮಾಡಿದರೆ ಹೊರಮಠದಲ್ಲಿನಾಯಕರು ಪೂಜೆ ಮಾಡುತ್ತಾರೆ. ಆದರೆ ಈತನ ಭಕ್ತಿಗಣವನ್ನು ನೋಡಿದರೆ ಇವರು ಭಾರತೀಯ ಹಿಂದೂ ಆಧ್ಯಾತ್ಮಿಕ ಗುರು ಹಾಗೂ ಸಾಮಾಜಿಕ ಸುಧಾರಕನಾಗಿ ಕಾಣಿಸುತ್ತಾನೆ. ಇವರನ್ನು ಜಾತಿ, ಧರ್ಮ, ಮತವನ್ನು ಮೀರಿ ಹಿಂದೂ–ಮುಸ್ಲಿಂ ಮತವರ್ಗದವರು ಇವರನ್ನು ಪೂಜಿಸುವುದು ಆರಾಧಿಸುವುದನ್ನು

ಕಾಣಬಹುದು. ಹೀಗಾಗಿ ಇವರ ತಾತ್ವಿಕ ನಿಲುವು ಅಥವಾ ಸಾಮಾಜಿಕ ಕ್ರಾಂತಿಯೆಂದರೆ "ಮಾಡಿದಷ್ಟು ನೀಡು ಭೀಕ್ಷೆ" ಎನ್ನುವ ಕಾಯಕತತ್ವವನ್ನು ಪ್ರತಿಪಾದಿಸಿದ್ದಾರೆ.

ಇವರ ಆರಂಭದ ಬದುಕಿನ ಹಿನ್ನೆಲೆಯನ್ನು ಹುಡುಕುತ್ತ ಹೊರಟಾಗ ದಂತಕಥೆಯೊಂದು ಲಬಿಸುತ್ತದೆ. ಇವರು ಮಾನವರ ಹೊಟ್ಟೆಯಲ್ಲಿ ಹುಟ್ಟಿರಲಿಲ್ಲ. ನೇರವಾಗಿ ಕೈಲಾಸ ಪರ್ವತದಿಂದ ಇಳಿದು ಬಂದಿದ್ದಾರೆಂದು ಮೂಲಗಳು ತಿಳಿಸುತ್ತದೆ. ಐದು ಜನಗಣಾಧೀಶ್ವರರಲ್ಲಿ ಒಬ್ಬರಾಗಿದ್ದು ಇವರು ಮೂಲತಃ ಭಗವನ್ ಶಿವನು ಹೇಳಿದಂತೆ ಸಂತನಾಗಿ ಶೈವ ಧರ್ಮವನ್ನು ಪ್ರಚಾರದೊಂದಿಗೆ ಅದರ ಅಚರಣೆಗಳನ್ನು ಸ್ಥಾಪಿಸಲು. ಹೀಗಾಗಿ ತಿಪ್ಪೇಸ್ವಾಮಿಯ ಜೀವನ ಉದ್ದೇಶ ಧರ್ಮ ಪ್ರಚಾರ ಮತ್ತು ಭಕ್ತರ ಕಷ್ಟಸುಖಗಳಲ್ಲಿ ಪಾಲ್ಗೊಂಡು ಮಾರ್ಗದರ್ಶನ ನೀಡಿ ಸಾಂತ್ವನ ನೀಡುವುದಾಗಿತ್ತು, ಅಲ್ಲದೆ ಕಾಯಕದ ಮೌಲ್ಯವನ್ನು ತಿಳಿಸುವ ಶರಣರ ದಾರಿಯಲ್ಲಿ ನಡೆದಾತನಾಗಿದ್ದನು.

ಈತನ ಮೂಲ ಹೆಸರನ್ನು ರುದ್ರಸ್ವಾಮಿ, ಭಾರತದಾಂತ್ಯ ಪ್ರಯಾಣಿಸುವ ಸಮಯದಲ್ಲಿ ತನ್ನ ಉದ್ದೇಶವನ್ನು ಮರೆತು ಪ್ರಾಪಂಚಿಕ ಸುಖಗಳಿಗೆ ದಾಸನಾಗಿದ್ದ, ಪಂಚ ಗಣಾಧೀಶ್ವರರಲ್ಲಿ ಒಬ್ಬರಾದ ಕೆಂಪಯ್ಯ ಸ್ವಾಮಿಗಳಿಗೆ ಜ್ಞಾನೋದಯ ಮಾಡುವ ಉದ್ದೇಶದಿಂದ ರುದ್ರಯ್ಯಸ್ವಾಮಿಗಳು, ಕಸ ಮತ್ತು ಸಗಣಿಯ ದೊಡ್ಡ ಗುಡ್ಡದ ಮೇಲೆ ಕುಳಿತರು. ಈ ಕಸದಗುಡ್ಡೆಯನ್ನು ತಿಪ್ಪೆ ಎಂದು ಕರೆಯಲಾಗುತ್ತದೆ. ಅಲ್ಲಿ ತಿಪ್ಪೆಯ ಮೇಲೆ ಕುಳಿತ ಸಾಧುವನ್ನು ಹಲವು ಜನರು ಪೂಜೆಮಾಡಲು ಶುರುಮಾಡಿದರು. ನಚಿತರ ಇವರನ್ನು ತಿಪ್ಪೇಸ್ವಾಮಿ ಎಂದು ಸಹ ಕರೆದರೂ ಅಚಿದರೆ ತಿಪ್ಪೆಯ ಮೇಲೆ ಕುಳಿತ ಸ್ವಾಮಿ ಎಂದರ್ಥ. ಧ್ಯಾನಕ್ಕೆ ಕುಳಿತ ಮಹಾನ್ ವ್ಯಕ್ತಿಗೆ ಜನರು ಪೂಜೆ ಸಲ್ಲಿಸಿ ಆಹಾರ ಮತ್ತು ಇತರೆ ನೈವೇದ್ಯವನ್ನು ಸಲ್ಲಿಸಲು ಶುರುಮಾಡಿದರು. ಅವರು ಗಾಳಿ ಮಳೆ ಬಿಸಿಲು ಎನ್ನದೆ ಮೌನಃವಾಗಿ ಕುಳಿತರು. ಕೊನೆಗೆ ಕೆಂಪಯ್ಯಸ್ವಾಮಿ ತನ್ನ ಹತ್ತಿರ ಬಂದಾಗ ತನ್ನ ಗುರುತನ್ನು ಹೇಳಿದ ತಿಪ್ಪೇಸ್ವಾಮಿ ಕೊಳುಕು ವಾಸನೆಯನ್ನು ತನ್ನ ಇಂದ್ರೀಯಗಳ ಮೇಲೆ ಪ್ರಭಾವ ಬೀರಲು ಬಿಡಲಿಲ್ಲ. ಶಿವನನ್ನು ಧ್ಯಾನಿಸುವ ಉದ್ದೇಶ ಬಿಡಲಿಲ್ಲವೆಂದು ಕೆಂಪಯ್ಯಸ್ವಾಮಿಗೆ ಮನವರಿಕೆ ಮಾಡಿಕೊಡುವ ಮೂಲಕ ಅಂದಿನಿಂದ ರುದ್ರಸ್ವಾಮಿ, ತಿಪ್ಪೇರುದ್ರಸ್ವಾಮಿಯಾದರು. ಇದನ್ನು ಅರಿತ ಕೆಂಪಚ್ಯು ಎಲ್ಲವನ್ನು ಮರೆತುಬಿಟ್ಟು ಹರಪ್ಪನಹಳ್ಳಿಯ ಶ್ರೀ ಗುರುಕೆಂಪಯ್ಯಸ್ವಾಮಿ ಅದರು.

ನಾಯಕನಹಟ್ಟಿಗೆ ಜಾಡು ಹುಡುಕುತ್ತ ಬಂದದ್ದು, ನಾಯಕನಹಟ್ಟಿಯ ಮೊದಲ ಹೆಸರು ನಿಷೇಧಾಪುರ, ಅದರೆ ಇದನ್ನು ನಿಧಾನವಾಗಿ ನಾಯಕನಹಟ್ಟಿ ಎಂದು

ಕರೆಯಲಾಗುತ್ತದೆ. ಗುರುಗಳ ಆರಂಭಿಕ ಶಿಷ್ಯನಾದ ಪಣಿಯಪ್ಪ ತನ್ನ ಪಟ್ಟಣವಾದ ನಿಷೇಧಾಪುರಕ್ಕೆ ಬಂದು ನೆಲೆಸುವಚಿತೆ ಕೋರಿಕೊಂಡನು. ಇದಕ್ಕೆ ಸಮ್ಮತಿಸಿದ ಗುರುಗಳು ಆಂಧ್ರಪ್ರದೇಶದಿಂದ ನಾಯಕನ ಹಟ್ಟಿಗೆ ಹೊರಟರು. ಮಾರ್ಗ ಮಧ್ಯದಲ್ಲಿ ಸಂಧ್ಯಾವಂದನೆ ಮತ್ತು ಬಾಯಾರಿಕೆಯಾಗಿ ನೀರನ್ನು ಹುಡುಕುತ್ತಿದ್ದನು. ಸುತ್ತ ಎತ್ತನೋಡಿದರು ನೀರು ಸಿಗದ ಕಾರಣ ತನ್ನ ಬೆತ್ತವನ್ನು ಹಿಡಿದು ಭೂಮಿಗೆ ತಾಕಿಸಿದನು, ಇದರಿಂದ ಅಲ್ಲಿಯೇ ನೀರು ಚಿಮ್ಮಿಸಿದನು ಅದು ನಿರಂತವಾಗಿರಲೆಚಿದು ಚಿಲುಮೆಯನ್ನು ಮಾಡಿದನು. ಅದನ್ನೇ ಇಚಿದು ಬಿಳಿ ನೀರಿನ ಚಿಲುಮೆ ಎಂದೇ ಪ್ರಸಿದ್ಧಿ ಪಡೆಯಿತು. ಅದು ಮೊಳಕಾಲ್ಮೂರು ತಾಲೂಕಿನ ಕೊಂಡ್ಲಹಳ್ಳಿಯ ಪೂರ್ವದಿಕ್ಕಿಗೆ ಇದೆ. ಅಲ್ಲಿ ಇಂದಿಗೂ ಸ್ವಾಮಿಯ ಪೂಜೆ ಪ್ರತಿನಿತ್ಯ ನಡೆಯುತ್ತದೆ. ಇದೇ ಮಾರ್ಗವಾಗಿ ನಾಯಕನಹಟ್ಟಿಗೆ ಬಂದು ತಲುಪಿದರು. ಇಲ್ಲಿ ಮಾರಮ್ಮದೇವಸ್ಥಾನದಲ್ಲಿ ತಂಗಲು ಬಯಸಿದರು. ಅದರೇ ಆ ದೇವಸ್ಥಾನದಲ್ಲಿ ಜಾಗದೊರೆಯಲ್ಲಿಲ್ಲ. ಅದರೇ ಕನಿಷ್ಟ ಪಕ್ಷ ನನ್ನ ಪರಿಕಾರಗಳಾದ ಬೆತ್ತ ಮತ್ತು ಜೋಳಿಗೆ ಇಟ್ಟು ಹೋಗುತ್ತೇನೆಂದು ಕೇಳಿಕೊಂಡನು ಅಲ್ಲಿಯೇ ಇಟ್ಟು ಹೊರಟನು, ರಾತ್ರೋರಾತ್ರಿಯೇ ಬೆತ್ತ ಮತ್ತು ಜೋಳಿಗೆ ಗುಡಿತುಂಬ ತುಂಬಿದ್ದವು ಇದನ್ನು ತಿಳಿದ ಮಾರಮ್ಮದೇವಿ ತನ್ನ ದೇವಸ್ಥಾನವನ್ನು ತಿಪ್ಪೇಸ್ವಾಮಿಗೆ ಬಿಟ್ಟು ಹೊರಟು ಹೋದಳು. ಆ ದೇವಾಲಯವೇ ತಿಪ್ಪೇರುದ್ರಸ್ವಾಮಿ ನಿವಾಸವಾಯಿತು. ಅಲ್ಲಿಯೇ ಶಿವಲಿಂಗವನ್ನು ಸ್ಥಾಪಿಸಿದರು. ಅದೇ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ದೇವಾಲಯವಾಯಿತು. ಇಲ್ಲಿಂದ ಜನರ ಕಲ್ಯಾಣದ ಕಾರ್ಯಗಳನ್ನು ಮಾಡು ಪವಾಡಗಳನ್ನು ಸೃಷ್ಟಿಸಿದನು.

ಸತ್ತ ಹೆಮ್ಮೆಯನ್ನು ಬದುಕಿಸಿದ್ದು, ನಾಯಕನಹಟ್ಟಿಗೆ ತಿಪ್ಪೇಸ್ವಾಮಿ ಹೊಸಬರಾಗಿದ್ದು ಅಲ್ಲಿ ಒಬ್ಬ ವಿಧವೆಯನ್ನು ನೋಡುತ್ತಾನೆ. ಅವಳಿಗೆ ಇಬ್ಬರು ಚಿಕ್ಕ ಮಕ್ಕಳಿದ್ದರು, ಅವಳ ಬದುಕೆ ಪ್ರತಿನಿತ್ಯ ಹಾಲು ಕೊಡುತ್ತಿದ್ದ ಎಮ್ಮೆಯಿಂದ ನಡೆಯುತ್ತಿತ್ತು. ಅದರೇ ಎಮ್ಮೆ ಒಂದು ದಿನ ಅನಾರೋಗ್ಯದಿಂದ ಸತ್ತು ಹೋಯಿತು. ಇದರಿಂದ ಮನನೊಂದ ವಿಧವೆ ತನ್ನ ಇಬ್ಬರ ಪುಟ್ಟ ಮಕ್ಕಳೊಂದಿಗೆ ಬಾವಿಗೆ ಹಾರಿ ಅತ್ಮಹತ್ಯೆ ಮಾಡಿಕೊಳ್ಳಲು ಸಿದ್ಧವಾಗಿದ್ದಳು. ದಾರಿಯಲ್ಲಿ ಕುಳಿತಿದ್ದ ತಿಪ್ಪೇಸ್ವಾಮಿಗೆ ಎಲ್ಲವೂ ತಿಳಿಯಿತು. ವಿಧವೆಯನ್ನು ಹತ್ತಿರಕರೆದು ನನಗೆ ಬಾಯಾರಿಕೆ ಅಗುತ್ತಿದ್ದೆ ನಿನ್ನ ಹಸುವಿನ ಹಾಲನ್ನುಕೊಡು ಎಂದು ಕೇಳಿದಾಗ ಅಳುತ್ತ ನನ್ನ ಹಸುವು ಸತ್ತು ಹೋಯಿತು ಎಂದು ಹೇಳಿದಳು. ಮೊದಲು ಮನೆಗೆ ಹೋಗು ಹಾಲು ಕೊಂಡು ಬಾ ಎಂದು ಹೇಳಿದಾಗ. ಮೊದಲು ವಿಧವೆ ಮನೆಗೆ ಓಡಿ ಹೋದಳು, ಅಲ್ಲಿಗೆ ಹೋಗಿ ಎಮ್ಮೆಯನ್ನು

ನೋಡಿದಾಗಅದು ಮೊದಲಿನಚಿತೆ ಜೀವಂತವಾಗಿತ್ತು. ಇದಾದ ನಂತರ ಆ ವಿಧವೆಗೆ ಜೀವನಕ್ಕೆ ಬೇಕಾದಷ್ಟು ಆ ಎಮ್ಮೆ ಹಾಲನ್ನು ಕೊಡುತ್ತಿತ್ತು.

ಕಾಯಕ ತತ್ವದ ಪರಿಕಲ್ಪನೆ: ಮಾಡಿದಷ್ಟು ನೀಡು ಭೀಕ್ಷೆ

ಮಾಡಿದಷ್ಟು ನೀಡು ಭೀಕ್ಷೆ, ನಾಯಕನ ಹಟ್ಟಿಯ ಸುತ್ತಮುತ್ತಲಿನ ಪರಿಸರದಲ್ಲಿ ಭೀಕಾರ ಬರಗಾಲ ಅವರಿಸಿದಾಗ ಎಲ್ಲರೂ ಸುಮ್ಮನ್ನೆ ಕುಳಿತರು. ದಿನಕಳೆದಂತೆ ನೀರಿಗೂ ಮತ್ತು ಧವಸ ಧಾನ್ಯಗಳಿಗೂ ತೊಂದರೆಯಾಯಿತು. ಇದಕ್ಕೆ ತಿಪ್ಪೇಸ್ವಾಮಿ ಮಳೆ ಬರುವವರೆಗೂ ಜನರೆಲ್ಲರೂ ಸೇರಿ ನೀರಿನ ಸಂಗ್ರಹಗಾರವನ್ನು ನಿರ್ಮಿಸಲು ಪ್ರಾರಂಭಿಸಿದರು. ಗುರುಗಳ ಆರ್ಶಿವಾದದಿಂದ ಸೂಕ್ತ ಸ್ಥಳವನ್ನು ಅಂತಿಮಗೊಳಿಸಲಾಯಿತು ಮತ್ತು ನಿರ್ಮಾಣವು ಭರದಿಂದ ಪ್ರಾರಂಭವಾಯಿತು, ದಿನದ ಕೊನೆಯಲ್ಲಿ ಗುರುಗಳು ಕೂಲಿಯನ್ನುಕೊಡಲು ಮಣ್ಣಿಗುಡ್ಡೆಯನ್ನು ಮಾಡಲು ಹೇಳಿದರು. ಪ್ರತಿಯೊಬ್ಬರು ಮಣ್ಣಿನ ಗುಡ್ಡೆಯನ್ನು ಮಾಡಿ ಕುಳಿತಿದ್ದರು. ಗುರುಗಳು ತನ್ನ ಬೆತ್ತದಿಂದ ಮಣ್ಣಿಗುಡ್ಡೆಯನ್ನು ಮುಟ್ಟಿ ಮಾಡಿದಷ್ಟು ನೀಡು ಭೀಕ್ಷೆ ಎನ್ನುತ್ತಿದ್ದರು. ಮಣ್ಣಿನ ಗುಡ್ಡೆಯನ್ನು ತೆರೆದಾಗ ಅವರು ಮಾಡಿದ ಕಷ್ಟಕ್ಕೆ ತಕ್ಕಂತೆ ಚಿನ್ನ, ಬೆಳ್ಳಿ, ತಾಮ್ರದ ನಾಣ್ಯಗಳು ದೊರೆತವು. ಅದರೆ ಒಬ್ಬ ಗರ್ಭಿಣಿ ಮಹಿಳೆಗೆ ಹೆಚ್ಚು ದೊರೆಯುತ್ತಿತ್ತು. ಅದರೆ ಇದರ ಬಗ್ಗೆ ಸ್ವಾಮಿಯ ಬಳಿ ಕೇಳಿದರೆ, ನಿನ್ನಜೊತೆ ನಿನ್ನ ಮಗುವು ಸಹ ಕೆಲಸ ಮಾಡುತ್ತದೆ ಅದ್ಧರಿಂದ ಹೆಚ್ಚು ಎಂದು ಹೇಳಿ ಮಾಡಿದಷ್ಟು ನೀಡು ಭೀಕ್ಷೆ ಎಂದು ಕಾಯಕದ ಮಹತ್ವವನ್ನು ತಿಳಿಸಿದರು ತಿಪ್ಪೇರುದ್ರಸ್ವಾಮಿಗಳು. ಹಟ್ಟಿನ ಹಟ್ಟಿದೊರೆಮಲ್ಲಪ್ಪನಾಯಕ, ದಳವಾಯಿಗಳು ಹಾಗೂ ಸಾವಿರಾರು ಕೂಲಿಕಾರರೊಂದಿಗೆ ಚೌಡಮ್ಮನಹಳ್ಳಿ, ದಾಸರಹಳ್ಳಿ, ತುರುವನೂರು ಕಡೆಯಿಂದ ಹರಿದುಬರುವ ಹಳ್ಳಗಳಿಗೆ ಅಡ್ಡಲಾಗಿ ಹಿರೇಕೆರೆ ಕಟ್ಟಲು ಆರಂಭಿಸಿದ್ದರು. ದೊರೆಗಳು ಕೆರೆಯನ್ನು ಕಟ್ಟಲು ಬರುವ ಆ ಆಳುಗಳಿಗೆ ಕೂಲಿಕೊಡಲು ಹಣವಿಲ್ಲವೆ ದೀರ್ಘಾಲೋಚನೆಂ ನೆಯಲ್ಲಿ ತೊಡಗಿದ್ದರು. ಆಗ ತಿಪ್ಪೇಸ್ವಾಮಿಗಳು ದೊರೆಗಳ ಸಮಸ್ಯೆಯನ್ನು ಕೇಳಿ, ಕೆರೆಕಟ್ಟಲು ಬಂದಿರುವ ಆಳುಗಳಿಗೆಲ್ಲ ಕೂಲಿಕೊಡಲು ಒಪ್ಪುತ್ತಾರೆ. ಸಂಜೆವರೆಗೆ ಕೆಲಸ ಮಾಡಿದ ಜನರೆಲ್ಲರು ದೊರೆಗಳ ಮುಂದೆ ನಿಂತಿರಲು, ದೊರೆಗಳು ಸ್ವಾಮಿಯನ್ನು ನೋಡುತ್ತಾ ಸ್ವಾಮಿಗಳು ಅವರು ನಿಂತಿರುವ ಜಾಗದಲ್ಲಿಯೇ ಕುಳಿತು ಮರಳು ಕುಪ್ಪೆಗಳನ್ನು ಮಾಡಿಕೊಳ್ಳಲು ಹೇಳುತ್ತಾನೆ.

ಆನೇನೆ ಹುಬ್ಬಾತು ರಾಸಿ ಅವ್ರು ಮಾಡ್ಯಾತು
ಬೆಕ್ಕು ಹಿಡಿಕೊಂಡು ಹಟ್ಟೀನೆ ತಿಪ್ಪಯ್ಯ

ಸುತ್ತಾನೆ ಗೆರಿಯ ಕೊಯ್ದಾನು॥

ಗೆರಿಯಾನೆ ಕೊಯ್ದಾನೆ ಸಿವ ಸಿವ ಅಂದಾನು
ಮಾಡಿದವರಿಗೆ ನೀಡು ಭಿಕ್ಷಾ ಅಗಿಲಿ॥

ಕಷ್ಟ ಮಾಡಿದಾರಿಗೆ ಎಷ್ಟು ಭಾಗ್ಯಾವೈತೆ
ಕಷ್ಟ ಮಾಡಂತ ಮಯ್ಯಾಗಳ್ಳರಿಗೆ–ಏ ಸಿವನೆ
ಗುಡ್ಡ ಕೆದರಿದರೆ ಬರಿಗೈಯ॥"

ಕೂಲಿಕಾರರು ತಮ್ಮ ಮುಂದಿನ ಮರಳು ಕುಪ್ಪೆಗಳನ್ನು ಕೆದರಿದಾಗ ತಮ್ಮ ಶ್ರಮಕ್ಕೆ ತಕ್ಕಂತೆ ಹಣವು ಇರುತ್ತದೆ. ಒಬ್ಬನಿಗೆ ತನ್ನ ಕುಪ್ಪೆಯಲ್ಲಿ ಆ ದಿನದ ಕೂಲಿಯಿದ್ದರೆ, ಎರಡನೆಯವನ ಕುಪ್ಪೆಯಲ್ಲಿ ಏನೂ ಇರುವುದಿಲ್ಲ ಬರಿ ಮಣ್ಣೆ ಇರುತ್ತದೆ. 'ಸ್ವಾಮಿ ಬರೇ ಮಣ್ಣೆ ಬರುತ್ತೆ' ಎನ್ನಲು, ಶ್ರೀಗಳು 'ಕಾರಣ ಇಷ್ಟೇ, ನಾನು ಹರಸಿರುವುದು ಮಾಡಿದಷ್ಟು ನೀಡು ಭಿಕ್ಷೆ. ಅದರಂತೆ ಶ್ರಮಕ್ಕೆ ತಕ್ಕಂತೆ ಪ್ರತಿಫಲ ಸಿಕ್ಕಿದೆ'. ಮುಂದೆ ಹೋದ ಕೂಡಲೆ ಮತ್ತೊಬ್ಬ ಹೆಣ್ಣು ಮಗಳು ಕೆದರಿದಾಗ ಶ್ರಮಪಟ್ಟದಕ್ಕಿಂತ ಎರಡರಷ್ಟು ಕೂಲಿ ಸಿಕ್ಕಿತು. ಎನ್ನಲು. ಅದಕ್ಕೆ ಸ್ವಾಮಿ, 'ಅಯ್ಯ! ತಾನೊಬ್ಬಳೇ ಕೆಲಸ ಮಾಡುವಾಗ ಕಲ್ಲು ಮಣ್ಣಿನ ಪುಟ್ಟ ಎತ್ತುವಾಗ, ಇಳಿಸುವಾಗ ಹೊಟ್ಟೆಯೊಳಗಿನ ಮಗುವೂ ಸಹ ಶ್ರಮಿಸಿದೆ. ಅದಕ್ಕೂ ಶಿವ ಕೂಲಿ ಕೊಟ್ಟಿದ್ದಾರೆ. ಜನರೆಲ್ಲರು ಅಚ್ಚರಿಗೊಂಡು, "ಸ್ವಾಮಿ ನನ್ನಪ್ಪಾ ಇನ್ನು ಮುಂದೆ ನಾವೆಲ್ಲ ಶಕ್ತಿಮೀರಿ ದುಡಿಯುತ್ತೇವೆ' ಎಂದು ಪ್ರಮಾಣ ಮಾಡುತ್ತಾರೆ. "ಹಿರೇಕೆರೆಯ ನಿರ್ಮಾಣದ ನಂತರ ಚಿಕ್ಕಕೆರೆ, ಮನಕೆರೆ, ಭೀಮನಕೆರೆ, ಹೊಸಕೆರೆ, ನೇರಲಕೆರೆ, ಮೊದಲಾದ ಕೆರೆಗಳನ್ನು ಕಟ್ಟಿಸುತ್ತಾರೆ. ಹಾಗೆಯೇ ಗೌರೀಪುರ ಕುದಾಪುರ, ಮಹದೇವಪುರ, ಕಾಶೀಪುರ, ಗಿಡ್ಡಾಪುರ, ಗಂಗ್ಲಾಪುರ, ಬಸಾಪುರಗಳೆಂಬ ಏಳುವುರಗಳನ್ನು ಕಟ್ಟಿಸುತ್ತಾರೆ. ಇವುಗಳಲ್ಲಿ ಕೆಲವು ಊರುಗಳು ಇಂದಿಗೂ ಜನವಸತಿಯಿಂದ ಕೂಡಿವೆ.

ಹರಳಯ್ಯನ ಕಾಯಕಕ್ಕೆ ಒಲಿದ ತಿಪ್ಪೇರುದ್ರಸ್ವಾಮಿ:

ಫಣಿಯಪ್ಪ ವ್ಯಾಪಾರದ ಜೊತೆಯಲ್ಲಿ ವ್ಯವಸಾಯವನ್ನು ಮಾಡುತ್ತಿದ್ದನು. ದಿನಾಲು ತಿಪ್ಪೇಸ್ವಾಮಿ, ಫಣಿಯಪ್ಪ ಇಬ್ಬರು ತೋಟದಲ್ಲಿ 'ಕಪ್ಲೆ' ಹೊಡೆಯುವ, ನೀರು ಕಟ್ಟುವ ಕೆಲಸವನ್ನು ಮಾಡುತ್ತಿದ್ದರು. ಒಂದು ದಿನ ಇಬ್ಬರು 'ಕಪ್ಲೆ' ಹೊಡೆಯುವಾಗ ಬಾನಿ ಹರಿದು ಹೋಗುತ್ತದೆ.

ತಿಪ್ಪಯ್ಯ ನೀನು ಊಟಾಕ್ಕೆ ನಡಿಯಪ್ಪ
ಬಾನೀಯ ಹಾಕಿ ಬರುತೀನಿ!

ಬಾನೀಯ ಈಗ ಒಲಿಯಾಕೆ ಹರಳಯ್ಯನ ಮನಿಗೆ
ಬೇಗಾರ್‍ತ್ರ ಹಟ್ಟಿಗೆ ಹೋಗಿ ಬರುತೀನಿ॥

ಬಾನಿ ಹೊತ್ತಕೊಂಡು ಫಣಿಯಪ್ಪ ಹೋದಾನೆ
ಹರಳಯ್ಯನ ಮನಿಯಾಗೆ ಸ್ವಾಮಿ–ಹೋಗ್ಯವೆ
ಸಿವ ಪೂಜೀಗಲ್ಲಿ ಕುಂತವ್ನೆ॥

ಸ್ವಾಮಿ ಫಣಿಯಪ್ಪನೋರೆ ಸೊಲ್ಪ ತಾಳಿ ನೀವಿರಬೇಕು
ಸ್ವಾಮಿ ಶಿಪ್ಪಲ್ಲೋರು ಸಿವ ಪೂಜಿಗೆ–ಕುಂತವ್ರೆ
ಬ್ಯಾಗಾನ ನಾನು ಬರುಲಾರೆ!!

ಹಂಗ್ಯಂದ ಮಾತು ಕೇಳಿ ಹಿಂದಾಕೆ ತಿರುಗ್ಯಾನೆ
ಮನಿಗೆ ಜಾಗ್ರುತಿ ಹೋಗಿ–ಮನೆಯಾಗಿರುವ
ಮಡದೀನ ಕೇಳ್ತಾನೆ–ಫಣಿಯಪ್ಪ
ಸ್ವಾಮಿ ನಮ್ಮನಿಗೆ ಬಂದಿಲ್ಲಾವೆ॥

ಮಾದೀರ ಮನಿಯಾಗೆ ಸಿವು ಪೂಜೆ ಮಾಡ್ತಿದ್ದ
ಸಿವು ಪೂಜೆಗೆ ನೀನು ಕರಿಬ್ಯಾಡ–ನಮ್ಮಿಗೆ
ತಕ್ಕಾದ ಸಿವುನಲ್ಲ ಅವನೀಗ॥

ಈ ಮೇಲಿನ ಪದ್ಯದ ತಾತ್ಪರ್ಯವೂ ಫಣಿಯಪ್ಪನನ್ನು ಜಾತಿಭೇದವನ್ನು ಮೀರಿ ನಿಲ್ಲುವಂತೆ ಮಾಡಿಸಲು, ಹರಳಯ್ಯನ ಕಾಯಕವನ್ನು ಹೀಯಾಳಿಸಿದ ಫಣಿಯಪ್ಪನಿಗೆ ಬುದ್ಧಿ ಕಲಿಸುವ ಸಲುವಾಗಿ ಹರಳಯ್ಯನ ಮನೆಯಲ್ಲಿ ತಿಪ್ಪೇಸ್ವಾಮಿ ಶಿವಪೂಜೆಯನ್ನು ಮಾಡುತ್ತ ಕುಳಿತಿರುವಾಗ, ತೋಟದ ಬಾನಿಯನ್ನು ಹೊತ್ತುಕೊಂಡು ಹರಳಯ್ಯನ ಮನಿಗೆ ಬಂದಾಗ, ಹರಳಯ್ಯನು ಸ್ವಾಮಿ ಸ್ವಲ್ಪತಾಳಿ ತಿಪ್ಪೇರುದ್ರಸ್ವಾಮಿಗಳು ಶಿವಪೂಜೆ ಮಾಡುವರು ಬೇಗನೆ ನಾನು ಬರೋದಕ್ಕೆ ಅಗೋದಿಲ್ಲವೆಂದು ಹೇಳುತ್ತಾನೆ. ಆಗ ಫಣಿಯಪ್ಪ ಹರಳಯ್ಯನ ಮನಿಯಲ್ಲಿ ಶಿವಪೂಜೆಗೆ ಕುಂತಿರುವ ತನ್ನ ಜೀವಾತ್ಮವೆಂದುಕೊಂಡ ಗುರು ತೀಪ್ಪೇರುದ್ರಸ್ವಾಮಿಯನ್ನು ನೋಡುತ್ತಾನೆ. ಆ ಕ್ಷಣಕ್ಕೆ ತನ್ನ ಮನೆಯ ಕಡೆ ನಡೆಯುತ್ತಾನೆ. ಮನೆಯ ಹತ್ತಿರ ಹೋಗಿ ಸ್ವಾಮಿ ಮನೆಗೆ ಬಂದಿದ್ದಾರೆಯೇ ಎಂದು ಕೇಳಿದಾಗ, ಆಗ ಮಾಳಮ್ಮ ಗಂಡನಿಗೆ ತಿಪ್ಪೇಸ್ವಾಮಿಯ ಒಳಗಡೆ ಶಿವಪೂಜೆ ಮಾಡುತ್ತಿರುವುದನ್ನು ತಿಳಿಸುತ್ತಾಳೆ. ಆಗ ಫಣಿಯಪ್ಪನು ಮನೆಯ ಒಳಗಡೆ ತಿಪ್ಪೇಸ್ವಾಮಿಯು ಶಿವಪೂಜೆ ಮಾಡುತ್ತಿರುವುದನ್ನು ನೋಡಿ ದಿಗ್ಭ್ರಮೆಗೊಳ್ಳುತ್ತಾನೆ. ಮಹಾಪುರುಷರ ವರ್ತನೆಯನ್ನು ತಿಳಿಯುವುದು ಸುಲಭವಲ್ಲವೆಂದು ತಿಳಿದು ತನ್ನಲ್ಲಿಯೇ

ಸುಮ್ಮನಾಗುತ್ತಾನೆ. ತಿಪ್ಪೇಶನ ವಿಷಯದಲ್ಲಿ ಮಾಡಿದ ಅಸಹ್ಯ ಭಾವನೆ ತನ್ನ ಮನಸ್ಸಿನಲ್ಲಿ ಬಂದುದಕ್ಕಾಗಿ ಪಶ್ಚಾತ್ತಾಪ ಪಡುತ್ತಾನೆ. ಅಲ್ಲದೆ ತನ್ನ ತಪ್ಪಿಗೆ ಸ್ವಾಮಿಯಲ್ಲಿ ಕ್ಷಮೆ ಕೇಳುತ್ತಾರೆ. ಅದಕ್ಕೆ ತಿಪ್ಪೇಸ್ವಾಮಿ 'ಫಣಿಯ ಮೇಲು ಕೀಳೆಂಬ ಭೇದವಿಲ್ಲ, ಎಲ್ಲರೂ ಒಂದೇ, ಪ್ರತಿಯೊಬ್ಬ ಮನುಷ್ಯನಲ್ಲಿಯೂ ಸಮಾನತೆಯನ್ನು ಕಾಣಬೇಕೆಂಬ' ಮಾತನ್ನು ಹೇಳುತ್ತಾನೆ. ತಿಪ್ಪೇಸ್ವಾಮಿಯವರ ಪವಾಡ ಹೆಚ್ಚಿದಂತೆ ಭಕ್ತಾದಿಗಳ ಸಂಖ್ಯೆ ಹೆಚ್ಚಾಯಿತು. ಲಿಂಗಾಂಗಿಗಳಿಗೆಲ್ಲ ಫಣಿಯಪ್ಪನ ಮನೆಯಲ್ಲಿ ಊಟೋಪಚಾರ ನಡೆಯುತ್ತಿತ್ತು. ಉಳಿದ ಭಕ್ತಾದಿಗಳಿಗೆಲ್ಲಾ ಶ್ರೀಮಲ್ಲಪ್ಪನಾಯಕನು ಅರಮನೆಯಿಂದ ಗುರುಮನೆಯವರೆಗೂ ಕಲ್ಲಿನ ಸಾಲು ಮಂಟಪಗಳನ್ನು ನಿರ್ಮಿಸಿ ತಂಗುವವರಿಗೆ ಊಟ ವಸತಿಯ ಅನುಕೂಲ ಮಾಡಿದ್ದನು. ಆದರೆ, ಧಣಿಯವನ ಸ್ಥಿತಿ ಚಿಂತಾಜನಕವಾಗಿತ್ತು. ಬಂದಂತ ಭಕ್ತರಿಗೆ ಪ್ರಸಾದ ಕೊಡುವುದು ಕಷ್ಟವಾಯಿತು. ಅದಕ್ಕೆ ತಿಪ್ಪೇಸ್ವಾಮಿಯು ಫಣಿಯಪ್ಪನ ಮನೆಯಲ್ಲಿರುವ 'ವಾಡೇವಿಗೆ ಅಕ್ಷಯಶಕ್ತಿ' ನೀಡುತ್ತಾನೆ. ಅಂದಿನಿಂದ ಫಣಿಯಪ್ಪನ ಮನೆಯಿಂದ ನೂರಾರು ಜನರು ಧಾನ್ಯಗಳನ್ನು ದಾನದ ರೂಪದಲ್ಲಿ ಪಡೆದುಕೊಂಡು ಹೋಗುತ್ತಿದ್ದರು. ಹೀಗೆ ಫಣಿಯಪ್ಪನ ಮನೆಯವರೆಲ್ಲರು ನೆಮ್ಮದಿಯಿಂದ ಬದುಕುತ್ತಿರುವಾಗ ಇದ್ದಕ್ಕಿದ್ದಂತೆ ಒಂದು ದಿನ ಫಣಿಯಪ್ಪನ ಹೆಂಡತಿ ತೀರಿಕೊಂಡಳು. ಫಣಿಯಪ್ಪನ ಕಾಯಕಕ್ಕೆ ಮೆಚ್ಚಿ ಮರು ವಿವಾಹ ಮಾಡಿಸುತ್ತಾನೆ:

ಫಣಿಯಪ್ಪ ತಾನು ಕಷ್ಟಪಟ್ಟು ದುಡಿದು ಗುರುವಹಿಸಿದ ಕಾಯಕವನ್ನು ಅಲ್ಲದೇ ಭಕ್ತಿಯಿಂದ ಊರು ಊರು ಅಲೆದು ವ್ಯಾಪಾರಮಾಡುತ್ತಿದ್ದ, ಜೊತೆಗೆ ಕೃಷಿಮಾಡುತ್ತಿದ್ದ, ಹೀಗೆ ಫಣಿಯಪ್ಪನ ಶ್ರಮದ ಹಿಂದೆ ಭಕ್ತಿಯ ಕಾಯಕಕ್ಕೆ ತನ್ನ ಹೆಂಡತಿ ತೀರಿಕೊಂಡ ಬಳಿಕ ಚಿಂತಕ್ರಾಂತನಾಗಿದ್ದ. ಇದನ್ನು ಕಂಡ ತಿಪ್ಪೇಸ್ವಾಮಿಗಳು ಐವತ್ತು ವರ್ಷದ ಫಣಿಯಪ್ಪನಿಗೆ ಮತ್ತೊಂದು ಮದುವೆ ಮಾಡಲು ನಿಶ್ಚಯಿಸುತ್ತಾರೆ. ಫಣಿಯಪ್ಪನು ಒಪ್ಪದಿದ್ದರೂ ಕೊನೆಗೆ ಅವನನ್ನು ಒಪ್ಪುವಂತೆ ಮಾಡಿ ಕರೆದುಕೊಂಡು ನಗರಂಗೆರೆಗೆ ಹುಡುಗಿಯನ್ನು ನೋಡಲು ಹೋಗುತ್ತಾರೆ. ನಗರಂಗೆರೆಯಲ್ಲಿ ಧರಣಿಯವರ ಮನೆಯಲ್ಲಿ ಹುಡುಗಿಯನ್ನು ನೋಡಲು ಹೋದಾಗ, ಅವರು ಫಣಿಯಪ್ಪನವರಿಗೆ ತಮ್ಮ ಮಗಳಾದ ಮಾಳಮ್ಮಳನ್ನು ಕೊಡಲು ಒಪ್ಪಿ, ಮುಂದಿನವಾರ ಮದುವೆ ಮಾಡುವುದಾಗಿ ಹೇಳುತ್ತಾರೆ. ಅದನ್ನು ಒಪ್ಪಿದ ಫಣಿಯಪ್ಪ, ತಿಪ್ಪೇಸ್ವಾಮಿ ನಾಯಕನಹಟ್ಟಿಗೆ ಹೊರಟಾಗ, ಈ ಕಡೆ ಚಳ್ಳಕೆರೆಯ ಧರಣಿ ಶ್ರೀಮಂತರು ಕನ್ಯಾರ್ಥಿಗಳಾಗಿ ನಗರಂಗೆರೆಯ ಅದೇ ಕನ್ಯ ಮಾಳಮ್ಮಳನ್ನು ತಮ್ಮ ಮಗನಿಗೆ ತಂದುಕೊಳ್ಳಬೇಕೆಂದು ನೂರಾರು ಜನ ಹಿರಿಯರೊಂದಿಗೆ ಹೋದರು. ಮಾಳಮ್ಮಳನ್ನು

ನಾಯಕನಹಟ್ಟಿಯ ಫಣಿಯಪ್ಪನಿಗೆ ಕೊಡಲು ನಿಶ್ಚಯಿಸಿದ್ದೇವೆಂದು ಎಷ್ಟು ಹೇಳಿದರೂ ಕೇಳುವುದಿಲ್ಲ. ಕೊನೆಗೆ ಮಾಳಮ್ಮಳನ್ನು ಚಳ್ಳಕೆರೆಯವರಿಗೆ ಕೊಡಲು ಒಪ್ಪಿ, ಮದುವೆ ಅದೇ ದಿನದಂದು ನಡೆಸುವ ಸಿದ್ಧತೆ ಮಾಡುತ್ತಾರೆ. ಈ ವಿಷಯ ತಿಳಿದ ಶ್ರೀಗಳು ಪರಿವಾರ ಸಮೇತ ನಾಯಕನಹಟ್ಟಿಯಿಂದ ಪ್ರಯಾಣ ಬೆಳೆಸುತ್ತಾರೆ, ನಗರಂಗೆರೆಯ ಹೆಣ್ಣಿನವರು ನಾಯಕನಹಟ್ಟಿಯವರನ್ನು ಉದಾಸೀನ ಮಾಡಿ, ಚಳ್ಳಕೆರೆಯ ನೆಂಟರನ್ನು ವಿಜೃಂಭಣೆಯಿಂದ ಸ್ವಾಗತಿಸಿ, ಎಲ್ಲರನ್ನು ಶಿವಪೂಜೆಗೆ ಆಹ್ವಾನಿಸುತ್ತಾರೆ. ಎಲ್ಲರೂ ಕೈಕಾಲು ಮುಖ ತೊಳೆದುಕೊಂಡು ಶಿವಪೂಜೆಗೆ ಕುಳಿತರು. ಇದನ್ನೆಲ್ಲ ಶಿವಾಲಯದಲ್ಲಿ ಧ್ಯಾನಾಸಕ್ತಿಯಿಂದ ಗಮನಿಸುತ್ತಿದ್ದ ತಿಪ್ಪೇಸ್ವಾಮಿ ಇವರ ಹತ್ತಿರವಿದ್ದ ಕರಡಿ (ಕಲ್ಲಿ)ಗೆ ಮತ್ತು ವಸ್ತ್ರಗಳಲ್ಲಿ ಶಿವಲಿಂಗವೇ ಇಲ್ಲದಂತೆ ಮಾಯ ಮಾಡುತ್ತಾನೆ. ಆಗ ಚಳ್ಳಕೆರೆ ಮತ್ತು ನಗರಂಗೆರೆ ಬೀಗರು ಆತಂಕಗೊಂಡು, ಇದು ನಾಯಕನಹಟ್ಟಿ ಪವಾಡಪುರುಷ ತಿಪ್ಪೇಸ್ವಾಮಿಯ ಕೈವಾಡವೇ ಇರಬೇಕೆಂದು ಎಲ್ಲರೂ ಸೇರಿ ಸ್ವಾಮಿಯಲ್ಲಿಗೆ ಧಾವಿಸಿ, ತಪ್ಪನ್ನು ಒಪ್ಪಿಕೊಂಡು ತಮ್ಮ ಮಗಳು ಮಾಳಮ್ಮಳನ್ನು ಫನೆಯಪ್ಪನಿಗೆ ವಿವಾಹ ಮಾಡಿಕೊಡುತ್ತಾರೆ. ನಂತರ, ಎಲ್ಲರ ಆಶೀರ್ವಾದದೊಂದಿಗೆ ಮಾಳಮ್ಮ ಫಣಿಯಪ್ಪನ ಜೊತೆಯಲ್ಲಿ ನಾಯಕನಹಟ್ಟಿಗೆ ಬಂದು ಸಂಸಾರ ನಡೆಸುತ್ತಾಳೆ.

ನಿಡುಗಲ್ಲುರಾಜ ದಂಪತಿಗಳಿಗೆ ಪುತ್ರ ಸಂತಾನ ಫಲದ ಆರ್ಶಿವಾದವನ್ನು ನೀಡಿದ್ದು ತಿಪ್ಪೇಸ್ವಾಮಿಯವರೇ, ಇನ್ನೂ ಹೈದರಾಲಿಯೂ ಪುತ್ರ ಸಂತಾನವಿಲ್ಲವೆಂದು ಶೋಕದಲ್ಲಿರುವಾಗ ನಾಯಕನಹಟ್ಟಿಯ ಹತ್ತಿರ ಸೈನ್ಯವನ್ನು ಬೀಡುಬಿಟ್ಟು, ಆ ರಾತ್ರಿ ಮಲಗಿರುವಾಗ ತಿಪ್ಪೇಸ್ವಾಮಿ ಕನಸಿನಲ್ಲಿ ಬಂದು ನನ್ನ ದೇವಸ್ಥಾನವನ್ನು ಜೀರ್ಣೋದ್ಧಾರ ಕಾರ್ಯವನ್ನು ಮಾಡಿದರೆ ನಿನಗೆ ಪುತ್ರ ಸಂತಾನ ಭಾಗ್ಯವನ್ನು ಕೊಡುತ್ತೇನೆಂದು ಹೇಳುತ್ತಾನೆ. ಹೀಗಾಗಿ ಮುಂದೆ ಹೈದರಾಲಿ ಕಂಡ ಕನಸಿನಂತೆ ಅವನಿಗೆ ಮಗುವಾಗುತ್ತದೆ ಆಗ ತಿಪ್ಪೇಸ್ವಾಮಿಯ ಹೆಸರಿನ ಪದವನ್ನು ತೆಗೆದುಕೊಂಡು ತನ್ನ ಮಗನಿಗೆ ಟಿಪ್ಪು ಎಂದು ನಾಮಕರಣ ಮಾಡಿ. ಕೊಟ್ಟಮಾತಿನಂತೆ ದೇವಾಲಯವನ್ನು ನಿರ್ಮಿಸಿದನು. ನಂತರ ಒಂದು ದಿನ ಈ ಜಗತ್ತಿನ ಜಂಜಾಟವನ್ನು ಕಂಡಂತಹ ತಿಪ್ಪೇಸ್ವಾಮಿಯೂ ಹಿಂದೂ ಪಂಚಾಂಗದ ಪ್ರಕಾರ ಚಿತ್ತ ನಕ್ಷತ್ರ ಪಾಲ್ಗುಣ ಮಾಸದ ಬಹುಳ ದಿನದಂದು ತಾನು ಬಯಸಿದಂತೆ ಹೊರಮಠದಲ್ಲಿ ಜೀವ ಸಮಾಧಿಯನ್ನು ಅಗುವುದರ ಮೂಲಕ ವೈರಾಗ್ಯವನ್ನು ಪಡೆದುಕೊಂಡನು. ಈ ಸಮಾಧಿ ಇದು ಇಂಡೋಇಸ್ಲಾಮಿಕ್ ಶೈಲಿಯಲ್ಲಿದೆ, ಇದನ್ನು ಹೈದರಲಿಯು ಟಿಪ್ಪು ಹುಟ್ಟಿದ ನೆನಪಿಗಾಗಿ ನಿರ್ಮಿಸಿದ ಎಂದು ಹೇಳಲಾಗುತ್ತದೆ. ಹದಿನೈದನೇ ಶತಮಾನದಲ್ಲಿ ಬಸಯ್ಯಪ್ಪ ಎಂಬ ಭಕ್ತರು

ಒಳ ಮಠದ ಇಪ್ಪನಾಲ್ಕು ಮೀಟರ್ ಇರುವ ಗೋಪುರವನ್ನು ನಿರ್ಮಿಸಿದರು. ಕೈಲಾಸ ಪರ್ವತದಿಂದ ಇಳಿದು ಬಂದ ಈ ಪವಾಡ ಪುರುಷನನ್ನು ಇಚಿದು ದೇವರಂತೆ ಪೂಜಿಸುತ್ತಾರೆ. ಜಾತಿ, ಧರ್ಮ, ಬೇಧವನ್ನು ಮರೆತು ಪ್ರತಿ ವರ್ಷ ಈತನ ಜಾತ್ರೆಯಲ್ಲಿ ಪಾಲ್ಗೊಂಡು ಹರಕೆಗಳನ್ನು ತೀರಿಸುತ್ತ ತಮ್ಮ ಭಕ್ತಿಯನ್ನು ಮೆರೆಯುತ್ತಾರೆ. ಹೀಗಾಗಿ ಚಿತ್ರದುರ್ಗ ಪರಿಸರದಲ್ಲಿ ವದ್ದಿಕೇರಿ ಸಿದ್ಧಪ್ಪ, ನುಂಕೆಮಲೆ ಸಿದ್ಧಪ್ಪ ಮೊದಲಾದ ಸಂತರು ನೆಲೆಸಿ ಸಾಂಸ್ಕೃತಿಕ ನಾಯಕರಾಗಿದ್ದರೆ.

ಪರಾಮರ್ಶನ ಗ್ರಂಥಗಳು:

1. ತಿಪ್ಪೇರುದ್ರಸ್ವಾಮಿ ಎಚ್, ಶರಣರ ಅನುಭಾವ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1980.
2. ಮೀರಾಸಾಬಿಹಳ್ಳಿ ಶಿವಣ್ಣ ಪಿ.ಬಿ., ದುರುಗ ಜಾನಪದ, ಶಕ್ತಿ ಮುದ್ರಣ ಮತ್ತು ಪ್ರಕಾಶನ, ಬೆಂಗಳೂರು, 1999.
3. ರಂಗಸ್ವಾಮಿ ಡಿ.ಟಿ, ಶ್ರೀ ಗುರು ತಿಪ್ಪೇರುದ್ರಸ್ವಾಮಿ ಮಹಿಮಾಮೃತ, ಕನ್ನಡ ಸಂಘ, ನಾಯಕನಹಟ್ಟಿ, 1991
4. ಸತೀಶ.ಹೆಚ್, ನಾಯಕನಹಟ್ಟಿ ತಿಪ್ಪೇಸ್ವಾಮಿ: ಸಾಂಸ್ಕೃತಿಕ ಅಧ್ಯಯನ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, 2001.
5. ಶಂಕರಯ್ಯ ಸ್ವಾಮಿ, ಪವಾಡ ಪುರುಷ ಶ್ರೀಗುರು ತಿಪ್ಪೇರುದ್ರಸ್ವಾಮಿ ಚರಿತ್ರೆ, ಸ್ವಾಮಿ ಪ್ರಿಂಟರ್ಸ್, ಚಳ್ಳಕೆರೆ, 1995.
6. ಸಿದ್ಧವೀರಕವಿ ಸೊಕ್ಕೆ, ಶ್ರೀಗುರು ತಿಪ್ಪೇರುದ್ರೇಶ್ವರ ಪುರಾಣ, ವೀರೇಶ್ವರ ಪುಣ್ಯಾಶ್ರಮ, ಗದಗ, 1984.

***

ಪರ್ಷಿಯನ್ ಮತ್ತು ಅರಬಿ ಮಹಾಭಾರತ: ಭಾಷಾಂತರ ಪರಂಪರೆ ಮತ್ತು ಸಾಹಿತ್ಯಿಕ ಅನುಸಂಧಾನ

1
ಡಾ.ಸೈಯದ್ ಮುಯಿನ್
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಪರಿಗಣಿತ ವಿಶ್ವವಿದ್ಯಾಲಯ
ಬೆಂಗಳೂರು

ಭಾರತೀಯ ಇತಿಹಾಸ ಮತ್ತು ಸಾಹಿತ್ಯ ಪರಂಪರೆಯಲ್ಲಿ ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ಅದು ಭಾರತೀಯ ಸಂಸ್ಕೃತಿ, ಧರ್ಮ ಮತ್ತು ತತ್ವಶಾಸ್ತ್ರದ ಜೀವಂತ ದಾಖಲೆ. ಈ ಕೃತಿ ಶತಮಾನಗಳ ಕಾಲ ಅನೇಕ ಭಾಷೆಗಳಿಗೆ ಭಾಷಾಂತರಗೊಂಡಿದೆ. ಪರ್ಷಿಯನ್ ಮತ್ತು ಅರಬಿ ಭಾಷೆಗಳಲ್ಲಿಯೂ ಮಹಾಭಾರತದ ಅನುವಾದಗಳು ನಡೆದಿದ್ದು, ಅವುಗಳ ಮೂಲಕ ಭಾರತದ ಪೌರಾಣಿಕ ಪರಂಪರೆ ಜಗತ್ತಿನ ಇಸ್ಲಾಮಿಕ್ ಸಂಸ್ಕೃತಿಯೊಂದಿಗೆ ಸಂವಾದ ನಡೆಸಿತು. ಈ ಲೇಖನವು ಪರ್ಷಿಯನ್ ಹಾಗೂ ಅರಬಿಕ್ ಮಹಾಭಾರತದ ರೂಪಾಂತರ, ಭಾಷಾಂತರ ಶೈಲಿ, ಸಾಂಸ್ಕೃತಿಕ ವ್ಯಾಖ್ಯಾನ ಮತ್ತು ಅವುಗಳ ಸಾಮಾಜಿಕ–ಸಾಂಸ್ಕೃತಿಕ ಪರಿಣಾಮಗಳನ್ನು ವಿಶ್ಲೇಷಿಸುತ್ತದೆ. ಭಾರತವನ್ನು ತಮ್ಮ ತಾಯ್ನಾಡು ಮಾಡಿಕೊಂಡು ಬಾಳಿ ಬದುಕಿದ ಮೊಘಲರು ತಮ್ಮ ಜತೆ ಸಹಬಾಳ್ವೆ ನಡೆಸುವ

ಇತರ ಜನರ ಧರ್ಮ–ಸಂಸ್ಕೃತಿಯನ್ನು ಅರಿಯಲು ಪವಿತ್ರ ಗ್ರಂಥಗಳನ್ನು ಪರ್ಷಿಯನ್ ಮತ್ತು ಅರಬಿ ಭಾಷೆಗೆ ಅನುವಾದಿಸುವುದರ ಮೂಲಕ ಜನರ ಭಾವನೆಗಳನ್ನು ಹತ್ತಿರವಾಗುವ ಪ್ರಯತ್ನವನ್ನು ಮಾಡಿದರು. ಮತ್ತು ಇವರು ಮಾಡಿದ ಮಹತ್ಕಾರ್ಯವನ್ನು ಇಂದು ಎಲ್ಲರು ಮರೆತಿರುವುದು ದುರಂತವೇ ಸರಿ.

ಡಿಸೆಂಬರ್ ತಿಂಗಳ 2024ರಂದು ಪ್ರಧಾನಿ ಶ್ರೀಯುತ ನರೇಂದ್ರ ಮೋದಿ ಅವರು ಕುವೈತ್ ಪ್ರವಾಸದಲ್ಲಿದ್ದಾಗ ಅಲ್ಲಿನ ಅಬ್ದುಲ್ ಲತೀಫ್ ಅಲ್ ನಸೇಫ್ ಅವರ ಪ್ರಕಾಶನಾಲಯದಿಂದ ಅಬ್ದುಲ್ ಅಲ್ ಬರೋನ್ ಅವರು ಅನುವಾದಿಸಿರುವ ಅರಬಿ ಭಾಷೆಯ ರಾಮಾಯಣ ಮತ್ತು ಮಹಾಭಾರತವನ್ನು ಲೋಕಾರ್ಪಣೆ ಮಾಡಿದರು. ಅಂದರೆ ಇಂದಿಗೂ ಜಗತ್ತಿನ ಹಲವು ಭಾಷೆಗಳಿಗೆ ಅನುವಾದಗೊಳ್ಳುತ್ತಿರುವ ಮಹಾನ್ ಕಾವ್ಯಗಳಲ್ಲಿ ಮಹಾಭಾರತವೂ ಒಂದಾಗಿದೆ.

ಈ ಲೇಖನದಲ್ಲಿ ಮುಘಲ್ ಚಕ್ರವರ್ತಿ ಅಕ್ಬರ್ ಆಸ್ಥಾನದಲ್ಲಿ ಅನುವಾದಗೊಂಡ ಪರ್ಷಿಯನ್ "ರಜ್ಮ್‌ನಾಮಾ" (ಖಚಿದಟಟಿಚಿಚಿಟಚಿ) ಹಾಗೂ ಅರಬಿ ಭಾಷೆಯಲ್ಲಿ ಪ್ರಸಾರವಾದ ಮಹಾಭಾರತದ ಪರಂಪರೆಯ ಕುರಿತಂತೆ ವಿಶ್ಲೇಷಣಾತ್ಮಕ ಅಧ್ಯಯನವನ್ನು ಮಾಡಲಾಗಿದೆ. ಮಹಾಭಾರತವು ಭಾರತೀಯ ಸಂಸ್ಕೃತಿಯ ಅಡಿಗಲ್ಲಾದ ಮಹಾಕಾವ್ಯವಾಗಿದ್ದು, ಇದರ ಪರ್ಷಿಯನ್ ಹಾಗೂ ಅರಬಿ ಅನುವಾದಗಳು ಕೇವಲ ಸಾಹಿತ್ಯಿಕ ಕೃತಿಗಳಷ್ಟೇ ಅಲ್ಲದೆ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸೇತುವೆಗಳಾಗಿ ಕಾರ್ಯನಿರ್ವಹಿಸಿವೆ. ಈ ಲೇಖನವು ಎರಡು ಮುಖ್ಯ ವಿಭಾಗಗಳನ್ನು ಒಳಗೊಂಡಿದೆ – ಮೊದಲನೆಯದು ಸಂಸ್ಕೃತ ಮೂಲಗಳ ಗುರುತು, ಎರಡನೆಯದು ಪರ್ಷಿಯನ್ ಮತ್ತು ಅರಬಿ ಅನುವಾದ ಪ್ರಕ್ರಿಯೆಗಳ ಸಮೀಕ್ಷೆ.

ಪ್ರಮುಖ ಪದಗಳು : *ಮಹಾಭಾರತ, ಪರ್ಷಿಯನ್ ಭಾಷಾಂತರ, ಅರಬಿಕ್ ಸಾಹಿತ್ಯ, ಭಾಷಾಂತರ ಪರಂಪರೆ, ಸಂಸ್ಕೃತಿ ಸಂವಾದ*

ಪರಿಚಯ

ಮಹಾಭಾರತವು ವಿಶ್ವದ ಅತಿದೊಡ್ಡ ಮಹಾಕಾವ್ಯಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿದ್ದು, ಸುಮಾರು 1,00,000 ಶ್ಲೋಕಗಳನ್ನು ಒಳಗೊಂಡಿದೆ. ಇದು ಕೇವಲ ಧಾರ್ಮಿಕ ಕೃತಿ ಅಲ್ಲದೆ, ರಾಜಕೀಯ, ನೀತಿ, ತತ್ವಶಾಸ್ತ್ರ, ಸಮಾಜ ಮತ್ತು ಧರ್ಮದ ದಿಗ್ದರ್ಶನವನ್ನು ನೀಡುತ್ತದೆ. ಇಸ್ಲಾಮಿಕ್ ಆಳ್ವಿಕೆಯ ಕಾಲದಲ್ಲಿ ಭಾರತದ ಸಂಸ್ಕೃತಿಯೊಂದಿಗೆ ಪರ್ಷಿಯನ್ ಮತ್ತು ಅರಬಿ ಸಾಹಿತ್ಯವು ಆಳವಾದ ಸಂಪರ್ಕ

ಹೊಂದಿತು. ಅದರಿಂದಾಗಿ ಮಹಾಭಾರತವನ್ನು ಇವುಗಳ ಭಾಷೆಗಳಿಗೂ ಭಾಷಾಂತರಿಸಲಾಯಿತು. 8–9ನೇ ಶತಮಾನದಲ್ಲಿದ್ದ ಅಬಾಸಿದ್‌ನ ಖಲೀಫಾ ಅಲ್–ಮಾಮುನ್ ಅವರ ಆಸ್ಥಾನದಲ್ಲಿ ಹಲವು ಹಿಂದೂ ಪಂಡಿತರು ಮತ್ತು ವೈದ್ಯರು ಇದ್ದರು, ಇವರು ಚಾರ್ವಾಕ ಮತ್ತು ಸುಶ್ರುತನ ಗ್ರಂಥಗಳನ್ನು ಅರಬಿ ಭಾಷೆಗೆ ಅನುವಾದಿಸಲು ಸಹಕರಿಸಿದರು. ಈತನ ಆಡಳಿತಾವಧಿಯನ್ನು ಪ್ರಪಂಚದ ಜ್ಞಾನಭಂಡಾರಗಳ ಅನುವಾದ ಕಾರ್ಯದ ಸುವರ್ಣಯುಗವೆಂದು ಕರೆಯಲಾಗುತ್ತದೆ. ಭಾರತದ ಜ್ಞಾನ ಪರಂಪರೆಯು ಮಧ್ಯಪ್ರಾಚ್ಯ ದೇಶಗಳ ಮೂಲಕ ಯೂರೋಪಿನ ದೇಶಗಳಿಗೆ ಸಂಸ್ಕೃತದಿಂದ ಅರಬಿಗೆ, ಅರಬಿ ಭಾಷೆಯಿಂದ ಗ್ರೀಕ್ ಭಾಷೆಗೆ ಅನುವಾದಗೊಂಡು ಜ್ಞಾನ ಪ್ರವಹಿಸಿದ್ದು ಸಾಗಿದ್ದು ಈತನ ಅವಧಿಯಲ್ಲೇ ಎಂಬುದು ಬಹುಮುಖ್ಯ ವಿಚಾರವಾಗಿದೆ. 11ನೇ ಶತಮಾನದ ಆದಿಯಲ್ಲಿ ಅಬುಲ್ ಹಸನ್ ಅಲಿ ಎಂಬುವವರು ಮೊದಲ ಬಾರಿಗೆ ಮಹಾಭಾರತವನ್ನು ಅರಬಿ ಭಾಷೆಗೆ ಅನುವಾದಿಸಿರುವ ಕೃತಿ ಲಭ್ಯವಾಗಿದೆ. 'ರಾಜಕುಮಾರರಿಗೆ ಮಾರ್ಗದರ್ಶನ' ಎಂಬ ಹೆಸರನ್ನು ಹೋಲುವ ಅರಬಿ ಪಠ್ಯವನ್ನು ಅರಬಿಯಿಂದ ಫ್ರೆಂಚ್ ಭಾಷೆಗೆ ಅನುವಾದಿಸಲಾಗಿದೆ.

ಮಹಾಭಾರತವು ಕೇವಲ ಧಾರ್ಮಿಕ ಗ್ರಂಥವಲ್ಲದೆ, ದಾರ್ಶನಿಕ, ಸಾಮಾಜಿಕ ಹಾಗೂ ರಾಜಕೀಯ ಚಿಂತನೆಗಳ ಪ್ರತಿಬಿಂಬವಾಗಿದೆ. 16ನೇ ಶತಮಾನದ ಕೊನೆಯಲ್ಲಿ ಅಕ್ಬರ್ ಪರ್ಷಿಯನ್ ಭಾಷೆಗೆ ಈ ಕಾವ್ಯವನ್ನು ಅನುವಾದಿಸಲು ಆದೇಶಿಸಿದಾಗ, ಅದು ಕೇವಲ ಸಾಹಿತ್ಯ ಕೃತಿಯ ರೂಪಾಂತರವಾಗಿರದೆ, ಭಾರತೀಯ ಜ್ಞಾನ ಪರಂಪರೆಯನ್ನು ಇಸ್ಲಾಮಿಕ್ ಹಾಗೂ ಪರ್ಷಿಯನ್ ಜಗತ್ತಿಗೆ ಪರಿಚಯಿಸುವ ಪ್ರಮುಖ ಕೃತ್ಯವಾಗಿತ್ತು. "ರಜ್ಮ್‌ನಾಮಾ" ಎಂಬ ಪರ್ಷಿಯನ್ ಅನುವಾದವು ದೆಹಲಿ ಹಾಗೂ ಆಗ್ರಾದ ಮುಘಲ್ ಅರಮನೆಗಳಲ್ಲಿ ರಾಜಕೀಯ ಚಿಂತನೆ, ಧಾರ್ಮಿಕ ಸಹಿಷ್ಣುತೆ ಮತ್ತು ಸಾಂಸ್ಕೃತಿಕ ಸಂವಹನದ ಪ್ರಮುಖ ಸಾಧನವಾಗಿ ಪರಿಣಮಿಸಿತು. ಅಕ್ಬರನ ಕಾಲದಲ್ಲಿ ಸಂಸ್ಕೃತದ ಬಹುಮುಖ್ಯ 15 ಗ್ರಂಥಗಳನ್ನು ಪರ್ಷಿಯನ್ ಭಾಷೆಗೆ ಅನುವಾದಿಸಲಾಗಿತ್ತು ಎಂದು ವಿದ್ವಾಂಸರು, ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಅಥರ್ವವೇದ, ಭಗವದ್ಗೀತೆ, ಹರಿವಂಶ, ಕಥಾಸರಿತ್ಸಾಗರ, ಸಿಂಹಾಸನ ಬತ್ತೀಸ, ಜ್ಯೋತಿಷ್ಯಶಾಸ್ತ್ರ, ಲೀಲಾವತಿ ಮತ್ತು ನಳದಮಯಂತಿ ಹೀಗೆ ಪ್ರಮುಖ ಕೃತಿಗಳು ಪರ್ಷಿಯನ್ ಭಾಷೆಗೆ ಅನುವಾದಗೊಂಡವು.

ಮೊಘಲ್ ಚಕ್ರವರ್ತಿ ಅಕ್ಬರ್ (1556–1605) ಅವರ ಕಾಲದಲ್ಲಿ ಮೊಘಲ್

ಸಾಮ್ರಾಜ್ಯವು ಧಾರ್ಮಿಕ–ಸಾಂಸ್ಕೃತಿಕವಾಗಿ ವೈವಿಧ್ಯಮಯವಾಗಿತ್ತು. ಮುಸ್ಲಿಮರು ಅಲ್ಪಸಂಖ್ಯಾತರಾಗಿದ್ದ ಕಾರಣ, ಅಕ್ಬರ್ ಹಿಂದುಗಳು ಮತ್ತು ಇತರ ಸಮುದಾಯಗಳನ್ನು ಆಡಳಿತ ವ್ಯವಸ್ಥೆಗೆ ಸೇರಿಸಿಕೊಂಡು ಧಾರ್ಮಿಕ ಸಹಿಷ್ಣುತೆ ಮತ್ತು ರಾಜಕೀಯ ಏಕತೆಯನ್ನು ಬೆಳೆಸಿದರು. ಈ ಹಿನ್ನೆಲೆಯಲ್ಲಿ 1574ರಲ್ಲಿ ಫತೇಹ್ಪುರ್ ಸಿಕ್ರಿಯಲ್ಲಿ ಅಕ್ಬರ್ ಮಕ್ತಬ್ ಖಾನಾ (ಅನುವಾದ ಕಚೇರಿ) ಸ್ಥಾಪಿಸಿದರು. ಇಲ್ಲಿ ಸಂಸ್ಕೃತ, ಅರಬಿ, ತುರ್ಕಿ ಪಠ್ಯಗಳನ್ನು ಪರ್ಷಿಯನ್‌ಗೆ ಅನುವಾದಿಸುವ ಕಾರ್ಯ ನಡೆಯಿತು. 1582ರಲ್ಲಿ ಅಕ್ಬರ್ ಮಹಾಭಾರತವನ್ನು ಪರ್ಷಿಯನ್‌ಗೆ ಅನುವಾದಿಸುವ ಮಹತ್ತರ ಯೋಜನೆ ಆರಂಭಿಸಿದರು. ಅಂದಾಜು ಒಂದು ಲಕ್ಷ ಶ್ಲೋಕಗಳಿರುವ ಈ ಮಹಾಕಾವ್ಯವನ್ನು ಸಂಕ್ಷಿಪ್ತ ರೂಪದಲ್ಲಿ “ರಜ್ಮ್‌ನಾಮಾ” (ಯುದ್ಧದ ಪುಸ್ತಕ) ಎಂದು ಕರೆಯಲಾಯಿತು. ಮೊದಲ ಆವೃತ್ತಿ (1584–86) ಅಲಂಕೃತ ಪ್ರತಿಯಾಗಿ ಅಕ್ಬರ್‌ಗೆ ಮೀಸಲಾಗಿದ್ದು, ನಂತರದ 1598–99ರ ಆವೃತ್ತಿಯು (ದ್ವಿತೀಯ ಆವೃತ್ತಿ) ಹೆಚ್ಚು ಪ್ರಸಿದ್ಧಿಯಾಯಿತು. ಈ ಪಠ್ಯದ ಪ್ರತಿಗಳು ಸಾಮ್ರಾಜ್ಯಾದ್ಯಂತ ಹರಡಲಾಯಿತು, ಧಾರ್ಮಿಕ ಭೇದಗಳನ್ನು ಮೀರಿ ಹಿಂದೂ–ಮುಸ್ಲಿಂ ಏಕತೆಯನ್ನು ಉತ್ತೇಜಿಸುವ ರಾಜಕೀಯ ಉದ್ದೇಶದಿಂದ ಬಳಕೆಯಾದವು. ಇದು ಮಹಾಭಾರತದ ಅನುವಾದವಾಗಿರದೆ, ಅದರ ಸರಳ ರೂಪಾಂತರವಾಗಿದೆ.

ಸಂಸ್ಕೃತ ಮೂಲಗಳ ಗುರುತು

ಮಹಾಭಾರತದ ಪರ್ಷಿಯನ್ ಅನುವಾದವು ನೇರವಾಗಿ ಸಂಪೂರ್ಣ ಕೃತಿಯಿಂದ ಆಗದೆ, ಆಯ್ದ ಸಂಸ್ಕೃತ ಪಠ್ಯಗಳಿಂದ ನಡೆದಿತ್ತು. ಅನೇಕ ಬ್ರಾಹ್ಮಣ ಪಂಡಿತರ ಸಹಕಾರದಿಂದ ಮುಘಲ್ ದರ್ಬಾರದ ಪಂಡಿತರು ಕಥಾವಸ್ತುವನ್ನು ಪರ್ಷಿಯನ್ ಭಾಷೆಯಲ್ಲಿ ಅನುವಾದಿಸಿದರು. ಇದರ ಮೂಲಕ ಭಾರತೀಯ ದಾರ್ಶನಿಕ ಅಂಶಗಳು – ಧರ್ಮ, ನೀತಿ, ರಾಜನೀತಿಶಾಸ್ತ್ರ ಹಾಗೂ ವೇದಾಂತ ಚಿಂತನೆಗಳು ಪರ್ಷಿಯನ್ ಭಾಷಾ ವಲಯಕ್ಕೆ ಪ್ರವೇಶಿಸಿತು.

ಪರ್ಷಿಯನ್ ಅನುವಾದಿತ ಮಹಾಭಾರತ

“ರಜ್ಮ್‌ನಾಮಾ” ಪರ್ಷಿಯನ್ ಭಾಷೆಯಲ್ಲಿ ಮಹಾಭಾರತದ ಹೊಸ ಆವೃತ್ತಿಯಂತಾಗಿದೆ. ಇದರಲ್ಲಿ ಸಂಸ್ಕೃತ ಮೂಲಗಳ ಪ್ರತಿಯೊಬ್ಬ ಸಂಚಿಕೆ ಅಚ್ಚುಕಟ್ಟಾಗಿ ಉಳಿದಿಲ್ಲ. ಬದಲಾಗಿ ಮುಘಲ್ ಪಂಡಿತರು ತಾವು ಬಯಸಿದ ರಾಜಕೀಯ ಹಾಗೂ ಧಾರ್ಮಿಕ ಸಂದೇಶಗಳನ್ನು ಮುಖ್ಯವಾಗಿ ಒತ್ತಿಹೇಳಿದರು. ವಿಶೇಷವಾಗಿ, ಧರ್ಮಯುದ್ಧ, ರಾಜನ ನೀತಿ, ಮತ್ತು ದೈವ–ಮಾನವ ಸಂಬಂಧಗಳ ಚಿತ್ರಣವು ಅಕ್ಬರ್‌ನ ಸಾಮ್ರಾಜ್ಯ

ನೀತಿಯೊಂದಿಗೆ ತೀವ್ರವಾಗಿ ಜೋಡಿಸಲ್ಪಟ್ಟಿತ್ತು.

- ♦ ಮೊಘಲ್ ಅರಮನೆಗಳಲ್ಲಿ ಸಂಸ್ಕೃತ ಕೃತಿಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರಿಸುವ ಬೃಹತ್ ಯೋಜನೆ ನಡೆದಿತ್ತು.
- ♦ ಅಬುಲ್ ಫಝುಲ್‌ನ ಆಯಿನೆ ಅಕ್ಬರಿಯಲ್ಲಿ ಮಹಾಭಾರತದ ಉಲ್ಲೇಖವಿದೆ.
- ♦ ಅಕ್ಬರ್‌ನ ಆಜ್ಞೆಯಿಂದ ಸಂಸ್ಕೃತ ಮಹಾಭಾರತವನ್ನು ಪರ್ಷಿಯನ್‌ಗೆ ಭಾಷಾಂತರಿಸಲಾಯಿತು. ಈ ಅನುವಾದವನ್ನು ರಾಜಮಾ–ನಾಮಾ ಎಂದು ಕರೆಯಲಾಗುತ್ತದೆ.
- ♦ ಪರ್ಷಿಯನ್ ಭಾಷಾಂತರದಲ್ಲಿ ಮೂಲ ಕಥಾವಸ್ತು ಉಳಿಸಿಕೊಂಡಿದ್ದರೂ, ಕೆಲ ಪೌರಾಣಿಕ ಅಂಶಗಳನ್ನು ಇಸ್ಲಾಮಿಕ್ ಶೈಲಿಗೆ ಹೊಂದುವಂತೆ ಪರಿವರ್ತನೆ ಮಾಡಲಾಯಿತು.
- ♦ ಕಥೆಯಲ್ಲಿನ ದೇವತೆಗಳ ವಿವರಣೆಗಳನ್ನು ಕೆಲವೆಡೆ ಅಲಂಕಾರಿಕ ಅಥವಾ ರೂಪಕದ ರೀತಿಯಲ್ಲಿ ಪರಿಭಾಷಿಸಲಾಯಿತು.

ಅರಬಿ ಅನುವಾದಿತ ಮಹಾಭಾರತ

ಅಕ್ಬರ್ ಕಾಲಘಟ್ಟದಲ್ಲೇ ಅಲ್ಲದೆ, ನಂತರದ ಶತಮಾನಗಳಲ್ಲಿ ಮಹಾಭಾರತವು ಅರಬಿ ಭಾಷೆಯಲ್ಲಿಯೂ ಪ್ರಸಾರವಾಯಿತು. ಅರಬಿ ಅನುವಾದಗಳು ಹೆಚ್ಚಾಗಿ ಧಾರ್ಮಿಕ ಕಥಾನಕಗಳ ಮೇಲೆ ಕೇಂದ್ರೀಕೃತವಾಗಿದ್ದು, ಕಾವ್ಯದ ದಾರ್ಶನಿಕ ತತ್ವಗಳನ್ನು ಇಸ್ಲಾಮಿಕ್ ಜ್ಞಾನ ಸಂಪ್ರದಾಯದೊಡನೆ ಹೊಂದಿಸುವ ಪ್ರಯತ್ನ ಮಾಡಿದ್ದವು. ಇದರ ಮೂಲಕ ಭಾರತೀಯ ಕಥಾಸಂಸ್ಕೃತಿ ಮಧ್ಯಪೂರ್ವ ದೇಶಗಳಿಗೂ ಪರಿಚಿತವಾಯಿತು.

- ♦ ಅರಬಿ ಲೋಕದಲ್ಲಿ ಭಾರತೀಯ ಜ್ಞಾನ, ವಿಶೇಷವಾಗಿ ಗಣಿತ, ಖಗೋಳಶಾಸ್ತ್ರ ಮತ್ತು ಧಾರ್ಮಿಕ ಗ್ರಂಥಗಳ ಅನುವಾದಕ್ಕೆ ವಿಶೇಷ ಆದ್ಯತೆ ದೊರಕಿತ್ತು.
- ♦ 8ನೇ ಶತಮಾನದ ವೇಳೆಗೆ ಬಗ್ದಾದ್‌ನ ಬಯ್ತುಲ್ ಹಿಕ್ಮಾ (House of Wisdom)ಯಲ್ಲಿ ಸಂಸ್ಕೃತ ಗ್ರಂಥಗಳ ಅನುವಾದ ಕಾರ್ಯ ನಡೆದಿತ್ತು.
- ♦ ಮಹಾಭಾರತದ ಕೆಲವು ಭಾಗಗಳು ನೇರವಾಗಿ ಸಂಸ್ಕೃತದಿಂದ ಅರಬಿಕ್‌ಗೆ ಅಲ್ಲದೆ, ಪರ್ಷಿಯನ್ ಮೂಲಕ ಅರಬಿಗೆ ಬಂದವು.
- ♦ ಅರಬಿ ಭಾಷೆಯ ಪಠ್ಯಗಳಲ್ಲಿ ಮಹಾಭಾರತವನ್ನು ಕೆಲವೊಮ್ಮೆ 'ಹಿಂದ್ ಕಿಸ್ಸಾ' (ಭಾರತದ ಕಥೆ) ಎಂಬ ಹೆಸರಿನಲ್ಲಿ ಉಲ್ಲೇಖಿಸಲಾಗಿದೆ.
- ♦ ಅರಬಿ ಅನುವಾದವು ಕಾವ್ಯಾತ್ಮಕತೆಯನ್ನು ಕಡಿಮೆ ಮಾಡಿ, ತತ್ವಶಾಸ್ತ್ರ ಮತ್ತು ನೀತಿ ಉಪದೇಶಗಳಿಗೆ ಹೆಚ್ಚು ಒತ್ತು ನೀಡಿತು.

ಅನುವಾದ ಪ್ರಕ್ರಿಯೆ:

ಸಂಸ್ಕೃತ ಬಲ್ಲ ಬ್ರಾಹ್ಮಣ ಪಂಡಿತರು ಕಥೆಯನ್ನು ಮೊದಲು ವಿವರಿಸಿದರು. ನಂತರ ಮುಸ್ಲಿಂ ಪಂಡಿತ ನಕೀಬ್ ಖಾನ್ ಅದನ್ನು ಪರ್ಷಿಯನ್ ಸಾರಾಂಶ ರೂಪದಲ್ಲಿ ಬರೆದರು. ಕೊನೆಗೆ ಕವಿಯಾದ ಫೈಝಿ ಅದನ್ನು ಸುಂದರ ಗದ್ಯ–ಪದ್ಯ ರೂಪಕ್ಕೆ ತಂದುಕೊಟ್ಟರು. ಹೀಗಾಗಿ ಹಿಂದು–ಮೊಘಲ್ ಪಂಡಿತರ ಸಹಯೋಗದ ಮೂಲಕ ಈ ಮಹಾಕಾವ್ಯವು ಪರ್ಷಿಯನ್‌ಗೆ ಬಂದಿತು.

ಪರ್ಷಿಯನ್ ಮತ್ತು ಅರಬಿ ರೂಪಾಂತರಗಳ ಹೋಲಿಕೆ

- ಪರ್ಷಿಯನ್: ಕಥಾನಕ ಶೈಲಿ, ಕಲೆಮಯ ಅಲಂಕಾರ, ಕಾವ್ಯಾತ್ಮಕ ಭಾವನೆಗೆ ಹೆಚ್ಚಿನ ಪ್ರಾಮುಖ್ಯತೆ.
- ಅರಬಿ: ನೈತಿಕ ಉಪದೇಶ, ತತ್ತ್ವಶಾಸ್ತ್ರ ಮತ್ತು ಬೌದ್ಧಿಕ ಚರ್ಚೆಗಳತ್ತ ಒಲವು.
- ಎರಡೂ ಭಾಷಾಂತರಗಳಲ್ಲಿ ದೇವತೆಗಳ ಪಾತ್ರವನ್ನು ಮನುಷ್ಯೀಕೃತ ಮಾಡುವ ಪ್ರಯತ್ನವಿದೆ.
- ಈ ಭಾಷಾಂತರಗಳಿಂದ ಮಹಾಭಾರತವು ಕೇವಲ ಭಾರತೀಯ ಗಡಿಗಳಲ್ಲೇ ಸೀಮಿತವಾಗದೆ, ಜಗತ್ತಿನ ಇತರೆ ಭಾಗಗಳಿಗೂ ಹರಡಿತು.

ಪರ್ಷಿಯನ್ ರೂಪಾಂತರದ ವಿಷಯಗಳ ಪರ್ವವಾರು ಸಾರಾಂಶವನ್ನು ಅನುವಾದಕರು ಹೇಳಿರುವಂತೆ ಕೆಳಗೆ ನೀಡಲಾಗಿದೆ, ಇದು ಮೂಲ (ದಕ್ಷಿಣ ಪರಿಷ್ಕೃತ) ಮತ್ತು ಪರ್ಷಿಯನ್‌ನಲ್ಲಿನ ಪದ್ಯಗಳ ಸಂಖ್ಯೆಯನ್ನು ಚಘತಾಯಿ ಅವರ ಪತ್ರಿಕೆಯಲ್ಲಿರುವಂತೆ ಪ್ರತ್ಯೇಕವಾಗಿ ಸೂಚಿಸುತ್ತದೆ. ನಂತರದ ಪರ್ವಗಳ ಪಾತ್ರಗಳ ಹೆಸರುಗಳಲ್ಲಿನ ವ್ಯತ್ಯಾಸಗಳು ಥಾನೇಸರಿ ಅವರು ಹಿಂದಿನ ಭಾಗಗಳಲ್ಲಿ ನಕೀಬ್ ಖಾನ್ ಮತ್ತು ಇತರರ ದೋಷಗಳನ್ನು ಸರಿಪಡಿಸಿದ್ದನ್ನು ತೋರಿಸುತ್ತವೆ.

- ಆದಿ: ಎರಡರಲ್ಲೂ 8884 ಪದ್ಯಗಳು (ಪರ್ಷಿಯನ್ "ಆದ್"), ಕುರುಗಳು ಮತ್ತು ಪಾಂಡವರ ಬಗ್ಗೆ ವಿವರಣೆ ನೀಡುತ್ತದೆ.
- ಸಭೆ: ಎರಡರಲ್ಲೂ 2511 ಪದ್ಯಗಳು. ಜರಾಸಂಧನು ತನ್ನ ಸಹೋದರರನ್ನು ಲೋಕ ವಿಜಯಕ್ಕೆ ಕಳುಹಿಸುತ್ತಾನೆ; ರಾಜಸೂಯ ನಡೆಯಿತು; ಜೂಜಾಟ ಸಭೆ ಏರ್ಪಡಿಸಲಾಗಿದೆ.
- ವನ: 11664 ಪದ್ಯಗಳು ಸಂಸ್ಕೃತ; 11360 ಪರ್ಷಿಯನ್ "ನಿಷೇಧ". ಕಾಡಿನಲ್ಲಿ ಪಾಂಡವರ 12 ವರ್ಷಗಳ ವನವಾಸ.

- ವಿರಾಟ: 2050 ಪದ್ಯಗಳು ಸಂಸ್ಕೃತ; 2005 ಪರ್ಷಿಯನ್ "ಬರಾತ್"(ವಿರಾಟ). ಪಾಂಡವರು ಕಾಡಿನಿಂದ ಬರತ್(ವಿರಾಟ) ನಗರಕ್ಕೆ ಹಿಂತಿರುಗಿ ಅಲ್ಲಿ ಅಡಗಿಕೊಳ್ಳುತ್ತಾರೆ.
- ಉದ್ಯೋಗ: 6698 ಪದ್ಯಗಳು ಸಂಸ್ಕೃತ; 6238 ಪರ್ಷಿಯನ್ "ಓದಮ್". ಪಾಂಡವರು ಗುರುತನ್ನು ಬಹಿರಂಗಪಡಿಸುತ್ತಾರೆ ಮತ್ತು ಕುರ್ಖಾಟ್(ಕುರುಕ್ಷೇತ್ರ)ಗೆ ತೆರಳಿ ಸೈನ್ಯವನ್ನು ವ್ಯವಸ್ಥೆ ಮಾಡುತ್ತಾರೆ.
- ಭೀಷ್ಮ: ಎರಡರಲ್ಲೂ 5884 ಪದ್ಯಗಳು (ಪರ್ಷಿಯನ್ "ಭಿಕಾಮ್"). ಯುದ್ಧ ಮತ್ತು ಭಿಕಾಮ್‌ನ ಪತನ. 10 ದಿನಗಳ ಯುದ್ಧದಲ್ಲಿ ಧಾರ್ತಶಕನ ಅನೇಕ ಪುತ್ರರ ಸಾವು.
- ದ್ರೋಣ: ಎರಡರಲ್ಲೂ 8909 ಪದ್ಯಗಳು (ಪರ್ಷಿಯನ್ "ದಾರುಣ"). ಜರ್ಜೋಧನ(ದುರ್ಯೋಧನ)ನು ಪರಿಷತ್ತನ್ನು ನಡೆಸುತ್ತಾನೆ; 5 ನೇ ದಿನದಂದು ಡೋರುನನ ಪತನ. ಭಿಕಾಮ್‌ನ ಗಾಯಗಳನ್ನು ಗುಣಪಡಿಸುವ ಬಗ್ಗೆ ಇತರ 5 ದಿನಗಳ ಖಾತೆ
- ಕರ್ಣ: ಎರಡರಲ್ಲೂ 4964 ಪದ್ಯಗಳು (ಪರ್ಷಿಯನ್ "ಕರ್ಣ"). 2 ದಿನಗಳ ಹೋರಾಟ ಮತ್ತು ಕರ್ಣನ ಸಾವು. ಜಡಶಾಲನೊಂದಿಗಿನ ಅವನ ಹೋರಾಟ ಮತ್ತು ಅರ್ಜುನನಿಂದ ಕೊಲ್ಲಲ್ಪಟ್ಟ ವಿವರ.
- ಶಲ್ಯ: 3230 ಪದ್ಯಗಳು ಸಂಸ್ಕೃತ; 3208 ಪದ್ಯಗಳು ಪರ್ಷಿಯನ್ "ಶಾಲ್". ಶಾಲ್ ಮತ್ತು ಇತರರನ್ನು ಗಲ್ಲಿಗೇರಿಸಿದ ವಿವರ. 90 ಜನರು ಕೊಲ್ಲಲ್ಪಟ್ಟರು. 18 ದಿನಗಳ ಕಾಲ ನಡೆದ ಯುದ್ಧದಲ್ಲಿ ದಯೋರ್ಧನ ಅಡಗಿಕೊಂಡಿದ್ದಾನೆ ಮತ್ತು ಅವನ ಸಹೋದರರು ಗದೆಯಿಂದ ಕೊಲ್ಲಲ್ಪಟ್ಟಿದ್ದಾರೆ.
- ಸೌಪ್ತಿಕ: 870 ಪದ್ಯಗಳು ಸಂಸ್ಕೃತ; 880 ಪದ್ಯಗಳು ಪರ್ಷಿಯನ್ "ಸಪತ್". ಪಾಂಡವರ ಸೈನ್ಯದ ಮೇಲೆ ಕಾರ್ಲ್ ಬರ್ಮ್ಹ್ (ಕೃತವರ್ಮ), ಅಸ್ತಮ್, ಕಾರ್ಯ (ಕೃಪ) ನೇತೃತ್ವದ ರಾತ್ರಿ ದಾಳಿ.
- ಸ್ತ್ರೀ: ಎರಡೂ 775 ಪದ್ಯಗಳು; ಪರ್ಷಿಯನ್ "ಅಸ್ತಾರಿ". ಎರಡೂ ಕಡೆಯ ಮಹಿಳೆಯರ ಅಳುವುದು. ದರಯೋಧನನ ತಾಯಿ ಗಾಂಧಾರಿ ಕೃಷ್ಣನನ್ನು ಶಪಿಸುತ್ತಾಳೆ.
- ಸಂಧಿ: 14725 ಶ್ಲೋಕಗಳು ಸಂಸ್ಕೃತ; 19374 ಶ್ಲೋಕಗಳು ಪರ್ಷಿಯನ್ "ಸಂತ". ವಿಜಯದ ನಂತರ ಜಡಶಲ್ಲನು ಲೋಕವನ್ನು ತ್ಯಜಿಸಲು ಬಯಸಿದನು. ಇನ್ನೂ

ಜೀವಂತವಾಗಿದ್ದ ಭಿಕಮನ ಜೊತೆಯಲ್ಲಿ ಕೃಷ್ಣನು ಅವನನ್ನು ಒತ್ತಾಯಿಸುತ್ತಾನೆ ಮತ್ತು ಜಡಶಲ್ಲನು ಸಲಹೆ ಮತ್ತು ಉಪದೇಶಗಳನ್ನು ಗಮನವಿಟ್ಟು ಕೇಳುತ್ತಾನೆ.

- ಅನುಶಾಸನ: 8000 ಪದ್ಯಗಳು ಎರಡೂ ಆವೃತ್ತಿಗಳು. ರಾಜನ ಕರ್ತವ್ಯಗಳು ಮತ್ತು ದಾನಗಳು.
- ಅಶ್ವಮೇಧಿಕ: 3320 ಪದ್ಯಗಳು ಸಂಸ್ಕೃತ; 3308 ಪದ್ಯಗಳು ಪರ್ಷಿಯನ್ "ಅಸ್ಮೆದ್". ಉಪದೇಶಗಳನ್ನು ಪೂರ್ಣಗೊಳಿಸಿದ ನಂತರ ಭಿಕಂ ನಂಬಿಕೆಯಿಲ್ಲದ ಜಗತ್ತನ್ನು ತ್ಯಜಿಸಿದಾಗ ಅಸ್ಮೆದ್ ಯಜ್ಞದ ವೃತ್ತಾಂತ. ಜಡಶಲ್ಲನು ತ್ಯಾಗದ ಮಾರ್ಗವನ್ನು ಅನುಸರಿಸಲು ಬಯಸಿದನು. ವಯಸನು ಶ್ರೇಷ್ಠತೆಯನ್ನು ಹೊಗಳಿದನು ಮತ್ತು ಯುಧಿಷ್ಠರನನ್ನು ಒತ್ತಾಯಿಸಿದನು ಮತ್ತು ಅವನ ತೃಪ್ತಿಗಾಗಿ ಯಜ್ಞವನ್ನು ಆದೇಶಿಸಿದನು.
- ಆಶ್ರಮವಾಸಿಕ: 1506 ಪದ್ಯಗಳು ಸಂಸ್ಕೃತ; 300 ಪದ್ಯಗಳು ಪರ್ಷಿಯನ್. ಧ್ರಷ್ಟಿಕನನ್ನು ತ್ಯಜಿಸುವುದು, ಜರ್ಜಾಸನ ತಾಯಿ ಗಾಂಧಾರಿ, ಜೋಡಿಷ್ಠರ ತಾಯಿ ಕುಂತಿ ಮತ್ತು ಅವರು ಕುರುಕ್ಷೇತ್ರದ ಕಾಡಿಗೆ ಹೋಗುವುದು, ಅಲ್ಲಿ ವಯಸರು ವಾಸಿಸುತ್ತಿದ್ದರು ಮತ್ತು ಪಾಂಡವರು ಅವರನ್ನು ನೋಡಲು ಹಿಂಬಾಲಿಸಿದರು.
- ಮೌಸಲ: 320 ಪದ್ಯಗಳು ಸಂಸ್ಕೃತ; 300 ಪದ್ಯಗಳು ಪರ್ಷಿಯನ್ "ಮೋಸಲ್". ಜಡ್ವಾನ್ (ಬಲರಾಮ) ಮತ್ತು ಕೃಷ್ಣನು ಶೋಚನೀಯ ಪರಿಸ್ಥಿತಿಗಳು ಮತ್ತು ಇತರ ಘಟನೆಗಳಲ್ಲಿ ಸಾವನ್ನಪ್ಪಿದ ವೃತ್ತಾಂತ.
- ಮಹಾಪ್ರಸ್ಥಾನಿಕ: 360 ಪದ್ಯಗಳು ಸಂಸ್ಕೃತ; 320 ಪದ್ಯಗಳು ಪರ್ಷಿಯನ್ "ಜನ್". ಜಡಿಷ್ಟರ್ ಮತ್ತು ಅವನ ಸಹೋದರರು ಲೋಕವನ್ನು ತ್ಯಜಿಸಿ ಜನರಿಗೆ ರಾಜ್ಯವನ್ನು ವಹಿಸಿಕೊಟ್ಟು ಹಿಮಾಲಯಕ್ಕೆ (ಹಿಮ ಬೆಟ್ಟಗಳು) ನಿರ್ಗಮಿಸಿದರು.
- ಸ್ವರ್ಗರೋಹಣ: 209 ಪದ್ಯಗಳು ಸಂಸ್ಕೃತ; 200 ಪದ್ಯಗಳು ಪರ್ಷಿಯನ್ "ಸರ್ಕವಾಹನ". ಪಾಂಡವರು ಆತ್ಮಗಳನ್ನು ಪರ್ವತಕ್ಕೆ ಮತ್ತು ಯುಧಿಷ್ಠಿರನ ಭೌತಿಕ ಆರೋಹಣವನ್ನು ಉನ್ನತ ಲೋಕಕ್ಕೆ ತ್ಯಜಿಸಿದರು.

ಚಿತ್ರಗಳು:

ಈ ಗ್ರಂಥವು ಕೇವಲ ಅನುವಾದವಾಗಿರದೆ, ನೂರಾರು ಚಿತ್ರಗಳೊಂದಿಗೆ ಅಲಂಕೃತವಾಗಿತ್ತು. ಮೊಘಲ್ ಕಲಾವಿದರು ಭಾರತೀಯ ಹಾಗೂ ಯುರೋಪಿಯನ್ ಕಲಾರೀತಿಗಳನ್ನು ಸಂಯೋಜಿಸಿ ಹೊಸ ಕಲಾತ್ಮಕ ಶೈಲಿಯನ್ನು ತಂದುಕೊಟ್ಟರು. ಯುದ್ಧ ದೃಶ್ಯಗಳು, ಪುರಾಣ ಕಥೆಗಳು, ದೇವತೆಗಳ ಚಿತ್ರಣಗಳು ಪರ್ಷಿಯನ್

ಕೈಪಿಡಿ ಶೈಲಿಯಲ್ಲಿ ರೂಪುಗೊಂಡವು. 'ರಜ್ಮ್‌ನಾಮಾ' ಕೃತಿಯ ಎರಡು ಪ್ರತಿಗಳಿದ್ದು ಇದರಲ್ಲಿ ಕೆಲವು ಸಣ್ಣಪುಟ್ಟ ವ್ಯತ್ಯಾಸಗಳನ್ನು ಗಮನಿಸಬಹುದಾಗಿದೆ. "ಅಶ್ವಮೇಧಪರ್ವವು ವಿಶೇಷ ಆಸಕ್ತಿಯನ್ನು ಹೊಂದಿದೆ ಏಕೆಂದರೆ, ದಾಸ್ ಬರೆದಂತೆ, "ಅಶ್ವಮೇಧಿಕ ಪರ್ವದಲ್ಲಿ ಸಂಬಂಧಿಸಿದ ಯಜ್ಞ ಕುದುರೆಯ ಶೋಷಣೆಗಳನ್ನು ಜೈಪುರ ಪ್ರತಿಯಲ್ಲಿ 47 ಚಿತ್ರಗಳಲ್ಲಿ ತೋರಿಸಲಾಗಿದೆ, 1598–99 ಪ್ರತಿಯಲ್ಲಿ 22 ಚಿತ್ರಗಳಿವೆ ಮತ್ತು ಬಿರ್ಲಾ ಪ್ರತಿಯಲ್ಲಿ ಕೇವಲ ನಾಲ್ಕು ಚಿತ್ರಗಳಿವೆ." ವಾಸ್ತವವಾಗಿ, ಶೇಖರ್ ಸೇನ್ ಗಮನಸೆಳೆದಂತೆ, ನಾಲ್ಕು ಅಲ್ಲ, ಐದು ಚಿತ್ರಗಳಿವೆ. ದಾಸರು ಐದನೇ ಒಂದು ಪ್ಲೇಟ್ 79 ಅನ್ನು ತಪ್ಪಿಸಿಕೊಂಡಿದ್ದಾರೆ. ರಜ್ಮ್‌ನಾಮದಲ್ಲಿ ಈ ನಿರ್ದಿಷ್ಟ ಪರ್ವವನ್ನು ವ್ಯಾಸನಿಂದಲ್ಲ, ಜೈಮಿನಿಯಿಂದ ತೆಗೆದುಕೊಳ್ಳಲಾಗಿದೆ. ಬಿರ್ಲಾ ಪ್ರತಿಯಲ್ಲಿ ಚಿತ್ರಿಸಲಾದ ಕಂತುಗಳು ಬಭ್ರುವಾಹನ, ಯುಧಿಷ್ಠಿರನ ಯಜ್ಞ, ಅನುಶಾಲ್ವ, ಹಂಸಧ್ವಜ ಮತ್ತು ರಾಕ್ಷಸ ಭೀಷಣನ ಕಂತುಗಳಾಗಿವೆ.



ಪರ್ಷಿಯನ್ ಭಾಷೆಯ ಮಹಾಭಾರತದಲ್ಲಿ ಚಿತ್ರಿತ ದ್ರೌಪದಿ ವಸ್ತ್ರಾಪಹರಣ

ಮಧ್ಯಕಾಲೀನ ದೇಶೀಯ ಭಾಷೆಗಳಲ್ಲಿ ಹೆಚ್ಚಿನವುಗಳ ಲೇಖಕರು, ವಿಶೇಷವಾಗಿ ಪೂರ್ವದವರು, ವ್ಯಾಸರಿಗಿಂತ ಜೈಮಿನಿಯನ್ನು ಏಕೆ ಆದ್ಯತೆ ನೀಡಿದರು? ವ್ಯಾಸರು ತಮ್ಮ ನಾಲ್ವರು ಶಿಷ್ಯರಲ್ಲಿ ಪ್ರತಿಯೊಬ್ಬರನ್ನು ತಮ್ಮ ಕೃತಿಯ ಆವೃತ್ತಿಗಳನ್ನು ರಚಿಸುವಂತೆ ಕೇಳಿಕೊಂಡಿದ್ದರು. ಇವುಗಳಲ್ಲಿ, ಜೈಮಿನಿಯ ಏಕೈಕ ಪರ್ವ ಮಾತ್ರ ಇಂದು ಅಸ್ತಿತ್ವದಲ್ಲಿದೆ.

ಈ ಆವೃತ್ತಿಯು ಹೆಚ್ಚು ಸಂವೇದನಾಶೀಲವಾಗಿದೆ. ವ್ಯಾಸರ ಪರ್ವವು ಸಾಮಾನ್ಯ ಓದುಗರಿಗೆ ಇಷ್ಟವಾಗದ ತಾತ್ವಿಕ ಸಮಸ್ಯೆಗಳಿಂದ ತುಂಬಿದೆ ಮತ್ತು ಯಜ್ಞ ಕುದುರೆಯ ಪ್ರವಾಸವು ಬಹಳ ಸಂಕ್ಷಿಪ್ತವಾಗಿದೆ. ಅರ್ಜುನನು ಎದುರಾಳಿಯ ಮೂಲಕ ಓಡುತ್ತಾನೆ, ಮಣಿಪುರದಲ್ಲಿ (ಮಧುರೈ ಬಳಿ ಇರುವ ಮನಲುರಾ ಎಂದೂ ಕರೆಯುತ್ತಾರೆ) ಒಮ್ಮೆ ಮಾತ್ರ ಎಡವಿ ಬೀಳುತ್ತಾನೆ. ಗದ್ದಲದ ಯುದ್ಧಗಳಿಂದ ಕೂಡಿರುವ ಪುಸ್ತಕದಲ್ಲಿ ನಂತರ ಬರುವ ಈ ಯುದ್ಧಗಳ ಕಥೆಯು ಒದ್ದೆಯಾದ ಪಟಾಕಿಯಂತೆ ಆಗಿಬಿಡುತ್ತದೆ. ಆದಾಗ್ಯೂ, ಜೈಮಿನಿ ಭಾರತವು ರಾಜಾರೋಷ, ಸಾಹಸ ವರ್ಣನೆ ವೈವಿಧ್ಯತೆ, ಬಣ್ಣ ಮತ್ತು ಕೆಲವು ತಾತ್ವಿಕ ಹೊರಹರಿವುಗಳೊಂದಿಗೆ ಮನಮೋಹಕ ಕಥೆಗಳ ಸರಣಿಯಿಂದ ತುಂಬಿದೆ. ಇದು ಮಹಾ ಯುದ್ಧದಲ್ಲಿ ಕೊಲ್ಲಲ್ಪಟ್ಟ ವೀರರ ಮಕ್ಕಳ ಶೋಷಣೆಗಳನ್ನು ಆಚರಿಸುತ್ತದೆ ಮತ್ತು ಅರ್ಜುನನು ಸಾಕಷ್ಟು ಕಳಪೆಯಾಗಿ ಹೊರಬರುತ್ತಾನೆ. ಇದರ ಜೊತೆಗೆ, ಇದು ಕೃಷ್ಣ–ಭಕ್ತಿಯಿಂದ ಉದಾರವಾಗಿ ತುಂಬಿದೆ, ಇದು ವಿಶೇಷವಾಗಿ ಮಧ್ಯಕಾಲೀನ ಭಕ್ತಿಯುಗದ ಪ್ರಭಾವವು ಆಗಿರಬಹುದು. ಈ ಕಾರಣಗಳಿಂದಾಗಿ, ಬಹುಶಃ, ಜೈಮಿನಿ ಭಾರತವು ಮಹಾಭಾರತದ ನಂತರದ ನಿರೂಪಣೆಗಳಲ್ಲಿ ವ್ಯಾಸರ ಅಶ್ವಮೇಧಿಕ ಪರ್ವವನ್ನು ಬಹುತೇಕ ಏಕರೂಪವಾಗಿ ಬದಲಾಯಿಸಿತು.

ಶರಶಯ್ಯೆಯಲ್ಲಿರುವ ಭೀಷ್ಮನ ಚಿತ್ರ

ಸಾಹಿತ್ಯ ಮತ್ತು ರಾಜಕೀಯ ಪ್ರಾಮುಖ್ಯತೆ

♦ “ರಜ್ಮ್‌ನಾಮಾ” ಕೇವಲ ಸಾಹಿತ್ಯ ಕೃತಿ ಮಾತ್ರವಲ್ಲ, ಅಕ್ಬರ್‌ನ ರಾಜಕೀಯ ಆಶಯಗಳ ಪ್ರತಿಬಿಂಬ.

- ಧಾರ್ಮಿಕ ಸಹಿಷ್ಣುತೆ, ಭಿನ್ನಸಂಸ್ಕೃತಿಗಳ ಸಂವಾದ ಹಾಗೂ "ಸೂಲ್ಹ್–ಇ–ಕುಲ್" (ಸರ್ವಧರ್ಮ ಸಮನ್ವಯ) ತತ್ವಗಳಿಗೆ ಇದು ಪೂರಕವಾಗಿತ್ತು. ಸರ್ವಧರ್ಮ ಸಮನ್ವಯ
- ಪರ್ಷಿಯನ್ ಮತ್ತು ಅರಬಿ ಅನುವಾದಗಳ ಮೂಲಕ ಭಾರತೀಯ ಮಹಾಕಾವ್ಯವು ವಿಶ್ವಸಾಂಸ್ಕೃತಿಕ ಪೈಪೋಟಿಯಲ್ಲಿ ಸ್ಥಾನ ಗಳಿಸಿತು.
- "ರಜ್ಮ್‌ನಾಮಾ" ಅಕ್ಬರ್ ಅರಮನೆಯಲ್ಲಿ ಧಾರ್ಮಿಕ–ಸಾಂಸ್ಕೃತಿಕ ಏಕತೆಯ ಪ್ರತೀಕವಾಗಿತ್ತು.
- ಇದು ಕೇವಲ ಕಲೆ ಅಥವಾ ಸಾಹಿತ್ಯಕೃತಿಯಲ್ಲ, ಬದಲಾಗಿ ರಾಜಕೀಯ ಸಾಧನವಾಗಿತ್ತು.
- ಮಹಾಭಾರತದ ಮೂಲಕ ಹಿಂದೂ–ಮೊಘಲ್ ಸಂಸ್ಕೃತಿಯ ಮಿಶ್ರಣ ಸಂಭವಿಸಿತು.
- ಇದರ ಮೂಲಕ ಪರ್ಷಿಯನ್ ಭಾಷೆ ಸಾಮ್ರಾಜ್ಯದ ಪ್ರಮುಖ ಅಧಿಕೃತ ಭಾಷೆಯಾಗಿ ಬೆಳೆಯಿತು.

ಸಮಾರೋಪ

1598–99ರ "ರಜ್ಮ್‌ನಾಮಾ" ಪರ್ಷಿಯನ್ ಮಹಾಭಾರತವು ಸಂಸ್ಕೃತ ಮತ್ತು ಪರ್ಷಿಯನ್ ಸಾಹಿತ್ಯದ ನಡುವೆ ಸೇತುವೆಯಾಗಿದ್ದು, ಅಕ್ಬರ್ ಅವರ ರಾಜಕೀಯ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಇದು ಕೇವಲ ಧಾರ್ಮಿಕ ಅಥವಾ ಸಾಂಸ್ಕೃತಿಕ ಕೃತಿ ಅಲ್ಲ, ಬದಲಾಗಿ ಮೊಘಲ್ ಸಾಮ್ರಾಜ್ಯದ ನವೀನ ಇಂಡೋ–ಪರ್ಷಿಯನ್ ಸೌಂದರ್ಯಭರಿತ (Indo-Persian aesthetic) ರಚನೆಗೆ ಕಾರಣವಾದ ಐತಿಹಾಸಿಕ ಪಠ್ಯವಾಗಿದೆ.

ಮಹಾಭಾರತದ ಪರ್ಷಿಯನ್ ಮತ್ತು ಅರಬಿ ಅನುವಾದಗಳು ಸಾಹಿತ್ಯ, ಧರ್ಮ, ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸದಲ್ಲಿ ಅಮೂಲ್ಯ ಸ್ಥಾನ ಪಡೆದಿವೆ. ಇವುಗಳ ಮೂಲಕ ಭಾರತೀಯ ಮಹಾಕಾವ್ಯದ ಆಂತರಿಕ ತತ್ವಗಳು ಹೊಸ ಭಾಷಾ–ಸಂಸ್ಕೃತಿಗಳಲ್ಲಿ ಪುನರುತ್ಥಾನಗೊಂಡವು. "ರಜ್ಮ್‌ನಾಮಾ" ಹಾಗೂ ಅರಬಿ ಆವೃತ್ತಿಗಳು ಕೇವಲ ಅನುವಾದಗಳಲ್ಲ, ಬದಲಾಗಿ ಅವು ಸಾಂಸ್ಕೃತಿಕ ಸೇತುವೆಗಳಾಗಿ ಭಾರತೀಯ ಮತ್ತು ಇಸ್ಲಾಮಿಕ್ ಜಗತ್ತುಗಳ ನಡುವೆ ಆಳವಾದ ಸಂವಾದವನ್ನು ಸೃಷ್ಟಿಸಿವೆ. ಪರ್ಷಿಯನ್ ಮತ್ತು ಅರಬಿ ಭಾಷಾಂತರಗಳು ಮಹಾಭಾರತದ ವಿಶ್ವವ್ಯಾಪಕತೆಯನ್ನು ದೃಢಪಡಿಸುತ್ತವೆ. ಇವುಗಳ ಮೂಲಕ ಭಾರತೀಯ ಪೌರಾಣಿಕ ಜ್ಞಾನ ಇಸ್ಲಾಮಿಕ್ ಲೋಕಕ್ಕೆ ತಲುಪಿದಷ್ಟೇ ಅಲ್ಲದೆ, ಸಂಸ್ಕೃತಿ–ಸಂವಾದಕ್ಕೆ ದಾರಿ ತೆರೆದಿತು. ಈ

ಅನುವಾದಗಳು ಮೂಲ ಮಹಾಕಾವ್ಯದ ಧಾರ್ಮಿಕ–ಸಾಂಸ್ಕೃತಿಕ ಸ್ವರೂಪವನ್ನು ಬದಲಾಯಿಸಿದ್ದರೂ, ಅವು ಜ್ಞಾನಪರಂಪರೆಯ ಜಾಗತೀಕರಣದ ಪ್ರಮುಖ ಹಂತಗಳಾಗಿ ಗುರುತಿಸಬಹುದಾಗಿದೆ. ಭಾರತೀಯರು ಇಂದು ಪ್ರಪಂಚವ್ಯಾಪಿ ಹಬ್ಬಿರುವುದರಿಂದ ಅರಬ್ ದೇಶಗಳಲ್ಲೂ ಆಧುನಿಕವಾಗಿ ರಾಮಾಯಣ ಮತ್ತು ಮಹಾಭಾರತದ ಅನುವಾದಗೊಂಡಿರುವುದನ್ನು ಕಾಣಬಹುದಾಗಿದೆ.

ಪರಾಮರ್ಶನ ಗ್ರಂಥಗಳು :

1. Alam, M. (2004). The Languages of Political Islam in India: c. 1200–1800. University of Chicago Press.
2. Digby, S. (2001). Encounter with Islam: The translation of Sanskrit texts into Persian and Arabic. Oxford University Press.
3. Faruqi, S. R. (1998). Early Persian Translations of the Mahabharata. Journal of South Asian Studies, 21(2), 45–67.
4. Hiltebeitel, A. (2001). Rethinking the Mahabharata: A Reader's Guide to the Education of the Dharma King. University of Chicago Press.
5. Rizvi, S. A. A. (1987). The Wonder That Was India (Vol. II). Rupa Publications.

ತುಘಲಕ್ ಮತ್ತು ಕಾಲಿಗುಲ ನಾಟಕಗಳ ತೌಲನಿಕ ವಸ್ತು ವಿವೇಚನೆ

1

ವಿಜಯಲಕ್ಷ್ಮಿ ಡಿ.

ಸಂಶೋಧನಾ ವಿದ್ಯಾರ್ಥಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ರಾಮಯ್ಯ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು,
ಮತ್ತೀಕೆರೆ, ಬೆಂಗಳೂರು–560054

ಕನ್ನಡ ಸಾಹಿತ್ಯದ ನವ್ಯ ನಾಟಕಗಳ ಚರಿತ್ರೆಯನ್ನು ಗಮನಿಸಿದಾಗ ತುಘಲಕ್ ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಆಧುನಿಕ ಕನ್ನಡ ನಾಟಕ ಚರಿತ್ರೆಯು ಪ್ರೌಢಾವಸ್ಥೆಯನ್ನು ಗಿರೀಶ್ ಕಾರ್ನಾಡರ ತುಘಲಕ್ ನಾಟಕದಿಂದ ಗುರಿತಿಸಲಾಗುವುದು. ಗಿರೀಶ್ ಕಾರ್ನಾಡರ ನಾಟಕಗಳು ಪ್ರಸ್ತುತ ಭಾರತೀಯ ನಾಟಕ ರಂಗದಲ್ಲಿ ಅತಿ ಹೆಚ್ಚು ಜನಪ್ರಿಯತೆಗಳಿಸಿರುವ ಗಂಭೀರ ನಾಟಕಗಳಾಗಿವೆ. ಗಿರೀಶ್ ಕಾರ್ನಾಡರ ನಾಟಕಗಳ ಮೇಲೆ ಪಾಶ್ಚಾತ್ಯ ನಾಟಕಕಾರರ ಪ್ರಭಾವವನ್ನು ನೋಡಬಹುದು. ಇದಕ್ಕೆ ಸರಿಯಾದ ಉದಾಹರಣೆ, ಕಾರ್ನಾಡರ ತುಘಲಕ್ ನಾಟಕವು ಆಲ್ಬರ್ಟ ಕಾಮುವಿನ ಕಾಲಿಗುಲ ನಾಟಕದಿಂದ ಪ್ರಭಾವಿತಗೊಂಡು ರಚಿಸಲಾಗಿರುವುದಾಗಿದೆ. ಈ ಎರಡೂ ನಾಟಕಗಳಲ್ಲಿನ ಪರಸ್ಪರ ಸಾಮ್ಯತೆ ಮತ್ತು ವೈಶಮ್ಯಗಳು ತುಘಲಕ್ ನಾಟಕವು ಕಾಲಿಗುಲ ನಾಟಕದಿಂದ ಎಷ್ಟು

ಪ್ರಭಾವಿತಗೊಂಡಿದೆ ಎಂದು ಗುರುತಿಸಬಹುದು. ಈ ಎರಡೂ ನಾಟಕಗಳಲ್ಲಿ ಕಾಣಬರುವ ವಸ್ತುವಿನ ಸಾಮ್ಯತೆಯನ್ನು ಇಲ್ಲಿ ವಿವೇಚಿಸಲಾಗಿದೆ.

Key words : ಗಿರೀಶ್ ಕಾರ್ನಾಡರ ತುಘಲಕ್, ಆಲ್ಬರ್ಟ ಕಾಮುವಿನ ಕಾಲಿಗುಲ, ಸಾಮ್ಯತೆ ಮತ್ತು ವೈಶಮ್ಯಗಳು, ತೌಲನಿಕ ವಸ್ತು ವಿವೇಚನೆ

ತುಘಲಕ್ ಮತ್ತು ಕಾಲಿಗುಲ ನಾಟಕಗಳಲ್ಲಿ ಮನುಷ್ಯ ಸಂಪೂರ್ಣ ಮನುಷ್ಯನಾಗುವ ವಿಧಾನದಲ್ಲಿ ದುರಂತವನ್ನಪ್ಪುವುದನ್ನು ಕಾಣುತ್ತೇವೆ. ಕಾಲಿಗುಲನು ದೈವತ್ವಕ್ಕೇರಿ ಬಯಸುವ ಮಾನುಷ ಪ್ರಯತ್ನವನ್ನು, ಚಂದ್ರನನ್ನು ತನ್ನದಾಗಿಸಿಕೊಳ್ಳ ಬಯಸುವ ಅಸಾಧ್ಯತೆಯನ್ನು ಅದರಿಂದುಂಟಾದ ಸೋಲನ್ನು ಅವನನ್ನು ದುರಂತಕ್ಕೆ ಕೊಂಡ್ಯೊಯುತ್ತದೆ. ಹಾಗೆಯೇ ಗಿರೀಶ್‌ಕಾರ್ನಾಡರ ತುಘಲಕ್ ಕೂಡ ಮಹತ್ವಾಕಾಂಕ್ಷೆಯ ವ್ಯಕ್ತಿಯಾಗಿ, ಮನುಷ್ಯ–ಮನುಷ್ಯನಾಗುವ ವಿಧಾನಕ್ಕೆ ಕ್ರೂರವಾದ ಕಷ್ಟದ ವಿಧಾನಗಳನ್ನು ಆರಿಸಿಕೊಂಡು ಬಾಳನ್ನು ಬೆಳಕಾಗಿ ಚಿಗುರಿಸುವ, ನಕ್ಷತ್ರಗಳಲ್ಲಿ ಟೊಂಗೆ ಬಿಚ್ಚಿಸುವ ಆದರ್ಶದ ಕ್ರಿಯಾಶೀಲತೆಯಲ್ಲಿ ದುರಂತವನ್ನಪ್ಪುತ್ತಾನೆ. ಹೀಗೆ ಎರಡೂ ನಾಟಕಗಳಲ್ಲಿ ಮನುಷ್ಯ–ಮನುಷ್ಯನಾಗುವ ವಿಧಾನದಲ್ಲಿ ದುರಂತವನಪ್ಪುವುದೇ ನಾಟಕದ ವಸ್ತುವಾಗಿ ನಾಟಕಗಳ ವಸ್ತುವಿನಲ್ಲಿನ ಸಾಮ್ಯತೆ ಒಡೆದು ಕಾಣುತ್ತಿದೆ. ಮತ್ತೊಂದು ಇಲ್ಲಿ ಗಮನಿಸಬೇಕಾಗಿರುವ ಅಂಶವೆಂದರೆ ಈ ಎರಡೂ ನಾಟಕಗಳ ಮೂಲ ಆಕರ ಇತಿಹಾಸ. ತುಘಲಕ್ ಮತ್ತು ಕಾಲಿಗುಲ ಇಬ್ಬರೂ ಚಾರಿತ್ರಿಕ ವ್ಯಕ್ತಿಗಳೇ, ಇರುವ ವ್ಯತ್ಯಾಸವೇನೆಂದರೆ ಕಾಲಿಗುಲದಲ್ಲಿ ವೈಯಕ್ತಿಕ ನೆಲೆಯಲ್ಲಿ ನಾಟಕದ ಘಟನೆಗಳು ನೆಡೆಯುತ್ತಾ ಹೋದರೆ, ತುಘಲಕ್‌ನಲ್ಲಿ ಇತಿಹಾಸಕಾರ ಬರನಿಯ ಮುಖಾಂತರ ಒಂದು ಪಾತ್ರವಾಗಿ ಕೆಲಸ ಮಾಡಿದೆ.

ಎರಡೂ ನಾಟಕಗಳ ವಸ್ತು ವಿಮರ್ಶೆಗೂ ಮುನ್ನು ನಾಟಕಗಳ ವಿಶ್ಲೇಷಣೆ ಅವಶ್ಯಕವಾಗಿದೆ. ಹಾಗಾಗಿ ಎರಡೂ ನಾಟಕಗಳ ಪರಿಚಯ:

ಕಾಲಿಗುಲ ನಾಟಕದ ವಿಶ್ಲೇಷಣೆ:

ಕಾಲಿಗುಲ ನಾಲ್ಕು ಅಂಕಗಳನ್ನು ಹೊಂದಿರುವ ದೀರ್ಘಾವಧಿಯ ನಾಟಕ. ನಾಲ್ಕೂ ಅಂಕಗಳಲ್ಲಿ ದೊರೆ ಕಾಲಿಗುಲನ ವ್ಯಕ್ತಿತ್ವ ಅದು ಉಂಟು ಮಾಡುವ ಪರಿಣಾಮ ಅದನ್ನು ಕುರಿತ ಕ್ರಿಯೆ–ಪ್ರಕ್ರಿಯೆಗಳನ್ನು ಕಾಣಬಹುದು. ನಾಟಕ ಪ್ರಾರಂಭವಾಗುವುದು ಕಾಲಿಗುಲನ ತಂಗಿಯ ಮರಣದೊಂದಿಗೆ ಆರಂಭವಾಗಿ ಅವನ ಮೇಲೆ ತೀವ್ರವಾದ ಪರಿಣಾಮ ಉಂಟುಮಾಡಿ, ಐಲುತನದ ಆಳ್ವಿಕೆಯ ಪರಮಾವಧಿ, ಅದರಿಂದಾಗಿ ಅವನು ಅಪ್ಪುವ ಮರಣ – ಇದನ್ನು ನಾಟಕದಲ್ಲಿ ನೋಡಬಹುದು.

ತುಘಲಕ್ ನಾಟಕದ ವಿಶ್ಲೇಷಣೆ:

ನಾಟಕವು ಯಾವುದೇ ಪ್ರತ್ಯೇಕ ಅಂಕವಿಲ್ಲದ 15 ದೃಶ್ಯಗಳನ್ನು ಒಳಗೊಂಡಿರುವ ನಾಟಕವಾಗಿದೆ. ಕ್ರಿ.ಶ. 1327ರ ತುಘಲಕ್ ಸಾಮ್ರಾಜ್ಯದ ಚಿತ್ರಣದೊಂದಿಗೆ ನಾಟಕ ಪ್ರಾರಂಭವಾಗುತ್ತದೆ. ಈ ನಾಟಕವು ಮಧ್ಯಕಾಲೀನ ಭಾರತದ ಅತ್ಯಂತ ವಿವಾದಾಸ್ಪದ, ಜಟಿಲ ವ್ಯಕ್ತಿಯಾದ ಸುಲ್ತಾನ ಮಹಮದ್ ಬಿನ್ ತುಘಲಕ್‌ನ ಆಳ್ವಿಕೆಯನ್ನು, ಅದರ ಪರಿಣಾಮವನ್ನು ಚಿತ್ರಿಸುತ್ತದೆ. ನಾಟಕ ಸಾಮ್ರಾಜ್ಯದ ಜನತೆಯನ್ನು ಕುರಿತು ನೀಡುವ ಚಿತ್ರಣಕ್ಕಿಂತ ಬಹು ಪ್ರಧಾನವಾಗಿ ತುಘಲಕ್ ವ್ಯಕ್ತಿತ್ವದೆಡೆಗೆ ಕೇಂದ್ರಿಕರಿಸಿದೆ.

ತುಘಲಕ್ ಮತ್ತು ಕಾಲಿಗುಲ ನಾಟಕಗಳಲ್ಲಿ ಸಾಮ್ಯತೆಯನ್ನು ಕೆಳಕಂಡ ಅಂಶಗಳ ಮೂಲಕ ಪ್ರಸ್ತುತಪಡಿಸಬಹುದು.

ನಾಟಕಗಳ ಆರಂಭ:

ಎರಡೂ ನಾಟಗಳು ಪ್ರಾರಂಭವಾಗುವುದು ನಾಯಕನ ಸಂಶಯಾಸ್ಪದ ಹಾಗೂ ವಿಚಿತ್ರ ನಡವಳಿಕೆಯ ವರದಿಯಿಂದ, ನಾಯಕರುಗಳ ವರ್ತನೆಯ ದೇಶದ ರಾಜಕೀಯ ಮತ್ತು ಜನರ ಮೇಲೆ ಆಗುತ್ತಿರುವ ಪರಿಣಾಮದ ವರದಿಯನ್ನು ತಿಳಿಸುವ ಮೂಲಕ ನಾಟಕ ಪ್ರಾರಂಭವಾಗುತ್ತದೆ. ಪರಿಸ್ಥಿತಿಯನ್ನು ತಿಳಿದ ನಂತರ ನಾಯಕರಿಬ್ಬರೂ ತಮ್ಮ ನಿಲುವುಗಳನ್ನು ಹಾಗೂ ಕನಸುಗಳನ್ನು ವ್ಯಕ್ತಪಡಿಸುತ್ತ ರಂಗದ ಮೇಲೆ ಪ್ರಕಟರಾಗುತ್ತಾರೆ.

ಕಾಲಿಗುಲ: ನಾನು ಸತ್ಯದ ಬೆಳಕಿನಲ್ಲಿ ಬದುಕಬೇಕೆಂದು ಬಯಸಿದವನು......., ನಾನು ಈ ನಮ್ಮ ಯುಗವನ್ನು ಒಂದು ಶ್ರೇಷ್ಠ ಕೊಡುಗೆಯಾಗಿ–ಸರಿಸಮಾನತೆಯ ಕೊಡುಗೆಯ ಯುಗವಾಗಿ ಪರಿವರ್ತಿಸಿಯೇ ತೀರುತ್ತೇನೆ ಎಂದು ತನ್ನ ವಿಚಾರವನ್ನು ಮುಂದಿಡುತ್ತಾನೆ.

ತುಘಲಕ್: ನನಗೆ ರಾಜ್ಯದಲ್ಲಿ ಸಮತೆಬೇಕು, ಪ್ರಗತಿಬೇಕು, ತರ್ಕಬದ್ಧನ್ಯಾಯಬೇಕು. ಶಾಂತಿಯಿದ್ದರೆ ಸಾಕಾಗಲಿಲ್ಲ ಜೀವಕಳೆಬೇಕು. ನಾನು ಕಟ್ಟಲಿರುವ ಉಜ್ವಲ ಭವಿತವ್ಯದಲ್ಲಿ ವಿಶ್ವಾಸ ಇದ್ದವರಷ್ಟೇ ಬಂದರೆ ಸಾಕು. ಅವರ ಸಹಕಾರದ ಅಡಿಗಲ್ಲಿನ ಮೇಲೆ ಪೃಥ್ವಿಯ ಜನರೆಲ್ಲರ ಕಣ್ಣು ಕುಕ್ಕುವಂತ ರಾಜ್ಯ ಕಟ್ಟುತ್ತೇನೆ. ಎನ್ನುವ ಕನಸಿನ ವಿಚಾರಗಳನ್ನು ಪ್ರಸ್ತಾಪಿಸುತ್ತಾನೆ. ಎರಡೂ ಹೇಳಿಕೆಗಳನ್ನು ಗಮನಿಸಿದಾಗ ಇವರಿಬ್ಬರ ವಿಚಾಧಾರೆ ಒಂದೇ ಆಗಿರುವುದನ್ನು ಕಾಣಬಹುದು.

ನಾಟಕಗಳಲ್ಲಿ ಸಂಭಿಸುವ ಸಾವುಗಳೂ ಪ್ರಮುಖ ಪಾತ್ರವಹಿಸುತ್ತವೆ. ಕಾಲಿಗುಲ ನಾಟಕದಲ್ಲಿ ತಂಗಿ ಮತ್ತು ಪ್ರೇಯಸಿ ಡ್ರಸಿಲ್ಲಾಳ ಸಾವು ಕಾಲಿಗುಲನ ಪಾತ್ರವನ್ನು ನಿರ್ಮಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದರೆ, ತುಘಲಕ್ ನಾಟಕದಲ್ಲಿ ತಂದೆ ಮತ್ತು

ತಮ್ಮನ ಸಾವು ತುಘಲಕ್‌ನ ಪಾತ್ರವನ್ನು ನಿರ್ಮಿಸುವಲ್ಲಿ ನಿರ್ಣಾಯಕವಾದುದಾಗಿದೆ.

ಕೊಲೆಯ ಸಂಚು:

ಎರಡೂ ನಾಟಕಗಳಲ್ಲಿ ಕೊಲೆಯ ಸಂಚು ರೂಪಗೊಳ್ಳುವದನ್ನು ನೋಡಬಹುದು. ಕಾಲಿಗುಲ ಕೊಲೆಯ ಸಂಚನ್ನು ತನ್ನ ಕ್ರಿಯಾವರ್ತಲದಲ್ಲಿ ಸೇರಿಸಿಕೊಂಡು ಬಿಡುತ್ತಾನೆ. ಹಾಗು ತನ್ನ ಸ್ವಾರ್ಥ ಸಾಧನೆಗೆ ಉಪಯೋಗಿಸಿಕೊಳ್ಳುತ್ತಾನೆ. ಕಾಲಿಗುಲ ಕೊಲೆಯ ಸಂಚನ್ನು ತನ್ನ ಸಾಧನೆಯ ಮೆಟ್ಟಿಲಾಗಿ ಮಾಡಿಕೊಳ್ಳುತ್ತಾನೆ.

ತುಘಲಕ್‌ನಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ಸಮಸ್ಯೆಗಳು ನಾಟಕದಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಇದರಲ್ಲಿ ಕೊಲೆಯ ಸಂಚನ್ನು ತುಘಲಕ್ ಒಮ್ಮೆಲೇ ಹಠಾತ್ತನೇ ಕೊನೆಗೊಳಿಸಿಬಿಡುತ್ತಾನೆ.

ಕ್ರೌರ್ಯದ ದಾರಿ:

ಎರಡೂ ನಾಟಗಳನ್ನು ಓದುಗರು ಗಮನಿಸಿದಾಗ ನಾಯಕರುಗಳ ಮಹತ್ವಾಕಾಂಕ್ಷೆಯ ಉನ್ನತೆಯನ್ನು ನೋಡಬಹುದು. ಆದರೆ ಅದನ್ನು ಸಾಧಿಸಲು ಇಬ್ಬರೂ ಬಳಸುವ ದಾರಿ ಕ್ರೌರ್ಯದ್ದಾಗಿದೆ. ಕ್ರೌರ್ಯ ಇವರಿಬ್ಬರ ಉಸಿರಾಗಿದೆ. ಎಲ್ಲಾ ಸಮಸ್ಯೆಗಳ ಉತ್ತರಕ್ಕಾಗಿ, ಒಂದು ನಿತ್ಯಸತ್ಯಕ್ಕಾಗಿ, ಅನ್ವೇಷಣೆಯಲ್ಲಿರುವ ಆನಂದಕ್ಕಾಗಿ, ಸಾವನ್ನು ಮೆಟ್ಟಿಗಳನ್ನಾಗಿ ಮಾಡಿಕೊಂಡು ನೆಡೆದುಬಿಟ್ಟಿರುವುದು ಕಾಣಿಸುತ್ತಿದೆ. ಇದು ಅವರ ಮಹತ್ವಾಕಾಂಕ್ಷೆಯ ನುಡಿಗಳಲ್ಲಿ ಕಾಣಬಹುದು.

ತುಘಲಕ್: ಅವರು ನನ್ನ ಮಾತಿಗೆ ಕಿವಿಗೊಡುವವರೆಗೂ ನಾನು ಅವರನ್ನು ಕೊಲ್ಲುತ್ತಾ ಹೋಗಬೇಕು, ಬರನಿ, ನಿನಗೆ ಬೇರೆ ದಾರಿಯಿಲ್ಲ.

ತುಘಲಕ್: ನನ್ನ ಹಿಂಸೆಯ ಬೇರು ನನ್ನ ತಲೆಯಲಿಲ್ಲ ತಾಯಿ ನನ್ನ ಧಮನಿಯಲ್ಲಿದೆ. ನನಗೆ ಹಿಂಸೆ ಬೇಕು, ನಾನು ಯಾರು ಎಂದು ಗೊತ್ತಾಗಲಿಕ್ಕೆ ಬೇಕು.

ಕಾಲಿಗುಲ: ಎಂತಹ ವೈಚಿತ್ರತೆ, ಕೊಲೆ ಮಾಡದೇ ಉಳಿದುಬಿಟ್ಟಾಗಲೆಲ್ಲ ನಾನು ಒಂಟಿ ಎನಿಸುತ್ತಿರುತ್ತೇನೆ.

ಕಾಲಿಗುಲ: ಹಾಗಾದರೆ ಎರಡು ಬಗೆಯ ಸುಖಗಳು ಇದ್ದೇ ತೀರಬೇಕು ಹಾಗೂ ನಾನು ಕೊಲೆಪಾತಕವಾದ ಸುಖವನ್ನು ಆಯ್ದುಕೊಂಡುಬಿಟ್ಟಿದ್ದೇನೆ–ಅದರಿಂದಲೆ ನಾನು ಸುಖಿಯಾಗಿದ್ದೇನೆ.

ಕ್ರೌರ್ಯದ ಹಾದಿಯಲ್ಲಿ ಇಬ್ಬರೂ ನಾಯಕರೂ ಯಾರನ್ನೂ ಯಾವ ಕಾರಣಕ್ಕೂ ಲೆಕ್ಕಿಸುವ ಪರಿಸ್ಥಿಯಲ್ಲಿ ಇಲ್ಲದಿರುವುದನ್ನು ಗಮನಿಸಬಹುದು. ಪ್ರೀತಿಗೂ ಸ್ಥಾನವಿಲ್ಲದ ಪರಿಸರದಲ್ಲಿರುತ್ತಾರೆ. ತುಘಲಕ್ ತಾಯಿಯ ಮಮತೆಯನ್ನು ಲೆಕ್ಕಕ್ಕೆ

ಇಡದೆ ನಜಿರನನ್ನು ಕೊಂದದಕ್ಕಾಗಿ ಆಕೆಗೆ ಮರಣ ದಂಡನೆ ವಿಧಿಸುತ್ತಾನೆ. ಕಾಲಿಗುಲ ಕ್ರೌರ್ಯದಲ್ಲಿ ತುಘಲಕ್‌ನನ್ನು ಮೀರಿಸಿದವನು. ತನಗೆ ಅತ್ಯಂತ ಪ್ರಿಯವಾದವರನ್ನು, ಸಮೀಪದವರನ್ನು ಕೊಲ್ಲುವುದು ಅವನಿಗೆ ಬಹಳ ಸುಲಭ. ತನ್ನ ಶ್ರೇಯಸ್ಸಿಗಾಗಿಯೇ ದುಡಿಯುತ್ತಿರುವ ನಲ್ಮೆಯ ಜೊತೆಗಾತಿಯ ಕೊರಳಿಗೆ ಕೈ ಹಚ್ಚುವಷ್ಟು ಕ್ರೂರತೆಯನ್ನು ಮೈಗೂಡಿಸಿಕೊಂಡಿದ್ದಾನೆ.

ಆದರೆ ಕೊಲೆಯ ನಂತರ ಇವರಿಬ್ಬರ ನಡವಳಿಕೆಯಲ್ಲಿ ವ್ಯತ್ಯಾಸ ನೋಡಬಹುದು. ಕೊಲೆ ಕಾಲಿಗುಲನಿಗೆ ತೃಪ್ತಿಯನ್ನು ನೀಡಿದರೆ ತುಘಲಕನಿಗೆ ಬೆಂಬಿಡದ ಭೂತವಾಗಿ ಕಾಡಿಸುತ್ತದೆ. ಕೊಲೆಯ ನಂತರ ತಾನು ಎಸಗಿದ ಕೃತ್ಯಕ್ಕೆ ಗೋಳಾಡುವ ಪಾಡು ತುಘಲಕ್‌ನದ್ದು. ಆದರೆ ಕಾಲಿಗುಲ ಕಾವ್ಯಕಲ್ಪನೆಯಲ್ಲಿ ಸಹಜವಾಗಿ ಸ್ವಚ್ಛಂದವಾಗಿ ವಿಹರಿಸುತ್ತಿದ್ದನು.

ಧರ್ಮ:

ರಾಜನಾಗಿ ಜ್ಯಾತ್ಯಾತೀತ ಭಾವನೆಯನ್ನು ತುಘಲಕ್ ವ್ಯಕ್ತಪಡಿಸುತ್ತಾನೆ. ನಾಟಕದಲ್ಲಿ ಒಬ್ಬ ಸಭ್ಯ ಮುಸಲ್ಮಾನನಾಗಿ ಕಾಣಿಸಿಕೊಳ್ಳುತ್ತಾನೆ. ಪ್ರಾರ್ಥನೆ ಎಂಬುದು ತುಘಲಕ್‌ನಿಗೆ ಬಹಳ ಮುಖ್ಯವಾದ ಕರ್ಮವಾಗಿದೆ. ಯಾವ ಸುಲ್ತಾನನ ಕಾಲದಲ್ಲಿಯೂ ದಿಲ್ಲಿಯ ಬೀದಿಯಲ್ಲಿ ಜನ ಕುರಾನ ಓದುತ್ತಾ ತಿರುಗಾಡುವುದು ಕಾಣುತ್ತಿತ್ತು ಎಂದು ಜನರು ಪ್ರಶಂಸೆ ಮಾಡುವಷ್ಟು ತುಘಲಕ್ ಧರ್ಮಬೀರುವಾಗಿದ್ದನು. ಹತ್ಯೆಯ ಸಮಯದಲ್ಲೂ ಏಕಕಿತನದಲ್ಲೂ ದೇವರನ್ನು ಸಾಕ್ಷಿಗೆ ಕರೆಯುತ್ತಿದ್ದನು.

ಕಾಲಿಗುಲ ತುಘಲಕ್ ನಡವಳಿಕೆಗೆ ಕೊಂಚ ತದ್ವಿರುದ್ಧನಾಗಿದ್ದನು. ಅವನಿಗೆ ಧರ್ಮ ಕಾಡುವುದಿಲ್ಲ ಏಕೆಂದರೆ ಅವನು ಅಸಾಮಾನ್ಯನು. ದೇವರಾಗಲಿಕ್ಕೆ ಹೊರಟವನು. ವೀನಸ್ ರೂಪದಲ್ಲಿ ಬಂದು ತನ್ನ ಸರದಾರರಿಗೆ ವರವನ್ನು ಕೊಡುವ ಹುಚ್ಚಿನ ವ್ಯಕ್ತಿ ಕಾಲಿಗುಲನಿಗೆ ಧರ್ಮದ ಸೀಮಿತತೆ ಎಂದೂ ಕಾಡುವುದಿಲ್ಲ. ದೇವತೆಗಳ ವಿರುದ್ಧ ಸಿಡಿಯುವ ಕಾಲಿಗುಲ ಒಬ್ಬ ಬಂಡಾಯಗಾರನಾಗಿ ಕಾಣಿಸುತ್ತಾನೆ.

ನಾಟಕಗಳ ಅಂತ್ಯ:

ತುಘಲಕ್‌ನಲ್ಲಿ ಆತ್ಮೀಯ ಅಮೀರ ನಜೀಬನ ಕೊಲೆಯ ಪ್ರಕರಣವು ಪ್ರೀತಿಯ ಮಲತಾಯಿಗೆ ಶಿಕ್ಷೆ ವಿಧಿಸುವುದರೊಂದಿಗೆ ಕೊನೆಗೊಳ್ಳುತ್ತದೆ. ಅದೇ ಸಮಯಕ್ಕೆ ಅಝೀಝುನ ಧರ್ಮಗುರು ನಾಟಕ ಪ್ರಾರಂಭವಾಗಿ ಅವನ ರಹಸ್ಯ ತಿಳಿಯುದರೊಂದಿಗೆ ತುಘಲಕ್ ನಾಟಕ ಅಂತ್ಯವಾಗುತ್ತದೆ.

ಕಾಲಿಗುಲದಲ್ಲಿ ಧರ್ಮವನ್ನು, ದೇವರನ್ನು ಅಣುಕಿಸುವ ನಾಟಕ ವೀನಿಸ್

ರೂಪದಲ್ಲಿ ಕಾಲಿಗುಲನೇ ಬರುವುದರೊಂದಿಗೆ ನಡೆದು, ಅತ್ಯಂತ ಆತ್ಮೀಯಳಾದ ಸೆಸೊನಿಯಾಳ ಕೊಲೆಯೊಂದಿಗೆ ಕಾಲಿಗುಲ ತನ್ನ ಗುರಿಯೆಡೆಗೆ ಕೊನೆಯ ಹೆಜ್ಜೆಯನ್ನಿಡುತ್ತಾನೆ, ಆ ತಕ್ಷಣ ಅವನ ಕೊಲೆಯಾಗುತ್ತದೆ.

ಎರಡೂ ನಾಟಕಗಳ ಸಾಂಕೇತಿಕವಾದ ಅಂತ್ಯ ಒಂದನೊಂದು ಬಹಳ ಹೋಲುತ್ತದೆ. ಕಾಲಿಗುಲ ಮಾನಸಿಕ ಹಾಗೂ ದೈಹಿಕ ಸಾವಿಗೆ ಒಳಗಾದರೆ ತುಘಲಕ್ ಮಾನಸಿಕ ಸಾವಿಗೆ ಒಳಗಾಗುತ್ತಾನೆ.

ತುಘಲಕ್: ಏಕೋ ಸ್ವಲ್ಪ ದಣಿವೆನಿಸುತ್ತಿದೆ, ಒಮ್ಮಿಂದೊಮ್ಮೆ ನಿದ್ರೆಯೂ ಬರುತ್ತಿದೆ. ಐದು ವರುಷ ನನ್ನ ಸಮೀಪ ಸುಳಿಯದ ನಿದ್ರೆ ಈಗಲೊಮ್ಮೆ ಬಡಿದಿದೆ.....(ಗಾಢ ನಿದ್ರೆ ಬಂದಂತೆ ತಲೆ ಮುಂದಕ್ಕೆ ಎದೆಯ ಮೇಲೆ ಒರಗುತ್ತದೆ. ಇಡಿಯ ರೂಪ ನಿದ್ದೆಗಿಂತ ಮೃತ್ಯುವನ್ನೇ ಸೂಚಿಸುತ್ತದೆ.)–ತುಘಲಕ್‌ನ ಈ ಚಿತ್ರಣ ಅವನ ಮಾನಸಿಕ ಸಾವಿನ ಸೂಚನೆಯಾಗಿದೆ.

ಹೀಗೆ ನಾಟಕದ ನಾಯಕರಿಬ್ಬರೂ ದುರಂತ ಮರಣಕ್ಕೆ ಈಡಾದರೂ ಆವರಗೂ ಇದ್ದ ಯಾವ ಸಮಸ್ಯೆಗಳು ಬಗೆಹರಿಯುವುದಿಲ್ಲ. ಕಾಲಿಗುಲ ತನ್ನ ಕೊಲೆಯಲ್ಲಿಯೂ ಹುಚ್ಚುಹುಚ್ಚಾದ ನಗುವಿನ ಅಲೆಯನ್ನೆಬ್ಬಿಸುವುದು ಹಾಗೂ ನಾನು ಇನ್ನೂ ಬದುಕಿಯೇ ಇದ್ದೇನೆ ಎಂದು ಹೇಳುವುದು ಸಮಸ್ಯೆಯ ಅಮರತ್ವವನ್ನು ಹೇಳುತ್ತದೆ. ತುಘಲಕ್‌ನಲ್ಲಿ ಬರುವ ಪ್ರಾರ್ಥನೆ ಒಂದು ಸ್ತರದಲ್ಲಿ ಅವನ ಸಾವನ್ನೇ ಸೂಚಿಸುತ್ತಿದ್ದರೂ ಸಮಸ್ಯೆ ಉಳಿದೇ ಬಿಡುತ್ತದೆ ಎಂಬುದನ್ನು ಬೆಂಬಲಿಸುತ್ತದೆ.

ಹೀಗೆ ನಾಟಕಗಳ ಅಂತ್ಯದಲ್ಲೂ ಸಾಮ್ಯತೆ ಇರುವುದನ್ನು ನೋಡಬಹುದು. ಕಾಮುವಿನ ಕಾಲಿಗುಲ ಮತ್ತು ಕಾರ್ನಾಡ್‌ರ ತುಘಲಕ್ ಎರಡೂ ನಾಟಕಗಳು ಇತಿಹಾಸದ ಅಸ್ತಿಪಂಜರವನ್ನು ತೆಗೆದುಕೊಂಡು ಅದಕ್ಕೆ ಜೀವ ತುಂಬುವ ಕಾರ್ಯ ಮಾಡಿದ್ದಾರೆ. ಶೇಕ್ಸ್‌ಪಿಯರ್ ಕೂಡ ತನ್ನ ಜ್ಯೂಲಿಯಸ್ ಸೀಜರ್, ಹ್ಯಾಮ್ಲೆಟ್, ಟೆಂಪೆಸ್ಟ್ ನಾಟಕಗಳಲ್ಲಿ ಇಂತಹದೇ ಪ್ರಯತ್ನ ಮಾಡಿದ್ದಾನೆಂಬುದನ್ನು ಇಲ್ಲಿ ನೆನೆಯಬಹುದು. ಹೀಗೆ ಸಾಹಿತಿಗಳು ಐತಿಹಾಸಿಕ ವಿಷಯ ಸಂಗತಿಯನ್ನು ತಮ್ಮ ಸಾಹಿತ್ಯ ಕೃತಿಗಳಲ್ಲಿ ಶೋಧಿಸುವುದರಿಮದ ಆ ವಸ್ತುವಿಗೆ ಸಾರ್ವಕಾಲಿಕವಾದ ಮನ್ನಣೆ ದೊರೆತು ಇತಿಹಾಸದ ಆ ವಿಷಯವನ್ನು, ಸಮಸ್ಯೆಯನ್ನು ಕುರಿತು ಜನರು ಹೆಚ್ಚು ಪ್ರಬುದ್ಧರಾಗಿ ಚಿಂತಿಸುವುದು ಸಾಧ್ಯವಾಗುತ್ತದೆ.

ಪರಾಮರ್ಶನ ಗ್ರಂಥಗಳು:

1. ಆಧುನಿಕ ಕನ್ನಡ ನಾಟಕಗಳು: ಕೆ ಮರುಳಸಿದ್ದಪ್ಪ, ಲಿಪಿ ಪ್ರಕಾಶನ, ಬೆಂಗಳೂರು.
2. ಕನ್ನಡ ನಾಟಕ : ತ.ಸು. ಶಾಮರಾಯರು, ಮೈಸೂರು
3. ಗಿರೀಶ್ ಕಾರ್ನಾಡರ ನಾಟಕಗಳು: (ಸಂ)ಕೃಷ್ಣಮೂರ್ತಿ ಚಂದರ್, ಸಪ್ನ ಬುಕ್ ಹೌಸ್, ಬೆಂಗಳೂರು.
4. ಪಾಶ್ಚಾತ್ಯ ಗಂಭೀರ ನಾಟಕಗಳು: ಎಸ್.ವಿ ರಂಗಣ್ಣ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಭಾರತೀಯ ಕಾವ್ಯ ಮೀಮಾಂಸೆ(ಸಂಪುಟ1 ಮತ್ತು 2): ಶೇಷಗಿರಿರಾವ್, ಎಲ್.ಎಸ್(ಸಂ) ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.
6. ರಂಗನಾಟಕ ಶಾಸ್ತ್ರ: ಆದ್ಯರಂಗಾಚಾರ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ರುದ್ರನಾಟಕ ಒಂದು ಅವಲೋಕನ: ವಿ.ಜಿ ಭಟ್(ಸಂ) ಚೇತನ ಬುಕ್ ಹೌಸ್, ಮೈಸೂರು.
8. ವಿಮರ್ಶೆಯ ವಿನಯ ನಾಟಕ: ಕೀರ್ತಿನಾಥ ಕುರ್ತುಕೋಟಿ, ಮನೋಹರ ಗ್ರಂಥಮಾಲಾ, ಧಾರವಾಡ.

***

ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ದಲಿತ ಸಂವೇದನೆ

1
ಡಾ. ಪೂರ್ಣಿಮಾ ನಾಗನಾಥರಾವ
ಉಪನ್ಯಾಸಕರು
ನೂತನ್ ಮಹಾವಿದ್ಯಾಲಯ
ಎಸ್.ಬಿ. ದೇವಸ್ಥಾನ ರಸ್ತೆ,
ಕಲಬುರ್ಗಿ

ಕನ್ನಡ ಸಾಹಿತ್ಯಕ್ಕೆ ಒಂದು ಸಾವಿರ ವರ್ಷಗಳ ಲಿಖಿತ ಪರಂಪರೆಯ ಇತಿಹಾಸ ಇದೆ. ಇವೋತ್ತಿನ ಭಾರತದ ಸಾಹಿತ್ಯದಲ್ಲಿ ಕನ್ನಡಕ್ಕೆ ಮೇಲ್ಪಂಕ್ತಿಯ ಸ್ಥಾನವಿದೆ. ಆಧುನಿಕ ಕನ್ನಡ ಸಾಹಿತ್ಯ ಮುಖ್ಯವಾಗಿ ನಾಲ್ಕು ಘಟಗಳಾಗಿ ವಿಂಗಡಣೆ ಮಾಡಲಾಗಿದೆ. ನವೋದಯ–ಪ್ರಗತಿಶೀಲ–ನವ್ಯ & ದಲಿತ ಬಂಡಾಯ. 'ನವೋದಯ' ಸಾಹಿತ್ಯವು ಸತ್ಯ, ಸೌಂದರ್ಯ, ಶಿವ, ಅಧ್ಯಾತ್ಮಿಕತೆ, ಪ್ರಕೃತಿ, ನಿಸರ್ಗ ಮುಂತಾದವುಗಳನ್ನು 'ವಸ್ತುವನ್ನಾಗಿ ಮಾಡಿಕೊಂಡ ಸಾಹಿತ್ಯ ಸೃಷ್ಟಿಸಿದ ಪಂಥವಾಗಿದೆ. 'ಪ್ರಗತಿಶೀಲ' ಸಾಹಿತ್ಯವು ಸಾಮಾಜಿಕ, ರಾಜಕೀಯ ಕ್ಷೇತ್ರ ಅನ್ಯಾಯವನ್ನು ಪ್ರತಿಭಟಿಸುವ ಪ್ರವೃತ್ತಿ ಶ್ರೀ ಸಾಮಾನ್ಯರ ಉದ್ಧಾರದ ಕಳಕಳಿಯನ್ನು ಹೊಂದಿದ್ದಾಗಿದೆ. ಹಾಗೂ 'ನವ್ಯ' ಸಾಹಿತ್ಯ ಪಂಥವು 'ಅಸ್ತಿತ್ವವಾದ' 'ಅಸಂಗತವು'ಗಳನ್ನು ಕೂಡಿಸಿಕೊಂಡು ಬೆಳೆದ ಸಾಹಿತ್ಯ ಪಂಥವಾಗಿದೆ. ಇಲ್ಲಿ ಮುಖ್ಯವಾಗಿ

ಗುರುತಿಸಿಕೊಂಡ ಕನ್ನಡ ಸಾಹಿತ್ಯದ ಕೊನೆ ಘಟವಾದ ಅಂದರೆ 1970'ರ ದಶಕದ ಸಂದರ್ಭದಲ್ಲಿ 'ನವೋತ್ತರ ಸಾಹಿತ್ಯ ಪಂಥವೆಂದು' ಕರೆಯಲಾಗುವ ಸಾಹಿತ್ಯವೇ 'ದಲಿತ–ಬಂಡಾಯ' ಸಾಹಿತ್ಯವಾಗಿದೆ. ಈ ಸಾಹಿತ್ಯ ಪಂಥವು ಅಸಮಾನತೆ & ಅನ್ಯಾಯವಗಳ ಪ್ರತಿಭಟನೆಯಲ್ಲದೆ ಮೇಲ್ವರ್ಗದ ದಬ್ಬಾಳಿಕೆಯಿಂದ ಕಾಲಗರ್ಭದಲ್ಲಿ ಹೂತು ಹೋಗುತ್ತಿರುವ ಜನತೆಯ ಮೇಲೆತ್ತಿ ಧೈರ್ಯ ತುಂಬಿ ಹೋರಾಡುವ ಮಾರ್ಗವೇ ದಲಿತ–ಬಂಡಾಯ ಸಾಹಿತ್ಯವಾಗಿದೆ.

ಸಾಹಿತ್ಯ ಪರಂಪರೆಗೆ ನೀಡಿರುವ ಬಂಡಾಯ ಲೇಖಕರು ಸ್ಪಷ್ಟವಾಗಿ ಗುರುತಿಸಿಕೊಳ್ಳುವುದು ಮಾನವೀಯ ನೆಲೆಯಲ್ಲಿ ಮತ್ತು ಸಮಾಜಮುಖಿ ಆಲೋಚನೆಯಲ್ಲಿ. ಆದ್ದರಿಂದಲೇ ಸಾಮಾಜಿಕ ಆವರಣದಲ್ಲಿ ವಿಶೇಷ ಆಸಕ್ತಿಗೆ ಕಾರಣವಾಗುವ ಬಂಡಾಯ ಕಾವ್ಯ ಹೆಚ್ಚು ಸಾರ್ವತ್ರಿಕವೂ, ಚಳುವಳಿ ನಿಷ್ಠವೂ ಆಗಿದೆ. ಚಂದ್ರಶೇಖರ ಪಾಟೀಲ, ಜಂಬಣ್ಣ ಅಮರಚಿಂತನ, ಅಲ್ಲಮಪ್ರಭು ಬೆಟ್ಟದೂರು, ಚನ್ನಣ್ಣ ವಾಲೀಕಾರ, ರಂಜಾನ ದರ್ಗಾ, ಲಲಿತಾ ನಾಯಕ, ಡಾ॥ ಸಿದ್ಧಲಿಂಗಯ್ಯ, ಅರವಿಂದ ಮಾಲಗತ್ತಿ, ಬರಗೂರ ರಾಮಚಂದ್ರಪ್ಪ ಮುಂತಾದವರು ಕಾವ್ಯ ಪ್ರತಿನಿಧಿಕವಾದದ್ದು.

ಬಂಡಾಯ ಸಾಹಿತ್ಯ ಅದೊಂದು ಮನೋಧರ್ಮವಾಗಿ ಬರೆಯುವುದೇ ಬಂಡಾಯ ಎನ್ನುವಂಥ ಸಾಮಾಜಿಕ ಪಲಿಸರದಲ್ಲಿ ಬಂಡಾಯ ಸಾಹಿತ್ಯ ಆರಂಭದಲ್ಲಿ ಸಹಜವಾಗಿ ಸಿಟ್ಟು & ರೊಚ್ಚು ಅವಮಾನವನ್ನು ಹೊರ ಹಾಕುವಾಗ ಅಬ್ಬರದಿಂದಲೇ ಬರೆಯಬೇಕಾಗಿತ್ತು. ಆದರೆ ಈ 15 ವರ್ಷಗಳ ಸಾಹಿತ್ಯವನ್ನು ಗಮನಿಸಿದರೆ, ಅದರಲ್ಲೂ ಕಾವ್ಯ ಕೃಷಿಯನ್ನು ಅಭ್ಯಸಿಸಿದರೆ ಹೃದಯ ಕಲಕುವ ವಿಶಾಲ ವಸ್ತುಗಳು ಕಣ್ಣಿಗೆ ರಾಚುತ್ತವೆ. ಬಹುಶಃ ವಚನ ಚಳುವಳಿಯನ್ನು ಹೊರತು ಪಡಿಸಿದರೆ ಅಸಂಖ್ಯಾತ ದಲಿತ–ಶೂದ್ರ ಸಮುದಾಯ ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವುದು ಈ ಬಂಡಾಯ ಸಾಹಿತ್ಯದ ಸಂದರ್ಭದಲ್ಲಿ ಎನ್ನಬಹುದು.

ಹಾಗೆಯೇ ಬಂಡಾಯ ಸಾಹಿತ್ಯ ಮುಖ್ಯವಾಗಿ ಬದುಕಿನ ಅಸಮಾನತೆಗಳಿಂದ ಜಾತಿ ಅಸ್ಪೃಶ್ಯತೆ, ಧರ್ಮ, ಪ್ರಭುತ್ವ, ಲಿಂಗ ಭೇದಗಳನ್ನು ವರ್ಗ ಸಂಘರ್ಷಗಳನ್ನು ಕುರಿತು ತನ್ನ ಬದುಕಿನ ಇರುವಿಕೆ ಪ್ರತಿಭಟನೆಗಳನ್ನು ಏಕಕಾಲಕ್ಕೆ ಪ್ರಕಟಿಸುತ್ತದೆ. ಬಂಡಾಯಕ್ಕೆ ಚಳುವಳಿಯ ಸ್ವರೂಪ ಬರುವುದು ಅದರ ಸಾಹಿತ್ಯೇತರ ಚಟುವಟಿಕೆಗಳಿಂದ. ಆದ್ದರಿಂದ ಇದೊಂದು ಸಮಾಜದ ವಿಜ್ಞಾನದ ಶಾಖೆಯಾಗಿ ಮಾರ್ಪಟ್ಟಿದೆ. ಭಾರತದ ಬಂಡವಾಳ ಶಾಹಿತ್ವ, ಅನಕ್ಷರತೆ, ಅಧಿಕಾರ ಶಾಹಿತ್ವ,

ಶಿಕ್ಷಣ ಚಾಲನೆಯಾಗಿ ಬಂಡಾಯ ಸಾಹಿತ್ಯದ ಒಟ್ಟು ರಚನೆಗಳು ನಮ್ಮ ಕಣ್ಣು ಮುಂದಿವೆ. ಇಂತಹ ವೈವಿಧ್ಯಮಯತೆಯನ್ನು ನಾವು ಈ ಹಿಂದಿನ ಯಾವುದೇ ಸಾಹಿತ್ಯ ಪರಂಪರೆಯಲ್ಲೂ ಕಾಣಲು ಸಾಧ್ಯವಿಲ್ಲ.

ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ ಎಂಬ ತತ್ವ ಈ ಸಾಹಿತ್ಯದ ಕೇಂದ್ರ ನಿಲುವಾಗಿತ್ತು, ವ್ಯಕ್ತಿ ಗೌರವ, ಪ್ರಜಾಪ್ರಭುತ್ವವಾದಿ ನೆಲೆ ಎಡಪಂಥೀಯ ಆಲೋಚನೆಯನ್ನು ಮುಖ್ಯ ನೆಲೆಯಾಗಿ ಶೋಧಿಸುವ ಈ ಬಂಡಾಯ ಸಾಹಿತ್ಯ ಮುಖ್ಯವಾದ ಮೂರು ಸಂವೇದನೆ ಒಳಗೊಂಡಿವೆ. ದಲಿತ ಸಂವೇದನೆ, ಸ್ತ್ರೀ ಸಂವೇದನೆ, ಮುಸ್ಲಿಂ ಸಂಘಟನೆ ಎನ್ನುವಂತಹ ಮೂರು ಸಂವೇದನೆ ಒಳಗೊಂಡ ಈ ಕಾವ್ಯಗಳು ಈ ಹಿಂದೆ ಶತಮಾನಗಳಿಂದ ಶೋಷಣೆಗೊಳಗಾದ ಶೋಷಿತ ಸಮುದಾಯವಿದೆ.

ಅಲ್ಲದೇ ಮೊದಲ ಬಾರಿಗೆ ಅಕ್ಷರಗಳ ಮೂಲಕ ಕಾಣಿಸಿಕೊಂಡ ಹೊಸ ಸಂವೇದನಗಳ ವೈವಿಧ್ಯತೆಯಿದೆ. ಚಳುವಳಿಗಳ ಮೂಲಕ ಹುಟ್ಟಿಕೊಂಡ ಈ ಕಾವ್ಯದಲ್ಲಿ ಇದುವರೆಗೆ ಅಪರಿಚಿತವಾಗಿದ್ದ ಅದ್ಭುತವಾದ ಅನುಭವಗಳ ಒಳ ನೋಟಗಳಿವೆ. ಅಲ್ಲದೆ ಕನ್ನಡ ಕಾವ್ಯಕ್ಕೆ ಅಪರಿಚಿತವಾಗಿದ್ದ ಹೊಸ ಜಗತ್ತೊಂದನ್ನು ತೋರಿಸಿದ ಕೀರ್ತಿ ದಲಿತ ಕಾವ್ಯಕ್ಕೆ ಸಲ್ಲುತ್ತದೆ.

ದಲಿತ ಸಾಹಿತ್ಯದಲ್ಲಿ ಕಲೆಗಾರಿಕೆಗಿಂತಲೂ ವಾಸ್ತವ ಬದುಕಿನ ಬರ್ಬರತೆ ಎದ್ದು ಕಾಣುತ್ತದೆ. ಕಲೆಗಾರಿಕೆಯೇ ಸಾಹಿತ್ಯವಲ್ಲ. ಬದುಕು ಸತ್ಯ ಎಂಬ ನಿಲುವಿನಲ್ಲಿರುವ 'ಸಿದ್ಧಲಿಂಗಯ್ಯ'ನವರ 'ಹೊಲೆ ಮಾದಿಗರ ಹಾಡು' 'ಸಾವಿರಾರು ನದಿಗಳು' 'ಕಪ್ಪುಕಾಡಿನ ಹಾಡು' 'ನಲವತ್ತೇಳರ ಸ್ವಾತಂತ್ರ್ಯ'.

ಹಸಿವಿನಿಂದ ಸತ್ತೋರು ಸೈಜಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲುಕಯ್ಯ ಹಿಡಿಯೋರು ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜನಗಳು

ಕಲೆಗಾರಿಕೆಯೇ ಸಾಹಿತ್ಯವಲ್ಲ ಬದುಕು ಸತ್ಯ ಎಂಬ ನಿಲುವಿನಲ್ಲಿರುವ ಸಿದ್ಧಲಿಂಗಯ್ಯನವರ 'ನನ್ನ ಜನಗಳು' ಎಂಬ ಕವನ ಸಂಕಲನದಲ್ಲಿ ಮೂಡಿ ಬಂದ ಈ ದಲಿತ ಸಂವೇದನೆಯು ಅಸಮಾನತೆ & ಅನ್ಯಾಯ ಮೇಲ್ವರ್ಗದ ದಬ್ಬಾಳಕೆ ಅಧಿಕಾರಶಾಹಿ & ಬಂಡವಾಳಶಾಹಿ ಹಿಡಿತಕ್ಕೆ ಬಲಿಯಾಗಿ ಅಸಿವಿನಿಂದ ಸತ್ತರು, ವದೆಸಿಕೊಂಡರು, ನನ್ನ ಜನಗಳು.

ಅದೇ ರೀತಿಯಾಗಿ ಎಂಬತ್ತರ ದಶಕದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಬಿರುಗಾಳಿಯನ್ನೇ ಎಬ್ಬಿಸಿದ ಇನ್ನೊಂದು ಕವನ ಸಂಕಲನ.

"ದೇವ್ರು ಒಬ್ನೇ ಅಂತಾರೆ
ಓಣಿಗೊಂದೊಂದ ತರಾ ಗುಡಿಕಟ್ಟವ್ರೆ
ಎಲ್ಲಾರು ದೇವ್ರ ಮಕ್ಳು ಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ"

ಈ ಕವಿತೆಯಲ್ಲಿ ರೊಚ್ಚು, ಆವೇಶ ಪ್ರತಿಭಟನೆ ಇವೆಲ್ಲ ತೀವ್ರವೆಂದು ಕಾಣಿಸಿದರೂ ಇದರ ಹಿಂದೆ ಶತಮಾನಗಳಿಂದ ಶೋಷಣೆಗೊಳಗಾದ ಜನಾಂಗಗಳಿವೆ. ದೇವರು ಒಬ್ಬನೇ ಎನ್ನುತ ಓಣಿಗೊಂದೊಂದು ರೀತಿ ಗುಡಿ ಕಟ್ಟಿಸುವ ಪುರೋಹಿತಶಾಹಿ ವ್ಯವಸ್ಥೆಯನ್ನು ಈ ಕವಿತೆ ಮೊದಲು ತರಾಟೆಗೆ ತೆಗೆದುಕೊಂಡಿದ್ದಾರೆ. ಚತುವರ್ಣ ವ್ಯವಸ್ಥೆಯಲ್ಲಿ ಬರುವ ಶ್ರೇಣಿಕೃತ ಸಮುದಾಯಗಳ ಯಜಮಾನರು ಪುರೋಹಿತರು, ಜಮೀನ್ದಾರರು ಇವರನ್ನೆಲ್ಲ ಸಾಲಾಗಿ ನಿಲ್ಲಿಸಿ ಕ್ರಮವಾಗಿ ಇಕ್ಕೂತ ಹೋಗಲಾಗಿದೆ. ಹಾಗೇ ಇನ್ನೊಂದು ಜನಪ್ರಿಯ ಕವಿತೆ "ನಲವತ್ತೇಳರ ಸ್ವಾತಂತ್ರ್ಯ'.

ಯಾರಿಗೆ ಬಂತು ಎಲ್ಲಿಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ ।
ಟಾಟಾ ಬಿರ್ಲಾ ಜೋಬಿಗೆ ಬಂತು
ಕೋಟ್ಯಾಧೀಶನ ಕೋಣೆಗೆ ಬಂತು
ನಲವತ್ತೇಳರ ಸ್ವಾತಂತ್ರ್ಯ ।

ಈ ಕವಿತೆಯಲ್ಲಿ ರಾಜಕೀಯ ವಿಡಂಭನೆಯ ಜತೆಗೆ ಸಾಮಾಜಿಕ ಕಾಳಜಿ ಎದ್ದು ಕಾಣುತ್ತದೆ. 'ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ' ಎಂಬ ನುಡಿ ಎಷ್ಟೊಂದು ಪ್ರಭಾವ ಬೀರಿತ್ತೆಂದರೆ ಆ ಸಂದರ್ಭದಲ್ಲಿ ಗಲ್ಲಿಗಳ ಗೋಡೆಗಳ ತುಂಬಾಲ ಇವೆ ರಾರಾಜಿಸುತ್ತಿದ್ದವು.

ಅಲ್ಲದೆ ಜನಪರ ಚಳುವಳಿಗಳ ಹೋರಾಟಗಳಲ್ಲಿ ಜಾಥಾಗಳಲ್ಲಿ ಸಿದ್ಧಲಿಂಗಯ್ಯ ಹಾಗೂ ಇತರ ಬಂಡಾಯ ಕವಿಗಳ ಕವಿತೆಯ ಸಾಲುಗಳು "ವಂದೇ ಮಾತರಂ"ದ ಹಾಗೇ ಜನಸಮುದಾಯದ ನಾಲಗೆಯ ಮೇಲೆ ನಲಿದಾಡಿದ್ದು ಈಗ ಚರಿತ್ರೆಯಾಗಿದೆ.

"ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗೂ ಧಿಕ್ಕಾರ ಶ್ರೀಮಂತರ ಸೊಕ್ಕಿಗೆ,

ಹೀಗೆ ಸಿದ್ಧಲಿಂಗಯ್ಯನವರ ಕವಿತೆ ತುಂಬೆಲ್ಲ ಸಾಮಾಜಿಕ ಕಾಳಜಿ ಎದ್ದು

ಕಾಣುತ್ತದೆ.

ಸಾಹಿತ್ಯ & ಸಮಾಜ ಪರಸ್ಪರ ಅನ್ಯೋನ್ಯ ಸಂಬಂಧವನ್ನು ಹೊಂದಿದ್ದು ಕಾಲದಿಂದ ಕಾಲಕ್ಕೆ ಸಮಾಜದಲ್ಲಿ ಉಂಟಾಗುವ ಬದಲಾವಣೆಗಳನ್ನು ಅನುಸರಿಸಿ ಆಯಾ ಕಾಲದ ಸಾಹಿತ್ಯದಲ್ಲಿಯೂ ಬದಲಾವಣೆಗಳು ತಲೆದೋರಿವೆ.

ಸಮಾಜ ಕಾಲದಿಂದ ಕಾಲಕ್ಕೆ ಉಂಟಾಗುವ ಸ್ಥಿತ್ಯಂತರಗಳು ಸಾಹಿತ್ಯ ಸ್ವರೂಪ & ಲಕ್ಷಣಗಳನ್ನು ನಿರ್ಧರಿಸುವಲ್ಲಿ ಮುಖ್ಯ ಪಾತ್ರ ವಹಿಸಿವೆ. ವ್ಯಕ್ತಿವಾದಿ ನೆಲೆಗೆ ವಿರುದ್ಧವಾಗಿ ಸಮಾಜವಾದಿ ನೆಲೆಯಲ್ಲಿ ಆಲೋಚಿಸಿ ಬರೆದು ಬದುಕುವ ಒಂದು ಸಮಾಜಮುಖಿ ಜನಾಂಗವನ್ನು ನಿರ್ಮಾಣ ಮಾಡುವ ಧೈಯದಿಂದ ಅಸಮಾನತೆ & ಅನ್ಯಾಯಗಳ ಪ್ರತಿಭಟನೆಯಲ್ಲಿದೆ. ಮೇಲ್ವರ್ಗದ ದಬ್ಬಾಳಿಕೆಯಿಂದ ಕಾಲಗರ್ಭದಲ್ಲಿ ಹೋಗುತ್ತಿರುವ ಜನತೆಯನ್ನು ಮೇಲೆತ್ತಿ ಧೈರ್ಯ ತುಂಬಿ ಹೋರಾಡುವಂತೆ ಮಾಡಿವೆ ಈ ದಲಿತ ಬಂಡಾಯ ಕಾವ್ಯಗಳು.

ಆಕರ ಗ್ರಂಥಗಳು :

1. ಆಧುನಿಕ ಕಾವ್ಯ ಸಂಗ್ರಹ – ಡಾ. ಬಸವರಾಜ ಸಬರದ.
2. (ದಲಿತ ಬಂಡಾಯ ಕಾವ್ಯ – ಪ್ರಹ್ಲಾದ ಲೋಕೇಶ
3. ಪ್ರಹ್ಲಾದ ಆಗಸನಕಟ್ಟೆ – ದಲಿತ ಬಂಡಾಯ ಕಾವ್ಯ & ವಿಚಾರವಾದಗಳು
4. ಅರವಿಂದ ಮಾಲಗತ್ತಿ – ಸಾಹಿತ್ಯ ಸಂಸ್ಕೃತಿ & ದಲಿತ ಪ್ರಜ್ಞೆ)

***

ಸಾಹಿತ್ಯ-ಸಂಸ್ಕೃತಿ-ಸಂಶೋಧನೆಯ ನಿಯತಕಾಲಿಕ

ಪ್ರತಿಸ್ಪಂದ

ಕೊಡು-ಕೊಳ್ಳುವಿಕೆಗಳ ಸಂಕರ..

ವೃಕ್ಷಮಾತೆಗೆ ನಮನ

ನಾಡೋಜ ಸಾಲುಮರದ ತಿಮ್ಮಕ್ಕ ಅವರು

1911-2025

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ

LITERATURE, CULTURE - RESEARCH QUARTERLY

PEER - REVIEWED JOURNAL

ISSN: 2320-9941

HTTPS://PRATHISPANDHA.WORDPRESS.COM/

ಪ್ರತಿಸ್ಪಂದ
ಕೊಡು-ಕೊಳ್ಳುವಿಕೆಗಳ ಸಂಕರ..

ವೃಕ್ಷಮಾತೆಗೆ ನಮನ

ನಾಡೋಜ ಸಾಲುಮರದ ತಿಮ್ಮಕ್ಕ ಅವರು

1911-2025

ಸಾಹಿತ್ಯ, ಸಂಸ್ಕೃತಿ - ಸಂಶೋಧನ ತ್ರೈಮಾಸಿಕ ತಜ್ಞ ಪರಿಶೀಲನ ಪತ್ರಿಕೆ
LITERATURE, CULTURE - RESEARCH QUARTERLY
PEER - REVIEWED JOURNAL
ISSN: 2320-9941

HTTPS://PRATHISPANDHA.WORDPRESS.COM/

ಪ್ರತಿಸ್ಪಂದ
ಕೊಡು ಕೊಳ್ಳುವಿಕೆಯ ಸಂಕರ
PRATHISPANDA
An Exchange of Creative Impulse

PEER - REVIEWED JOURNAL
ISSN: 2320-9941

ಸಂಪುಟ - 9, ಸಂಚಿಕೆ- 4

VOLUME: 09, ISSUE: 04

ಪ್ರತಿಸ್ಪಂದ

ಕೊಡು ಕೊಳ್ಳುವಿಕೆಯ ಸಂಕರ

PRATHISPANDA

An Exchange of Creative Impulse

ಗೌರವ ಸಂಪಾದಕರು
ಕೆ. ಆರ್. ಬಸವರಾಜು

ಸಂಪಾದಕರು
ಡಾ. ಸರಸ್ವತಿ ಕೆ. ಬಿ.

ಭಾಗ - ೨
PART - 2